ation based on mutual understanding and respect in order to meet the challenges of today's society more effectively.

The Commonwealth is worthy of our deepest commitment and our strongest support.

ವಿತ್ತೀಯ ಕಾರ್ಯಕಲಾಪಗಳು

೧೯೮೭-೮೮ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆ ಸಂಖ್ಯೆ-೯ ಮುದ್ರಣ ಮತ್ತು ಲೇಖನ ಸಾಮಗ್ರಿಗಳು

ಶ್ರೀ ಡಿ. ಮಂಜುನಾಥ್ (ಮಾನ್ಯ ಶಿಕ್ಷಣ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೯೮,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : ೧೦ — ಉಚ್ಚ ಶಿಕ್ಷಣ

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೪,೧೧,೯೮೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೫,೦೦,೦೦೦ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : ೧೩ — ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ

ಶ್ರೀ ಡಿ. ಮಂಜುನಾಥ್ (ಮಾನ್ಯ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣಕ್ಕೆ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೦೪,೩೩,೭೪.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೦೦.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಸಭೆಯ ಅನುಮೋದನೆಗಾಗಿ ಮಂಡಿಸುತ್ತಿದ್ದೇನೆ.

ಬೇಡಿಕೆ ಸಂಖ್ಯೆ ೧೪ — ಪ್ರೌಢ ಶಿಕ್ಷಣ

ಶ್ರೀ ಡಿ. ಮಂಜುನಾಥ್ (ಮಾನ್ಯ ಶಿಕ್ಷಣ ಸಚಿವರು).—ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೪೫,೮೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳಖಾತೆಯಲ್ಲಿ ೭,೦೦,೦೦೦.ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಪ್ರಸ್ತಾವಗಳನ್ನು ಮಂಡಿಸಲಾಯಿತು

ಅಧ್ಯಕ್ಷರು.—ಈ ಮೇಲಿನ ಎಲ್ಲಾ ಬೇಡಿಕೆಗಳು ಸದನದ ಮುಂದೆ ಇವೆ. ಈಗ ಮಾನ್ಯ ಸದಸ್ಯರಾದಂಥ ಶ್ರೀ ಆರ್. ರಾಮಯ್ಯನವರು ಬೇಡಿಕೆಗಳ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಬಹುದು.

(ಮಾನ್ಯ ಸದಸ್ಯರಾದಂಥ ಆರ್. ರಾಮಯ್ಯನವರು ಗೈರು ಹಾಜರಾಗಿದ್ದರು)

12-30 P.M.

SMT. MUKTHARUNNISA (Narasimharaja)—Mr. Speaker Sir, first of all I take this opportunity to thank you for giving me an opportunity to initiate the debate on the demands for grants pertaining to Education Department. On page-3 of the Annual Report of the Department, they have mentioned that, in order to develop school-going habit among the children from the early age, "Akshar Sena" has been taken up. They have also stated that 1430 centres have been opened in the State. I would like to know from the Hon. Minister as to how many centres have been permitted to open in English, Urdu and Hindi mediums. Thouge Kannada language is compulsory at all levels, the linguistic minorities have their own interest in learning through their own mother-tongue. I would request the Government to permit few English, Urdu and Hindi medium centres in the interest of the linguistic minorities. I also learnt that a salary of Rs, 150 is being paid for a teacher employed in Akshar Sena, I feel Sir that this is very meagre to eke out their livelihood. I request the Government to enhance this salary during the current academic year. Secondly Sir, Pre-primary education is very essential for kids. These two years of study in L.K.G. and U,K.G. helps the children to develop school-going habit, and feel the difference between homely atmosphere and school atmosphere. The Government should allocate more funds and extend more facilities to pre-primary schools. We are all aware sir during the last month, all the nursery teachers were sitting in Dharna in Cubbon Park for having not paid their salary for the last 10 months. The Hon. Minister had replied earlier to a question in this behalf that the grants were released promptly to nursery schools. In reply to second question, he replied that every month, the salary has been disbursed promptly. If the grants and salaries were given promptly there was no reason for these nursery teachers to sit in Dharna in Cubbon Park. He also said that 50o/o of the grants have been released to schools in urban areas and 75 per cent of the grants have released to schools in rural areas. The Budget allocation is very meagre for nursery schools. I request the Government to enhance the budget allocation for Nursery Schools. I also request him to introduce the cheque system to all the Nursery Schools in the State like primary schools in order to bring uniformity among the teachers On page 3 of the Annual Report, they have mentioned that Vidhya Vikasa Scheme is introduced for free supply of text-books and uniform to the school-going children. Here, I would like to bring to your kind notice Sir, that the implementation of this scheme is

very bad. Last year, books were supplied very late i.e., after 6 months and that too they were distributed in part, These free supplied books are kept in the class-room itself by the teacher. She keeps the books in the school itself. ಮಕ್ಕಳು ಪುಸ್ತಕಗಳನ್ನು ಮನೆಗೆ ತೆಗೆದುಕೊಂಡು ಹೋದರೆ, ಹಾಳು ಮಾಡುತ್ತಾರೆ. ಕೊಡದಿದ್ದರೆ ಪಾಲಕರು ಗಲಾಟೆ ಮಾಡುತ್ತಾರೆ. ಅಧ್ಯಾಪಕರುಗಳ ಮನಸ್ಸಿನಲ್ಲಿ ಪುಸ್ತಕಗಳನ್ನು ಹಾಳು ಮಾಡಿದರೆ ತನಿಖೆಗೆ ಬಂದ ಅಧಿಕಾರಿಗಳು ತಮಗೆ ಶೋಕಾಸ್ ನೋಟೀಸ್ ಕೊಡುತ್ತಾರೆ ಎಂಬ ಭಯವೂ ಇದೆ. ಆದಕ್ಕಾಗಿ ಅವರುಗಳು ಎಲ್ಲಾ ಪುಸ್ತಕಗಳನ್ನು ಶಾಲೆಯ ಅಲ್ಮೇರಾದಲ್ಲಿ ಇಟ್ಟುಕೊಂಡಿರುತ್ತಾರೆ. ಇದರಿಂದ ಓದುವ ಮಕ್ಕಳಿಗೆ ಸರಿಯಾದ ಪುಸ್ತಕ ಇಲ್ಲದೆ ಕಷ್ಟವಾಗಿದೆ. ಇದಕ್ಕೆ ಆಲ್ಟರ್‌ನೇಟೀವ್ ಅರೆಂಜ್‌ಮೆಂಟ್ಸ್ ಏನು ಮಾಡುತ್ತೀರಿ ? ವಿದ್ಯೆಯ ವಿಚಾರದಲ್ಲಿ ತಾವು ಒಂದು ಸ್ಟ್ಯಾಂಡರ್ಡನ್ನು ಕೀಪ್‌ಅಪ್ ಮಾಡಬೇಕು. ಓದುವ ಮಕ್ಕಳಿಗೆ ಸರಿಯಾಗಿ ಪುಸ್ತಕಗಳು ಸಿಗುತ್ತಾ ಇರಬೇಕು. ಅದಕ್ಕೆ ಒಂದು ವ್ಯವಸ್ಥೆಯನ್ನು ತಾವು ಸರಿಯಾಗಿ ಮಾಡಿ.

ಶ್ರೀ ಬಿ. ರಾಚಯ್ಯ.— ಶ್ರೀಮತಿ ಬೇಗಂರವರು ಮಾತನಾಡುತ್ತಿರುವುದನ್ನು ಕೇಳಲು ನಾರಾಯಣ ಕುಮಾರ್‌ರವರು ಇದ್ದಿದ್ದರೆ ಸಂತೋಷ ಪಡುತ್ತಿದ್ದರು.

ಶ್ರೀಮತಿ ಪುಷ್ಪಾವತಿ.—ಶ್ರೀಮತಿ ಬೇಗಂರವರಿಗೆ ಕನ್ನಡ ತುಂಬಾ ಚೆನ್ನಾಗಿ ಬರುತ್ತಿದೆ. ಅವರು ಕನ್ನಡದಲ್ಲಿಯೇ ಮಾತನಾಡಬೇಕು. ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು.—ತುಂಬಾ ಚೆನ್ನಾಗಿ ಮಾತಾಡುತ್ತಿದ್ದಾರೆ. ಅಡ್ಡಿಪಡಿಸ ಬೇಡಿ.

ಶ್ರೀಮತಿ ವೆಂಕಟರುನ್ನೀಸಾ.—ಈ ಪುಸ್ತಕದಲ್ಲಿ ಇವುಗಳು ಫಸ್ಟ್ ಮತ್ತು ಸೆಕೆಂಡ್ ಸ್ಟ್ಯಾಂಡರ್ಡ್‌ಗೆ ಎಂದು ತೋರಿಸಿದ್ದೀರಿ. ಥರ್ಡನಿಂದ ಸೆವೆಂಥ್ ಸ್ಟ್ಯಾಂಡರ್ಡ್‌ನವರಿಗೆ, ಎಸ್.ಸಿ. ಮತ್ತು ಎಸ್.ಟಿ. ಹುಡುಗಿಯರಿಗೆ ಮಾತ್ರ ಕೊಡುತ್ತೇವೆ ಎಂದು ಹೇಳಿದ್ದೀರಿ. In this connection, I am sorry to state that the Government is creating the feeling of castism among the children. ಒಂದು ತರಗತಿಯಲ್ಲಿನ ಮಕ್ಕಳಲ್ಲಿ ೧೦–೧೫ ಜನ ಎಸ್.ಟಿ., ಎಸ್.ಸಿ. ವರ್ಗದ ಮಕ್ಕಳಿಗೆ ಮಾತ್ರ ಕೊಟ್ಟರೆ ಬೇರೆ ಮಕ್ಕಳ ಮುಗ್ಧ ಮನಸ್ಸಿನಲ್ಲಿ ಪರಿಣಾಮ ಆಗುತ್ತಾ ಇರುತ್ತದೆ. ಇವರಿಗೆ ಮಾತ್ರ ಏತಕ್ಕೆ ಕೊಟ್ಟರು ಎಂದು ತಮ್ಮನ್ನು ತಾವೇ ಅಥವಾ ಇತರರನ್ನು ಕೇಳುತ್ತಾರೆ. ಈ ತರಹದಲ್ಲಿ ಮಾಡಿದರೆ ಮಕ್ಕಳ ಮನಸ್ಸಿನಲ್ಲಿ ಕೂಡ, ನಾವು ಬ್ರಾಹ್ಮಣರು, ಅವರು ಮುಸಲ್ಮಾನರು, ಅವರು ಸಿಂಧಿಗಳು, ಅವರು ಕ್ರಿಶ್ಚಿಯನ್ನರು ಇತ್ಯಾದಿಯಾಗಿ ಭಾವನೆಗಳು ಬೀರುವ ಹಾಗೆ ಮಾಡಿಕೊಟ್ಟ ಹಾಗೆ ಆಗುತ್ತದೆ. Children means they are equal irrespective of the caste they belong to. The Government is creating casteism in the minds of the children by differentiating SC/ST children with other children. Whether rich or poor, boys or girls they are equal, They should not feel any differences. At any level, they should be treated on equal footing and especially in primary school where they lay their fonndation in education. ಹಾಗೆಯೇ ಕೇವಲ ಹುಡುಗಿಯರಿಗೆ ಮಾತ್ರ ಪುಸ್ತಕಗಳನ್ನು ಅಥವಾ ಸಮವಸ್ತ್ರವನ್ನು ಕೊಡುತ್ತೇವೆ ಎಂದು ಹೇಳುತ್ತೀರಿ. ಹೀಗೆ ಹುಡುಗಿಯರಿಗೆ ಕೊಟ್ಟು ಹುಡುಗರನ್ನು ಬಿಟ್ಟರೆ ಅಧ್ಯಾಪಕರಿಗೂ ತೊಂದರೆ, ಪಾಲಕರಿಗೂ ತೊಂದರೆಯಾಗುತ್ತದೆ. ಪಾಲಕರು ಅಧ್ಯಾಪಕರನ್ನು ಕೇಳುತ್ತಾರೆ. ಜಗಳ ಮಾಡುತ್ತಾರೆ. ಕನ್‌ಫ್ಯೂಸ್ ಮಾಡಿಕೊಳ್ಳುತ್ತಾರೆ. ಕೆಲವರಿಗೆ ಪುಕ್ಕಟೆ ಪುಸ್ತಕಗಳನ್ನು ಕೊಟ್ಟು ಕೆಲವರಿಗೆ ಕೊಡದಿರುವುದರಿಂದ ಜಗಳವೂ ಪ್ರಾರಂಭವಾಗುತ್ತದೆ. ಈ ವಿಷಯಗಳನ್ನು ಹುಡುಗರ ತಂದೆ ತಾಯಿಗಳು ಪೇಪರಲ್ಲಿ ಓದಿದ ತಕ್ಷಣ ಸಂತೋಷ ಪಡುತ್ತಾರೆ. ಪುಸ್ತಕಗಳು ಫ್ರೀಯಾಗಿ ಸಿಗುತ್ತವೆ ಎಂದು, ನೀವು ಎಸ್‌ಸಿ ಎಸ್‌ಟಿ ವಿದ್ಯಾರ್ಥಿಗಳಿಗೆ ಮಾತ್ರ ಕೊಟ್ಟರೆ ಬೇರೆಜಾತಿಯವರೂ ಬಂದು ಕೇಳುತ್ತಾರೆ. ನಾವೂ ಬಡವರು, ನಮ್ಮ ಮಕ್ಕಳಿಗೂ ಕೊಡಿ ಎನ್ನುತ್ತಾರೆ. ಬಡವರು ಎಲ್ಲಾ ಜಾತಿಯಲ್ಲೂ, ಬ್ರಾಹ್ಮಣರಲ್ಲೂ ಲಿಂಗಾಯಿತರಲ್ಲೂ ಇದ್ದಾರೆ. ಸ್ಕೂಲಿನಲ್ಲಿರುವವರು ಎಲ್ಲರೂ ಒಂದೇ. ೫ನೇ ತರಗತಿಯಿಂದ ೭ನೇ

ತರಗತಿಯವರೆಗೆ ಮಾತ್ರ ಸಮವಸ್ತ್ರಗಳನ್ನು ಕೊಡುತ್ತೇವೆಂದಿದ್ದೀರಿ. ಇದು ತಪ್ಪು. ಈ ಆರ್ಡರನ್ನು ರಿವೈಸ್ ಮಾಡಬೇಕು. ೧ನೇ ತರಗತಿಯಿಂದ ೭ನೇ ತರಗತಿಯವರೆಗೆ ಯೂನಿಫಾರ್ಮ್ ಕೊಡಬೇಕು. ಎಲ್ಲದರಲ್ಲೂ ಈಕ್ವಾಲಿಟಿ ಇರಬೇಕು. ಅದು ಬಿಟ್ಟು ಕೆಲವರಿಗೇ ಕೊಟ್ಟರೆ ಸ್ಕೂಲ್‌ಗಳಲ್ಲಿ ಡಿಸ್ಟರ್ಬೆನ್ಸ್ ಉಂಟಾಗುತ್ತದೆ.

I request the Hon'ble Minister for Education to supply Uniforms to all the children from first standard to seventh standard, free of cost, whether they are rich or poor, boys or girls, irrespective of all communities.

Sir, mention is to be made about the Physical Education. In this modern era physical education is very essential. Children would like to play more than the studies. To create attachment with the school and to make them healthy, a regular physical education should be introduced from higher primary level appointing a separate Physical Education Instructor. The appointment of a separate Physical Education Instructor is important. In the whole state, there is no post of separate Physical Instructor in the Higher primary level.

I request the Hon'ble Minister for Education to accord sanction for the appointment of separate Physical Instruction Teachers both in Government schools as well as in Governmnet aided schools. It is mentioned in your Report that some children are deputed to (Dharwar) to participate in Sports, When there are no separate physical Education Instructors, how can they learn sports. If there are Physical Education Inspectoos for exclusively teaching sports at higher primary level, the students will become champions when they compete in other States. I strongly urge the Government to appoint separate Physical Edcation Teachers both in Government schools as well as in aided schools immediately because the regular teachers are finding it difficult to teach Physical Education also in addition to their regular lessons. It will be a burden on them. Therefore, I once again request the Hon'ble Minister to accord sanction of Physical Education Instructors to the schools where there are more than 500 students, both in the Government schools and in the aidedschools to improve the Physical Education standards in our State. Also, simultaneously as is being done in Kerala', you have to introduce an Institute of Sports in Karnataka to train the candidates in sufficient number and send to the foregin countries to Concpete in the field of sports. I once again request Hon'ble Minister for Education to introduce this system. ಏಡೆಡ್ ಶಾಲೆಗಳಲ್ಲಿಯೂ ಡೈರೆಕ್ಟ್ ಚೆಕ್ ಸಿಸ್ಟಮ್ ಅನ್ನು ತಾವು ಇಂಟ್ರಡ್ಯೂಸ್ ಮಾಡಿ. ಮೊದಲು ೫ ಪರ್ಸೆಂಟ್ ಮೇಂಟೆನೆನ್ಸ್ ಗ್ರಾಂಟ್ ಕೊಡುತ್ತಿದ್ದರು. ಬಿಲ್ಡಿಂಗ್ ಇಲ್ಲ ಬೇರೆ ಸೌಲಭ್ಯಗಳಿಲ್ಲ, ಫರ್ನೀಚರ್ಸ್ ಇಲ್ಲ. I request the Hon'ble Minister for Education that wherever there are more than 500 students a peon

may be provided in the aided Schools. So also a Clerk may be provided in such aided schools, I heard that the Government has not given its approval to these proposals. I once again strongly urge the Hon'ble Minister to accord sanction for the posts of One Peon and one Clerk, both in the Government as well as aided higher primary achools.

Sir in page 7 of the Report, it is mentioned that there are 9 Sanskrit colleges 232 Patashalas. 75 Hindu Vidyalayas I am happy that you are encouraging them. But I am sorry to say that no mention is made here about the Urbu schools. You are aware of the percentage of linguistic minorities in Karnataka. You have not mentioned a single line about the Urdu Secondary schools. The Government has passed an order that grants will be given to the Minority Urbu schools after three years, whereas in respect of other schools, grants will be given after 7 years. But I am sorry to say that even after a lapse of 4 to 5 years, grants have not given to the Minority schools. As such salaries are not paid to the teachers because the the financial assistance has notbeen given to the Urbu schools. I therefore urge upon the Govermentto see that all the linguistic minorities institutions are given financials assistance atleast from this year, since the teachers are facing lot of hardship.

About libraries in the state, the Government is opening Librarie everywhere. I learn that there are so many schemes sponsored by the Central Government.

ಇದಕ್ಕೆ ಸೆಂಟ್ರಲ್ ಗೌರ್ನ್ಮೆಂಟ್‌ನಿಂದ ನಮಗೆ ಏನು ಸಹಾಯ ಬರುತ್ತದೆ ಎನ್ನುವುದೇ ಗೊತ್ತಾಗುವುದಿಲ್ಲ. ನೀವು ಹೇಗೆ ಅಪ್ರೋಚ್ ಮಾಡುತ್ತೀರಿ ಎಂಬುದೇ ಗೊತ್ತಾಗುವುದಿಲ್ಲ. ಬಡ್ಜೆಟ್‌ನಲ್ಲಿ ನೋಡಿದರೆ ಸೆಂಟ್ರಲ್ ಸ್ಪಾನ್ಸರ್ ಸ್ಕೀಮು ಇದೆ ಎಂದು ಗೊತ್ತಾಗುತ್ತದೆ. ನಮಗೆ ಬಹಳ ಆಶ್ಚರ್ಯವಾಗುತ್ತದೆ. We are not taking the benefit of the Centrally Sponsored schemes even in the Library. When there are so many Centrally sponsored schemes, I request the Government to send the literature to different organisations. ಸೆಂಟ್ರಲ್ ಗಾರ್ಟನಿಂದ ಯಾವ ಲಿಟರೇಚರನ್ನೂ ನಮಗೆ ಕಳುಹಿಸುವುದಿಲ್ಲ. ಎ.ಇ.ಓಗಳು ಒಂದು ಡಿಸ್ಟ್ರಿಕ್ಟ್‌ಗೇ ಒಬ್ಬರೇ ಇರುತ್ತಾರೆ. ಎಇಒಗೆ ಎಷ್ಟು ಬರ್ಡನ್ ಇದೆ ಎಂದು ಹೇಳುವುದಕ್ಕೇ ಸಾಧ್ಯ ಇಲ್ಲ. ಎಕ್ಸಿಕ್ಯೂಟಿವ್ಸ್ ಎಲ್ಲಾ ನೋಡಬೇಕಾಗುತ್ತದೆ. ಆಮೇಲೆ ಸ್ಕೂಲ್‌ಗಳಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಬೇಕಾಗುತ್ತದೆ. ಉರ್ದು ಶಾಲೆಗಳಿಗೆ ಈ ಎಇಒಗಳು ಹೋದರೆ ಅವರಿಗೆ ಏನೂ ಗೊತ್ತಾಗುವುದಿಲ್ಲ. ಸುಮ್ಮನೆ ಅವರನ್ನು ಪುಸ್ತಕವನ್ನು ನೋಡಿ ಏನು ಬರೆದಿದ್ದೀ ಎಂದು ಕೇಳಿ ಸಹಿ ಮಾಡಿ ಬರುತ್ತಾರೆ. You should have two A.E.O s in every district one of whom should know the language, The A.E.O. is very important. He is doing the executive work. ಆದ್ದರಿಂದ ಕೊನೆಯ ಪಕ್ಷ ಒಂದು ಡಿಸ್ಟ್ರಿಕ್ಟ್‌ನಲ್ಲಿ ಎರಡು ಎ.ಇ.ಓ.ಗಳಾದರೂ ಇರಬೇಕು. ಏತಕ್ಕೆಂದರೆ ಒಬ್ಬರೇ ಎ.ಇ.ಓ ಕೆಲಸ ಮಾಡುವುದಕ್ಕಾಗುವುದಿಲ್ಲ. ಕೆಲವು ಸಾರಿ ಸಂಬಳದ ಬಿಲ್‌ಗಳನ್ನು ಕೂಡಾ ಅವರೇ ಮಾಡಬೇಕಾಗುತ್ತದೆ. ಹೀಗಾಗಿ ಎಲ್ಲಾ ಕೊನೆಗೆ

ಪೆಂಡಿಂಗ್ ಉಳಿಯುತ್ತವೆ, ಜೂನ್‌ನಲ್ಲಿ ರೆಕಗ್ನಿಷನ್ ಕೆಲಸವನ್ನು ಸಬ್‌ಮಿಟ್ ಮಾಡಬೇಕಾಗುತ್ತದೆ. ರೆಕಗ್ನಿಷನ್ ಜೂನ್‌ನಲ್ಲಿ ಫೈಲ್ ಮಾಡಿದರೆ ಪೆಂಡಿಂಗ್ ಆಗಿ ರಿನ್ಯೂಯಲ್ ಕೂಡಾ ಆಗದೇ ಸಂಬಳ ಪಡೆಯುತ್ತಿರತಕ್ಕಂಥದ್ದು ಇದೆ. ಟೆಕ್ನಿಕಲ್ ಆಗಿ ನೋಡಿದರೆ ಟೀಚರ್‌ಗಳಿಗೆ ಸಂಬಳವನ್ನೇ ಕೊಡಕೂಡದು. The scho l is running for the last 20/25 years. They have not given permanent recognition. The renewal papers are pending. The salary is being given to the teachers. It is so difficult to get renewal of recognition every yearfor the old schools. I urge the Government that at least for the old schools which are running for the past 20 years permanent recognition should be given. The present method of renewal of recognition is very wrong. There are so many unrecognised schools and the teachers are getting salaries. The recognition papers are pending in the office. I urge the Government to see that recognition is granted Permanently for the old schools and for the new schools they should see that recognition is given before December so that the children can appear for the examinations. I request the Government that to keep the discipline they should appoint two AEOs at least for every district. A librarian should be posted in the higher primary school. ಇಲ್ಲಿ ಟೀಚಿಂಗ್ ಏಡ್ಸ್ ಸಿಗುತ್ತಿಲ್ಲ. ಬೇರೆ ಕಂಟ್ರೀಸ್‌ಗೆ ಹೋಗಿ ನಾನು ನೋಡಿದ್ದೇನೆ. ಟೀಚರ್ಸ್‌ಗೆ ಏಡ್‌ಗೆ ಅವರು ಡೊನೇಟ್ ಮಾಡುತ್ತಾರೆ. ಏತಕ್ಕೆಂದರೆ ಮೊದಲು ಟೀಚರ್ಸ್‌ನ್ನು ನೋಡಬೇಕಾಗುತ್ತದೆ. ಅಲ್ಲಿ ಏನೇನು ಪಾಠ ಹೇಳುತ್ತಿದ್ದಾರೆ, ಸ್ಟಾಂಡರ್ಡ್ ಆಫ್ ಎಜುಕೇಷನ್ ಹೈ ಅದನ್ನು ಕೂಡಾ ನೋಡಬೇಕಾಗುತ್ತದೆ. ಆ ರೀತಿಯೆಲ್ಲಾ ನೋಡಿ ಅಲ್ಲಿ ಡೊನೇಟ್ ಮಾಡುತ್ತಾರೆ. At least you introduce giving teaching aid for the teachers in all the government and aided schools. Audio-visual education from primary and higher primary level is very useful especially in the handicapped children's schools. They will be veryhappy if you introduce it. About medical aid my opinion is that the doctors come and examine the children. They give a report. ಮಾನ್ಯ ಆರೋಗ್ಯ ಸಚಿವರಾದ ಶ್ರೀ ಕೃಷ್ಣಪ್ಪನವರು ಇಲ್ಲಿ ಇಲ್ಲ ಅವರು ಫ್ರೀ ಮೆಡಿಸನ್ ಅನ್ನು ಎಲ್ಲಾ ಕಡೆ ಕೊಡುತ್ತೇವೆಂದು ಹೇಳಿದರು. ಆದರೆ ಇಲ್ಲಿ ಕೊಟ್ಟಿಲ್ಲ. ದಯವಿಟ್ಟು ಈ ಮಕ್ಕಳಿಗೆ ಫ್ರೀ ಎಕ್ಸಾಮಿನ್ ಮಾಡಬೇಕು. ಫ್ರೀ ಮೆಡಿಸನ್ ಕೊಡುತ್ತಾ ಇಲ್ಲ. ಕೊನೆಯ ಪಕ್ಷ ಬಿ ಕಾಂಪ್ಲೆಕ್ಸ್, ವಿಟಮಿನ್ ಟ್ಯಾಬ್ಲೆಟ್ಸ್‌ಗಳನ್ನು ಕೊಡಬೇಕು. ನಾನು ಏಕೆ ಇವರುಗಳಿಗೆ ಫ್ರೀ ಮೆಡಿಸನ್ ಕೊಡಬೇಕೆಂದು ಹೇಳುತ್ತಿದ್ದೇನೆಂದರೆ ಗವರ್ನಮೆಂಟ್ ಸ್ಕೂಲಿನಲ್ಲಿ, ವಿಶೇಷವಾಗಿ ಅರ್ಬನ್ ಏರಿಯಾದಲ್ಲಿರತಕ್ಕಂಥ ಮಕ್ಕಳಿಗಿಂತ ಗ್ರಾಮಾಂತರ ಪ್ರದೇಶಗಳಲ್ಲಿ ಓದತಕ್ಕ ಮಕ್ಕಳು ಬಹಳ ಬಡವರ ಇರುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕವರು ಮಾತ್ರ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸುತ್ತಾರೆ ಎಲ್ಲಾ ಶಾಲೆಗಳಲ್ಲಿ ಮೆಡಿಕಲ್ ಎಕ್ಸಾಮಿನ್ ಮಾಡಿದರೆ ಸ್ಲಿಪ್‌ಕೊಡುತ್ತಾರೆ ಸ್ಲಿಪ್ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಕೊನೆಯ ಪಕ್ಷ ಆರು ತಿಂಗಳಿಗೆ ಒಂದು ಬಾರಿಯಾದರೂ ಇವರಿಗೆ ಜನರಲ್ ಟಾನಿಕ್ಸ್. ಜನರಲ್ ಟ್ಯಾಬ್ಲೆಟ್ಸ್, ಬಿ ಕಾಂಪ್ಲೆಕ್ಸ್ ಮತ್ತು ವಿಟಮಿನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅಂಗವಿಕಲರಿಗೆ ಪೆನ್‌ಷನ್ ಕೊಡುವ ಬಗ್ಗೆ ಒಂದು ಮಾತು ಹೇಳಬಯಸುತ್ತೇನೆ. ಶಾಲೆಗಳಿಗೆ ಹೋಗತಕ್ಕ ಅಂಗವಿಕಲ ಮಕ್ಕಳಿಗೆ ಕಷ್ಟವಾಗುತ್ತದೆ ಎಂದು ೫೦ ರೂಪಾಯಿ ಪೆನ್‌ಷನ್

ಕೊಡಬೇಕೆಂದು ಸರ್ಕಾರದ ಉದ್ದೇಶ ಇದೆ. ಆದರೆ ಅಧಿಕಾರಿಗಳು ಇದನ್ನು ಕೊಡುವುದಕ್ಕೆ ರೆಫ್ಯೂಸ್ ಮಾಡುತ್ತಿದ್ದಾರೆ. ದಯವಿಟ್ಟು ಶಾಲೆಗಳಿಗೆ ಹೋಗತಕ್ಕಂಥ ಅಂಗವಿಕಲ ಮಕ್ಕಳಿಗೆ ೫೦ ರೂಪಾಯಿ ಗಳ ಪೆನ್‌ಷನ್ ಸಿಗುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತಿದ್ದೇನೆ.

ಗಂತ್ತಿಗೆ ಶಿಕ್ಷಕರು ಕಳೆದ ತಿಂಗಳು ಧರಣಿ ನಡೆಸಿದರು. ಇದು ತಮಗೆ ಗೊತ್ತಿದೆ. ಮಾರ್ಚ್ ತಿಂಗಳ ಪರೀಕ್ಷೆಯು ಆದ ಮೇಲೆ ಇವರ ಟರ್ಮಿನೇಷನ್ ಆರ್ಡರ್ ಸಿಕ್ಕಿದರೆ ಇವರುಗಳಿಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ ದಯವಿಟ್ಟು ಇವರುಗಳನ್ನು ಖಾಯಂ ಮಾಡಬೇಕು. ಇದನ್ನು ಮಾಡದೇ ಹೋದರೆ ಹುಡುಗರ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಕಾಂಟ್ರಾಕ್ಟ್ ಬೇಸಿಸ್ ಟೀಚರ್ಸ್‌ಗಳನ್ನು ಖಾಯಂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಉರ್ದು ಮೈನಾರಿಟಿ ಸ್ಕೂಲಿನ ಮಕ್ಕಳು ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆಂದೂ ಓದಬೇಕೆಂದು ತಾವು ಹೇಳುತ್ತಿದ್ದೀರಿ. ನಮ್ಮ ಸರ್ಕಾರ ಈ ಸ್ಕೂಲುಗಳಿಗೆ ಐದು ಸಾವಿರ ಟೀಚರ್ಸ್‌ಗಳನ್ನು ನೇಮಕ ಮಾಡುತ್ತೇವೆಂದೂ ಹಾಗೆಯೇ ಅಲ್ಲಿಗೆ ಉರ್ದು ಸ್ಕೂಲುಗಳಿಗೆ ಸ್ವಲ್ಪ ಟೀಚರ್ಸ್ ಅನ್ನು ಕಳುಹಿಸುತ್ತೇವೆಂದು ಹೇಳಿದ್ದಾರೆ. ಇವೊತ್ತು ರಾಜ್ಯದಲ್ಲಿರತಕ್ಕ ಶೇಕಡಾ ೭೦ರಷ್ಟು ಉರ್ದು ಶಾಲೆಗಳಲ್ಲಿ ಕನ್ನಡ ಶಿಕ್ಷಕರು ಇಲ್ಲ. ನಮಗೆ ಕನ್ನಡ ಮಾತನಾಡಲು ಬರುವುದಿಲ್ಲ. ಮಾತನಾಡಲು ಬಹಳ ಕಷ್ಟವಾಗುತ್ತದೆ. ನಮ್ಮ ಕಾಲದಲ್ಲಿ ಕನ್ನಡ ಶಿಕ್ಷಕರು ಇರಲೇ ಇಲ್ಲ. ಆದುದರಿಂದ ನಾನು ಮಾತನಾಡುವಾಗ ತಾವು ನಗುತ್ತಿದ್ದೀರಿ. ಕರ್ನಾಟಕ ಸರ್ಕಾರ ತನ್ನ ಆಡಳಿತವನ್ನು ನಡೆಸಲು ಧಕ್ಕೆಯಾಗದಂತೆ ಕನ್ನಡವನ್ನು ಇರಬೇಕು. ನಾನು ಹೇಳುವ ಈ ಮಾತಿನ ಉದ್ದೇಶವೇನೆಂದರೆ ಮುಂದೆ ಓದತಕ್ಕಂಥಹ ಉರ್ದು ಶಾಲೆಯ ಮಕ್ಕಳಿಗೆ ಇದರಿಂದ ತೊಂದರೆ ಆಗಬಾರದು. ದಯವಿಟ್ಟು ಇಂಗ್ಲೀಷ್ ಮೈನಾರಿಟೀಸ್ ಸ್ಕೂಲಿಗೆ ಕನ್ನಡ ಟೀಚರ್ಸ್‌ಗಳನ್ನು ತಕ್ಷಣವೇ ಡೆಪ್ಯೂಟ್ ಮಾಡಬೇಕು. ನನಗೆ ಕನ್ನಡ ಮಾತನಾಡಲು ಬಹಳ ಇಷ್ಟ. ಈಗ ನೀವು ಸರ್ಕಾರಿ ಉದ್ಯೋಗದಲ್ಲಿ ಕನ್ನಡ ಕಡ್ಡಾಯ ಮಾಡಿದ್ದೀರಿ. ಕನ್ನಡ ಬರುವುದಿಲ್ಲ ಎಂದರೆ ಉದ್ಯೋಗ ಸಿಗುವುದು ಕಷ್ಟ. ಮುಂದೆ ಕೆಲಸದಲ್ಲಿ ಸಹ ಅವರಿಗೆ ಪ್ರೊಮೋಷನ್ ಬರುವಾಗ ಕನ್ನಡ ಜ್ಞಾನದ ಅವಶ್ಯಕತೆ ಇರುತ್ತದೆ. ಆದುದರಿಂದ ಈ ಎಲ್ಲಾ ಕಾರಣಗಳಿಂದ ಉರ್ದು ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ಡೆಪ್ಯೂಟ್ ಮಾಡುವ ವ್ಯವಸ್ಥೆ ಮಾಡಬೇಕೆಂದು ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಯೂನಿವರ್ಸಿಟಿ ಲೆವೆಲ್‌ನಲ್ಲಿ ಕಳೆದ ತಿಂಗಳು ಸ್ಥಳೀಯ ಅಭ್ಯರ್ಥಿಗಳ ವಿಷಯವಾಗಿ ಒಂದು ಪ್ರಶ್ನೆಯನ್ನು ಎತ್ತಿದ್ದೆ,

1-00 P.M.

What action has been taken regarding your assurance given to this House on the 3rd February 1987 ? Regarding regularisation of local candidates working in various universities in Karnataka since ten to fifteen years.... ಇಂತಹವರನ್ನು ಮಾರ್ಚಿ ಪರೀಕ್ಷೆ ಮುಗಿದ ಮೇಲೆ ಈ ಉಪನ್ಯಾಸಕರನ್ನು ಕೆಲಸದಿಂದ ತೆಗೆದುಹಾಕುತ್ತಾರೆ. ಸ್ಥಳೀಯ ಅಭ್ಯರ್ಥಿಗಳಾಗಿ ಇಪ್ಪತ್ತು ವರ್ಷಗಳು ಸೇವೆ ಸಲ್ಲಿಸಿದವರನ್ನು ತೆಗೆದುಹಾಕುವುದರಿಂದ ಬಹಳ ತೊಂದರೆಯಾಗುತ್ತದೆ. ಅವರಿಗೆ ಬೇರೆ ಕಡೆ ಕೆಲಸ ಸಿಕ್ಕುವುದಿಲ್ಲ. ವಯೋಮಿತಿ ಮೀರಿರುತ್ತಾರೆ. ಅವರಿಗೆ ಮಕ್ಕಳು ಮರಿ ಇರುತ್ತವೆ. ಆದಕಾರಣ ಯಾರ್ಯಾರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ ಅಂತಹ ಸ್ಥಳೀಯ ಅಭ್ಯರ್ಥಿಗಳನ್ನು ಪುನರ್ ನೇಮಿಸಿಕೊಂಡು ಖಾಯಂ ಮಾಡಬೇಕು. Recently you have sent an order to the Vice-Chancellor. The Vice-Chancellor has not obeyed your order. Two lecturers Mr. Chandre Gowda and Mrs. Fazilabanu were terminated. Since 10 years. ಅವರು ಕೆಲಸ ಮಾಡುತ್ತಾಯಿದ್ದರು. ಇವರನ್ನು ರೀ-ಇನ್‌ಸ್ಟೇಟ್ ಮಾಡಿ ಖಾಯಂಗೊಳಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. Otherwize they will become unemployed. What you have to do ? Again you are saying in the Governor's Address "that the tempo of employment is maintained." But here it becomes "Tempo of unemployment."

ಈಗ ಸ್ಕೂಲ್ ಬಿಲ್ಡಿಂಗ್ ವಿಚಾರ. ಸರ್ಕಾರಿ ಶಾಲೆಗಳ ಕಟ್ಟಡವನ್ನು ನೋಡಿದರೆ ಪೋಷಕರು ತಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸುವುದಿಲ್ಲ. ಏತಕ್ಕೆಂದರೆ ಬಿಲ್ಡಿಂಗ್ ಕಂಡೀಷನ್ ಸರಿಯಾಗಿರುವುದಿಲ್ಲ. ಶಾಲೆಯಲ್ಲಿ ಶೌಚಗೃಹವಿರುವುದಿಲ್ಲ. ಕಟ್ಟಡ ದುರಸ್ತಿ ಇಲ್ಲ. ರೂಫ್ ಹಾಗೂ ಗೋಡೆಗಳು ಡ್ಯಾಮೇಜ್ ಆಗಿ ಇರುತ್ತವೆ.

ಅದಕ್ಕೋಸ್ಕರವಾಗಿ ಬೇರೆ ಶಾಲೆಗೆ ಮಕ್ಕಳನ್ನು ಕಳುಹಿಸುತ್ತಾರೆ. ನಾನು ಶಾಲೆಗಳ ದುರಸ್ತಿಗೆ ಬಜೆಟ್‌ನಲ್ಲಿ ಎಷ್ಟು ಮಂಜೂರು ಮಾಡಿದ್ದಾರೆಂಬುದನ್ನು ಕಳೆದ ಬಾರಿ ಕೇಳಿದ್ದೇನೆ. ಪಿಡಬ್ಲ್ಯೂಡಿ ಇಲಾಖೆಯವರು ಇದನ್ನು ದುರಸ್ತಿ ಮಾಡುವುದಿಲ್ಲ. ಮೈಸೂರಿನಲ್ಲಿ ಈದ್‌ಗಾ ಹೈಯರ್ ಪ್ರೈಮರಿ ಸ್ಕೂಲ್ ಇದೆ ತಿಲಕ್‌ನಗರದಲ್ಲಿ ಸರ್ಕಾರಿ ಶಾಲೆಯೊಂದಿದೆ. ಈ ಶಾಲೆಗಳಲ್ಲಿ ಕಟ್ಟಡದ ಸ್ಥಿತಿ ಹೀನಾವಸ್ಥೆಯಲ್ಲಿದೆ. ಅಲ್ಲಿ ಸ್ಯಾನಿಟೇಷನ್, ಲ್ಯಾಟ್ರಿನ್, ಟ್ಯಾಪ್ ಇಲ್ಲ. ನೀರು ಇಲ್ಲ ಇದು ಖಾಸಗಿ ಕಟ್ಟಡವಾಗಿದ್ದು ಮನೆಯ ಮಾಲೀಕರು ೧೦೦ ವರ್ಷದಿಂದ ಬಾಡಿಗೆ ಕೊಟ್ಟಿದ್ದಾರೆ ಕೇಸ್ ಫೈಲ್ ಮಾಡಿದ್ದಾರೆ. ನೀವು ಈ ಶಾಲೆಗೆ ೫೦ ರೂ. ಕೊಡುತ್ತಿದ್ದೀರಿ. ಆದರೆ ಈಗ ಈ ಶಾಲೆಗೆ ಖಾಸಗಿಯವರಿಗೆ ೫೦೦ ರೂ. ಸಿಗುತ್ತದೆ. ಈಗ ಅವರು ರಿಪೇರಿ ಮಾಡುವುದಿಲ್ಲ. In between who are suffering ? Children are suffering, teachers are suffering and parents are suffering. Therefore, I request you to see that the school building is repaired.

ಇನ್ನು ಉರ್ದು ಅಕಾಡೆಮಿ ವಿಚಾರ. ಉರ್ದು ಅಕಾಡೆಮಿ ಬಗ್ಗೆ ಯಾವ ರಿಪೋರ್ಟ್ ಇಲ್ಲ. ಗೌರ್ನರ್ ಭಾಷಣದಲ್ಲಿ ಪ್ರಸ್ತಾಪವಿಲ್ಲ. ಉರ್ದು ಅಕಾಡೆಮಿ ಮಾಡಲು ಕಮಿಟಿಯೊಂದನ್ನು ರಚನೆ ಮಾಡುತ್ತೀರಾ ? ಈ ಬಗ್ಗೆ ಮಂಜೂರಾತಿಯನ್ನು ಕೊಟ್ಟಿದ್ದೀರಾ ? ಈ ಉರ್ದು ಅಕಾಡೆಮಿ ಬಗ್ಗೆ ವರದಿಯೊಂದನ್ನು ಈ ಮನೆಯಲ್ಲಿ ಮುಂದಿನ ಬಾರಿ ತಾವು ಉತ್ತರ ಕೊಡುವಾಗ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. I request the Hon'ble Minister to reply to my points. Thank you very much Sir.

ಶ್ರೀ ಹೆಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ, ಈ ದಿವಸ ವಿದ್ಯಾ ಇಲಾಖೆಯ ಮೇಲೆ ಮಂಡಿಸಿರತಕ್ಕಂತಹ ಬೇಡಿಕೆಯನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಲು ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಗಳೇ ಈ ಹಿಂದೆ ನಮ್ಮ ರಾಜ್ಯದಲ್ಲಿ ಕಡ್ಡಾಯ ಶಿಕ್ಷಣ ತರಬೇತಿಯನ್ನು ತಂದಾಗ ಕೂಡ ಮಕ್ಕಳು ಶಾಲೆಗೆ ಬರುತ್ತಿರಲಿಲ್ಲ. ಏತಕ್ಕೆಂದರೆ ಅವರ ತಂದೆತಾಯಿಗಳಿಗೆ ಇರತಕ್ಕ ಕಷ್ಟವೇನೆಂದರೆ ಮಕ್ಕಳಿಗೆ ಸಮವಸ್ತ್ರವನ್ನು ಒದಗಿಸಕೊಡತಕ್ಕಂತಹ, ಪಠ್ಯಪುಸ್ತಕಗಳನ್ನು ಒದಗಿಸಿ ಕೊಡುವ ಶಕ್ತಿ ಇಲ್ಲದೆ ಅವರು ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಪಾಠಶಾಲೆಗೆ ಕಳುಹಿಸುತ್ತಾ ಇರಲಿಲ್ಲ. ಆದರೆ ಈಗ ನಮ್ಮ ಜನತಾ ಸರ್ಕಾರ ಬಂದ ಮೇಲೆ ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳನ್ನು ಮತ್ತು ಸಮವಸ್ತ್ರಗಳನ್ನು ಒಂದನೇ ಮತ್ತು ಎರಡನೇ ತರಗತಿಗಳಿಗೂ ಮತ್ತು ಆರು ಮತ್ತು ಏಳನೆಯ ತರಗತಿಗಳ ಹೆಣ್ಣು ಮಕ್ಕಳಿಗೆ ಸಮವಸ್ತ್ರಗಳನ್ನು ಕೊಡತಕ್ಕಂತಹ ಒಂದು ಪದ್ಧತಿ ಜಾರಿಗೆ ತಂದಿದ್ದಾರೆ. ಇವತ್ತಿನ ದಿವಸ ನಮ್ಮಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳುಗಳನ್ನು ಶಾಲೆಗೆ ಕಳುಹಿಸುತ್ತಿರುವುದು ನಮಗೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಈ ಒಂದು ಸಂದರ್ಭದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಮಕ್ಕಳು ಸರಿಯಾಗಿ ಶಾಲೆಗೆ ಬರತಕ್ಕದ್ದು ಜಾಸ್ತಿಯಾಗಿದೆ. ಇದರಿಂದ, ಇವರಿಗೆ ಉಪಹಾರದ ವ್ಯವಸ್ಥೆಯನ್ನು ಮಾಡಬೇಕೆನ್ನುವ ಆಲೋಚನೆ ನಮ್ಮ ಸರ್ಕಾರದ ಯೋಜನೆಯಲ್ಲಿ ಇದೆ. ಈಗಾಗಲೇ ಕೆಲವು ಶಾಲೆಗಳಲ್ಲಿ ಉಪಹಾರ ವ್ಯವಸ್ಥೆಯನ್ನೂ ಕೂಡ ಮಾಡಲಾಗಿದೆ. ಮಕ್ಕಳು ಶಾಲೆಗೆ ಬರಬೇಕಾದರೆ ಅನೇಕ ತೊಂದರೆಗಳು ಇರುವುದರಿಂದ ಅವರಿಗೆ ಊಟ ತಿಂಡಿಗಳ ವ್ಯವಸ್ಥೆಯಲ್ಲಿ ಬಹಳ ತೊಂದರೆಯಾಗಿ ಎಷ್ಟೋ ಜನ ಮಕ್ಕಳು ಹಸಿದುಕೊಂಡು ಬರುವ ಪರಿಸ್ಥಿತಿ ಇದೆ. ಆದ್ದರಿಂದ ಇಂತಹ ಮಕ್ಕಳಿಗೆ ಈ ಒಂದು ಉಪಹಾರ ಪದ್ಧತಿಯನ್ನು ಮಾಡಬೇಕೆಂದು ನನ್ನ ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ಕೊಡಲಿಚ್ಛಿಸುತ್ತೇನೆ. ಶಾಲಾ ಕಟ್ಟಡಗಳ ವಿಷಯವನ್ನು ನಾವು ಹೇಳುವುದಾದರೆ, ಎಲ್ಲಾ ವಿಧದಲ್ಲೂ ಪ್ರತಿಯೊಬ್ಬ ಪ್ರಜೆಗೂ ವಿದ್ಯೆ ಸಿಗಬೇಕೆಂಬ ಆಸೆ ನಮ್ಮಲ್ಲಿದೆ. ಆದರೆ ನಾವು ಶಾಲಾ ಕಟ್ಟಡಗಳನ್ನು ಒದಗಿಸುವುದಕ್ಕೆ ಹಣಕಾಸಿನ ಮುಗ್ಗಟ್ಟು ನಮಗೆ ಇದೆ.

(ಶ್ರೀ ಎಂ.ಪಿ. ಪ್ರಕಾಶ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವತ್ತು ಅನೇಕ ಕಡೆ ಶಾಲಾ ಕಟ್ಟಡಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಪಟ್ಟಣಗಳಲ್ಲಿ ನೂರಾರು, ಸಾವಿರಾರು ರೂಪಾಯಿಯಷ್ಟು ಬಾಡಿಗೆಯನ್ನು ಕೊಟ್ಟು ನಾವು ಶಾಲಾ ಕಟ್ಟಡಗಳನ್ನು ಒದಗಿಸಿಕೊಡುತ್ತೇವೆ. ಆದರೆ ಗ್ರಾಮಾಂತರಗಳಲ್ಲಿ ಅಂತಹ ಅವಕಾಶ ಇಲ್ಲ. ಖಾಸಗಿಯವರು ಇಂಗ್ಲೀಷ್ ಸ್ಕೂಲ್‌ಗಳನ್ನು ಒಳ್ಳೆಯ ಒಳ್ಳೆಯ, ಶಾಲೆಗಳನ್ನು ತೆರೆದು ಬಹಳ ಉತ್ತಮವಾದ ಎಜುಕೇಷನ್ ಕೊಡತಕ್ಕಂತಹ ಪದ್ಧತಿ ಪಟ್ಟಣಗಳಲ್ಲಿ ಇರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಿಕೊಡುತ್ತಿದ್ದಾರೆ. ಆದರೆ ಸರ್ಕಾರಿ ಶಾಲೆಗೆ ಕಳುಹಿಸಿಕೊಡುತ್ತಿಲ್ಲ. ಆದರೂ ಕೂಡ ನಾವು ಸರ್ಕಾರಿ ಶಾಲೆಗೆ ಹೆಚ್ಚಿನ ಒಂದು ಬಾಡಿಗೆ ಕೊಟ್ಟು ಆ ಶಾಲೆಗಳನ್ನು ನಡೆಸುತ್ತಿದ್ದೇವೆ. ಆದರೆ ಅದೇ ನಾವು ಹಳ್ಳಿಗಳಲ್ಲಿ ಏನಾದರೂ ಒಂದು ಶಾಲಾ ಕಟ್ಟಡವನ್ನು ಕಟ್ಟಬೇಕಾದರೆ ವಂತಿಕೆ ಎಷ್ಟು ಕೊಡಬೇಕು ? ಆ ವಂತಿಕೆಯನ್ನು ಕೊಡತಕ್ಕಂತಹ ಶಕ್ತಿ ಹಳ್ಳಿಯ ಜನರಿಗೆ ಇಲ್ಲ ಈ ಒಂದು ಕಾರಣದಿಂದ ಅಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅನೇಕ ಶಾಲೆಗಳು ಒಂದನೇ, ಐದನೇ ಮತ್ತು ಆರನೇ ತರಗತಿಗಳ ಎಲ್ಲಾ ಮಕ್ಕಳನ್ನೂ ಒಂದು ಕೊಠಡಿಯಲ್ಲಿ ಕೂಡಿ ಹಾಕಿ ಒಬ್ಬ ಉಪಾಧ್ಯಾಯರು ಹೋಗಿ ಪಾಠ ಹೇಳತಕ್ಕಂತಹ ಪದ್ಧತಿ ಇವೊತ್ತೂ ಇದೆ. ಅದು ಹೋಗಬೇಕು. ಇವೊತ್ತಿನ ಸ್ಪರ್ಧಾತ್ಮಕ ಪರಿಸ್ಥಿತಿಯಲ್ಲಿ ನಮ್ಮ ಮಕ್ಕಳನ್ನು ಹೈಯರ್ ಎಜುಕೇಷನ್‌ಗೆ ಕಳುಹಿಸಬೇಕಾದರೆ ಯಾರಿಗೆ ಮೆರಿಟ್ ಇದೆಯೋ ಅಂತಹವರಿಗ ಈಗ ಒಳ್ಳೆಯ ಹೈಯರ್ ಎಜುಕೇಷನ್ ಸಿಗುತ್ತಿಲ್ಲ. ಮತ್ತು ಹಳ್ಳಿ ಮಕ್ಕಳಿಗೆ ಒಳ್ಳೆಯ ವಿಧ್ಯಾಭ್ಯಾಸ ಸೌಲಭ್ಯ ಇಲ್ಲದೇ ಇರುವುದರಿಂದ ಇವರು ಕಾಂಪಿಟ್ ಮಾಡುವುದಕ್ಕೆ ಕಷ್ಟವಾಗುತ್ತಿದೆ.

ಈ ಮಕ್ಕಳಿಗೂ ನಾವು ಒಂದು ಹೆಚ್ಚಿನ ರೀತಿಯಲ್ಲಿ ಶಿಕ್ಷಣವನ್ನು ಕೊಟ್ಟು ಅವರೂ ಕೂಡ ಈ ಒಂದು ಕಾಂಪಿಟೇಷನ್‌ನಲ್ಲಿ ಭಾಗವಹಿಸುವಂತೆ ಮಾಡಬೇಕು. ಈ ಸೌಲಭ್ಯ ನಮ್ಮ ಮಕ್ಕಳಿಗೆ ಈಗ ಸಿಕ್ಕುತ್ತಿಲ್ಲ. ಇದನ್ನು ನಾವು ಒದಗಿಸಬೇಕು. ಈಗ ನಾವು ಯಾವ ಹಳ್ಳಿಗೆ ಹೋಗಿ ನೋಡಿದರೂ ಅಲ್ಲಿ ೨೦೦-೩೦೦ ಮಕ್ಕಳಿರುತ್ತಾರೆ. ಆದರೆ ಒಬ್ಬಿಬ್ಬರು ಉಪಾಧ್ಯಾಯರುಗಳಿರುತ್ತಾರೆ. ೪೦ ವಿದ್ಯಾರ್ಥಿಗಳಿಗೆ ಒಬ್ಬರಂತೆ ನೋಡಿದರೂ ಕೂಡ ಇನ್ನು ಇಬ್ಬರೂ ಮೂವರು ಉಪಾಧ್ಯಾಯರುಗಳು ಬೇಕಾಗುತ್ತದೆ. ಈ ಮಕ್ಕಳಿಗೆ ಹೆಚ್ಚಿನ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಒದಗಿಸಲು ಹೆಚ್ಚಿನ ಸಂಖ್ಯೆಯಲ್ಲಿ ಉಪಾಧ್ಯಾಯರುಗಳನ್ನು ನೇಮಿಸಿದರೆ ಅವರೂ ಮುಂದೆ ಬರುವುದಕ್ಕೆ ಅವಕಾಶವಾಗುತ್ತದೆ. ಅವರುಗಳೂ ಮುಂದೆ ಬಿ.ಎ., ಬಿ.ಎಸ್‌ಸಿ., ಮಾಡಿಕೊಂಡು ಅದರಲ್ಲಿ ೩೩ ಪರ್ಸೆಂಟ್ ತೆಗೆದುಕೊಂಡು ನಮ್ಮ ಮನೆ ಬಾಗಿಲುಗಳಿಗೂ, ಆಫೀಸ್ ಬಾಗಿಲುಗಳಿಗೂ ಅಲೆದು ಕೆಲಸ ಕೊಡಿಸಿ ಎಂದು ಕೇಳತಕ್ಕಂಥ ಪರಿಸ್ಥಿತಿಗೆ ನಾವು ಹೋಗಬೇಕಾಗಿದೆ. ಕೆಲವೊಮ್ಮೆ ವಿದ್ಯಾವಂತರಾಗಿ ಅವಿದ್ಯಾವಂತರಂತೆ ಕೆಲಸ ಮಾಡುವಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ಅವರುಗಳೂ ಮುಂದುವರಿಯಲೂ ಸಹಾಯಕವಾಗುವಂತೆ ಅವರಿಗೆ ಹೆಚ್ಚಿನ ರೀತಿಯಲ್ಲಿ ಉತ್ತಮವಾದಂಥ ವಿದ್ಯಾಭ್ಯಾಸ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳಲು ಇಚ್ಛಿಸುತ್ತೇನೆ.

ಇನ್ನು ಸರ್ಕಾರಿ ಪ್ರೌಢ ಶಾಲೆಗಳಲ್ಲೂ ಇದೆ ರೀತಿಯಾಗಿದೆ. ಸರ್ಕಾರಿ ಪ್ರೌಢಶಾಲೆಗಳಲ್ಲಿ ಫಲಿತಾಂಶ ಬರತಕ್ಕಂಥದ್ದನ್ನು ನೋಡಿದರೆ, ಅದು ಬಹಳ ಕಡಿಮೆ ದರ್ಜೆಯಲ್ಲಿ ಬರುತ್ತಾ ಇದೆ. ಖಾಸಗಿ ಪ್ರೌಢ ಶಾಲೆಗಳ ಫಲಿತಾಂಶವನ್ನು ಸರ್ಕಾರಿ ಪ್ರೌಢ ಶಾಲೆಗಳ ಫಲಿತಾಂಶಕ್ಕೆ ಹೋಲಿಸಿ ನೋಡಿದರೆ, ಖಾಸಗಿ ಶಾಲೆಗಳಲ್ಲಿಯ ಫಲಿತಾಂಶವೇ ಹೆಚ್ಚಿನ ಮಟ್ಟದಲ್ಲಿದೆ. ಕೆಲವೊಮ್ಮೆ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ೫೦-೬೦ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಂಡರೆ, ಅವರಲ್ಲಿ ಒಬ್ಬಿಬ್ಬರೂ ಪಾಸಾಗುವ ಸಂದರ್ಭಗಳು ಬಂದಿದೆ, ನಮ್ಮ ಮಕ್ಕಳು ಇಂಥ ಪರಿಸ್ಥಿತಿಯಲ್ಲಿ ವಿದ್ಯಾವಂತರಾಗುವ ಅವಕಾಶವಿಲ್ಲ. ಹಳ್ಳಿಗಳಲ್ಲಿರುವ ಪ್ರೌಢಶಾಲೆಗಳು ಈ ರೀತಿಯಿರುವ ಬಗ್ಗೆ ಒಂದು ಹೆಚ್ಚಿನ ನಿಗಾವನ್ನು ಕೊಡಬೇಕೆಂದು ಕೋರುತ್ತೇನೆ. ಹಿಂದೆ ಬ್ರಿಟಿಷರ ಕಾಲದಲ್ಲಿ ಅವರಿಗೆ ಗುಮಾಸ್ತಗಿರಿ ಮಾಡತಕ್ಕಂಥ ಜನ ಬೇಕಾಗಿದ್ದರೂ, ಅದಕ್ಕೋಸ್ಕರ ಅವರು ಗುಮಾಸ್ತರನ್ನು ತಯಾರು ಮಾಡತಕ್ಕಂಥ ವಿದ್ಯಾಭ್ಯಾಸವನ್ನು ಕೊಡುತ್ತಿದ್ದರು. ಅದೇ ರೀತಿಯ ಪದ್ಧತಿಯನ್ನು ಇಂದಿಗೂ ನಾವು ಮುಂದುವರಿಸಿಕೊಂಡು ಬಂದಿದ್ದು, ಅದರಲ್ಲಿ ಯಾವುದೇ ರೀತಿಯ ಬದಲಾವಣೆಯನ್ನು ಮಾಡಿಲ್ಲ. ಬದಲಾವಣೆಯಾಗದೆ ಹೋದರೆ ಇದರಿಂದ ಏನೂ ಪ್ರಯೋಜನವಿಲ್ಲ. ಈಗ ಒಳ್ಳೆಯ ವಿದ್ಯಾಭ್ಯಾಸದ ಅವಶ್ಯಕತೆ ಇದೆ. ಈಗ ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ, ಮಾಡಿಕೊಂಡು ಜೀವನ

ಮಾಡುವುದು ಕಷ್ಟವಾಗಿದೆ. ಇದರಿಂದ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ತಾಂಡವವಾಡುತ್ತಿದೆ. ಈ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಹೋಗಬೇಕಾದರೆ, ನಾವು ವೃತ್ತಿ ಶಿಕ್ಷಣವನ್ನು ಶಾಲೆಗಳಿಂದಲೇ ಕೊಡಬೇಕು. ಅವರಿಗೆ ಯಾವ ಕಸುಬಿನಲ್ಲಿ ಆಸಕ್ತಿ ಇದೆಯೋ ಅಂತಹ ವಿದ್ಯಾಭ್ಯಾಸವನ್ನು ನಾವು ಮಕ್ಕಳಿಂದಲೇ ಅಂದರೆ ಅವರು ಹೈಸ್ಕೂಲಿಗೆ ಬಂದಾಗಿನಿಂದಲೇ ವೃತ್ತಿ ಶಿಕ್ಷಣದ ತರಬೇತಿಯನ್ನು ಕೊಟ್ಟರೆ ಈ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ತೊಡೆದು ಹಾಕುವುದಕ್ಕೆ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಸೆಕೆಂಡರಿ ವಿದ್ಯಾಭ್ಯಾಸ ಮುಗಿದ ಕೂಡಲೇ, ಅವರಿಗೆ ಯಾವುದರಲ್ಲಿ ಆಸಕ್ತಿ ಇದೆಯೋ, ಟೈಲರಿಂಗ್ ಅಥವಾ ಕಾರ್ಪೆಂಟರಿ ಇವುಗಳಲ್ಲಿ ತರಬೇತಿಯನ್ನು ಕೊಡಬೇಕು. ಈಗ ಟೈಲರಿಂಗ್ ಮಾಡಿದರೆ ಎಲ್ಲರಿಗೂ ಕೆಲಸ ಸಿಗತಕ್ಕಂಥ ಪರಿಸ್ಥಿತಿಯಲ್ಲಿ ನಾವಿಂದು ಇದ್ದೇವೆ. ನಮಗೆ ಅರ್ಜೆಂಟಾಗಿ ಬಟ್ಟೆಗಳು ಬೇಕಾದರೆ ಒಂದೆರಡು ದಿನಗಳಲ್ಲಿ ಹೊಲಿದುಕೊಡತಕ್ಕಂಥ ಟೈಲರ್‌ಗಳೇ ಇಲ್ಲ. ಆದ್ದರಿಂದ ನಮ್ಮಲ್ಲಿ ಈಗ ಒಳ್ಳೆಯ ಟೈಲರ್‌ಗಳ ಅವಶ್ಯಕತೆ ಇದೆ. ಶಾಲೆಗಳಲ್ಲಿಯೇ ಮಕ್ಕಳಿಗೆ ಇಂತಹ ಒಂದು ತರಬೇತಿಯನ್ನು ಕೊಡಬೇಕು, ಅವನಿಗೆ ಕಾರ್‌ಪೆಂಟರಿನಲ್ಲಿ ಆಸಕ್ತಿ ಇದೆಯೋ, ಅಥವಾ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್‌ನಲ್ಲಿ ಇಂಟರೆಸ್ಟ್ ಇದೆಯೋ, ಮೆಷಿನರಿಯಲ್ಲಿ ಇಂಟರೆಸ್ಟ್ ಇದೆಯೋ, ಯಾವುದರಲ್ಲಿ ಅವರಿಗೆ ಆಸಕ್ತಿ ಇದೆಯೋ ಅದರಲ್ಲಿ ಅವರಿಗೆ ಟ್ರೈನಿಂಗ್ ಕೊಟ್ಟರೆ, ಅಂತಹ ವಿದ್ಯಾರ್ಥಿಗಳು ಪರಾವಲಂಬಿಯಾಗದೆ ತಮ್ಮ ಕಾಲ ಮೇಲೆ ತಾವು ನಿಂತು ತಮ್ಮ ಜೀವನವನ್ನು ನಡೆಸಿಕೊಂಡು ಹೋಗಲು ಅವಕಾಶವಾಗುತ್ತದೆ. ಇಂತಹ ಒಂದು ವೃತ್ತಿ ಶಿಕ್ಷಣ ಶಾಲೆಗಳನ್ನು ಹೆಚ್ಚು ಹೆಚ್ಚು ಮಟ್ಟದಲ್ಲಿ ತೆರೆದರೆ ಈವೊತ್ತಿನ ದಿವಸ ನಮ್ಮ ದೇಶದಲ್ಲಿರತಕ್ಕಂಥ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಏನು ಇದೆ ಅದನ್ನು ತೊಡೆದು ಹಾಕುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಬಿ.ಎ., ಬಿ.ಎಸ್‌ಸಿ.ಯನ್ನು ಓದಿಕೊಂಡು ಲಕ್ಷಾಂತರ ವಿದ್ಯಾರ್ಥಿಗಳು ಹೊರಗೆ ಬಂದು ಅವರಿಗೆ ಕೆಲಸಗಳು ಸಿಕ್ಕದೆ ಆಫೀಸಿನಿಂದ, ಆಫೀಸಿಗೆ, ಮನೆಯಿಂದ ಮನೆಗೆ ಎಲ್ಲರ ಹತ್ತಿರ ಕೆಲಸಗಳನ್ನು ಕೇಳುವುದಕ್ಕೆ ಹೊರಟಿದ್ದಾರೆ. ಇದರಿಂದ ಎಲ್ಲರಿಗೂ ಒಂದು ತರಹ ಬರ್ಡನ್ ಆಗಿರುತ್ತದೆ. ಇದನ್ನು ತೊಡೆದು ಹಾಕಬೇಕಾದರೆ ವೃತ್ತಿ ಶಿಕ್ಷಣ ಶಾಲೆಗಳನ್ನು ಹೆಚ್ಚು ಹೆಚ್ಚು ತೆರೆದರೆ ಅನುಕೂಲವಾಗುತ್ತದೆ. ಅವರು ಬೇರೆ ಒಬ್ಬರನ್ನು ಅವಲಂಬನೆ ಮಾಡದೆ ತಮ್ಮದೇ ಆದ ರೀತಿಯಲ್ಲಿ ಸ್ವಂತ ಉದ್ಯೋಗವನ್ನು ಮಾಡಿಕೊಂಡು ಹೋಗಬಹುದು. ಆ ರೀತಿ ಮಾಡಿದರೆ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಂನ್ನು ತೊಡೆದು ಹಾಕುವುದಕ್ಕೆ ಸಾಧ್ಯ ಉಂಟು. ಈ ಬಗ್ಗೆ ತಾವು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕೆಲವು ಕಡೆಗಳಲ್ಲಿ ಶಾಲೆಗಳಿಗೆ ಕಟ್ಟಡಗಳು ಇಲ್ಲ. ಅನೇಕ ಕಡೆಗಳಲ್ಲಿ ಶಾಲಾ ಕಟ್ಟಡಗಳು ರಿಪೇರಿಯಾಗಬೇಕಾಗಿದೆ. ಕೆಲವು ಶಾಲಾ ಕಟ್ಟಡಗಳಲ್ಲಿ ಹೆಂಚುಗಳು ಇಲ್ಲ, ಕೆಲವು ಕಡೆಗಳಲ್ಲಿ ಅಲ್ಲಿ ರಿಪೀಸ್‌ಗಳನ್ನು ಗೆಜ್ಜಲು ತಿನ್ನುತ್ತಾ ಇವೆ. ಆದುದರಿಂದ ಶಾಲಾ ಕಟ್ಟಡಗಳಿಗೂ ಮತ್ತು ರಿಪೇರಿಗೂ ಇವೆರಡೂ ಕೂಡ ಹಣ ಜಾಸ್ತಿ ಬೇಕಾಗಿರುವುದರಿಂದ ಈಗ ಇಟ್ಟಿರತಕ್ಕಂಥ ದುಡ್ಡಿನಲ್ಲಿ ಅದನ್ನು ದ್ವಿಗುಣ ಮಾಡಿಕೊಟ್ಟರೆ, ಎರಡು ಪಟ್ಟು ಹಣವನ್ನು ಒದಗಿಸಿಕೊಟ್ಟರೆ ಅವರಿಗೆ ಕೆಲವು ಅನುಕೂಲಗಳನ್ನು ಒದಗಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ ಎಂದು ನನಗೆ ಅನಿಸುತ್ತದೆ. ಈಗ ಈ ವಿದ್ಯಾ ಇಲಾಖೆಗೆ ೬೯೦ ಕೋಟಿ ರೂಪಾಯಿ ಹಣವನ್ನು ಏನು ಒದಗಿಸಿದ್ದೀರಿ ಇದು ಸಾಲುವುದಿಲ್ಲ. ಇನ್ನೂ ಹೆಚ್ಚು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಎನ್ನುವುದು ಬಹಳ ಮುಖ್ಯವಾದುದು. ಪ್ರತಿಯೊಬ್ಬ ನಮ್ಮ ಮಗ ವಿದ್ಯಾವಂತನಾಗಬೇಕೆಂದು, ಅವನು ವಿದ್ಯಾವಂತನಾಗುವುದನ್ನು ನಾನು ಕಣ್ಣಲ್ಲಿ ನೋಡಬೇಕೆಂದು ಬಯಕೆ ಇರುತ್ತದೆ. ಆದುದರಿಂದ ಈ ವಿದ್ಯಾಭ್ಯಾಸದ ಕಡೆಗೆ ಎಲ್ಲರೂ ಹೆಚ್ಚು ಗಮನ ಕೊಡಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅನೇಕ ಕಡೆಗಳಲ್ಲಿ ಉಪಾಧ್ಯಾಯರು ಇಲ್ಲ. ಈಗ ಅವರ ಸಂಖ್ಯೆ ಕಡಿಮೆ ಇದೆ. ೨೦–೨೫ ಸಾವಿರ ಉಪಾಧ್ಯಾಯರನ್ನು ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿಯಲ್ಲಿದ್ದೇವು. ಅಷ್ಟರಲ್ಲೇ ಅವರ ನಿವೃತ್ತಿ ವಯಸ್ಸನ್ನು ಜಾಸ್ತಿ ಮಾಡಿದ್ದರಿಂದ ಈಗ ಇದ್ದಾರೆ. ಆದರೂ ಸಹ ಉಪಾಧ್ಯಾಯರ ಸಂಖ್ಯೆ ಕಡಿಮೆ. ಹೇಗೆಂದರೆ ಅಷ್ಟೇ ಸಂಖ್ಯೆಯಲ್ಲಿ ಶಾಲೆಗಳ ಸಂಖ್ಯೆಯೂ ಜಾಸ್ತಿಯಾಗಿದೆ. ಆದುದರಿಂದ ತಾವು ತಕ್ಷಣವಾಗಿ ೨೦–೨೫ ಸಾವಿರ ಜನ ಉಪಾಧ್ಯಾಯರನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಈಗ ಎಷ್ಟೋ ಕಡೆಗಳಲ್ಲಿ ಉಪಾಧ್ಯಾಯರು ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೂ ಆ ಮಕ್ಕಳನ್ನು ಕೂರಿಸಿಕೊಂಡು ಪಾಠ ಹೇಳಿಕೊಡಬೇಕಾಗಿದೆ. ಹೀಗಾದರೆ ಅವರು ಎಷ್ಟರಮಟ್ಟಿಗೆ ತಮ್ಮ

ಜೀವನದಲ್ಲಿ ಮುಂದುವರೆಯಬಹುದು ? ಇನ್ನೊಂದು ವಿಚಾರ ಏನೆಂದರೆ ಪಟ್ಟಣಗಳಲ್ಲಿರುವವರು ತಮ್ಮ ಮಕ್ಕಳನ್ನು ಕಾನ್‌ವೆಂಟ್‌ನಲ್ಲಿ ಓದಿಸಿ ಓದಿಸುವುದಕ್ಕೆ, ಸೀಟು ಸಿಗದೇ ಹೋದರೂ ಡೊನೇಷನ್ ಕೊಟ್ಟು ಓದಿಸುವುದಕ್ಕೆ ತಕ್ಕ ಶಕ್ತಿ ಇರುವುದರಿಂದ ಅವರು ದುಡ್ಡು ಕೊಟ್ಟು ಚೆನ್ನಾಗಿ ಓದಿಸುತ್ತಾರೆ. ಹಳ್ಳಿಗಳಲ್ಲಿರತಕ್ಕಂಥ ಜನತೆಗೆ, ಬಡಜನತೆಗೆ ಆ ಶಕ್ತಿ ಇರುವುದಿಲ್ಲ, ಅವರು ಸರ್ಕಾರೀ ಶಾಲೆಗೇ ಕಳುಹಿಸಿ ಓದಿಸಬೇಕಾಗುತ್ತದೆ. ಆದುದರಿಂದ ಹಳ್ಳಿಗಳಲ್ಲಿರುವ ಮಕ್ಕಳು ಬಿ.ಎ.,ಗಾಗಲಿ ಬಿ.ಎಸ್‌ಸಿ.,ಗಾಗಲಿ ಎಂ.ಬಿ.ಬಿ.ಎಸ್.,ಗಾಗಲಿ ಇನ್ನು ಇತರ ತಾಂತ್ರಿಕ ಶಿಕ್ಷಣಕ್ಕಾಗಲಿ ಪಟ್ಟಣದ ಮಕ್ಕಳೊಂದಿಗೆ ಸ್ಪರ್ಧೆ ಮಾಡುವುದಕ್ಕಾಗುವುದಿಲ್ಲ. ಪಟ್ಟಣದ ಮಕ್ಕಳ ಹಾಗೆ ಹಳ್ಳಿಗಳಲ್ಲಿರುವ ಮಕ್ಕಳು ಒಳ್ಳೆಯ ಅಂಕಗಳನ್ನು ಅಂದರೆ ೧೦೦ಕ್ಕೆ ೯೦–೯೫ ಅಂಕಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ದನ, ಕುರಿ ಕಾಯುವ ಹಳ್ಳಿಮಕ್ಕಳು ಪಟ್ಟಣಗಳ ಮಕ್ಕಳೊಂದಿಗೆ ಸ್ಪರ್ಧಿಸಿ ಮೆರಿಟ್ ತೆಗೆದುಕೊಳ್ಳುವುದು ಕಷ್ಟ. ಹಳ್ಳಿಗಳಲ್ಲಿರುವ ಮಕ್ಕಳು ೫೦–೬೦ ಪರ್ಸೆಂಟ್ ತೆಗೆದುಕೊಳ್ಳುವುದೇ ಕಷ್ಟ. ಅಂಥಾವರ ಜೊತೆಯಲ್ಲಿ ಅಂದರೆ ಪಟ್ಟಣದ ಮಕ್ಕಳಜೊತೆಯಲ್ಲಿ ಹಳ್ಳಿಗಳ ಮಕ್ಕಳೂಕೂಡ ಸ್ಪರ್ಧಿಸುವುದು ಕಷ್ಟ. ಮೆರಿಟ್‌ಪ್ರಕಾರ ಸಿಗುವುದಿಲ್ಲ ಸೀಟು ಸಿಗುವುದಿಲ್ಲ ಆದುದರಿಂದ ನಾನು ಹೇಳುವುದೇನೆಂದರೆ ಯಾವುದಾದರೂ ತಾಂತ್ರಿಕ ಶಾಲೆಗಳಿಗೆ ಹಳ್ಳಿಗಳ ಮಕ್ಕಳಿಗೆ ಸೀಟು ಸಿಗಬೇಕಾದರೆ, ಅವರಿಗೆ ಅನುಕೂಲ ಮಾಡಬೇಕೆನ್ನುವುದಾದರೆ ಹಳ್ಳಿಗಳ ಮಕ್ಕಳಿಗೇ ಒಂದು ಪರ್ಸೆಂಟೇಜ್ ಗೊತ್ತು ಮಾಡಿ, ಪಟ್ಟಣದ ಮಕ್ಕಳಿಗೇ ಒಂದು ಪರ್ಸೆಂಟೇಜ್ ಗೊತ್ತು ಮಾಡಿ, ಅವರಿಗೆ ತಾಂತ್ರಿಕ ಶಾಲೆಗಳಲ್ಲಿ ಸೀಟು ಸಿಗುವ ರೀತಿಯಲ್ಲಿ ಒಂದು ವ್ಯವಸ್ಥೆಯನ್ನು ಹಳ್ಳಿಗಾಡಿನ ಮಕ್ಕಳಿಗೆ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ತಮ್ಮ ಮುಖಾಂತರ ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಸಮವಸ್ತ್ರವನ್ನು ಈಗ ಒಂದು ಮತ್ತು ಎರಡನೇ ತರಗತಿ ಮಕ್ಕಳಿಗೆ ಏನು ಕೊಡಲಾಗುತ್ತಿದೆ, ಅದನ್ನು ೪ ಮತ್ತು ೫ನೇ ತರಗತಿಯ ಮಕ್ಕಳಿಗೂ ವಿಸ್ತರಣೆ ಮಾಡಬೇಕೆಂದು ಹೇಳುತ್ತೇನೆ, ಪಠ್ಯ ಪುಸ್ತಕಗಳನ್ನು ಸೆಕೆಂಡರಿ ಎಜುಕೇಷನ್ ಮುಗಿಯುವವರೆಗೆ ಉಚಿತವಾಗಿ ಹಂಚಬೇಕೆಂದು ಆಲೋಚನೆ ಮಾಡುತ್ತಿರುವುದು ಸಹ ಸೂಕ್ತವಾದ ಕ್ರಮವಾಗಿದೆ. ಈ ಬಗ್ಗೆ ಜಾಗ್ರತೆ ತೀರ್ಮಾನ ಕೈಗೊಳ್ಳ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತಾಂತ್ರಿಕ ಶಾಲೆ ಮತ್ತು ಕಾಲೇಜುಗಳನ್ನು ಪಟ್ಟಣಗಳಲ್ಲಿಯೇ ಕೇಂದ್ರೀಕೃತ ಮಾಡುವುದು ಸರಿಯಲ್ಲ. ಈ ತಾಂತ್ರಿಕ ಕಾಲೇಜುಗಳನ್ನು ಮತ್ತು ಉನ್ನತ ಪದವಿ ಕಾಲೇಜುಗಳನ್ನು ಪಟ್ಟಣಗಳನ್ನು ಬಿಟ್ಟು ಸುಮಾರು ೬೦ ದೂರದಲ್ಲಿರುವಂತಹ ಹಳ್ಳಿಗಳ ಪ್ರದೇಶಗಳಲ್ಲಿ ಪ್ರಾರಂಭ ಮಾಡಿದರೆ ಹಳ್ಳಿಯ ಮಕ್ಕಳು ಕಡಿಮೆ ಖರ್ಚಿನಲ್ಲಿ ವಿದ್ಯಾಭ್ಯಾಸ ಮಾಡಬಹುದು. ಒಳ್ಳೆಯ ಪರಿಸರದಲ್ಲಿ ವಿದ್ಯಾಭ್ಯಾಸ ಮಾಡ ಬಹುದು, ಅಲ್ಲಿ ಯಾವುದೇ ಗೊಂದಲ ವಾತಾವರಣ ಹಾಗೂ ಗಜಿಬಿಜಿ ಇರುವುದಿಲ್ಲ ಹಾಗೂ ಏಕಾಗ್ರತೆ ಯಿಂದ ವಿದ್ಯಾಭ್ಯಾಸ ಮಾಡಬಹುದು ಎಂದು ಮಾನ್ಯ ಮುಖ್ಯಮಂತ್ರಿಗಳೇ ಅನೇಕ ಕಡೆಗಳಲ್ಲಿ ಭಾಷಣ ಮಾಡಿರುವುದನ್ನು ನಾವು ಕೇಳಿದ್ದೇವೆ. ಈ ಹಿಂದೆ ಕೂಡ ಆಶ್ರಮಗಳಲ್ಲಿ ನಮ್ಮ ಹುಡುಗರು ವಿದ್ಯಾಭ್ಯಾಸ ಮಾಡುತ್ತಿದ್ದರು. ಆದ್ದರಿಂದ ಈಗಲೂ ಸಹ ಹಳ್ಳಿಗಳಲ್ಲಿ ೧೦–೨೦ ಎಕರೆಗಳಷ್ಟು ಜಮೀನು ಪಡೆದು ಕೊಂಡು, ಅಲ್ಲಿ ಆಶ್ರಮ ಮಾದರಿಯಲ್ಲಿ ಶಾಲಾಕಾಲೇಜುಗಳನ್ನು ಪ್ರಾರಂಭ ಮಾಡಿದರೆ, ವಿದ್ಯಾರ್ಥಿಗಳು ನಿರ್ಮಲ ವಾತಾವರಣದಲ್ಲಿ ವಿದ್ಯಾಭ್ಯಾಸ ಮಾಡಲು ಅವಕಾಶವಾಗುತ್ತದೆಂದು ಹೇಳುತ್ತೇನೆ. ಈ ರೀತಿ ಮಾಡುವುದರಿಂದ ನಮ್ಮ ಹಳ್ಳಿಯ ವಿದ್ಯಾರ್ಥಿಗಳು ಸಹ ಹೆಚ್ಚಿನ ರೀತಿಯಲ್ಲಿ ಈ ಕಾಲೇಜುಗಳಿಗೆ ಸೇರಿ ಮೇಲೆ ಬರಲು ಅವಕಾಶವಾಗುತ್ತದೆ. ಇಂತಹ ತಾಂತ್ರಿಕ ಕಾಲೇಜುಗಳಲ್ಲಿ ಮತ್ತು ತಾಂತ್ರಿಕ ಶಾಲೆಗಳಲ್ಲಿ, ಹಾಗೂ ಪದವಿ ಕಾಲೇಜುಗಳಲ್ಲಿ ಹಳ್ಳಿಯ ಮಕ್ಕಳಿಗೆ ಪ್ರವೇಶ ನೀಡುವಾಗ ವ್ಯವಸಾಯ ಕಾಲೇಜುಗಳಿಗೆ ರೈತರ ಮಕ್ಕಳು ಸೇರುವಾಗ ಯಾವ ರೀತಿ ಹತ್ತು ಅಂಕಗಳನ್ನು ಹೆಚ್ಚು ಕೊಡಲಾಗು ತ್ತಿದೆಯೋ ಅದೇ ರೀತಿಯಲ್ಲಿ ಇಲ್ಲಿಯೂ ಸಹ ೧೫–೨೦ ಅಂಕಗಳನ್ನು ಹೆಚ್ಚು ಕೊಡಬೇಕು. ಮುಖ್ಯವಾಗಿ ಮೆರಿಟ್ ಸಿಸ್ಟಮ್ ಎಂಬುದು ಹಳ್ಳಿಯ ಮಕ್ಕಳಿಗೆ ಬೇರೆ ಮತ್ತು ಪಟ್ಟಣದ ಮಕ್ಕಳಿಗೆ ಬೇರೆ ಎಂದು ಮಾಡುವುದು ಒಳ್ಳೆಯದು ಈ ಸಂದರ್ಭದಲ್ಲಿ ನಾನು ಒತ್ತಿಒತ್ತಿ ಹೇಳುತ್ತೇನೆ. ಮುಖ್ಯವಾಗಿ ತಾಂತ್ರಿಕ ಕಾಲೇಜುಗಳಿಗೆ, ಮೆಡಿಕಲ್ ಕಾಲೇಜುಗಳಿಗೆ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಸೇರುವಾಗ ೧೫–೨೦ ಅಂಕಗಳನ್ನು ಕೊಟ್ಟರೆ ಅವರು ಸೀಟ್‌ಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಎಲ್ಲಾ ಶಾಲಾಕಾಲೇಜುಗಳಿಗೆ ಕಟ್ಟಡಗಳನ್ನು ಒದಗಿಸಬೇಕು. ಇವೊತ್ತು ಈ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರದಿಂದ ಧನ ಸಹಾಯವನ್ನು

ಪಡೆದುಕೊಳ್ಳದೆ ತಾಂತ್ರಿಕ ಕಾಲೇಜುಗಳನ್ನು ತೆರೆಯಲು ಖಾಸಗಿಯವರು ಮುಂದೆ ಬಂದರೆ ಸರ್ಕಾರದವರು ಅಂತಹವರಿಗೆ ಅನುಮತಿ ನೀಡಬೇಕು. ಸರ್ಕಾರ ಅವರ ಮೇಲೆ ಬೇಕಾದರೆ ಬಿಗಿಯಾದ ಭದ್ರತೆಯನ್ನು ಮತ್ತು ಕಾನೂನಿನ ಭದ್ರತೆಯನ್ನು ಇಟ್ಟುಕೊಳ್ಳಲಿ. ಈ ರೀತಿ ಅವಕಾಶ ಕೊಡುವುದರಿಂದ ನಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ದೊರಕುತ್ತದೆ. ಆದ್ದರಿಂದ ತಾಂತ್ರಿಕ ಕಾಲೇಜುಗಳನ್ನು ತೆರೆಯಲು ಮುಂದೆ ಬರುವವರಿಗೆ ಉತ್ತೇಜನ ನೀಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಸರ್ಕಾರದವರು ಈ ತಾಂತ್ರಿಕ ಶಾಲಾ ಕಾಲೇಜುಗಳನ್ನು ಹಳ್ಳಿಗಳಲ್ಲಿ ತೆರೆಯಬೇಕೆಂದು ಕೇಳಿಕೊಳ್ಳುತ್ತೇನೆ,

ಇನ್ನು ನಮ್ಮಲ್ಲಿ ಮೈನಾರಿಟೀಸ್ ಹಾಸ್ಟೆಲ್‌ಗಳು ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೆಲ್‌ಗಳು ಏನು ಇವೆ, ಅವುಗಳಿಗೆ ಗ್ರ್ಯಾಂಟ್ ಕೊಡಲು ನಾನಾ ರೀತಿಯ ಕ್ವೈರಿಗಳನ್ನು ಅಧಿಕಾರಿಗಳು ಹಾಕುತ್ತಿದ್ದಾರೆ. ಇದರಿಂದ ಕೆಲವು ಹಾಸ್ಟೆಲ್‌ಗಳು ಮುಚ್ಚುವ ಸ್ಥಿತಿ ಬಂದಿವೆ. ನನ್ನ ಕ್ಷೇತ್ರದಲ್ಲಿ ಇರುವಂತಹ ಹಾಸ್ಟೆಲ್‌ಗಳಿಗೆ ಅಧಿಕಾರಿಗಳು ಭೇಟಿ ಕೊಟ್ಟು ಎಷ್ಟು ವಿದ್ಯಾರ್ಥಿಗಳು ಇದ್ದಾರೆ, ಎಷ್ಟು ಜನ ವಿದ್ಯಾರ್ಥಿಗಳು ಊಟ ಮಾಡುತ್ತಿದ್ದಾರೆ ಎಂಬುದನ್ನು ತನಿಖೆ ಮಾಡಿಕೊಂಡು ಹೋದ ಮೇಲೂ ಸಹ ಕೆಲವೊಂದು ಮಾಹಿತಿಗಳನ್ನು ಒದಗಿಸಬೇಕೆಂದು ಪತ್ರ ಬರೆಯುತ್ತಾರೆ. ಅವರು ಕೇಳಿದ ಮಾಹಿತಿಗಳನ್ನು ಒದಗಿಸಿದರೆ, ಒಂದು ತಿಂಗಳು ಬಿಟ್ಟು ನಾವು ಕೇಳಿದ ಮಾಹಿತಿಗಳನ್ನೇ ನೀವು ಒದಗಿಸಿಲ್ಲ, ಒದಗಿಸಿದರೆ ಗ್ರ್ಯಾಂಟ್ ಕೊಡುತ್ತೇವೆಂದು ಮತ್ತೆ ಪತ್ರ ಬರೆಯುತ್ತಾರೆ. ಹೀಗೆ ನಾನಾ ರೀತಿಯ ತೊಂದರೆಗಳನ್ನು ಕೊಡುತ್ತಿದ್ದಾರೆ. ಇದು ತಪ್ಪಬೇಕು. ತನಿಖೆ ಮಾಡಿದ ನಂತರ ಗ್ರ್ಯಾಂಟ್ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಇವೊತ್ತಿನದಿವಸ ನಿಮ್ಮ ಅಧಿಕಾರಿಗಳ ಕ್ವೈರಿಯನ್ನು ಎದುರಿಸುವುದಕ್ಕೆ ಆಗದ ಕೆಲವರು ಹಾಸ್ಟೆಲ್‌ಗಳನ್ನು ಮುಚ್ಚುತ್ತಿದ್ದಾರೆ. ಅದೇ ಬೋಗಸ್ ಹಾಸ್ಟೆಲ್‌ಗಳನ್ನು ನಡೆಸುತ್ತಿರುವವರು ತಮ್ಮ ಅಧಿಕಾರಿಗಳಿಗೆ ಬಹಳ ಚಾಣಾಕ್ಷತನದಿಂದ ಅಂಕಿ ಅಂಶಗಳನ್ನು ಕೊಟ್ಟು ಅವರನ್ನು ಸರಿಮಾಡಿಕೊಂಡು ಗ್ರ್ಯಾಂಟ್ ಪಡೆದುಕೊಳ್ಳುತ್ತಿದ್ದಾರೆ. ಆ ಒಂದು ಪದ್ಧತಿ ನಮ್ಮಲ್ಲಿ ಹೋಗಬೇಕು. ನಾನೇ ಒಂದು ಹಾಸ್ಟೆಲ್ ನಡೆಸುತ್ತಿದ್ದೇನೆ, ಕಳೆದ ವರ್ಷ ನನಗೆ ಗ್ರ್ಯಾಂಟ್ ಕೊಟ್ಟಿಲ್ಲ ಕೇಳಿದರೆ ಸರಿಯಾದ ಟೈಮಿನಲ್ಲಿ ಮಾಹಿತಿ ಒದಗಿಸಿಕೊಡಲಿಲ್ಲ, ಎಂದು ಕೊಡಲಿಲ್ಲ. ಒದಗಿಸಿದೆ ಎಂದು ಇವರು ಹೇಳುತ್ತಾರೆ, ಒದಗಿಸಿಕೊಟ್ಟಿಲ್ಲ ಎಂದು ಅವರು ಹೇಳುತ್ತಾರೆ. ಈ ವರ್ಷ ಕೊಡುತ್ತೇವೆಂದು ಹೇಳುತ್ತಾರೆ, ಒಂದು ವರ್ಷ ಶಾಲೆಯನ್ನು ಹೇಗೆ ನಡೆಸುವುದು. ಆದುದರಿಂದ ಇಂಥಾದ್ದನ್ನು ಸಡಿಲವಾಗಿ ಗ್ರ್ಯಾಂಟ್ ಕೊಟ್ಟು ಹಾಸ್ಟೆಲ್ಸ್ ಸಲೀಸಾಗಿ ನಡೆಯುವುದಕ್ಕೆ ಅವಕಾಶಕೊಡಬೇಕು ಎಂದು ಹೇಳುತ್ತೇನೆ, ಇದರಿಂದ ಹೆಚ್ಚಾಗಿ ಬಡ ವಿದ್ಯಾರ್ಥಿಗಳು ಊಟ ಮಾಡಿ ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳುತ್ತೇನೆ. ಮತ್ತೆ ಈ ಹಾಸ್ಟೆಲ್‌ಗಳಿಗೆ ಇನ್ನೂ ಹೆಚ್ಚಿನ ಕಟ್ಟಡಗಳನ್ನು ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಪಟ್ಟಣಗಳಿಗಿಂತ ಮಕ್ಕಳ ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನ ಹರಿಸಬೇಕು. ಪಟ್ಟಣಗಳಲ್ಲಿ ಅವಶ್ಯಕತೆ ಇಲ್ಲ. ಪಟ್ಟಣಗಳಲ್ಲಿ ಕಾನ್ವೆಂಟ್ ಶಾಲೆಗಳನ್ನು ಪ್ರೈವೇಟ್ ಶಾಲೆಗಳನ್ನು ತೆರೆಯುತ್ತಾರೆ. ಇಲ್ಲಿ ಒಳ್ಳೊಳ್ಳೆಯ ವಿದ್ಯಾ ಸಂಸ್ಥೆಗಳಿವೆ. ಇಲ್ಲಿನ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಸಿಗತಕ್ಕ ಸೌಲಭ್ಯ ಇದೆ. ದುಡ್ಡು ಎಷ್ಟೇ ಖರ್ಚಾಗಲಿ ಮಕ್ಕಳನ್ನು ಆ ಶಾಲೆಗಳಿಗೆ ಕಳಿಸುತ್ತಾರೆ. ಹಳ್ಳಿಗಳಲ್ಲಿ ಬಹಳ ಕಷ್ಟ. ಆದುದರಿಂದ ಹಳ್ಳಿಗಾಡಿನ ಬಗ್ಗೆ ಹೆಚ್ಚಿನ ನಿಗಾವಹಿಸಿ, ಹಳ್ಳಿಯಲ್ಲಿರುವ ಮಕ್ಕಳು ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಮೇಲ್ಮಟ್ಟದಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಮಾನ್ಯ ಮಂತ್ರಿಗಳು ಮನಸ್ಸು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ಬೇಡಿಕೆಯಲ್ಲಿ ಇದಕ್ಕೆ ಏನು ಹಣ ಕೊಟ್ಟಿದ್ದಾರೆ ಅದು ಸಾಲುವುದಿಲ್ಲ. ಇದಕ್ಕೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಕೊಡಬೇಕು, ಈ ಇಲಾಖೆಗೆ ಹೆಚ್ಚಿನ ಹಣ ಒದಗಿಸಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಂಡು ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ನನಗೆ ಅವಕಾಶಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಅಧ್ಯಕ್ಷರೆ, ಇಂದಿನ ಈ ಶಿಕ್ಷಣ ಬೇಡಿಕೆ ಮೇಲೆ ಕೆಲವು ನನ್ನ ಸೂಚನೆಗಳನ್ನು ಕೊಡಬೇಕು ಎಂದು ಬಯಸಿದ್ದೇನೆ. ನಮ್ಮ ರಾಜ್ಯದಲ್ಲಿ ಇದು ಎಲ್ಲಾ ಇಲಾಖೆಗಳಿಗಿಂತ ಹಾಗೂ ಅತೀ ಮುಖ್ಯವಾದಂಥ ಇಲಾಖೆ. ರಾಜ್ಯದ ಭವಿಷ್ಯವನ್ನು ಮತ್ತು ಈ ರಾಜ್ಯದ ಜನರನೈತಿಕಮಟ್ಟವನ್ನು ತಿದ್ದುವಂಥ ಒಂದು ಇಲಾಖೆ. ಸುಮಾರು ೩೭ ವರ್ಷಗಳಿಂದ ನಮ್ಮ ದೇಶದಲ್ಲಿ ೩೮ ಪರ್ಸೆಂಟ್ ಎಜುಕೇಷನ್ ಇದ್ದರೆ ನಮ್ಮ ರಾಜ್ಯದಲ್ಲಿ ೨೮ ಪರ್ಸೆಂಟ್ ಇದೆ. ಇಷ್ಟಾದರೂ ಸಹ ನಮ್ಮ

ಈ ಶಿಕ್ಷಣ ಪದ್ಧತಿಯಿಂದ ಯಾವರೀತಿಯಾಗಿ ನಮ್ಮ ಜನರ ಆಚಾರ ಮತ್ತು ವಿಚಾರದ ಮೇಲೆ ಪರಿಣಾಮ ಆಗಿದೆಯೋ, ನಮ್ಮ ಸಾಮಾಜಿಕ ಮತ್ತು ನಮ್ಮ ಬಿಹೇವಿಯರ್ ಪರಿವರ್ತನೆ ಆಗಿದೆಯೋ ಎಂಬುದನ್ನು ನೋಡಬೇಕು. ಏಕೆಂದರೆ, ಹೊಸ ಮಾದರಿಯ ಎಜುಕೇಷನ್ ಎಂದು ಕೆಲವರು ಹೇಳುತ್ತಾರೆ. ಕೋಟ್ಯಾವಧಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಬಂದಿದ್ದಾರೆ. ಅದರಲ್ಲಿ ಮುಖ್ಯವಾಗಿ ಪರಿಶಿಷ್ಟ ವರ್ಗದವರಿಗೆ ಮತ್ತು ಪರಿಶಿಷ್ಟ ಜನಾಂಗದವರಿಗೆ ಅನೇಕ ಸೌಲತ್ತುಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾ ಇದ್ದಾರೆ. ಹಿಂದೆ ಇದ್ದ ಸರ್ಕಾರಗಳವರೂ ಇದನ್ನು ಹೇಳುತ್ತಿದ್ದರು. ತಾವೂ ಕೂಡ ಇದನ್ನೇ ಹೇಳುತ್ತಾ ಇದ್ದೀರಿ. ವಯಸ್ಕರ ಶಿಕ್ಷಣಕ್ಕೆ ಸ್ವಲ್ಪ ಹಣವನ್ನು ಇದರಲ್ಲಿ ಪ್ರೊವೈಡ್ ಮಾಡಿದ್ದೀರಿ. ಹಳ್ಳಿಗಳಲ್ಲಿ ಅಕ್ಷರ ಸೇನೆ ಎಂದು ಮಾಡಿಕೊಂಡು ಅದಕ್ಕೆ ಕೆಲವು ಅಮೌಂಟ್ ಕೊಟ್ಟಿದ್ದೀರಿ. ಬರೀ ಸೈನ್ ಮಾಡಲಿಕ್ಕೆ ಬಂದರೆ ಅವನು ಓದಿದವನು ಎಂದು ಪರಿಗಣಿಸಿದ್ದೀರಿ. ಈ ರೀತಿ ನೀವು ಲೆಕ್ಕ ಪತ್ರ ಮಾಡಿಕೊಂಡರೆ ನಾನು ಅದನ್ನು ಒಪ್ಪೊಲ್ಲ. ಕೆಳಗಿನ ಮಟ್ಟದಲ್ಲಿ ಆ ವಿದ್ಯಾರ್ಥಿಗಳು ತಮ್ಮ ಬಡತನವನ್ನು ಬಿಟ್ಟು ವಿದ್ಯಾಭ್ಯಾಸ ಮಾಡಬೇಕು, ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿಬಿದ್ದಂಥ ಆ ಬಡ ವಿದ್ಯಾರ್ಥಿ ಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಬೇಕು. ತಂದೆತಾಯಿಗಳು ಅವನಿಗೆ ಆದಷ್ಟು ಮಟ್ಟಿಗೆ ವಿದ್ಯಾಭ್ಯಾಸ ಕೊಡಿಸಬೇಕು. ಆದರೆ ೧೦ ವರ್ಷಗಳಾದರೆ ಅವನನ್ನು ದನ ಕಾಯಲಿಕ್ಕೆ, ಎಮ್ಮೆ ಕಾಯಲಿಕ್ಕೆ ಕೋಣ ಕಾಯಲಿಕ್ಕೆ ಕಳಿಸುತ್ತಾರೆ ಮತ್ತು ಬೇರೆಯವರ ಮನೆಗಳಿಗೆ ಬಡ ಮಕ್ಕಳನ್ನು ಕೆಲಸ ಮಾಡಲಿಕ್ಕೆ ಕಳಿಸುತ್ತಾರೆ. ವರ್ಷಕ್ಕೆ ೬೦-೭೦ ರೂಪಾಯಿ ಬಂದರೆ ಸಾಕು ಎಂದು ಯೋಚನೆ ಮಾಡುವಂಥ ಪರಿಸರ ಇನ್ನೂ ಇದೆ. ಅದನ್ನು ಹೇಗೆ ತಡೆಗಟ್ಟುತ್ತೀರಿ, ಅವರಿಗೆ ಯಾವ ಪ್ರಕಾರ ಎಜುಕೇಷನ್ ಕೊಟ್ಟಿದ್ದೀರಿ ? ಅಕ್ಷರಸೇನೆ ಪ್ರೊಗ್ರಾಮಿನಲ್ಲಿ ೫೮ ಲಕ್ಷ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದ್ದೇವೆ ಎಂದು ಹೇಳಿದ್ದೀರಿ. ನಮ್ಮ ಭಾಗದಲ್ಲಿ ಅನೇಕ ಸ್ಕೂಲುಗಳನ್ನು ನಡೆಸುತ್ತಾ ಇದ್ದಾರೆ. ಆದರೂ ಮಕ್ಕಳು ಶಾಲೆಗಳಿಗೆ ಹೋಗುವುದಿಲ್ಲ. ತಮ್ಮ ಇಲಾಖೆಯಿಂದ ಅಲ್ಲಿ ಪಾಠ ಮಾಡುವವರಿಗೆ ಸುಮಾರು ೧೫೦ ರೂಪಾಯಿಗಳ ವೇತನ ಕೊಡುತ್ತಿದ್ದೀರಿ. ಅದನ್ನು ತೆಗೆದುಕೊಂಡು ಮೂರು ತಾಸು ಓದಿಸಬೇಕು. ಆದರೆ ಅವರು ಅಲ್ಲಿ ಇರುವುದಿಲ್ಲ. ನಿಮ್ಮ ಲೆಕ್ಕಪತ್ರ ಏನೋ ಚೆನ್ನಾಗಿದೆ ಸ್ವಾಮಿ. ೮೦ ಪರ್ಸೆಂಟ್ ವಿಲೇಜ್‌ಗಳು ಇರುವ ನಮ್ಮ ರಾಜ್ಯದಲ್ಲಿ, ಸ್ಕೂಲ್‌ಗಳಿಗೆ ಕೊಠಡಿಗಳು ಇಲ್ಲ. ತಾವು ಆದಷ್ಟು ಮಟ್ಟಿಗೆ ಪ್ರಯತ್ನ ಮಾಡಿದ್ದೀರಿ. ನಾನು ತಾವು ಮಾಡಿಲ್ಲವೆಂದು ಹೇಳುವುದಿಲ್ಲ. ತಾವು ಸರಿಯಾದ ಪ್ರಯತ್ನ ಮಾಡಿದ್ದೀರಿ. ಆದಷ್ಟು ಮಟ್ಟಿಗೆ ಹಳ್ಳಿಗಳಿಗೆ ಒಂದು ಪಕ್ಕಾ ಬಿಲ್ಡಿಂಗ್ ಇರಬೇಕು.

೧-೩೦ ಪಿ. ಎಂ.

ಇನ್ನು ಸಿಂಗಲ್ ಟೀಚರ್ ಸ್ಕೂಲ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಸಿಂಗಲ್ ಟೀಚರ್ ಸ್ಕೂಲ್‌ನಲ್ಲಿ ಒಂದು ಬಿಲ್ಡಿಂಗ್, ಅದು ಯಾವುದೋ ಒಂದು ಸ್ಕೀಮ್‌ನಲ್ಲಿ ಕಟ್ಟಿದ್ದು, ಅನೇಕ ಕಡೆ ಈ ರೀತಿ ಇದೆ. ತಮ್ಮ ಭಾಗದಲ್ಲಿ ಯಾವ ರೀತಿ ಇದೆ ಗೊತ್ತಿಲ್ಲ. ನಮ್ಮ ಭಾಗದಲ್ಲಿ ಈ ರೀತಿ ಇದೆ. ೫ ಸಾವಿರದಿಂದ ೪ ಸಾವಿರದಲ್ಲಿ ಕಟ್ಟಿರತಕ್ಕ ಬಿಲ್ಡಿಂಗ್‌ಗಳು ಇವೆ. ಆ ಬಿಲ್ಡಿಂಗ್‌ನಲ್ಲಿ ಪ್ರತಿಯೊಬ್ಬ ಟೀಚರ್ಸ್ ೧ ರಿಂದ ೪ನೇ ಇಯತ್ತಿನವರೆಗೆ ಅಂದರೆ ಕ್ಲಾಸ್ ಅಥವಾ ತರಗತಿಗೆ ಒಬ್ಬನೇ ಟೀಚರ್ಸ್ ಓದಿಸಬೇಕಾಗುತ್ತದೆ. ಈ ರೀತಿ ಒಂದನೇ ಸ್ಟ್ಯಾಂಡರ್ಡ್‌ನಿಂದ ನಾಲ್ಕನೇ ಸ್ಟ್ಯಾಂಡರ್ಡ್‌ನವರೆಗೆ ಒಬ್ಬನೇ ಶಿಕ್ಷಕ ಓದಿಸಬೇಕೆಂದರೆ ಯಾವ ಪ್ರಕಾರ ಓದಿಸುತ್ತಾನೋ ನನಗೆ ಗೊತ್ತಿಲ್ಲ. ಈ ನಾಲ್ಕೂ ಕ್ಲಾಸ್‌ಗಳ ಸಿಲಬಸ್ ಸಹ ಮುಗಿಸಬೇಕಾಗುತ್ತದೆ. This is the basic education what we are giving to our rural masses......... ಅವರು ಆ ಹಂತವನ್ನು ಮುಗಿಸಿಕೊಂಡು ಮಿಡಲ್, ಹೈಸ್ಕೂಲಿಗೆ ಬರಬೇಕು. ಅವರಿಗೆ ಅ, ಈ, ಸರಿಯಾಗಿ ಗೊತ್ತಿರುವುದಿಲ್ಲ, ಗಣಿತ, ಸಮಾಜ, ಸಮಾಜ ಶಾಸ್ತ್ರ ಗೊತ್ತಿರುವುದಿಲ್ಲ. ನಾಲ್ಕನೇ ತರಗತಿಯವರೆಗೆ ಒಬ್ಬನೇ ಶಿಕ್ಷಕ ಯಾವ ರೀತಿ ಪಾಠ ಮಾಡಬೇಕು. ಎಂಬುದನ್ನು ದಯವಿಟ್ಟು ತಿಳಿಸಬೇಕು. ಒಂದು ಕ್ಲಾಸ್‌ನಲ್ಲಿ ೪೦ ಸ್ಟೂಡೆಂಟ್ಸ್ ಇರಬೇಕು, ತಮ್ಮ ಹತ್ತಿರ ಲೆಕ್ಕಪತ್ರ ಏನೋ ಸರಿಯಾಗಿದೆ. ೪ ಕ್ಲಾಸ್‌ನಿಂದ ಒಟ್ಟು ೧೬೦ ಸ್ಟೂಡೆಂಟ್ಸ್‌ಗಳು ಒಂದು ರೂಮ್‌ನಲ್ಲಿ ಇರಬೇಕು. ಆದರೆ ಇವರಿಗೆ ಇರುವುದು ಒಂದೇ ಒಂದು ರೂಮ್. ೪ ಕ್ಲಾಸ್‌ಗೆ, ೪ ಪ್ರತ್ಯೇಕವಾದ ರೂಮ್‌ಗಳು ಇಲ್ಲ. ಸರ್ಕಾರಕ್ಕೆ ಇಷ್ಟು ಹಣ ಖರ್ಚು ಮಾಡುವುದಕ್ಕೆ ಇನ್ನೂ ಶಕ್ತಿ ಬಂದಿಲ್ಲ. ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಸರ್ಕಾರಕ್ಕೆ ಆಸೆ ಇದೆ. ಶಾಲೆಗಳಲ್ಲಿ ಶೇಕಡಾವಾರು ಉತ್ತೀರ್ಣತೆ ಜಾಸ್ತಿ ಇರಬೇಕು ಎಂದು ಸರ್ಕಾರದ ಅನಿಸಿಕೆ. ಅವರ ಎಜುಕೇಶನ್ ಮಟ್ಟ ಹೆಚ್ಚಿಗೆ ಆಗಬೇಕು, ಸ್ಟೂಡೆಂಟ್ಸ್ ಚೆನ್ನಾಗಿ ಓದಬೇಕು, ೮೦ ಪರ್ಸೆಂಟ್, ೯೦ ಪರ್ಸೆಂಟ್

ಮಕ್ಕಳು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕೆಂದು ಸರ್ಕಾರಕ್ಕೆ ತಂದೆ ತಾಯಿಗಳಿಗೆ ಆಸೆ ಇದೆ. ಆದರೆ ಕೆಳಗಿನಿಂದ ಮೇಲೆ ಬಂದ ಮಕ್ಕಳಿಗೆ ಬೇಸಿಕ್ ಶಿಕ್ಷಣ ಸರಿಯಾಗಿ ಇಲ್ಲ. ಇದಕ್ಕೆ ಕಾರಣ ಏನು ? ಅಂದರೆ ನಮ್ಮ ಎಜುಕೇಶನ್‌ಗೆ ಕೊಡಬೇಕಾದ ಆಪರೇಟಸ್ ಕೊಡಬೇಕು, ಟೀಚರ್ಸ್‌ಗಳು ಜಾಸ್ತಿ ಆಗಬೇಕು ಸುಮಾರು ಹತ್ತು ಹದಿನೈದು ಸಾವಿರ ಸ್ಟೂಡೆಂಟ್ಸ್‌ಗೆ ಸಮನಾಗಿ ಅಸಿಸ್ಟೆಂಟ್ ಟೀಚರ್ಸ್‌ಗಳನ್ನು ಹಾಕಬೇಕು. ಅನೇಕ ವೇಳೆ ಈ ವಿಷಯದ ಬಗ್ಗೆ ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಮಾನ್ಯ ಶಿಕ್ಷಣ ಸಚಿವರಾದ ಗೋವಿಂದೇಗೌಡರು ಇದ್ದರು. ಅವರು ಕೂಡ ಟೀಚರ್ಸ್ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದರು. ಅವರು ಹೇಳಿದ್ದರು, ಸುಮಾರು ೭-೮ ವರ್ಷಗಳಿಂದ ಟೀಚರ್ಸ್ ಸ್ಟ್ರೆಂಗ್ತ್ ಬಗ್ಗೆ ಒಂದು ಲಿಸ್ಟ್ ಮಾಡಿದ್ದೇನೆ, ಡಿ.ಡಿ.ಪಿ.ಐ. ಆಫೀಸ್‌ನಲ್ಲಿ ಅದು ಇದೆ ನಾವು ಸ್ಟ್ರೆಂಗ್ತ್ ಜಾಸ್ತಿ ಮಾಡುವುದಕ್ಕೆ ಪವರ್ಸ್ ಇಲ್ಲ. ಗವರ್ನಮೆಂಟ್ ಪರ್ಮಿಷನ್ ತೆಗೆದುಕೊಳ್ಳಬೇಕು ಎಂದು ಹೇಳಿದ್ದರು. ೧೦೦೦ ಇದ್ದ ಕಡೆ ೧೬೦ ಜನ ಟೀಚರ್ಸ್ ಇದ್ದಾರೆ. ಇನ್ನೂ ಅವರ ಸಂಖ್ಯೆಯನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರದ ಅನುಮತಿ ಬೇಕೆಂದಿದ್ದರು. ಅದು ಆಗಿ ಸುಮಾರು ವರ್ಷ ಆಯಿತು. ಬಹುಶಃ ಇದಕ್ಕೆ ಹಣಕಾಸಿನ ತೊಂದರೆ ಇರಬಹುದು. It requires lot of money also, that is inevitable, you have to bear it. ಸ್ಟೇಟ್ ಎಕ್ಸ್‌ಚೆಕರ್‌ಗೆ ಬರ್ಡನ್ ಆಗುತ್ತದೆ. ಈಗಿನ ಪ್ರಕಾರ ಮಾಡಿದರೆ ನಮ್ಮ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಕೊಡುವುದಕ್ಕೆ ಸಾಧ್ಯವಿಲ್ಲ, ಎನ್ನುವುದು ತಮಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೇ, ತಮಗೂ ಗೊತ್ತಿರತಕ್ಕಂಥ ವಿಷಯವನ್ನು ಹೇಳುತ್ತಿದ್ದೇನೆ. ಒಬ್ಬ ಟೀಚರ್‌ನ್ನು ಹಳ್ಳಿಗೆ ಹಾಕಿದರೆ ಅವನು ಹಳ್ಳಿಗೆ ಹೋಗುವುದಕ್ಕೆ ತಯಾರು ಇರುವುದಿಲ್ಲ. ಇಂತಹ ಪರಿಸ್ಥಿತಿ ಉದ್ಭವ ಆಗಿರುವುದಕ್ಕೆ ನಾವು ಕೂಡ ಕಾರಣೀಭೂತರಾಗಿದ್ದೇವೆ. ಎಂ.ಎಲ್.ಎ.ಗೆ ಒಂದು ನೋಟ್ ಹಾಕಿ ಇಂತಹ ಟೀಚರ್ ಇಲ್ಲಿಗೆ ಬೇಕು ಎಂದು ಹೇಳುತ್ತಾರೆ. ತಮ್ಮ ತಮ್ಮ ಕಡೆಗೆ ಬೇಕಾದಂತಹ ಉಪಾಧ್ಯಾಯರನ್ನು ಜನಗಳೂ ಹಾಕಿಸಿಕೊಳ್ಳುತ್ತಾರೆ. ನಮ್ಮ ಭಾಗದಲ್ಲಿ ಸುಮಾರು ಜನ ಹೆಣ್ಣು ಮಕ್ಕಳು ಅವರಿಗೆ ಯಾವುದೇ ರೀತಿಯ ರಾಜಕೀಯ ಶಿಫಾರಸ್ಸುಗಳು ಇಲ್ಲದೇ ಇರುವುದರಿಂದ ೩೦-೪೦ ಕಿ.ಮಿ. ದೂರ ಬಸ್‌ನಲ್ಲಿ ಶಾಲೆಗಳಿಗೆ ಹೋಗಿಬರುತ್ತಾರೆ. ನಾನು ಇದರ ಬಗ್ಗೆ ಒಂದು ಕಟ್ಟಪ್ಪಣೆ ಮಾಡಿ ಎಂದು ಮಾನ್ಯ ಗೋವಿಂದೇಗೌಡರಿಗೆ ಹೇಳಿದ್ದೆ. ಅವರೂ ಸಹ ಬಸ್ ರೂಟ್ ಇರುವ ಕಡೆ ರೂರಲ್ ಏರಿಯಾಗೆ ಟೀಚರ್ಸ್‌ಗಳನ್ನು ಹಾಕುವ ಬಗ್ಗೆ ಹೇಳಿದ್ದರು. ಯಾರು ೧೦-೨೦ ವರ್ಷಗಳಿಂದ ಒಂದೇ ಕಡೆ ಕೆಲಸವನ್ನು ಮಾಡುತ್ತಿದ್ದಾರೆ, ಅಂಥವರ ಒಂದು ಲಿಸ್ಟನ್ನು ತರಿಸಿಕೊಂಡು ಯಾವುದೇ ರೀತಿಯ ರಾಜಕೀಯ ಶಿಫಾರಸ್ಸಿಗೂ ಅಥವಾ ಪ್ರೆಶರ್‌ಗೆ ಬಗ್ಗದೆ ಡಿಸ್‌ಪೆನ್ಸೇಷನ್ ಮಾಡುತ್ತೇನೆಂದು ಹೇಳಿದ್ದರು. ಇದು ಇನ್ನೂ ಕಾರ್ಯಗತ ಆಗಿಲ್ಲ. ನನ್ನ ಹತ್ತಿರ ಆ ಹೆಣ್ಣು ಮಕ್ಕಳು ಬಂದು ಗೋಳೋ ಎಂದು ಅಳುತ್ತಾರೆ. ಸುಮಾರು ನಲವತ್ತು, ಐವತ್ತು ಹೆಣ್ಣು ಮಕ್ಕಳ ಪರಿಸ್ಥಿತಿ ಈ ರೀತಿ ಇದೆ ಇವೊತ್ತು ಏನಾಗಿದೆ ಅಂದರೆ ಗಂಡ ಒಂದು ಕಡೆ ಕೆಲಸ ಮಾಡುತ್ತಾನೆ, ಹೆಂಡತಿ ಮಕ್ಕಳು ಒಂದು ಕಡೆ ಕೆಲಸ ಮಾಡಿಕೊಂಡಿದ್ದಾರೆ. ಇವೊತ್ತು ಗಂಡ, ಹೆಂಡತಿ, ಮಕ್ಕಳ ಸಮಸ್ಯೆ ಇದೆ. ಇಂತಹ ಸಮಸ್ಯೆಗಳ ಬಗ್ಗೆ ಡಿ.ಪಿ.ಐ. ಅವರ ಕಡೆಗೆ ಬರೆದು ಅವರಿಂದ ಒಂದು ರಿಪೋರ್ಟ್ ತರಿಸಿಕೊಳ್ಳುವಂಥ ವ್ಯವಸ್ಥೆ ಮಾಡಬೇಕು. ಈ ಸಾರಿಯಾದರೂ ಮಾನಸಿಕ ದೃಷ್ಟಿಯಿಂದ ಇವರ ಬಗ್ಗೆ ಕನ್ಸಿಡರ್ ಮಾಡಿ ಇಂತಹ ಹೆಣ್ಣುಮಕ್ಕಳನ್ನು ಸಿಟಿಗಳಿಗೆ ಪೋಸ್ಟಿಂಗ್ ಕೊಡುತ್ತೀರಿ ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದೇನೆ. ಇನ್ನು ಎಜುಕೇಷನ್ ಸ್ಟ್ಯಾಂಡರ್ಡ್ ಬಗ್ಗೆ ಎಷ್ಟರಮಟ್ಟಿಗೆ ಎಜುಕೇಷನ್ ಸ್ಟ್ಯಾಂಡರ್ಡ್ ಕೆಳಗಡೆ ಹೋಗಿದೆ ಎಂದು ಡೆಕನ್ ಹೆರಾಲ್ಡ್‌ನಲ್ಲಿ ಒಂದು ಆರ್ಟಿಕಲ್ ಬಂದಿದೆ. ಅದು ಸರ್ಕಾರದವರೇ ಮಾಡಿರುವುದು...'Man-power and the Employment Division: Planning Department, Government of Karnataka, has completed form of data on education, employment and man power availability in the State and brought out a useful volume on 'short book on manpower'. ಪ್ರತಿಯೊಂದಕ್ಕೂ ಚೆನ್ನಾಗಿ ಡೀಟೈಲ್ ಕೊಟ್ಟಿದ್ದಾರೆ. ಇದನ್ನು ನೋಡಿದ ಮೇಲೆ ಗೊತ್ತಾಗುತ್ತದೆ, ನಮ್ಮಲ್ಲಿ ಬೆಳೆಯಬೇಕಾದಂಥ ಎಜುಕೇಷನ್ ಮಟ್ಟ ಬೆಳೆದಿಲ್ಲ. fall in number between 1980-84, 89,298

students appeared for examination out of which 42,000 and odd students passed in the examination i.e., 47.5%—like this he has said about all the subjects. ಇನ್ನು ನಮ್ಮ ಹಾಸ್ಟೆಲ್ ಬಗ್ಗೆ ಪರಿಸ್ಥಿತಿ ಹಾಗೆಯೇ ಇದೆ. ಇನ್ನು ಅನೇಕ ಕಡೆಗಳಲ್ಲಿ ೧೯೮೩-೮೪ರಲ್ಲಿ ಹೈಸ್ಕೂಲು ಪಾಟ್ಟದಿಂದ ಜೂನಿಯರ್ ಕಾಲೇಜಿನವರೆಗೆ ಕೊಟ್ಟಿದ್ದೀರಿ. ಅನಂತರ ೧೯೮೫, ೧೯೮೬, ೧೯೮೭ಕ್ಕೆ ಏನೂ ಕೊಡಲಿಲ್ಲ. ನಮ್ಮ ಎಜುಕೇಷನ್‌ನಲ್ಲಿ ಪ್ರೈವೇಟ್ ಸ್ಕೂಲು, ಗವರ್ನ್‌ಮೆಂಟ್ ಸ್ಕೂಲು, ಪ್ರೈವೇಟ್ ಕಾಲೇಜು, ಗವರ್ನ್‌ಮೆಂಟ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು, ಈ ತರಹ ಇದೆ. ತಮ್ಮ ಸರ್ಕಾರ ಬಂದಮೇಲೆ, ಜಾತಿ, ಜಾತಿಗೂ ಇಂಜಿನಿಯರಿಂಗ್, ಮತ್ತು ಮೆಡಿಕಲ್ ಕಾಲೇಜು ಕೊಟ್ಟಿದ್ದಾರೆ ಎಂದು ನನ್ನ ಆಪಾದನೆ. ಅವರಿಗೆ ಪೂರ್ತಿ ಖುಷಿ ಮಾಡಬೇಕೆಂದು ಕೊಟ್ಟಿದ್ದಾರೋ ಏನೋ ಗೊತ್ತಾಗಲಿಲ್ಲ. ಇನ್ನು ಎಂ. ಎಲ್. ಎ ಹೇಳಿದ ಮೇಲೆ ಕೆಲವು ಕಡೆ ಕೊಟ್ಟಿದ್ದಾರೆ. ನನಗನಿಸಿದ ರೀತ್ಯಾ ಇದು ಸಿಸ್ಟಮ್ಯಾಟಿಕ್ ಆಗಿ ಆಗಿಲ್ಲ. ಇವೊತ್ತು ನಮ್ಮ ರಾಜ್ಯದಲ್ಲಿ ಸುಮಾರು ೧೨ ಮೆಡಿಕಲ್ ಕಾಲೇಜುಗಳು, ೩೫ ಇಂಜಿನಿಯರಿಂಗ್ ಕಾಲೇಜುಗಳು ಸರ್ಕಾರದ್ದು ೪, ಒಟ್ಟು ೩೯ ಇಂಜಿನಿಯರಿಂಗ್ ಕಾಲೇಜುಗಳು ಇವೆ, ನಿಮ್ಮ ರಿಪೋರ್ಟ್ ಪ್ರಕಾರ ೪೯ ಇವೆ. ಈ ಪರಿಸ್ಥಿತಿಯಲ್ಲಿ ಸುಮಾರು ೧೦ ಸಾವಿರ ಜನ ಮಕ್ಕಳು ಕ್ಯಾಪಿಟೇಷನ್ ಫೀಜು ಕೊಟ್ಟು ಕಲಿಯಬೇಕಾಗಿದೆ. We are inviting corruption by opening Private Colleges. ಇದನ್ನು ತಾವು ಅವಾಯ್ಡ್ ಮಾಡಬೇಕು. ಜನತಾ ಪಕ್ಷದವರು ಅಧಿಕಾರಕ್ಕೆ ಬರುವುದಕ್ಕೆ ಮುಂಚೆಯೇ ಅಂದರೆ ೮೩ನೇ ಇಸವಿಯ ಚುನಾವಣಾ ಪ್ರಣಾಳಿಕೆಯಲ್ಲೇ ಇದರ ಬಗ್ಗೆ ಹೇಳಿಕೊಂಡಿದ್ದಾರೆ. ನಮ್ಮ ಜನತಾ ಪಕ್ಷ ಅಧಿಕಾರಕ್ಕೆ ಬಂದರೆ, ಜನತಾ ಸರ್ಕಾರ ರಾಜ್ಯದ ಕಾರಭಾರವನ್ನು ಕೈಗೆತೆಗೆದುಕೊಂಡ ಕೂಡಲೇ ಕ್ಯಾಪಿಟೇಷನ್ ಫೀಸ್‌ನ್ನು ತೆಗೆದುಬಿಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಲಿಂಕ್ ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ಮಾನ್ಯ ಚೀಫ್ ಮಿನಿಸ್ಟರ್‌ರವರೇ ಇದನ್ನು ಡಿಫೆಂಡ್ ಮಾಡಿಕೊಳ್ಳುತ್ತಿದ್ದಾರೆಂದು ೧೯೮೬ರ ನವೆಂಬರ್ ೨ರಂದು ವರದಿಯಾಗಿದೆ. ಇದರ ಬಗ್ಗೆ ಮಾನ್ಯ ರಘುಪತಿಯವರು ಹಿಂದೆ ವಿದ್ಯಾ ಮಂತ್ರಿಗಳಾಗಿದ್ದಾಗ ಅನೇಕರು ಹೋಗಿ ಹಿಂದೆ ನೀವು ಹೇಳಿದ್ದ ಪ್ರಕಾರ ಏತಕ್ಕೆ ನಡೆದುಕೊಳ್ಳುತ್ತಿಲ್ಲ ? ಕ್ಯಾಪಿಟೇಷನ್ ಫೀಸನ್ನು ಏತಕ್ಕೆ ತೆಗೆಯುತ್ತಿಲ್ಲವೆಂದು ಕೇಳಿದಾಗ ಮಾನ್ಯ ರಘುಪತಿಯವರು ಏನು ಹೇಳಿದ್ದಾರೆಂಬುದು ಲಿಂಕ್ ಪತ್ರಿಕೆಯಲ್ಲಿ ಈ ರೀತಿ ವರದಿಯಾಗಿದೆ, It has appeared on November 2nd 1986 in 'LINK'. According to its report the Former Minister Sri M. Raghupathy has blamed the powerful vested interests in the Cabinet for continuation of capitation fee. When he was the Minister he tried to remove it, but could not succeed in his drive.

ಶ್ರೀ ಡಿ. ಮಂಜುನಾಥ್.—ಇದು ಯಾವುದಾದರೂ 'ಪತ್ರಿಕೆಯಲ್ಲಿ ಬಂದಿರುವುದೇ ? ಅಥವಾ ಬೇರೆ ಯಾವುದರಲ್ಲಾದರೂ ಬಂದಿರುವುದೆ ?

ಶ್ರೀ ಕೆ. ಬಿ. ಶಾಣಪ್ಪ.—ಇದು "ಲಿಂಕ್" ಪತ್ರಿಕೆಯಲ್ಲಿ ಬಂದಿರತಕ್ಕದ್ದು. ಮಾನ್ಯ ರಘುಪತಿಯವರು ಮುಖ್ಯ ಮಂತ್ರಿಗಳ ಮೇಲೆ ಆಪಾದನೆಯನ್ನು ಮಾಡಿದ್ದಾರೆ. ನಾನು ಕ್ಯಾಪಿಟೇಷನ್ ಫೀಸನ್ನು ತೆಗೆದುಹಾಕಬೇಕೆಂದಿದ್ದೇನೆ. ಆದರೆ ಮುಖ್ಯ ಮಂತ್ರಿಗಳೇ ಬಿಡುತ್ತಿಲ್ಲ, ಅವರೇ ಕ್ಯಾಪಿಟೇಷನ್ ಫೀ ಇರಬೇಕೆಂದು ಡಿಫೆಂಡ್ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ನಾನೇನು ಮಾಡಲಿ, this is what Sri Raghupathy has said in the press conference. ನಾನು ತಮಗೆ ಹೇಳುತ್ತೇನೆ. ದಯವಿಟ್ಟು ಈ ಕ್ಯಾಪಿಟೇಷನ್ ಫೀಸನ್ನು ತೆಗೆದುಹಾಕಿ, ತಾವು ನಮಗೆ ಏನು ಪತ್ರಿಕೆಗಳನ್ನು ಒದಗಿಸುತ್ತಿದ್ದೀರಿ ಅವುಗಳಲ್ಲಿ ವರದಿಯಾಗಿರತಕ್ಕದ್ದನ್ನೇ ನಾವು ಇಲ್ಲಿ ಹೇಳುತ್ತಿದ್ದೇವೆ. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಎಂಟ್ರನ್ಸ್ ಎಕ್ಸಾಮಿನೇಷನ್‌ನ್ನು ತಾವು ಇಡುತ್ತಿದ್ದೀರಿ ನಮ್ಮ ಹೈದರಾಬಾದ್ ಕರ್ನಾಟಕವು ಕೇವಲ ವಿದ್ಯಾಭ್ಯಾಸದಲ್ಲಿ ಮಾತ್ರವಲ್ಲ ಬೇರೆ ವಿಚಾರಗಳಲ್ಲೂ ಬಹಳ ಹಿಂದೆ ಉಳಿದಿದೆ. ಈ ಭಾಗದಲ್ಲಿ ಇರತಕ್ಕ ಬಹಳ ಜನರು ತುಂಬಾ ಹಿಂದುಳಿದವರು ಎನ್ನತಕ್ಕ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳೂ. ಜನತಾ ಪಕ್ಷದವರೂ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇನ್ನು ಮುಂದೆ ಹೈದರಾಬಾದ್ ಕರ್ನಾಟಕದ ಭಾಗದ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಎಂಟ್ರನ್ಸ್ ಎಕ್ಸಾಮಿನೇಷನ್ ಮಾಡುವಾಗ ನಮ್ಮ

ಭಾಗದವರಿಗೆ ಪರ್ಸೆಂಟೇಜ್ ಕೊಡಬೇಕು. ಏಕೆಂದರೆ ನಮ್ಮ ಹುಡುಗರು ಈಕಡೆಯ ಹುಡುಗರ ಜೊತೆಯಲ್ಲಿ ಸ್ಪರ್ಧೆ ಮಾಡುವುದಕ್ಕಾಗುವುದಿಲ್ಲ. ಗುಲ್ಬರ್ಗಾ, ಬಿಜಾಪುರ, ರಾಯಚೂರು, ಮತ್ತು ಬೀದರ್ ಈ ೪ ಜಿಲ್ಲೆಯ ಮಕ್ಕಳಿಗೆ ಪ್ರತ್ಯೇಕವಾದ ಪರ್ಸೆಂಟೇಜ್ ಕೊಟ್ಟು ಆಯ್ಕೆ ಮಾಡಬೇಕು. ನಾನು ಈ ಮಾತನ್ನು ಹೇಳುವುದಕ್ಕೆ ಕಾರಣ ಎಂದರೆ ಕಳೆದಸಾರಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿನ ಸೀಟುಗಳು ಎಲ್ಲವೂ ನಿಮ್ಮ ಭಾಗದ ಮಕ್ಕಳಿಗೇ ಸಿಕ್ಕಿದವು. ಅದರ ಪೈಕಿ ಸುಮಾರು ೪–೫ ವಿದ್ಯಾರ್ಥಿಗಳಿಗೆ ಮಾತ್ರ ಸೀಟುಗಳು ನಮ್ಮ ಮಕ್ಕಳಿಗೆ ಸಿಕ್ಕಿವೆ. ಇಲ್ಲಿಯ ಮಕ್ಕಳಂತೆ ೮೦–೯೦ ಪರ್ಸೆಂಟ್ ಅಂಕಗಳನ್ನು ತೆಗೆದುಕೊಳ್ಳುವುದಕ್ಕೆ ನಮ್ಮ ಮಕ್ಕಳಿಗೆ ಸಾಧ್ಯವಿಲ್ಲ. ಇದನ್ನು ಲೆಕ್ಕ ಹಾಕಿದರೆ, ಇದೇರೀತಿ ಮುಂದುವರಿಯುವುದಾದರೆ ನಮ್ಮ ಮಕ್ಕಳಿಗೆ ಮೆಡಿಕಲ್ ಅಥವಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ಸಿಕ್ಕುವುದಿಲ್ಲ, ಅವರು ಡಾಕ್ಟರ್‌ಗಳು ಅಥವಾ ಇಂಜಿನಿಯರ್‌ಗಳು ಆಗುವುದೂ ಇಲ್ಲ. ಈ ವಿಚಾರವನ್ನು ಸರ್ಕಾರದವರು ಕೂಲಂಕಷವಾಗಿ ಪರಿಶೀಲಿಸಿ ನಮ್ಮ ಭಾಗದ ಮಕ್ಕಳಿಗೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ಸಿಕ್ಕುವಂತೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಶಿಕ್ಷಣ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ,

ಮಾನ್ಯ ಅಧ್ಯಕ್ಷರೆ, ಈ ಸಾರಿ ಉರ್ದು ಇಲಾಖೆಗೆ ಪ್ರತ್ಯೇಕವಾದ ಡೈರೆಕ್ಟೋರೇಟನ್ನು ಸ್ಥಾಪನೆ ಮಾಡುತ್ತೇವೆಂದು ತಾವು ಹೇಳಿದ್ದೀರಿ, ಬಹಳ ಸಂತೋಷ. ಅವರದ್ದು ಒಂದು ಬೇಡಿಕೆ ಇದೆ. ಉರ್ದು ಶಾಲೆಗಳಲ್ಲಿ ಕನ್ನಡವನ್ನು ಕಂಪಲ್ಸರಿಯಾಗಿ ಓದಿಸುತ್ತಿದ್ದಾರೆ. ಆದ್ದರಿಂದ ಅವರಿಗೆ ಕೊಡಬೇಕಾದ ಅನುದಾನವನ್ನು ಕೊಟ್ಟಿಲ್ಲವಂತೆ. ಈ ಬಗ್ಗೆ ಬಹಳ ಜನರು ಬಂದು ನನ್ನ ಹತ್ತಿರ ಹೇಳಿದ್ದಾರೆ. ಆದ್ದರಿಂದ ತಾವು ದಯವಿಟ್ಟು ಈ ವಿಚಾರವನ್ನು ಪರಿಶೀಲಿಸಬೇಕು.

ದಯವಿಟ್ಟು ಇದನ್ನು ನೋಡಿ. ಶಹಬಾದ್ ಕಿರಣಗಿಯಲ್ಲಿ ೪–೫ ವರ್ಷಗಳಿಂದಲೂ ಬಿದ್ದುಹೋಗಿರತಕ್ಕಂಥ ಸ್ಕೂಲ್ ಬಿಲ್ಡಿಂಗನ್ನು ಯಾರೂ ಬಂದು ನೋಡಿಲ್ಲ. ರೋಡ್ಸ್‌ಗಳೇ ಚೆನ್ನಾಗಿಲ್ಲ. ಯಾವ ಅಧಿಕಾರಿಯೂ ತಮ್ಮನ್ನು ಅಲ್ಲಿಗೆ ಕರೆದುಕೊಂಡು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ತಾವು ಬರಬೇಕು. ಅಲ್ಲಿ ಸ್ಯಾನಿಟರಿಯನ್ನು ನೋಡಿಕೊಳ್ಳತಕ್ಕಂಥ ವ್ಯವಸ್ಥೆಯಿಲ್ಲ. ವಾಸನೆ ಬಡಿಯುತ್ತಿರುವುದರಿಂದ ಮಕ್ಕಳು ಬರುವುದೇ ಇಲ್ಲ. ಹಣವನ್ನು ಕೇಳಿದರೆ ಹಣವಿಲ್ಲವೆಂದು ಹೇಳುತ್ತಾರೆ. ಕಿರಣಗಿ ಮಿಡಲ್ ಸ್ಕೂಲ್ ಬಿಲ್ಡಿಂಗ್ ಬಿದ್ದುಹೋಗಿ ಈ ಸದನದಲ್ಲಿ ಲಭ ಲಭ ಎಂದು ಹೊಡೆದುಕೊಂಡರೂ ಯಾರು ಕೇಳುತ್ತಿಲ್ಲ. ನಾವು ಏತಕ್ಕೆ ಇಲ್ಲಿಗೆ ಬರಬೇಕು ಎಂದು ಕೇಳಬೇಕಾಗಿದೆ. ಕೆಲವು ಕಡೆ ಗೌವರ್ನ್‌ಮೆಂಟ್ ಹೈಸ್ಕೂಲ್ ಕೊಟ್ಟಿರುತ್ತೀರಿ? ಆದರೆ ಬಿಲ್ಡಿಂಗ್‌ಗಳೇ ಇರುವುದಿಲ್ಲ. ಮಕ್ಕಳು ಎಲ್ಲಿಗೆ ಹೋಗಬೇಕು ಎಂದು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಎನ್‌ಆರ್‌ಇಪಿ ಸ್ಕೀಮ್‌ನಿಂದ ಕಟ್ಟಡಗಳನ್ನು ತೆಗೆದುಕೊಳ್ಳಬಹುದಲ್ಲವೇ ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಎನ್‌ಆರ್‌ಇಪಿ ಯೋಜನೆಯಿಂದ ಹೈಸ್ಕೂಲ್ ಬಿಲ್ಡಿಂಗ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಬಿ ಶಾಣಪ್ಪ.—ಅದು ಮುಗಿದು ಹೋಗಿದೆ. ಬೆಂಗಳೂರಿನಲ್ಲಿ ನನಗೆ ತಿಳಿದವರಿಟ್ಟಿಗೆ ಬಂದಿತ್ತು.

ಛೇರ್ಮನ್.—ಮಾನ್ಯ ಶಾಣಪ್ಪನವರೇ ತಾವು ತಮ್ಮ ಭಾಷಣವನ್ನು ಆದಷ್ಟು ಬೇಗ ಮುಗಿಸಬೇಕು.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ ನಮಗೆ ಅವಕಾಶಗಳು ಸಿಕ್ಕುವುದೇ ಬಹಳ ಕಡಿಮೆ. ನಾವು ಸುಮ್ಮನೆ ಕುಳಿತಿರುತ್ತೇವೆ. ಅವಕಾಶ ಸಿಕ್ಕಿದಾಗ ನಮಗೆ ಸ್ವಲ್ಪ ಹೆಚ್ಚು ಅವಕಾಶವನ್ನು ತಾವು ಕೊಡಬೇಕು. ಇನ್ನು ಈ ಪಾಲಿಟೆಕ್ನಿಕ್ ಕಾಲೇಜ್ ಬಗ್ಗೆ ಹೇಳುವುದಾದರೆ ಅಲ್ಲಿಯ ಸ್ಟೂಡೆಂಟ್ಸ್ ಡೆಮಾನ್‌ಸ್ಟ್ರೇಷನ್ ಮಾಡಿದರು. ಟೆಕ್ನಿಕಲ್ ಡೈರೆಕ್ಟರ್ ಪ್ರೀತಿಯಿಂದ ಅಲ್ಲಿಗೆ ಹೋಗಿ ಸಮಸ್ಯೆಗಳನ್ನು ಕೇಳಿ ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ತಿಳಿದುಕೊಂಡು ವ್ಯವಸ್ಥೆ ಮಾಡುವುದಾಗಿ ಹೇಳಿದರು. ಅಲ್ಲಿ ರೂಮ್ಸ್ ಚೆನ್ನಾಗಿಲ್ಲ. ಯೂರಿನಲ್ಸ್ ವ್ಯವಸ್ಥೆಯಿರಲಿಲ್ಲ. ಕುಡಿಯುವುದಕ್ಕೆ ನೀರಂತೂ ಇಲ್ಲವೇ ಇಲ್ಲ. ಇಂಥ ಒಂದು ಪರಿಸ್ಥಿತಿ ಇದೆ. ದಯವಿಟ್ಟು ಇದನ್ನು ಎನ್‌ಕ್ವಯರಿ ಮಾಡಿ ಆದಷ್ಟು ಮಟ್ಟಿಗೆ ಮಕ್ಕಳಿಗೆ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ವಿಶ್ವಾಸವನ್ನು ಇಡುತ್ತೇವೆ.

ಕೊನೆಯದಾಗಿ ವಿದ್ಯಾ ಇಲಾಖೆಯು ಬೇಡಿಕೆಯಲ್ಲಿ ಬಹಳ ಕಡಿಮೆ ಹಣವನ್ನು ಕೇಳಿದ್ದೀರಿ. ಈ ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ಫೈನಾನ್ಸ್ ಮಿನಿಸ್ಟರೂ ಕೂಡ ಆಗಿರುತ್ತಾರೆ. ಆದ ರಿಂದ ಹೆಚ್ಚಿನ ಹಣವನ್ನು ಕೇಳಿ ತೆಗೆದುಕೊಳ್ಳಬೇಕು. ಅನೇಕ ಹೈಸ್ಕೂಲ್‌ಗಳಿಗೆ ಹಾಸ್ಟೆಲ್‌ಗಳನ್ನು ಮತ್ತು ಹೈಸ್ಕೂಲ್ ಬಿಲ್ಡಿಂಗ್‌ಗಳನ್ನು ಕೊಡಬೇಕು. ಇದು ಒಂದು ಬಹಳ ಮುಖ್ಯವಾದ ಇಲಾಖೆ. ಶಾಲಾ ಕಾಲೇಜುಗಳಿಗಾಗಿ ಸಾವಿರಾರು ಕಟ್ಟಡಗಳನ್ನು ಕೊಡಬೇಕೆಂದರೆ ಈ ಇಲಾಖೆಗೆ ಹೆಚ್ಚು ಹಣವನ್ನು ಒದಗಿಸಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಪರವಾನಿಗೆಯನ್ನು ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).--ಸನ್ಮಾನ್ಯ ಅಧ್ಯಕ್ಷರೇ ಕಾನ್‌ಸ್ಟಿಟ್ಯೂಷನ್ ಆರ್ಟಿಕಲ್ ೪೫ರ ಪ್ರಕಾರ

> "The State shall endeavour to provide within 10 years from the commencement of the Constitution for free and compulsory education for all children until they complete the age of 14 years".

Article 46 says thus:—

> "The State shall promote with special care education and economic interest of the weaker sections of the people and in particular Scheduled Castes and Scheduled Tribes and shall protect them from social injustice in all forms of exploitation".

ಸ್ವಾಮಿ ಇದು ಹೇಳಿದ್ದು. ಇದನ್ನು ಹೇಳಿ ೧೦ ವರ್ಷಗಳೇ ಆಯಿತು. ಸ್ವಾತಂತ್ರ್ಯ ಬಂದು ೧೪ ವರ್ಷಗಳಲ್ಲಿಯೇ ಕಂಪಲ್‌ಸರಿ, ಮತ್ತು ಫ್ರಿ ಎಜ್ಯುಕೇಷನ್ ಕೊಡಬೇಕೆಂದು ಹೇಳಿದ್ದಾರೆ. ನಾವು ಮಾಡಿರುವುದಾದರೂ ಏನು? ಮಾನ್ಯ ಶಾಣಪ್ಪನವರು ಹೇಳಿದ ಹಾಗೆ ಈಗಲೂ ಕೂಡ ಹಳ್ಳಿಗಾಡು ಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಅರ್ಧ ಜನ ಮಕ್ಕಳು ಕುರಿ ಕಾಯುವುದಕ್ಕೆ ಹೋಗುತ್ತಿದ್ದಾರೆ. ದನ ಕಾಯುವುದಕ್ಕೆ ಹೋಗುತ್ತಿದ್ದಾರೆ. ಈಗಲೂ ಕೂಡ ಸಾವಿರಾರು ಜನ ಮಕ್ಕಳಿಗೆ ಕಂಪಲ್‌ಸರಿ ಎಜ್ಯುಕೇಷನ್ ಕೊಡುವುದಕ್ಕೆ ಆಗದೆ ಇರುವುದರಿಂದ ಪಟ್ಟಣ ಪ್ರದೇಶದಲ್ಲಿ ಮಕ್ಕಳು ವರ್ಕ್‌ಶಾಪ್‌ಗಳಿಗೆ ಹೋಗಿ ಕೆಲಸ ಮಾಡುತ್ತಿರುತ್ತಾರೆ. ಈ ರೀತಿ ಆದರೆ ಆರ್ಟಿಕಲ್ ೪೬ಕ್ಕೆ ಏನು ಸ್ಯಾಂಕ್ಟಿಟಿ ಇದೆ, ನಾವು ಮಾಡಿದ್ದು ಏನು ಎಂದು ಯೋಚಿಸಿದರೆ ನಿಜವಾಗಿ ನಮ್ಮ ಮಕ್ಕಳಿಗೆ ಮತ್ತು ರಾಷ್ಟ್ರಕ್ಕೆ ಕೂಡ ಅನ್ಯಾಯ ಮಾಡುತ್ತಿದ್ದೇವೆ ಎಂದು ಹೇಳಬಹುದು, ದ್ರೋಹ ಮಾಡುತ್ತಿದ್ದೇವೆಂದು ಹೇಳು ವುದು, ಅಷ್ಟು ಚೆನ್ನಾಗಿ ಇರುವುದಿಲ್ಲ. ನಾವು ಏನು ಮಾಡಬೇಕೆಂದಿದ್ದೆವು ಅಷ್ಟು ಮಾಡುತ್ತಿಲ್ಲ. ಎಜುಕೇಷನ್ ಬಗ್ಗೆ ಯೋಚಿಸಿದಾಗ ಇಲಾಖೆ ಏನಾಗಿದೆ ಎಂದರೆ ಫಿಷ್ ಮಾರ್ಕೆಟ್ ಆಗಿದೆ ಎಲ್ಲರೂ ಮಾಡುತ್ತಿರುವ ಕೆಲಸ ಪ್ರೈಮರಿ ಎಜುಕೇಷನ್‌ನಿಂದ ಕಮೆರ್ಸ್ ಮಾಡಿ ತಾಂತ್ರಿಕ ಕಾಲೇಜು, ಮೆಡಿಕಲ್ ಕಾಲೇಜಿನವರೆಗೆ ಇವುಗಳಿಗೆ ಪ್ರತಿದಿನ ಪ್ರವೇಶವನ್ನು ಮಾರಾಟಕ್ಕೆ ಇಟ್ಟಿದ್ದೇವೆ. ನಾವು ಯಾವ ಮಟ್ಟಕ್ಕೆ ಇಳಿದಿದ್ದೇವೆಂದರೆ ನಮ್ಮ ಗತಿ ಮುಂದೆ ಏನಾಗುತ್ತದೆಯೋ ಏನೋ ಎಂಬ ಯೋಚನೆಗೆ ಬಂದಿದೆ. ಮಕ್ಕಳಿಗೆ ವಿದ್ಯೆ ಕಲಿಸಿದರೆ ಅವರೆಲ್ಲಾ ಆದರ್ಶವಂತರಾಗುತ್ತಾರೆ, ಆದರ್ಶ ಗುಣ ಗಳನ್ನು ಕಲಿಯುತ್ತಾರೆ, ಅವರು ವಿದ್ಯೆ ಕಲಿಯುವುದರಿಂದ ತಂದೆತಾಯಿಗಳಿಗೆ ಸುಖ ಬರುತ್ತದೆಂಬ ಉದ್ದೇಶದಿಂದ ವಿದ್ಯೆ ನೀಡುತ್ತಿದ್ದೆವು. ಆದರೆ ಈಗ ಆಗಿರುವುದು ಏನೆಂದರೆ ನಾವು ಸಮಾಜವಾದ ಎಂದು ಒಪ್ಪಿಕೊಂಡೆವು. ಆದರೆ ಆ ಸಮಾಜವಾದದಲ್ಲಿ ಸಂಪತ್ತನ್ನು ಮತ್ತು ವಿದ್ಯೆಯನ್ನು ಹಂಚುತ್ತಿಲ್ಲ. ದಾರಿದ್ರ್ಯವನ್ನು ಹಂಚುವುದನ್ನು ಮಾತ್ರ ಕಲಿತಿದ್ದೇವೆ. ದರಿದ್ರರಿಗೆ ವಿದ್ಯೆಯನ್ನು ನಿರಾಕರಿಸಿದ್ದೇವೆ. ಅದೆಲ್ಲಾ ಪ್ರತಿಷ್ಠಿತರ ಸ್ವತ್ತಾಗಿದೆ. ಪ್ರೈಮರಿ ಎಜುಕೇಷನ್ ಅಥವಾ ಯಾವ ಮಟ್ಟಿಗೆ ಎಜುಕೇಷನ್ ಅನ್ನು ತೆಗೆದುಕೊಂಡರೂ ಇದನ್ನು ಕಾಣುತ್ತಿದ್ದೇವೆ. ಮೊದಲು ನಾವು ಪುರೋಗಾಮಿ ರಾಷ್ಟ್ರವನ್ನು ಕಟ್ಟಬೇಕು, ಪ್ರೊಗ್ರೆಸ್ಸಿವ್ ಐಡಿಯಾಲಜಿಸ್ಟ್ ಬರಬೇಕೆಂದು ಶುರು ಮಾಡಿದೆವು. ಆದರೆ ಅವರು ಕೊಟ್ಟಿರುವ ಸಿಲಬಸ ನೋಡಿದರೆ ಅವರಲ್ಲಿ ದಾರಿದ್ರ್ಯ ತುಂಬುತ್ತದೇನೋ ಎಂದು ನನಗೆ ಅನ್ನಿಸು

ತ್ತದೆ. ಎಲ್ಲದಕ್ಕೂ ಕಾರಣ ಹಿಂದಿನ ಜನ್ಮದ ಪಾಪ ಎನ್ನುವ ಮಟ್ಟಕ್ಕೆ ಹೋಗಬೇಕಾಗಿದೆ. ಥಿಯರಿ ಆಫ್ ಫೆಟಲಿಸಂ ಎಂಬುದನ್ನು ಈಗಲೂ ತುಂಬುತ್ತಿದ್ದೇವೆ. ಮಕ್ಕಳು ವೈಜ್ಞಾನಿಕವಾಗಿ ಬೆಳೆದು ಮುಂದೆ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ಒಂದು ದಾರಿದ್ರ್ಯಕ್ಕೆ ಸಮಾಜದ ವ್ಯವಸ್ಥೆಯೇ ಕಾರಣ ಎನ್ನಿಸುತ್ತದೆ. ಸಮಾಜ ಯಾವ ಮಟ್ಟಕ್ಕೆ ಇಳಿದಿದೆ ಎಂಬುದನ್ನು ನಾವು ಯೋಚನೆ ಮಾಡುತ್ತಿಲ್ಲ. ಈಗ ತಾವು ಸಿಲಬಸ್ ಮಾಡುವ ಮಹಾನುಭಾವರನ್ನು ನೋಡಿದರೆ ಗೊತ್ತಾಗುತ್ತದೆ. ಸಮಾಜ ಹೇಗಿದೆಯೋ ಅದೇ ರೀತಿ ಇರಲಿ ಎಂಬ ಮಹಾನುಭಾವರು ಇದ್ದಾರೆ. ಮೊದಲು ನೀತಿ ಪಾಠಗಳು ಇರುತ್ತಿದ್ದವು. ಈಗ ಅವು ಇಲ್ಲ. ಆ ಒಂದು ಪರಿಸ್ಥಿತಿ ಇದೆ. ಆದಂದರಿಂದ ಅದನ್ನು ಯೋಚಿಸಿ ಆರ್ಟಿಕಲ್ ೪೫-೪೬ನಲ್ಲಿ ಏನು ಹೇಳಿದ್ದಾರೆ ಅದು ಗೈಡಿಂಗ್ ಪ್ರಿನ್ಸಿಪಲ್ಸ್ ಅಲ್ಲ. ಅವು ಆರ್ಟಿಕಲ್ಸ್ ಅಷ್ಟೆ. ಆಗಿದೆ. ಮೆಡಿಕಲ್ ಎಜುಕೇಷನ್ ಬಗ್ಗೆ ಹೋದ ಸಾರಿ ನಾನು ಪ್ರಶ್ನೆ ಕೇಳಿದ್ದೆ. ಸರ್ಕಾರಿ ಲೆಕ್ಕದ ಪ್ರಕಾರ ಪರ್ಮಿಟ್ ಮಾಡಿರುವ ಲೆಕ್ಕದ ಪ್ರಕಾರ ಇವರು ೪೫ ಕೋಟಿ ರೂಪಾಯಿಗಳನ್ನು ಸಂಪಾದಿಸುತ್ತಾರೆ. ಇದನ್ನು ನೋಡಿದಾಗ ಡಿಪಾರ್ಟ್‌ಮೆಂಟ್ ಇವೆಯೋ ಇಲ್ಲವೇ ಎಂಬ ಅನುಮಾನ ಬಂದಿದೆ. ಎಂ. ಎಸ್. ರಾಮಯ್ಯ ಕಾಲೇಜಿನಲ್ಲಿ ಪರ್ಮಿಟ್‌ಗಿಂತ ಹೆಚ್ಚು ಸೀಟುಗಳನ್ನು ಕೊಡುತ್ತಿದ್ದಾರೆ. ಒಂದೂವರೆ ಲಕ್ಷ ಎರಡು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೆಚ್ಚು ಸೀಟುಗಳನ್ನು ಕೊಡುತ್ತಿದ್ದಾರೆ. ನಾಲ್ಕೈದು ಕಾಲೇಜುಗಳಲ್ಲಿ ಈ ರೀತಿ ಆಗಿದೆ. ಇಂಥದ್ದನ್ನು ಇಂಜಿನಿಯರಿಂಗ್ ಕಾಲೇಜಿನಲ್ಲೂ ನೋಡಬಹುದು. ಎಲ್ಲಾ ಜಿಲ್ಲೆಗಳಿಗೂ ಇಂಜಿನಿಯರಿಂಗ್ ಕಾಲೇಜು ಆಯಿತು. ಇನ್ನು ತಾಲ್ಲೂಕಿಗೆ ಒಂದು ಕೊಟ್ಟುಬಿಡಿ. ಕರ್ನಾಟಕದ ಮಕ್ಕಳಿಗೂ ಆ ಸೀಟುಗಳು ಸಿಗುತ್ತಿಲ್ಲ. ಕೇರಳದಿಂದಲೋ ಆಂಧ್ರದಿಂದಲೋ ಸಾಹುಕಾರರ ಮಕ್ಕಳು ಬಂದು ಎರಡು ಲಕ್ಷ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಸೀಟು ತೆಗೆದುಕೊಳ್ಳುತ್ತಾರೆ. ಅದೇ ರೀತಿ ಬಿ. ಎಡ್. ಕಾಲೇಜುಗಳು ಮತ್ತು ಐ. ಟಿ. ಐ. ಇನ್‌ಸ್ಟಿಟ್ಯೂಷನ್‌ಗಳು ಕೊಟ್ಟಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ ಎರಡೆರಡು ಕೊಟ್ಟಿದ್ದಾರೆ. ಇನ್ನು ಮಿಕ್ಕಿರುವುದು ಹೋಬಳಿ ಮಟ್ಟ. ಅದಕ್ಕೂ ಇಳಿಯುತ್ತದೆಯೋ ಏನೋ ಗೊತ್ತಿಲ್ಲ. ಅದರ ಬೆಲೆ ನೋಡಬೇಕು. ಮೂರು ಸಾವಿರ ರೂಪಾಯಿಯಿಂದ ೫ ಸಾವಿರ ರೂಪಾಯಿಂವರೆಗೂ ವಸೂಲು ಮಾಡುತ್ತಾರೆ.

ಶ್ರೀ ಡಿ. ಮಂಜುನಾಥ್.—ಹೋದಸಾರಿ ಕೊಟ್ಟಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಈಗ ಕೊಟ್ಟಿರುವುದು ಇಂಡಿಯಾ ದೇಶಕ್ಕೇ ಫಿಲಪ್ ಆಗಿ ಇನ್ನೂ ಸ್ವಲ್ಪ ಉಳಿಯುತ್ತದೆ. ಅಷ್ಟು ಕಾಲೇಜುಗಳನ್ನು ಕೊಟ್ಟಿದ್ದಾರೆ. ಇದೇನು ಅನ್ಯಾಯ ? ಪುನಃ ಇನ್ನೂ ಎರಡು ಮೆಡಿಕಲ್ ಕಾಲೇಜು ಕೊಡುತ್ತಾರಂತೆ. ಮಠಕ್ಕೆ ಒಂದು, ಜಾತಿಗೆ ಒಂದು ಕುಲಕ್ಕೆ ಒಂದು ಎಂದು ಮೆಡಿಕಲ್ ಕಾಲೇಜು ಕೊಡುತ್ತಿದ್ದಾರೆ. ನಿಜವಾಗಿ ವ್ಯಾಪಾರ ಇದರಲ್ಲಿ ಏನು ನಡೆಯುತ್ತಿದೆ ಇದನ್ನು ನಿಲ್ಲಿಸಬೇಕು. ಇನ್ನು ಮುಂದಾದರೂ ಎಜುಕೇಷನ್ ಎಂದರೆ ಎಲ್ಲಾ ಮಕ್ಕಳ ಸ್ವತ್ತಾಗಬೇಕೇ ಹೊರತು ಬರೀ ಸಾಹುಕಾರರ ಮಕ್ಕಳಿಗೆ ಮಾತ್ರ ಸಿಗುವಂತಾಗಬಾರದು. ಸಿಂಥ ಅವರು ಇದರ ಬಗ್ಗೆ ಹೇಳಿದರು. ಎರಡು ಲಕ್ಷ ರೂಪಾಯಿಗಳು ಇದ್ದರೆ ನಾನೂ ಒಂದು ಸೀಟು ಕೊಡಿಸುತ್ತೇನೆ ಎಂದು ಈ ರೀತಿ ಕೊಂಡುಕೊಂಡು ಇಂಜಿನಿಯರ್ ಆಗುವುದು ಬೇಡ. ೧೯೮೫–೮೬ರಲ್ಲಿ ಪ್ರಾಥಮಿಕ ಶಾಲೆಗಳು ಕೊಟ್ಟಿರುವುದು ಸರ್ಕಾರಿ ಪ್ರಾಥಮಿಕ ಶಾಲೆಗಳು ೮೧೨. ಖಾಸಗೀ ಪ್ರಾಥಮಿಕ ಶಾಲೆಗಳು ೨,೩೧೦. ಆರ್ಟಿಕಲ್ ೪೫ರ ಪ್ರಕಾರ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಬೇಕೆಂದು ಮಾಡಿದ್ದಾರೆ. ವರ್ಷದಿಂದ ವರ್ಷಕ್ಕೆ ಪ್ರಾಥಮಿಕ ಶಾಲೆಗಳನ್ನು ಖಾಸಗಿಯವರಿಗೆ ಹೆಚ್ಚಾಗಿ ಕೊಡುತ್ತಿದ್ದಾರೆ. ಒಂದೊಂದಾಗಿ ತೆಗೆದುಕೊಂಡರೆ ಸೆಕೆಂಡರಿ ಶಿಕ್ಷಣದಲ್ಲಿ ಸರ್ಕಾರಿ ಸೆಕೆಂಡರಿ ಶಾಲೆಗಳ ಖರ್ಚು ೬.೨೩, ಖಾಸಗಿಯವರಿಗೆ ೮.೬೫. ಇದೇರೀತಿ ಮುಂದು ವರೆಯುತ್ತಾ ಹೋದರೆ ನಾವು ಎಲ್ಲಿಗೆ ಹೋಗುತ್ತೇವೆಯೋ ಅರ್ಥವಾಗುವುದಿಲ್ಲ. ಸಂತೆಯಲ್ಲಿಟ್ಟು ವಿದ್ಯೆಯನ್ನು ಹರಾಜು ಹಾಕುವಂತಾಗುತ್ತದೆ ಪ್ರಾಥಮಿಕ ಶಾಲೆ ಬೇಕಾದರೆ ಹರಾಜು, ಹೈಸ್ಕೂಲುಗಳು ಬೇಕಾದರೆ ಹರಾಜು. ೧೯೮೫–೮೬ರಲ್ಲಿ ಸರ್ಕಾರಿ ಪ್ರೌಢಶಾಲೆಗಳು ೧೧೭೮ ಇದ್ದರೆ ಸರ್ಕಾರೇತರ ಪ್ರೌಢಶಾಲೆಗಳು ೨,೬೨೨ ಇವೆ. ೧೯೮೬–೮೭ರಲ್ಲಿ ಸರ್ಕಾರಿ ಪ್ರೌಢಶಾಲೆಗಳು ೧೧೭೮ ಇದೆ. ೧೯೮೭–೮೮ರಲ್ಲಿ ಸರ್ಕಾರಿ ಪ್ರೌಢಶಾಲೆಗಳು ೧೧೮೮ ಇದ್ದರೆ ಖಾಸಗಿ ಶಾಲೆಗಳು ೨,೬೪೪ ಇವೆ ೧೫೬ ಪ್ರೈವೇಟ್ ಹೈಸ್ಕೂಲ್‌ಗಳನ್ನು ಕೊಟ್ಟಿದ್ದಾರೆ. ೧೯೮೬ರಲ್ಲಿ ೧೭ ಪ್ರೈವೇಟ್ ಸ್ಕೂಲ್‌ಗಳನ್ನು ಕೊಟ್ಟಿದ್ದಾರೆ. ಈಗ ಪ್ರೈವೇಟ್ ಸ್ಕೂಲ್‌ಗಳು ಎಂದರೆ ವ್ಯಾಪಾರಿ ಸಂಸ್ಥೆಗಳಾಗಿವೆ. ವಿದ್ಯಾರ್ಥಿಗಳನ್ನು

ಮ್ಯಾಗ್ನಿಮಮ್ ಶೋಷಣೆ ಮಾಡುತ್ತಿದ್ದಾರೆ. ಅಪಾಯಿಂಟ್‌ಮೆಂಟ್ಸ್‌ನಲ್ಲಿ ನಡೆಯುವಷ್ಟು ಮೋಸ ಇನ್ನೆಲ್ಲೂ ನಡೆಯುತ್ತಿಲ್ಲ. ಡಿ.ಡಿ.ಪಿ.ಐ. ಆಫೀಸಿನಲ್ಲಿ ಮತ್ತು ಕೊಲಿಜಿಯೇಟ್ ಎಜುಕೇಷನ್ ಆಫೀಸ್‌ನಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಲೆಕ್ಚರರ್ ಪೋಸ್ಟ್‌ಗೆ ಅಪ್ರೂವಲ್ ಕೊಡಬೇಕಾದರೆ ಕೊಲಿಜಿಯೇಟ್ ಎಜುಕೇಷನ್ ಆಫೀಸ್‌ನಲ್ಲಿ ಹಣ ತೆಗೆದುಕೊಂಡು ಹಂಚಿಕೊಳ್ಳುತ್ತಾರೆ. ಅದೇರೀತಿ ಡಿ.ಡಿ.ಪಿ.ಐ. ಆಫೀಸ್‌ನಲ್ಲಿ ಅಪ್ರೂವಲ್ ಮಾಡಬೇಕಾದರೆ ೧೦ ಸಾವಿರ ೨೦ ಸಾವಿರ ಹಣ ತೆಗೆದುಕೊಂಡು ಹಂಚಿಕೊಳ್ಳುತ್ತಾರೆ. ರಿಸರ್ವೇಷನ್ ಇದ್ದರೂ ಡೀರಿಸರ್ವ್ ಮಾಡುತ್ತಾರೆ. ಯಾರೂ ಕ್ಯಾಂಡಿಡೇಟ್ ಬಂದಿಲ್ಲ ಎಂದು ಡೀರಿಸರ್ವ್ ಮಾಡುತ್ತಾರೆ. ಮಾನ್ಯ ಮಂಜುನಾಥ್ ಅವರಿಗೆ ಇದು ಗೊತ್ತಿಲ್ಲದೆ ಏನೂ ಇಲ್ಲ. ಕಮಿಷನರ್ ಅವರಿಗೆ ಮತ್ತು ದೊಡ್ಡ ದೊಡ್ಡ ಅಧಿಕಾರಿಗಳಿಗೂ ಇದು ಗೊತ್ತು. 'ಇಲ್ಲ' ಎಂದು ಒಂದೇ ಒಂದು ಎಂಡಾರ್ಸ್‌ಮೆಂಟ್ ಕೊಡುತ್ತಾರೆ.

ಶ್ರೀ ಡಿ. ಮಂಜುನಾಥ್.—ಈಗಂತೂ ಆರೀತಿ ಮಾಡುವುದಿಲ್ಲ.

ಅಧ್ಯಕ್ಷರು.—ಪ್ರಶ್ನೆ ಉತ್ತರ ಈಗ ಬೇಕಾಗಿಲ್ಲ. ತಾವು ಭಾಷಣ ಮಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ಕಾಲೇಜು ಎಜುಕೇಷನ್‌ನಲ್ಲಿ ತೆಗೆದುಕೊಂಡರೆ ನಾನು ಮತ್ತು ತಾವು ಗ್ರಾಮಾಂತರ ಪ್ರದೇಶಗಳಿಂದ ಬಂದವರೇ. ಹಳ್ಳಿಗಳ ಕಡೆ ಈಗಲೂ ೭೫ ಪರ್ಸೆಂಟ್ ಮಕ್ಕಳು ಶಾಲೆಗೆ ಬರುವುದಿಲ್ಲ. ಏತಕ್ಕೆ ಬರುವುದಿಲ್ಲವೆಂದರೆ, ಒಂದನೇ ತರಗತಿಯಲ್ಲಿ ಅಡ್ಮಿಟ್ ಆದ ಮಕ್ಕಳು ೨ನೇ ತರಗತಿಯಲ್ಲಿ ಇರುವುದಿಲ್ಲ ಕಾಲೇಜಿಗೆ ಹೋಗುವ ವೇಳೆಗೆ ೮೦ ಪರ್ಸೆಂಟ್ ಡ್ರಾಪ್‌ಔಟ್ ಆಗುವುದು ಹಳ್ಳಿಗಳಲ್ಲಿ ಇದೆ ಪಟ್ಟಣಗಳಲ್ಲಿ ಮಾತ್ರ ಸ್ಕೂಲುಗಳಿಗೆ ಹೋಗುವ ಹವ್ಯಾಸವನ್ನು ಇಟ್ಟುಕೊಂಡಿದ್ದಾರೆ. ಇದಕ್ಕೆ ಕಾರಣವೇನೆಂಬುದನ್ನು ಯೋಚಿಸಬೇಕು, ಮಾನ್ಯ ಮಂಜುನಾಥ್ ಅವರು ತಮಿಳ್ನಾಡಿಗೆ ಹೋಗಿಬರಲಿ. ಅಲ್ಲಿ ಒಂದು ಮಿಡ್ ಡೇ ಮೀಲ್ಸ್ ಸ್ಕೀಂ ಎಂದು ಇನ್‌ಸೆಂಟೀವ್ ಕೊಟ್ಟಿದ್ದಾರೆ. ಅದರಿಂದ ಡ್ರಾಪ್‌ಔಟ್ಸ್ ಕಡಿಮೆ ಆಗಿದೆ. ಅಲ್ಲಿ ಬಡವರಿಗೆ ತಿಂಡಿ ಕೊಡುತ್ತಾರೆ, ಅನ್ನ ಕೊಡುತ್ತಾರೆಂದು ಮಕ್ಕಳೆಲ್ಲ ಅಲ್ಲಿ ಹೋಗಿ ಓದುತ್ತಾರೆ, ಆದರೆ ನಾವು ಇಲ್ಲಿ ಮಾಡಿರುವುದೇನೆಂದರೆ ಎಜುಕೇಷನ್ ಸಿಸ್ಟಂ ಎಲ್ಲಾ ಪ್ರೈವೇಟ್‌ನವರಿಗೆ ಮಾಡುತ್ತಿದ್ದೇವೆ. ಅವರು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ನೋಡಿದರೆ ಬಹಳ ಸಂಕಟವಾಗುತ್ತದೆ. ನಿಜವಾಗಿ ಇದು ಮಾರ್ಕೆಟ್ ಅಲ್ಲವೆ ? ಜನಗಳಿಗೆ ನಾವು ಸಹಾಯ ಮಾಡುತ್ತಿದ್ದೇವೆಯೆ ? ಇಲ್ಲ. ಮೋಸ ಮಾಡುತ್ತಿದ್ದೇವೆಂದು ಅವರು ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ಮಕ್ಕಳಿಗೆಲ್ಲಾ ಎಷ್ಟು ಮೋಸ ಮಾಡುತ್ತಿದ್ದೇವೆಂಬುದನ್ನು ಯೋಚಿಸಬೇಕು. ತಾರತಮ್ಯ ಇಲ್ಲದ ನಮ್ಮ ಸಮಾಜವನ್ನು ನಿರ್ಮಾಣ ಮಾಡೋಣ ಎನ್ನುತ್ತಾರೆ, ಆದರೆ ಮಾಡಿರುವುದನ್ನೆಲ್ಲಾ ಬೇರೆಯವರಿಗೆ ಕೊಡುತ್ತಿದ್ದಾರೆಂಬ ಯೋಚನೆಯಾಗುತ್ತಿದೆ.

2-00 P.M.

ಎಲ್ಲಾ ಮಕ್ಕಳನ್ನೂ ಸಹ ಒಂದೇ ರೀತಿಯಲ್ಲಿ ನೋಡಬೇಕು ಅದರಲ್ಲಿ ಬೇಕಾದರೆ ಟೆಸ್ಟ್ ಮಾಡಿ ಜೊತೆಗೆ ಇನ್ನೊಂದು ರಿಕ್ವೆಸ್ಟ್ ಮಾನ್ಯ ಮಂತ್ರಿಗಳಲ್ಲಿ. ಅದೇನೆಂದರೆ, ರೂರಲ್ ಪಾರ್ಟ್ಸ್‌ನಿಂದ ಬಂದಿರತಕ್ಕ ಮಕ್ಕಳು ಏನಿದ್ದಾರೆ, ಅವರಿಗೆ ರಿಸರ್ವೇಷನ್‌ನ್ನು ಜಾಸ್ತಿ ಮಾಡಬೇಕು. ರೂರಲ್ ಪಾರ್ಟ್ಸ್‌ನಿಂದ ಬರತಕ್ಕ ಮಕ್ಕಳಿಗೂ, ಸಿಟಿ ಪಾರ್ಟ್ಸ್‌ನಿಂದ ಬರತಕ್ಕ ಮಕ್ಕಳ ಜೊತೆಯಲ್ಲಿ ಕಂಪೇರ್ ಮಾಡುವುದಕ್ಕಾಗುವುದಿಲ್ಲ. ಅವರಿಗೆ ಲೈಬ್ರರಿ ಅನುಕೂಲತೆ ಇರುವುದಿಲ್ಲ, ಪುಸ್ತಕ ಇರುವುದಿಲ್ಲ. ಹಳ್ಳಿಗಳಲ್ಲಿ ಆ ಒಂದು ಅನುಕೂಲತೆ ಇರುವುದಿಲ್ಲ. ಅವರು ತಮ್ಮ ಬುದ್ಧಿವಂತಿಕೆಯನ್ನು ಬೆಳೆಸುವುದಕ್ಕೆ ಅವಕಾಶವೇ ಇಲ್ಲ. ಹೀಗಿದ್ದರೂ ನಮ್ಮ ಮಕ್ಕಳನ್ನು ಎಲ್ಲಿಗೆ ಕಳುಹಿಸುತ್ತೇವೆಂದರೆ, ವ್ಯವಸಾಯ ಮಾಡು ಎಂದು ಕಳುಹಿಸುತ್ತೇವೆ. ಆದೇ ಪಟ್ಟಣದಲ್ಲಿರುವ ಮಕ್ಕಳು ಹೋಗಿ ಲೈಬ್ರರಿಯಲ್ಲಿ ಕುಳಿತು ಕೊಂಡು ಓದುತ್ತಾರೆ. ಇದನ್ನು ತಾವು ಸ್ವಲ್ಪ ಅರ್ಥಮಾಡಿಕೊಳ್ಳಬೇಕು ಗ್ರಾಮಾಂತರ ಪ್ರದೇಶ ಗಳಲ್ಲಿರುವ ಮಕ್ಕಳಿಗೆ ೧೨ ಪರ್ಸೆಂಟ್ ಏನು ಇದೆ, ಅದನ್ನು ಇನ್ನೂ ಜಾಸ್ತಿ ಮಾಡಬೇಕು. ಆದ್ದರಿಂದ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಮಕ್ಕಳಿಗೂ ಪಟ್ಟಣ ಪ್ರದೇಶದಿಂದ ಬರತಕ್ಕ ಮಕ್ಕಳಿಗೂ ಒಂದೇ ಪ್ಯಾರಿಟಿಯನ್ನು ಮಾಡುವುದಕ್ಕಾಗುವುದಿಲ್ಲ. ಆ ರೀತಿಯಲ್ಲಿ ನೋಡುವುದು ಬೇಡ.

ನಂತರ ಮಾನ್ಯ ವಿದ್ಯಾ ಮಂತ್ರಿಗಳನ್ನು ಇನ್ನೊಂದು ವಿಷಯದಲ್ಲಿ ಕೇಳಿಕೊಳ್ಳುವುದೇನೆಂದರೆ, ಪ್ರೌಢ ಶಾಲೆಗಳು ಇರುವ ಕಡೆಯಲ್ಲೆಲ್ಲಾ ಹಾಸ್ಟಲ್‌ಗಳನ್ನು ತೆರೆಯಬೇಕೆಂಬುದು ನಮ್ಮದೊಂದು ಪ್ರಾರ್ಥನೆ. ವ್ಯಾಸಂಗ ಮಾಡುವಂತಹ ಮಕ್ಕಳಲ್ಲಿ ಕೇವಲ ೫ ಪರ್ಸೆಂಟ್‌ಗೆ ಮಾತ್ರ ಹಾಸ್ಟಲ್‌ನ

ಅನುಕೂಲತೆಯನ್ನು ಒದಗಿಸಿಕೊಟ್ಟಿದ್ದೀರಿ. ಪ್ರೌಢ ಶಾಲೆಗಳು ಇರುವ ಕಡೆಯಲೆಲ್ಲಾ ಹಾಸ್ಟಲ್‌ನ್ನು ಮಾಡಿದ್ದೇ ಆದರೆ ಡ್ರಾಪ್‌ಔಟ್ ಕೂಡ ಕಡಿಮೆಯಾಗುತ್ತದೆ. ಆದ್ದರಿಂದ ಹಾಸ್ಟಲ್ ಅನುಕೂಲತೆಯನ್ನು ಜಾಸ್ತಿ ಮಾಡಬೇಕು.

ಪ್ರೈಮರಿ ಎಜುಕೇಷನ್ ಬಗ್ಗೆ ಒಂದು ಪ್ರಾರ್ಥನೆ. ಪ್ರಾಥಮಿಕ ಶಾಲೆಗಳನ್ನು ಮಾನ್ಯ ಮಂತ್ರಿಗಳು ಹೋಗಿ ನೋಡಬೇಕು. ೧೦೦೦ ಜನ ಇರುತ್ತಾರೆ. ಅವರೆಲ್ಲ ಒಂದೇ ಕೊಠಡಿಯಲ್ಲಿರುತ್ತಾರೆ. ಅವರಲ್ಲಿ ಉತ್ತರದ ಕಡೆ ಕುಳಿತಿರುವವರು ೧ನೇ ಕ್ಲಾಸ್, ಪೂರ್ವದ ಕಡೆ ಕುಳಿತಿರುವವರು ೨ನೇ ಕ್ಲಾಸ್, ದಕ್ಷಿಣದ ಕಡೆ ಕುಳಿತಿರುವವರು ೩ನೇ ತರಗತಿ. ಪಶ್ಚಿಮದ ಕಡೆ ಕುಳಿತಿರುವವರು ೪ನೇ ತರಗತಿ ಎಂದು ನಾವು ತಿಳಿದುಕೊಳ್ಳಬೇಕು. ಆ ರೀತಿ ವಿಭಾಗ ಮಾಡಿ ಕುಳ್ಳಿರಿಸಿರುತ್ತಾರೆ. ದೇವಸ್ಥಾನದಲ್ಲೂ ಸ್ಕೂಲು. ದೊಡ್ಡ ಹುಣಸೇ ಮರ ಇದ್ದರೂ ಅಲ್ಲೊಂದು ಸ್ಕೂಲು. ಬಿದ್ದುಹೋಗಿರುವ ಒಂದು ಚೌಲ್ಟ್ರಿ ಇದ್ದರೂ ಅಲ್ಲೊಂದು ಸ್ಕೂಲು. ಆದ್ದರಿಂದ ಸ್ಟ್ರೆಂತ್ ಜಾಸ್ತಿ ಮಾಡಿ, ಅದಕ್ಕೆತಕ್ಕಂತೆ ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತಿಲ್ಲ, ಆ ಕೆಲಸವನ್ನು ಮೊದಲು ಮಾಡಬೇಕು. ನಂತರ ಉಪಾಧ್ಯಾಯರ ವಿಚಾರದಲ್ಲಿ ನಮ್ಮ ಬೊಕ್ಕಸದಿಂದ ಜಾಸ್ತಿ ಖರ್ಚಾದರೂ ಪರವಾಯಿಲ್ಲ. ಅವರಿಗೆ ಹೈದರಾಬಾದ್ ವೇತನವನ್ನು ಕೊಡಬೇಕೆಂದು ಮೊದಲಿನಿಂದಲೂ ಹೋರಾಟ ಮಾಡಿಕೊಂಡು ಬರುತ್ತಿದ್ದಾರೆ. ಎಲ್ಲರನ್ನೂ ಕವರ್ ಮಾಡಿದ್ದೀರಿ. ಇನ್ನು ಕೇವಲ ೧೦–೧೫ ಪರ್ಸೆಂಟ್ ಮಾತ್ರ ಉಳಿದುಕೊಂಡಿರಬಹುದು. ಅವರಿಗೂ ಅದನ್ನು ಕೊಟ್ಟುಬಿಡಿ. ಅವರಿಗೆ ಇನ್ನೂ ಏನೇನು ಉತ್ತೇಜನ ಕೊಡಬೇಕೋ ಅದನ್ನು ಕೊಡಿ. ಅವರಿಂದ ಸರಿಯಾದ ರೀತಿಯಲ್ಲಿ ಕೆಲಸವನ್ನು ತೆಗೆದುಕೊಳ್ಳಿ. ಪ್ರಾಥಮಿಕ ಶಾಲೆಗಳನ್ನು ಜಾಸ್ತಿ ಮಾಡಿ. ಖಾಸಗಿ ಶಾಲೆಗಳಿಗೆ ಅಪ್ಪಣೆಯನ್ನು ಏನು ಕೊಡುತ್ತಿದ್ದೀರಿ, ಅದನ್ನು ತಪ್ಪಿಸಿ ಎಂಬುದಾಗಿ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ರಾಜ್ಯಾಂಗದಲ್ಲಿ ಆ ಬಗ್ಗೆ ಬಹಳ ಕ್ಲಿಯರ್ ಆಗಿದೆ. ೧೪ನೇ ವಯಸ್ಸಿನವರೆಗೆ free and compulsory education for all children ಎಂದು ಹೇಳಿದ್ದಾರೆ.

ಶ್ರೀ ಬಿ. ಸ್ವಾಮಿ ರಾವ್.—ಮಾನ್ಯ ಅಧ್ಯಕ್ಷರೆ, ಇಂತಹ ಪ್ರಮುಖವಾದ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯಾಗುತ್ತಿರುವಾಗ ಆ ಕಡೆಯವರು ಯಾರೂ ಇಲ್ಲ.

ಅಧ್ಯಕ್ಷರು.—ಕೋರಂ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ಪ್ರಾಥಮಿಕ ಶಾಲೆಗಳು ಏನು ಇವೆ, ಅವುಗಳನ್ನು ರಾಷ್ಟ್ರೀಕರಣ ಮಾಡಿ. ಇದರಿಂದ ಸರ್ಕಾರಕ್ಕೆ ಜಾಸ್ತಿ ಹಣ ಖರ್ಚಾಗುವುದಿಲ್ಲ. ಆ ಬಗ್ಗೆ ಬಡ್ಜೆಟ್ಟಿನಲ್ಲಿಕೊಟ್ಟಿರುವಂಥದ್ದು ಬಹಳ ಕಡಿಮೆ. ಹಳೇ ಮೈಸೂರು ಭಾಗದಲ್ಲಿ ೪೦ ಪರ್ಸೆಂಟ್ ಇರುತ್ತಿತ್ತು. ಈಗ ಅದು ಬಹಳ ಕಡಿಮೆ ಇದೆ.

ಶ್ರೀ ಬಿ. ಎಂ. ಇದಿನಬ್ಬ.—ಎಷ್ಟು ಉದಾಸೀನತೆ ಇದೆ ಎಂಬುದನ್ನು ನಾವು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಎಲ್ಲರೂ ಇರಬೇಕಾಗಿಲ್ಲ. ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ. ಆಯಿತು, ಶ್ರೀ ವೆಂಕಟರಾಮಯ್ಯನವರೇ ತಾವು ಮುಗಿಸಿ.

ಶ್ರೀ ಆರ್. ವೆಂಕಟರಾಮಯ್ಯ.—ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಬೇಡಿಕೆ ಸಂಖ್ಯೆ ೯, ೧೯, ೧೩ ಹಾಗೂ ೧೪ರ ಬಗ್ಗೆ ಚರ್ಚೆ ಬಹುಮುಖ್ಯವಾಗಿದ್ದು ಈ ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಚರ್ಚೆ ಇವತ್ತು ಪ್ರಾರಂಭವಾಗಿದೆ. ನಮಗೆ ಹೆಚ್ಚು ವಿಷಯಗಳನ್ನು ಹೇಳುವುದಕ್ಕೆ ಸಮಯ ಇಲ್ಲ. ಹೆಚ್ಚು ವಿಷಯಗಳನ್ನು ತಿಳಿದುಕೊಂಡು ತಪ್ಪುನೆಪ್ಪುಗಳನ್ನು ಸರಿಮಾಡಿಕೊಂಡು ಈ ಶಿಕ್ಷಣ ಕ್ಷೇತ್ರದಲ್ಲಿ ಒಂದು ಕ್ರಾಂತಿ ಮಾಡಬೇಕು ಒಳ್ಳೆಯ ಸಾಧನೆ ಮಾಡಬೇಕು ಎನ್ನುವ ಕಳಕಳಿ ಸಹ ಈ ಸರ್ಕಾರದಲ್ಲಿ ಇಲ್ಲ ಎನ್ನುವುದಕ್ಕೆ ಶಿಕ್ಷಣ ಇಲಾಖೆ ಬೇಡಿಕೆ ಮೇಲೆ ಚರ್ಚೆ ನಡೆದಿರುವಾಗ ಸದಸ್ಯರ ಹಾಜರಿಯನ್ನು ನೋಡಿದರೇ ಅದು ಅರ್ಥವಾಗುತ್ತದೆ. ಪ್ರೈಮರಿ ಶಿಕ್ಷಣದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವ ಪ್ರಯತ್ನವನ್ನು ಮಾಡುತ್ತೇನೆ. ಸನ್ಮಾನ್ಯ ವೆಂಕಟರಾಮಯ್ಯನವರು ಆರ್ಟಿಕಲ್ ೪೫–೪೬ರ ಪ್ರಕಾರ ಕಡ್ಡಾಯ ಶಿಕ್ಷಣದ ಬಗ್ಗೆ, ಹೇಳಿದ್ದಾರೆ. ೧೦ ವರ್ಷಗಳಲ್ಲಿ ಏನು ಕಡ್ಡಾಯ

ಶಿಕ್ಷಣದ ಬಗ್ಗೆ ಅದರ ಅವಶ್ಯಕತೆಯು ಬಗ್ಗೆ ಯೋಜನೆ ಮಾಡಲಾಗಿತ್ತು. ಅದು ಇವತ್ತು ಸಹಾ ಸಾಧನೆಯಾಗಿಲ್ಲವೆಂದು ಹೇಳಬೇಕಾಗುತ್ತದೆ. ಕಡೇ ಪಕ್ಷ ಪ್ರೈಮರಿ ತರಗತಿಯಲ್ಲಾದರೂ ಮಕ್ಕಳಿಗೆ ವಿದ್ಯೆಯನ್ನು ಕಲಿಸಬೇಕೆಂಬ ಕಳಕಳಿ ಸರ್ಕಾರಕ್ಕೆ ಇಲ್ಲದೇ ಇರುವುದು ಸರ್ಕಾರದ ಒಂದು ಅಂಕಿಸಂಖ್ಯೆಯಿಂದ ಗೊತ್ತಾಗುತ್ತದೆ. ಅವರ ಒಂದು ಅಂಕಿಸಂಖ್ಯೆಯ ಪ್ರಕಾರವೇ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ೪೦,೯೯೦ ಲಕ್ಷ ಮಕ್ಕಳು ಇದ್ದು, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೧೫.೨೬ ಲಕ್ಷ ಮಕ್ಕಳಿದ್ದು, ಸೆಕೆಂಡರಿ ಶಿಕ್ಷಣದಲ್ಲಿ ೭.೯೯೦ ಲಕ್ಷ ಮಕ್ಕಳು ಓದುತ್ತಿದ್ದಾರೆ. ಹೀಗೆ ಕಾಲೇಜು ಶಿಕ್ಷಣಕ್ಕೆ ಬಂದಾಗ ಇದು ೨ ಲಕ್ಷದ ೫೫ ಸಾವಿರಕ್ಕೆ ಇಳಿದಿದೆ ಇದು ತಾವು ಕೊಟ್ಟಿರತಕ್ಕ ಪುಸ್ತಕದಲ್ಲಿ ಇದೆ. ಇವೊತ್ತು ಐ.ಆರ್.ಡಿ.ಪಿ. ಹಾಗೂ ಅಂತ್ಯೋದಯ ಯೋಜನೆಗಳನ್ನು ತೆಗೆದುಕೊಂಡು ಬಂದ ಕಾರಣವೇನೆಂಬುದನ್ನು ನೋಡಬೇಕಾಗುತ್ತದೆ. ಹಳ್ಳಿಯಲ್ಲಿರುವ ರೈತನ ಮಗ ಶಾಶ್ವತವಾಗಿ ಕುರಿ, ಎಮ್ಮೆ ಕಾಯುತ್ತಾ ಬಿದ್ದಿರುತ್ತಾನೆ. ಪಟ್ಟಣದಲ್ಲಿರುವ ವಿದ್ಯಾವಂತ ಜನರು ತಮ್ಮ ಮಕ್ಕಳನ್ನು ಶಿಕ್ಷಣಕ್ಕೆ ಕಳುಹಿಸುತ್ತಾರೆ. ಇದಕ್ಕೆ ಕಾರಣ ಇದೆ, ಪಟ್ಟಣದಲ್ಲಿರುವ ಜನರಿಗೆ ಹಳ್ಳಿಯಲ್ಲಿ ಜಮೀನು ಇರುವುದಿಲ್ಲ, ಮುಂದೆ ತಮ್ಮನ್ನು ಸಾಕುವ ಮಕ್ಕಳು ವಿದ್ಯಾವಂತರಾಗಬೇಕು ಬುದ್ಧಿವಂತರಾಗಬೇಕೆಂದು ಡಾಕ್ಟರು, ಎಂಜಿನಿಯರಾಗಬೇಕೆಂದು ಒಳ್ಳೆಯ ವಿದ್ಯಾಭ್ಯಾಸ ಕೊಡಿಸುತ್ತಾರೆ, ಕಾರಣ ಅವರಿಗೆ ಅವರ ಮಕ್ಕಳೇ ಆಸ್ತಿ ಇದ್ದಂತೆ. ಶಿಕ್ಷಣವನ್ನು ಕೊಡದೇ ಬೇರೆ ದಾರಿ ಇಲ್ಲ. ಹೀಗಾಗಿ ಸಹಜವಾಗಿ ಈ ದಾರಿಯಲ್ಲಿ ಅವರು ಮುಂದುವರಿಯುತ್ತಾರೆ. ಆದರೆ ಗ್ರಾಮಾಂತರ ಪ್ರದೇಶದ ಜನ ಕುರಿ, ಎಮ್ಮೆಗಳನ್ನು ಕಾಯುವ ಪರಿಸ್ಥಿತಿಯನ್ನು ಸ್ವಾತಂತ್ರ್ಯ ಬಂದು ೪೦ ವರ್ಷಗಳಾದರೂ ನಾವು ಇನ್ನೂ ಕಾಣುತ್ತಿದ್ದೇವೆ. ಇದಕ್ಕೆ ಕೊನೆ ಎಂದು ಎಂಬುದೇ ನಮಗೆ ಗೊತ್ತಾಗುತ್ತಾ ಇಲ್ಲ. ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೫೫,೪೫೬ ಜನ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ ಎಂದು ನಿಮ್ಮ ಅಂಕಿಸಂಖ್ಯೆ ಹೇಳುತ್ತದೆ. ಅದೇ ಪುಟ ೩ರಲ್ಲಿ ೧೯೮೬-೮೭ರಲ್ಲಿ ರಾಜ್ಯದಲ್ಲಿ ೧ ರಿಂದ ೭ನೇ ತರಗತಿಯವರೆಗೆ ೫೯ ಲಕ್ಷ ೯ ಸಾವಿರ ಮಕ್ಕಳು ದಾಖಲಾಗಿದ್ದಾರೆಂದು ತಿಳಿಸಿದ್ದೀರಿ. ಹಾಗೂ ಸೆಕೆಂಡರಿ ಶಿಕ್ಷಣದಲ್ಲಿ ೭.೯೯೦ ಲಕ್ಷ ವಿದ್ಯಾರ್ಥಿಗಳು ದಾಖಲಾಗಿದ್ದಾರೆಂದು ತಿಳಿಸಿದ್ದೀರಿ. ಅದೇ ಪೇಜ್ ೫ರಲ್ಲಿ ೯.೨೨ ಲಕ್ಷ ವಿದ್ಯಾರ್ಥಿಗಳು ಇದ್ದಾರೆಂದು ಹೇಳುತ್ತಿದ್ದೀರಿ. ಈ ಒಂದು ವ್ಯತ್ಯಾಸ ಏಕೆ ಆಯಿತು ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಪೂರ್ವ ಪ್ರೈಮರಿ ಶಾಲೆಗಳ ಶಿಕ್ಷಣದ ಬಗ್ಗೆ ಹೇಳುವುದಾದರೆ ಈ ಒಂದು ವಿಭಾಗದಲ್ಲಿ ಅತ್ಯಂತ ಕಳಕಳಿ ಇದ್ದಂತಹ ಸಚಿವರಾಗಿದ್ದವರು ಗೋವಿಂದೇಗೌಡರು. ಅವರು ಈ ದಿಸೆಯಲ್ಲಿ ಕ್ರಾಂತಿಕಾರಕ ಕೆಲಸವನ್ನು ಮಾಡುತ್ತೇವೆಂದು ನಿಂತಿದ್ದವರನ್ನು ಈಗಾಗಲೇ ತಾವು ಮನೆಗೆ ಕಳುಹಿಸಿದ್ದೀರಿ. ಬಹುಶಃ ಶಕ್ತಿಯುತ ಮಂತ್ರಿಗಳ ಪೈಕಿ ಪ್ರಾಮಾಣಿಕ ವ್ಯಕ್ತಿಯಾದ ಶ್ರೀ ಗೋವಿಂದೇಗೌಡರನ್ನು ಉಳಿಸಿಕೊಂಡು ಈ ಒಂದು ಕ್ಷೇತ್ರದಲ್ಲಿ ಒಂದು ಕ್ರಾಂತಿಕಾರೀ ಬದಲಾವಣೆಯನ್ನು ತರಬಹುದಾಗಿತ್ತು. ಬಡ್ಜೆಟ್ ಭಾಷಣದಲ್ಲಿ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ರೈತರ ಮಕ್ಕಳಿಗೆ ಅನುಕೂಲ ಆಗಲಿ ಎನ್ನುವ ದೃಷ್ಟಿಯಿಂದ ಬೆಳಿಗ್ಗೆ ಮತ್ತು ಸಂಜೆ ಒಂದೆರಡು ಗಂಟೆ ಸಮಯದಲ್ಲಿ ಅವರು ವಿದ್ಯಾಭ್ಯಾಸ ಕಲಿಯಲಿ ಎಂದು ಅದನ್ನು ಮಾಡುತ್ತಿದ್ದೇವೆ ಎಂದು ಹೇಳಿದರು. ಮಾನ್ಯ ಸಚಿವರು ಈ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ. ಇವೊತ್ತಿಂದು ರೈತರ ಮಕ್ಕಳಿಗೆ ಈ ಶಾಲೆಗಳಿಂದ ಅನುಕೂಲ ಆಗಿದೆ ಎನ್ನುವ ವಿಷಯವನ್ನು ಅವರು ಹೇಳಬೇಕು.

ಸಾಯಂಕಾಲ ಎರಡು-ಮೂರು ಗಂಟೆ ಉಪಾಧ್ಯಾಯರು ಪಾಠ ಹೇಳಬೇಕೆನ್ನುವ ಉದ್ದೇಶ ಏನಿದೆ ಅದು ಕ್ರಾಂತಿಯುತವಾದ ಉದ್ದೇಶವೆಂದು ನಾನು ಭಾವಿಸಿದ್ದೇನೆ. ಇದನ್ನು ಇಂಪ್ಲಿಮೆಂಟ್ ಮಾಡಿದ್ದೀರಾ ? ಎಷ್ಟು ಶಾಲೆಗಳಲ್ಲಿ ಇದನ್ನು ಜಾರಿಗೆ ತಂದಿದ್ದೀರಿ ? ಅದರ ಬಗ್ಗೆ ಅಂಕಿಅಂಶಗಳನ್ನು ಹೇಳಬೇಕು. ಪ್ರಾಥಮಿಕ ಶಿಕ್ಷಣದ ಬಗ್ಗೆ ಬಹಳ ಕಳಕಳಿ ಇದೆ. ಅದರ ಬಗ್ಗೆ ಹೆಚ್ಚು ಗಮನ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಜೂನ್, ಜುಲೈ ತಿಂಗಳಿನಲ್ಲಿ ೬ ಸಾವಿರ ಶಿಕ್ಷಕರನ್ನು ನೇಮಕ ಮಾಡಲಿಕ್ಕೆ ಸರ್ಕಾರ ಯೋಜನೆ ಮಾಡುತ್ತಿದೆ ಎಂದು ಹೇಳಿದ್ದಾರೆ. ಇಡೀ ರಾಜ್ಯದಲ್ಲಿ ಈಗ ಕೊರತೆ ಇರುವ ೮೦೧೦ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಸರ್ಕಾರದವರು ಪ್ರಾಮಾಣಿಕ ಪ್ರಯತ್ನವನ್ನು ಮಾಡಿಲ್ಲ. ಏಕೋಪಾಧ್ಯಾಯ ಶಾಲೆಗಳಲ್ಲಿ ಅಲ್ಲಿರತಕ್ಕ ಉಪಾಧ್ಯಾಯರು ಖಾಯಿಲೆ ಬಂದು ರಜ ಹಾಕಿದರೆ ಆ ಶಾಲೆಯನ್ನು ಮುಚ್ಚುವ ಸ್ಥಿತಿ ಬಂದಿದೆ. ಉಪಾಧ್ಯಾಯರು ೧೫ ದಿವಸ ೧ ತಿಂಗಳು ರಜ ಹಾಕಿದರೆ ಅಲ್ಲಿ ಯಾರೂ ನೋಡಿಕೊಳ್ಳುವ ವ್ಯವಸ್ಥೆ ಇಲ್ಲ. ಪ್ರಾಥಮಿಕ ಶಿಕ್ಷಣದ ಬಗ್ಗೆ ತಾವು ಕಳಕಳಿ ತೋರಿಸುವುದರಲ್ಲಿ ಬಹಳ ಹಿಂದುಳಿದಿದ್ದೀರಿ, ಅಭಿವೃದ್ಧಿ ಪಡಿಸಲಿಕ್ಕೆ ಏನೇನು ಅನುಕೂಲ ಮಾಡಿದ್ದೀರಿ ? ಕಳೆದ ವರ್ಷ

ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟುವಂತಹ ಪ್ರಯತ್ನ ಮಾಡಲಾಗಿದೆಯೆ ? ಈ ವರ್ಷ ಏನು ಮಾಡುತ್ತೀರಿ ಅದರ ಬಗ್ಗೆ ಸರಿಯಾದ ವಿವರಗಳು ಇಲ್ಲಿ ಇಲ್ಲ. ವಿವರಗಳು ಇಲ್ಲ ಎಂದರೆ ನೀವು ಏನೂ ಮಾಡಿಲ್ಲ. ಆದ್ದರಿಂದ ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮುಂದೆ ಯಾದರೂ ನಿಮ್ಮ ನಿರೀಕ್ಷೆ ಏನಿದೆ ಅದನ್ನಾದರೂ ಮಾಡುತ್ತೀರಾ ? ಶಾಲಾ ಕಟ್ಟಡಗಳನ್ನು ಕಟ್ಟುತ್ತೀರಾ ? ಅದಕ್ಕಾಗಿ ಸಾಕಷ್ಟು ಹಣವನ್ನು ತೆಗೆದು ಇಟ್ಟಿದ್ದೀರಾ ? ನೀವು ಏನು ಮಾಡುತ್ತೀರಿ ಎನ್ನುವುದನ್ನು ಇದರಲ್ಲಿ ಎಲ್ಲಿಯೂ ತೋರಿಸದೇ ಇರುವುದರಿಂದ ಪ್ರಾಥಮಿಕ ಶಿಕ್ಷಣ ಕಡ್ಡಾಯ ಶಿಕ್ಷಣ ಮಾಡಬೇಕೆನ್ನುವ ಕನಸು ನನಸಾಗುವುದಕ್ಕೆ ನಿಮ್ಮ ಕಾಲದಲ್ಲಿ ಆಗುವುದಕ್ಕೆ ನೀವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ದಯಮಾಡಿ ಇದರ ಕಡೆಗೆ ಸರಿಯಾಗಿ ಗಮನಕೊಡಬೇಕೆಂದು ಹೇಳುತ್ತೇನೆ. ಈಗ ಶಿಕ್ಷಣ ವ್ಯಾಪಾರಕೇಂದ್ರವಾಗಿ, ಇತ್ತೀಚಿನ ದಿವಸಗಳಲ್ಲಿ ಪ್ರಾಥಮಿಕ ಶಾಲೆ, ಹೈಸ್ಕೂಲ್, ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಇವುಗಳನ್ನು ಖುಷಿ ಬಂದವರಿಗೆ ಕೊಟ್ಟಿದ್ದಾರೆ. ಖಾಸಗೀಯವರಿಗೆ ಹೈಸ್ಕೂಲ್‌ಗಳನ್ನು ಕೊಟ್ಟಿದ್ದಾರೆ. ತಮ್ಮ ಮುಖಾಂತರ ನಾನು ವಿನಂತಿ ಮಾಡಿ ಕೊಳ್ಳುತ್ತೇನೆ ಕೋಟ್ಯಾಂತರ ರೂಪಾಯಿಗಳ ಗ್ರಾಂಟನ್ನು ಸರ್ಕಾರದವರು ಕೊಟ್ಟಿದ್ದಾರೆ. ನಿಮ್ಮ ಕೈಯಲ್ಲಿ ಶಾಲಾ ಕಾಲೇಜುಗಳನ್ನು ನಡೆಸುವುದಕ್ಕಾಗುವುದಿಲ್ಲವೆಂದು ಕೊಟ್ಟಿದ್ದೀರಾ ? ತಾವು ಇತ್ತೀಚಿನ ದಿವಸಗಳಲ್ಲಿ ಖಾಸಗಿಯವರಿಗೆ ಹೈಸ್ಕೂಲ್‌ಗಳನ್ನು ಕೊಟ್ಟಿದ್ದೀರಿ, ಎಷ್ಟು ಹೈಸ್ಕೂಲ್‌ಗಳು ನಡೆಯುತ್ತಿವೆ ಎಂಬುದನ್ನು ನೋಡಿದ್ದೀರಾ ? ಅಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಇದ್ದಾರೆ, ಎಷ್ಟು ಜನ ಉಪಾಧ್ಯಾಯರುಗಳು ಇದ್ದಾರೆ, ಕಟ್ಟಡ ಇದೆಯೇ ಇವುಗಳನ್ನು ನೋಡಿ ಶಾಲೆಗಳನ್ನು ಕೊಡ ಲಾಗಿದೆಯೆ ? ಅದರ ಬಗ್ಗೆ ತಾವು ತನಿಖೆ ಮಾಡಿಸಿ ಒಂದು ವರದಿಯನ್ನು ಇಡುವುದಕ್ಕೆ ಸಾಧ್ಯವೆ ? ಖಾಸಗಿಯವರು ಶಾಲೆಗಳನ್ನು ನಡೆಸುವುದಕ್ಕೆ ಏತಕ್ಕೆ ಮುಂದೆ ಬರುತ್ತಾರೆಂದರೆ ಒಬ್ಬ ಮೇಸ್ಟ್ರನ್ನು ನೇಮಕ ಮಾಡಿಕೊಂಡರೆ ೨೫ ಸಾವಿರ ರೂಪಾಯಿಗಳು ಬರುತ್ತದೆ. ಇದು ನಮಗೆ ನಿಮಗೆ ಗೊತ್ತಿರತಕ್ಕ ವಿಷಯ. ನಾವೇ ನಿರುದ್ಯೋಗಿ ವಿದ್ಯಾವಂತರನ್ನು ಕಳುಹಿಸಿಕೊಟ್ಟಿದ್ದೇವೆ, ಉಪಾಧ್ಯಾಯರುಗಳ ಕಡೆಯಿಂದಲೂ ಹಣ ಬರುತ್ತದೆ, ಸರ್ಕಾರದಿಂದ ಗ್ರಾಂಟ್ ಬರುತ್ತದೆ, ಶಾಲೆಗಳನ್ನು ಪ್ರಾರಂಭ ಮಾಡಿ ಗ್ರಾಂಟ್‌ಗಾಗಿ ಕಾಯುವುದನ್ನು ನಾವು ನೋಡಿದ್ದೇವೆ. ನೀವು ಈ ರೀತಿ ಖುಷಿ ಬಂದವರಿಗೆ ಯಾರನ್ನೋ ತೃಪ್ತಿಪಡಿಸುತ್ತದಕ್ಕೆ ಹೈಸ್ಕೂಲ್‌ಗಳನ್ನು ಕೊಡಲಾಗಿದೆ. ನೀವು ಮಂಜೂರಾತಿ ಕೊಡತಕ್ಕ ಶಾಲೆಯ ಪಕ್ಕದಲ್ಲಿಯೇ ಸರ್ಕಾರಿ ಹೈಸ್ಕೂಲ್ ಇರುತ್ತದೆ, ಹೊಸದಾಗಿ ಪ್ರಾರಂಭವಾದ ಹೈಸ್ಕೂಲ್‌ಗೆ ವಿದ್ಯಾರ್ಥಿಗಳು ಹೋಗುತ್ತಾರೆ, ಆಗ ಸರ್ಕಾರಿ ಶಾಲೆಯ ಸ್ಟ್ರೆಂತ್ ಕಡಿಮೆಯಾಗುತ್ತದೆ. ಪ್ರೈವೇಟ್‌ನವರಿಗೆ ಶಾಲೆಗಳನ್ನು ಕೊಡುವುದರಿಂದ ಇಂತಹ ಒಂದು ಅವ್ಯವಸ್ಥೆ ಬಂದಿದೆ. ಹೈಸ್ಕೂಲ್ ಗಳನ್ನು ಪ್ರೈವೇಟ್‌ನವರಿಗೆ ಕೊಡುವುದು ಬೇಡ. ಅಗತ್ಯವಿರುವ ಕಡೆ ಸರ್ಕಾರವೇ ಜವಾಬ್ದಾರಿಯನ್ನು ತೆಗೆದುಕೊಂಡು ಶಾಲೆಗಳನ್ನು ನಡೆಸಬೇಕು. ಆ ಕೆಲಸವನ್ನು ತಾವು ಮಾಡುತ್ತಿಲ್ಲ. ಶಿಕ್ಷಣ ಕೇಂದ್ರ ವ್ಯಾಪಾರಕೇಂದ್ರ ಆಗಬಾರದೆಂದು ಇದ್ದರೆ ಸರ್ಕಾರ ಜವಾಬ್ದಾರಿಯನ್ನು ವಹಿಸಿಕೊಂಡು ಶಾಲೆಗಳನ್ನು ನಡೆಸಬೇಕು. ಕಳೆದ ೧೫-೨೦ ವರ್ಷಗಳ ನನ್ನ ಅನುಭವದಲ್ಲಿ ನೂರಕ್ಕೆ ೧೦-೨೦ ಶಾಲೆಗಳು ಮಾದರಿ ಶಾಲೆಗಳು ಆಗಿರಬಹುದು. ಉಳಿದ ಶಾಲೆಗಳವರು ವ್ಯಾಪಾರ ಮಾಡಿಕೊಳ್ಳುವುದಕ್ಕೆ, ಒಂದು ಪ್ರವೃತ್ತಿಯನ್ನು ಬೆಳಸಿಕೊಂಡಿದ್ದಾರೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಬಗ್ಗೆ ಆ ಡಿಮಾಂಡ್ ಬಂದಾಗ ಮಾತನಾಡುತ್ತೇನೆ. ಈಗಾಗಲೇ ಕಾರ್ಖಾನೆಗಳನ್ನು ನಡೆಸುವುದಕ್ಕಾಗುವುದಿಲ್ಲವೆಂದು ಹೇಳಿ ಟಾಟಾ ಬಿರ್ಲಾರವರಿಗೆ ಕೆಲವನ್ನು ಮಾರಲಿಕ್ಕೆ ಹೊರಟಿದ್ದಾರೆ. ಅದೇರೀತಿ ಶಿಕ್ಷಣವನ್ನು ಸಹ ಪ್ರೈವೇಟ್‌ನವರಿಗೆ ಮಾರಾಟ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ? ನೀವು ಮಂಜೂರಾತಿ ಮಾಡಿರತಕ್ಕ ಶಾಲೆಗಳು ಯಾವರೀತಿ ನಡೆಯುತ್ತಿವೆ ಎಂಬ ಬಗ್ಗೆ ಒಂದು ತನಿಖೆಯನ್ನು ಮಾಡಿಸಿ ವರದಿಯನ್ನು ಕೊಡುವಂತಹ ಅಗತ್ಯವಿದೆ ಎಂದು ನಾನು ಭಾವಿಸುತ್ತೇನೆ, ಯಾವುದೇ ಭಾಗ ತೆಗೆದುಕೊಳ್ಳಿ, ಪ್ರೈವೇಟ್ ಬಿಎಡ್ ಕಾಲೇಜುಗಳಲ್ಲಿ ರೂಲ್ಸ್‌ಗೆ ವಿರೋಧವಾಗಿ ನಿಮ್ಮ ನಿರೀಕ್ಷೆಗೆ ಮೀರಿ ಅಡ್ಮಿಶನ್ ಮಾಡಿಕೊಳ್ಳುತ್ತಾರೆ. ಪರೀಕ್ಷೆ ಇನ್ನು ೧೫-೨೦ ದಿವಸ ಇದೆ ಎನ್ನುವಾಗ ಕೊನೆಯ ಗಳಿಗೆಯಲ್ಲಿ ಮಂತ್ರಿಗಳ ಕೈಕಾಲು ಹಿಡಿದು ಪರ್ಮಿಶನ್ ತೆಗೆದುಕೊಂಡು ಎಲ್ಲೋ ಒಂದು ಕಡೆ ಪರೀಕ್ಷೆಗೆ ಕೂಡಿಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆ. ಎಲ್ಲಿಯವರಿಗೆ ಬಿಎಡ್ ಕಾಲೇಜುಗಳ ಹಗರಣವನ್ನು ಈ ರೀತಿ ಮುಂದುವರಿಸಿಕೊಂಡು ಹೋಗುತ್ತೀರಿ ? ಅದರ ಬಗ್ಗೆ ಒಂದು ಕಟ್ಟುನಿಟ್ಟಾದ ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಅದಕ್ಕೆ ಬೇಕಾದ ಅನುಕೂಲತೆ

ಗಳನ್ನು ಮಾಡಿಕೊಡಬೇಕು. ಬಿಎಡ್ ಕಾಲೇಜುಗಳ ಸಂಖ್ಯೆಯನ್ನು ಹೆಚ್ಚಿಸಿದರೆ ಏನೂ ಪ್ರಯೋಜನ ವಿಲ್ಲ. ಅಗತ್ಯವಿರುವ ಕಡೆ ಕಾಲೇಜುಗಳನ್ನು ಕೊಡಬೇಕು. ಸೀಟುಗಳನ್ನು ಕಡಿಮೆಯಿರುವ ಕಡೆ ಜಾಸ್ತಿ ಸಂಖ್ಯೆಯಲ್ಲಿ ಅಡ್ಮಿಶನ್ ಮಾಡಿಕೊಂಡು ಎಲ್ಲಿಯೋ ಒಂದು ಕಡೆ ಎಕ್ಸಾಮಿನೇಷನ್‌ಗೆ ಕೂಡಿಸುವುದು ಸರಿಯಲ್ಲ. ಇದರ ಬಗ್ಗೆಯೂ ಸಹ ತಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಇದೇರೀತಿ ಈ ಪಾಲಿಟೆಕ್ನಿಕ್‌ಗಳನ್ನು ನಿಮ್ಮ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೊಟ್ಟಿರಿ. ಗ್ರಾಮಾಂತರ ಪ್ರದೇಶದಲ್ಲಿನ ಮಕ್ಕಳಿಗೆ ಸೌಲಭ್ಯಕ್ಕಾಗಿ ಇದನ್ನು ಕೊಟ್ಟಿದ್ದೀರಿ. ಆದರೆ ಇದನ್ನು ಪ್ರಾರಂಭ ಮಾಡ ಬೇಕಾದರೆ ಯಾವರೀತಿ ಪ್ರೈವೇಟ್ ಮಾನೇಜ್‌ಮೆಂಟಿನವರು ಮುಂದೆ ಬರುತ್ತಾರೆ, ಅದು ಪ್ರಾರಂಭ ಆದಮೇಲೆ ಆ ಕಳಕಳಿ ಅವರಿಗೆ ಇರುವುದಿಲ್ಲ. ಲಕ್ಷಾಂತರ ರೂಪಾಯಿಗಳ ಶುಲ್ಕ ತೆಗೆದುಕೊಂಡು ಬೇರೆ ಬೇರೆ ರೀತಿಯಲ್ಲಿ, ವಾಮ ಮಾರ್ಗದಲ್ಲಿ ಹಣ ಸಂಗ್ರಹಣೆ ಮಾಡಿ, ಇವು, ದುಡ್ಡು ಹೊಡೆಯುವ ಕೇಂದ್ರ ಗಳಾಗಿವೆ ಹೊರತು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಅಧಿಕಾರಿಗಳು ಹೋಗಿ ತನಿಖೆ ಮಾಡು ವಂಥಾದ್ದು, ಸರ್ಕಾರಕ್ಕೆ ವರದಿಯನ್ನು ತರಿಸಿಕೊಂಡು ಒಂದು ಜಿಲ್ಲೆಗೆ ಒಬ್ಬರೋ, ಇಬ್ಬರನ್ನು ಹಿಡಿದು ಅವರ ಮಾನ್ಯತೆಯನ್ನು ರದ್ದು ಮಾಡಿ ನಿಮಗೆ ಇದನ್ನು ನಡೆಸಲು ಸಾಧ್ಯತೆ ಇಲ್ಲವೆಂದು ಹೇಳಬೇಕಾಗು ತ್ತದೆ. ಇಲ್ಲದಿದ್ದರೆ ನಿಮ್ಮಿಂದ ಇವರನ್ನು ಹತೋಟಿಯಲ್ಲಿಡಲು ಸಾಧ್ಯವಾಗುವುದಿಲ್ಲ. ಇಂತಹ ಬಿಗಿ ಕ್ರಮ ತೆಗೆದುಕೊಳ್ಳಬೇಕಾದದ್ದು ಬಹಳ ಅವಶ್ಯಕತೆ ಇದೆ. ಇದರ ಬಗ್ಗೆ ಯೋಚನೆ ಮಾಡುತ್ತೀರಾ ? ಆಮೇಲೆ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಕ್ಯಾಪಿಟೇಶನ್ ಫೀ ಅನ್ನು ಹಂತಹಂತವಾಗಿ ರದ್ದುಮಾಡುತ್ತೇವೆ ಎಂದು ಹೇಳಿದಿರಿ. ಈ ರೀತಿಯಾಗಿ ಪ್ರಾರಂಭದಲ್ಲಿ ಘೋಷಣೆ ಮಾಡಿದರೂ ಕೂಡ ಇದುವರೆಗೂ ಈ ಶುಲ್ಕವನ್ನು ರದ್ದು ಮಾಡುವಂಥ ಪ್ರಯತ್ನ ನಡೆದಿಲ್ಲ. ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಇಂಜಿನಿಯರಿಂಗ್ ಕಾಲೇಜು ಗಳಲ್ಲಿ ನಾನು ನೋಡಿದ ಹಾಗೆ ಮತ್ತು ಅನೇಕ ಮಂದಿ ಸ್ನೇಹಿತರು ಹೇಳಿರುವ ಪ್ರಕಾರ ಇಂಜಿನಿಯ ರಿಂಗ್ ಕಾಲೇಜುಗಳಲ್ಲಿ ಯಾರು ಲೆಕ್ಚರರ್ಸ್, ಪ್ರೊಫೆಸರ್ಸ್ ಇರುತ್ತಾರೆ, ಅವರು ಪ್ರೈವೇಟ್ ಟ್ಯೂಶನ್ ಹೇಳಿಕೊಡುತ್ತಿದ್ದಾರೆ. ಕೊನೆಯ ಪಕ್ಷ ಈ ಇಂಜಿನಿಯರಿಂಗ್ ಕಾಲೇಜುಗಳಲ್ಲಾದರೂ ಇದನ್ನು ಕಡಿಮೆ ಮಾಡುವುದಕ್ಕೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ? ಆಮೇಲೆ ನನಗೆ ತಿಳಿದುಬಂದಿರುವ ಪ್ರಕಾರ ಯಾರು ಲೆಕ್ಚರರ್ಸ್, ಪ್ರೊಫೆಸರ್ಸ್ ಇದ್ದಾರೆ, ಇವರಿಗೆ ಪರೀಕ್ಷಾ ಸಮಯದಲ್ಲಿ ಪ್ರಶ್ನೆ ಪತ್ರಿಕೆ ಗಳನ್ನು ತಯಾರಿಸುವ ಜವಾಬ್ದಾರಿಯನ್ನು ಕೊಡುತ್ತಾರೆ. ಜಾತೀಯ ಹೆಸರಿನಿಂದ ಇವರು ಬೇರೆ ಯಾವ ಕೆಲಸಗಳನ್ನೂ ಮಾಡದೆ, ಪ್ರೈವೇಟ್ ಟ್ಯೂಶನ್‌ಗೆ ಬರುವಂತಹ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೊಟ್ಟು ಬಹಿರಂಗ ಪಡಿಸಿರುವ ಪ್ರಸಂಗಗಳೂ ಉಂಟು. ಇದು ತಮ್ಮ ಅನುಭವಕ್ಕೂ ಬಂದಿರಬಹುದು ಇದರ ಬಗ್ಗೆ ತಾವು ಸರಿಯಾದ ಗಮನ ಕೊಡಬೇಕು. ಅನೇಕ ಮಾತನಾಡಿದ ಮಿತ್ರರು ಹೇಳಿದ್ದಾರೆ, ಏನೆಂದರೆ ಮೆಡಿಕಲ್ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳನ್ನು ಜಾತಿಯ ಆಧಾರದಮೇಲೆ, ಮಠಗಳಿಗೆ, ರಾಜಕೀಯ ಮುಖಂಡರಿಗೆ ಕೊಟ್ಟು ಯಾರ್ಯಾರನ್ನೋ ತೃಪ್ತಿಪಡಿಸುವುದಕ್ಕೋಸ್ಕರ ಮಂಜೂರು ಮಾಡುವ ಪ್ರಯತ್ನವನ್ನು ಏಕೆ ಮಾಡುತ್ತಿದ್ದೀರಿ? ದಯವಿಟ್ಟು ಇದಕ್ಕೆ ಒಂದು ಕೊನೆಯನ್ನು ಕಾಣಿಸುವ ಪ್ರಯತ್ನ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ, ಕೇಂದ್ರ ಸರ್ಕಾರದ ಯೋಜನೆಯಂತೆ, ಗ್ರಾಮೀಣ ಭಾಗದ ಯುವಕರಿಗೆ ಅನುಕೂಲಕ್ಕೋದು ಶಾಲೆಗಳನ್ನು ತೆರೆಯುವ ವಿಷಯ. ಅಲ್ಲಿ ಕೇಂದ್ರಸರ್ಕಾರ ಮಂಜೂರು ಮಾಡುವಾಗ ಅವರ ನೀತಿ ನಿಯಮಗಳನ್ನು, ರಾಷ್ಟ್ರಕ್ಕೆ ಸಂಬಂಧಪಟ್ಟ ನಿಯಮಗಳಿಗೆ ಅನುಸಾರವಾಗಿ ಮಾಡುವಾಗ, ಕಡ್ಡಾಯವಾಗಿ ಕನ್ನಡ ಇರ ಬೇಕೆಂದು ಹೇಳಿದೆ. ಕೇಂದ್ರ ಸರ್ಕಾರ ಯಾವ ಉದ್ದೇಶದಿಂದ ಈ ಶಾಲೆಗಳನ್ನು ಪ್ರಾರಂಭ ಮಾಡು ತ್ತಿದ್ದಾರೆ, ಆ ಉದ್ದೇಶ ಸಫಲವಾಗುವ ರೀತಿಯಲ್ಲಿ ಕಾರ್ಯಕ್ರಮವನ್ನು ತಾವು ಕೈಗೊಂಡಿದ್ದೀರಾ ? ಕಳೆದ ಒಂದು ವರ್ಷದಲ್ಲಿ ಎಷ್ಟು ಶಾಲೆಗಳನ್ನು ಪ್ರಾರಂಭ ಮಾಡಿದ್ದೀರಿ ? ಇದರ ಬಗ್ಗೆ ನಿಮ್ಮ ವರದಿಯಲ್ಲಿ ಕಾಣುತ್ತಿಲ್ಲ. ವಯಸ್ಕರ ಶಿಕ್ಷಣದ ಬಗ್ಗೆ ನಾನು ಹೆಚ್ಚಿನ ಆಸಕ್ತಿ ವಹಿಸಿ, ಹಳ್ಳಿಗಳಲ್ಲಿ ಒಬ್ಬ ಶಾಸಕನಾಗಿ ನೋಡುವ ಪ್ರಯತ್ನ ಮಾಡುತ್ತಿದ್ದೇನೆ. ಆದರೆ ಇಲ್ಲಿಯೂ ಸಹ ಉಪಾಧ್ಯಾಯರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದು ಇದ್ದರೂ ಕೂಡ ಸರಿಯಾದ ರೀತಿಯಲ್ಲಿ ಈ ವಯಸ್ಕರ ಶಿಕ್ಷಣ ಶಾಲೆಗಳು ನಡೆಯುತ್ತಿಲ್ಲ. ಕೇವಲ ಪ್ರಚಾರಕ್ಕೋಸ್ಕರ ಇವುಗಳನ್ನು ಮುಂದುವರೆಸುವ ಅಗತ್ಯ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿರುವ ಯುವಕ ಯುವತಿಯರಿಗೆ ಯಾರು ಪಾಠ ಹೇಳಿಕೊಡುತ್ತಾರೆ ಅವರಿಗೆ ಸರಿಯಾದಂಥ ರೆಮ್ಯೂನರೇಶನ್ ಕೊಟ್ಟು ಅವರು ಇನ್ನಷ್ಟು ಆಸಕ್ತಿ ವಹಿಸಿ ಕೆಲಸ ಮಾಡುವ

ದಕ್ಕೆ ಆಸ್ಪದ ಕಲ್ಪಿಸಿಕೊಡಬೇಕು. ಹಾಗೆಯೇ ವಯಸ್ಕರ ಶಿಕ್ಷಣ ಪಡೆಯಲು ಬರುವಂಥ ಜನಕ್ಕೆ, ಯಾರು ತಪ್ಪದೆ ಬರುತ್ತಾರೆ, ಕಷ್ಟಪಟ್ಟು ಕಲಿಯುತ್ತಾರೆ, ಅವರಿಗೆ ಐ.ಆರ್.ಡಿ.ಪಿ. ಯೋಜನೆಯಡಿಯಲ್ಲಿ ಅನುಕೂಲತೆಗಳನ್ನು ಕಲ್ಪಿಸಿಕೊಡಬಹುದು. ಅಟೆಂಡೆನ್ಸ್ ರಿಜಿಸ್ಟರ್‌ನ್ನು ವೆರಿಫೈಮಾಡಿ ಮಾನ್ಯತೆ ಕೊಡುತ್ತೇವೆ ಅಥವಾ ಇಲ್ಲವೆಂದು ನಿರ್ದಿಷ್ಟವಾಗಿ ಹೇಳಿ ಉಪಾಧ್ಯಾಯರಿಗೆ ಮತ್ತು ಈ ಶಿಕ್ಷಣ ಪಡೆಯಲು ಬರುವಂತಹ ವ್ಯಕ್ತಿಗಳಿಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸಿಕೊಡುವ ಪ್ರಯತ್ನ ಮಾಡಿದರೆ ಇದರಿಂದ ಅನುಕೂಲವಾಗುತ್ತದೆ. ಒಂದುಕಡೆ ಹೆಬ್ಬೆಟ್ಟು ಒತ್ತುವ ಜನ ಬಹಳ ಸಂಖ್ಯೆಯಲ್ಲಿ ಇದ್ದಾರೆ, ಈ ಹೆಬ್ಬೆಟ್ಟು ಒತ್ತುವವರ ಸಂಖ್ಯೆ ಹೋಗಬೇಕು, ಶಿಕ್ಷಣದ ಅಗತ್ಯವಿದೆ ಎಂದು ಮತ್ತೊಂದು ಕಡೆ ಹೇಳುತ್ತೀರಿ. ಯಾವುದೇ ಸರ್ಕಾರ ಬಂದರೂ, ಈ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ೬—೭ ವರ್ಷವಾದ ಮಗುವನ್ನು ಗದ್ದೆ ಹೊಲಗಳಿಗೆ ಕರೆದುಕೊಂಡು ಹೋಗಕೂಡದು, ಈ ಮಗುವಿಗೆ ಶಿಕ್ಷಣ ಕೊಡಲು ನಾವು ಎಲ್ಲಾ ವ್ಯವಸ್ಥೆ ಮಾಡುತ್ತೇವೆ, ಯಾವುದೇ ಕಾರಣದಿಂದ ಮನೆಗೆ ಮಗುವನ್ನು ಕರೆದುಕೊಂಡು ಹೋಗುವ ಅಗತ್ಯವಿಲ್ಲವೆಂದು ಕಡ್ಡಾಯ ಮಾಡದೇ ಹೋದರೆ, ನೂರಾರು ವರ್ಷಗಳು ಕಳೆದರೂ ಸಹ ಈ ಹೆಬ್ಬೆಟ್ಟು ಒತ್ತುವವರ ಸಂಖ್ಯೆ ಕಡಿಮೆಯಾಗುವುದಿಲ್ಲ. ಮಕ್ಕಳು ಎಮ್ಮೆ ಮೇಯಿಸಿಕೊಂಡು ಹಳ್ಳಿಯಲ್ಲೇ ಇರುವ ಸ್ಥಿತಿ ಬರುತ್ತದೆ. ಆದುದರಿಂದ ಇದರ ಬಗ್ಗೆ ವಿಶೇಷವಾದ ಕಾಳಜಿ ವಹಿಸಬೇಕು. ನನಗೆ ಮೊದಲ ೨-೩ ವರ್ಷಗಳಲ್ಲಿ ಇದ್ದ ಕಳಕಳಿ, ಆಸಕ್ತಿ ಈಗ ಇಲ್ಲ. ಕಾರಣ ಏನೆಂದರೆ, ನಾವು ಈ ಜಾಗದಲ್ಲಿ ಕುಳಿತುಕೊಂಡು, ಪ್ರಾಮಾಣಿಕವಾಗಿ, ಲಕ್ಷಾಂತರ ಜನರ ಪರವಾಗಿ ಇಲ್ಲಿಗೆ ಬಂದರೂ ಕೂಡ ಕೇವಲ ಸಣ್ಣಪುಟ್ಟ ಕೆಲಸ ಆಗಬೇಕೆಂದು ಆಗ್ರಹ ಮಾಡಿದರೂ ನಿಮ್ಮ ಅಧಿಕಾರಿಗಳಿಂದ ನಿಮ್ಮಿಂದ ಒಂದೆರಡು ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಸುವುದಕ್ಕೆ ಆಗಲಿಲ್ಲ ಎಂದರೆ ಅದನ್ನು ಇಲ್ಲಿ ಚರ್ಚೆ ಮಾಡಿ ಏನು ಪ್ರಯೋಜನ. ಹಣಕಾಸಿನ ಕೊರತೆ ಇದೆ, ಇರಬಹುದು. ಆದರೆ ನಿಮಗೆ ಖುಷಿ ಬಂದಾಗ ಮಾಡುತ್ತೀರೇ ಹೊರತು, ಕ್ಷೇತ್ರದ ಶಾಸಕರು ಹೇಳಿದಾಗ ಮಾಡುವುದಿಲ್ಲ. ಒಂದು ಉದಾಹರಣೆ ಕೊಡುತ್ತೇನೆ. ಶಿಕಾರಿಪುರದಲ್ಲಿ ಒಂದು ಜೂನಿಯರ್ ಕಾಲೇಜ್ ಇದೆ. ಮಾನ್ಯ ರಘುಪತಿಯವರು ಸಚಿವರಾಗಿದ್ದಾಗ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದೆ. ಶಾಸಕನಾಗಿ ಇವತ್ತಿನವರೆಗೂ ನೂರಾರು ಬಾರಿ ಇಲ್ಲಿ ಪ್ರಶ್ನೆ ಕೇಳಿದ್ದೇನೆ. ಜೂನಿಯರ್ ಕಾಲೇಜಿಗೆ ಇವತ್ತಿನವರೆಗೂ ೫ ರೂಮುಗಳನ್ನು ಕಟ್ಟಿಸಿಕೊಟ್ಟಿಲ್ಲ. ಸಣ್ಣಪುಟ್ಟ ಮಕ್ಕಳೂ ಶಾಲೆಗೆ ಹೋಗುತ್ತಾರೆ, ಇದಕ್ಕಾಗಿ ಹೋದ ವರ್ಷವೇ ಮಂಜೂರಾತಿ ಸಿಕ್ಕಿದೆ. ಈ ಮಂಜೂರಾತಿ ಕೆಲಸಕ್ಕೆ ಸಾಕಷ್ಟು ಶ್ರಮ ತೆಗೆದು ಕೊಂಡಿದ್ದೂ ಆಯಿತು. ಇಷ್ಟಾದರೂ ಕೂಡ ಸಂಬಂಧಪಟ್ಟ ಇಂಜಿನಿಯರು ಬಂದು, ಕಟ್ಟಡಗಳ ಕೆಲಸ ಮಾಡುತ್ತಾ ಇಲ್ಲ. ಹಣ ಮಂಜೂರ್ ಮಾಡಿದರೆ ನಿಮ್ಮ ಕೆಲಸ ಮುಗಿಯಿತೇ ? ಕಟ್ಟಡ ಆಯಿತೋ ಇಲ್ಲವೋ ಎಂಬುದನ್ನು ಫಾಲೋಅಪ್ ಮಾಡುವಂಥ ವ್ಯವಸ್ಥೆ ನಿಮ್ಮ ಇಲಾಖೆಯಲ್ಲಿ ಇದೆಯೇ ? ಇನ್ನು ಫಸ್ಟ್ ಗ್ರೇಡ್ ಕಾಲೇಜ್‌ಗಾಗಿ, ನನ್ನ ೪ ವರ್ಷಗಳ ಸಾಧನೆ ಎಂದು ಒಂದೂವರೆ ಲಕ್ಷ ರೂಪಾಯಿಗಳನ್ನು ಒಂದೇ ವಾರದಲ್ಲಿ ಜನಗಳಿಂದ ಭಿಕ್ಷೆ ಬೇಡಿ ತಂದು, ಒಂದೊಂದು ಎಕರೆ ೧೫—೨೦ ಸಾವಿರ ಬೆಲೆ ಬಾಳುವ ಭೂಮಿಯನ್ನು ೧೮—೨೦ ಎಕರೆ ಜಮೀನನ್ನು ಒಂದೂವರೆ ಲಕ್ಷ ರೂಪಾಯಿಗಳನ್ನೂ ಸರ್ಕಾರಕ್ಕೆ ಕಟ್ಟಿದೆ. ಮೂರು ವರ್ಷ ಕಳೆಯಿತು. ಫೌಂಡೇಷನ್ ಮೇಲಕ್ಕೆ ಬರಲೇ ಇಲ್ಲ. ಎಷ್ಟೊಂದು ಕಳಕಳಿ ನಿಮಗೆ ಇದೆ, ಜನಗಳಿಂದ ಭಿಕ್ಷೆ ಬೇಡಿ ಹಣ ಕಟ್ಟಿ, ಪ್ರಾಮಾಣಿಕವಾಗಿ ಶಿಕ್ಷಣಕ್ಷೇತ್ರದಲ್ಲಿ ಕೆಲಸ ಮಾಡಬೇಕೆಂಬ ಮನಸ್ಸಿದ್ದರೂ ಸಹ ಒಂದು ತಾಲ್ಲೂಕಿನಲ್ಲಿ ನಾಲ್ಕಾರು ಪ್ರಾಥಮಿಕ ಶಾಲೆಗಳನ್ನು ಕಟ್ಟಿಸುವುದಕ್ಕಾಗಲಿಲ್ಲ, ಜೂನಿಯರ್ ಕಾಲೇಜುಗಳನ್ನು ಕಟ್ಟಿಸುವುದಕ್ಕಾಗಲಿಲ್ಲ. ನೀವೇನೋ ಹಣ ಮಂಜೂರ್ ಮಾಡಿದಿರಿ, ಆದರೆ ಕಟ್ಟಡದ ಕೆಲಸ ಪೂರ್ಣಗೊಳ್ಳಲು ಯಾವರೀತಿ ಕೆಲಸ ಮಾಡಬೇಕು ಎಂಬ ಬಗ್ಗೆ ಎಷ್ಟರಮಟ್ಟಿಗೆ ಆಗ್ರಹ ಇದೆಯೋ ಗೊತ್ತಿಲ್ಲ. ಶಿಕಾರಿಪುರದಲ್ಲಿ ಈ ವಿಚಾರದಲ್ಲಿ ಸಾಕಷ್ಟು ನಡೆಯಿತು. ಕೊನೆಯದಾಗಿ ಒಂದೇ ಒಂದು ಮಾತು, ಶಿಕಾರಿಪುರದ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಚಂದ್ರಪ್ಪ ಎಂಬ ಫಿಜಿಕಲ್ ಎಜುಕೇಷನ್ ಇನ್‌ಸ್ಟ್ರಕ್ಟರ್ ಇದ್ದಾರೆ. ಈ ಮನುಷ್ಯ ಅದೇ ನಗರದವನು. ಟೆಂಪೊರರಿ ಯಾಗಿ ಕೆಲಸಕ್ಕೆ ಸೇರಿದ್ದಾರೆ. ಈತ ಬೇರೆ ಬೇರೆ ಜನಗಳ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ದೊಡ್ಡ ದೊಡ್ಡ ಘಟನೆಗಳಿಂದ, ಇಬ್ಬರ ಮೂವರ ಕೊಲೆಯೂ ಆಯಿತು. ಜೊತೆಗೆ ಈತ ರಾಜಕೀಯ ಮಾಡುತ್ತಿದ್ದಾನೆ. ನಾನು ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ಬರುವುದು ಬೇಡ ಎಂದು ಹತ್ತಾರು ಬಾರಿ ವಿನಂತಿ ಮಾಡಿಕೊಂಡಿದ್ದೇನೆ. ವಿದ್ಯಾರ್ಥಿಗಳೂ ಹೆದರಿಕೊಂಡು ಸರ್ಕಾರಕ್ಕೆ, ಮುಖ್ಯ ಮಂತ್ರಿಗಳಿಗೆ ಮನವಿ ಕಳುಹಿಸಿಕೊಟ್ಟಿದ್ದಾರೆ. ಈ ರೀತಿ ಕೆಲವು ಸಮಸ್ಯೆಗಳು ಇವೆ...

ಅಧ್ಯಕ್ಷರು.—ಟೈಮ್ ಆಯಿತು, ಎಲ್ಲರಿಗೂ ಅವಕಾಶ ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನೀವು ನಾನು ಹೇಳುವುದು ಬೇಡ ಎಂದರೆ ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.—ಆಯಿತು, ಕುಳಿತುಕೊಳ್ಳಿ, ಅಡ್ಡಿ ಇಲ್ಲ. ಮುಂದೆ ಶ್ರೀ ಧರ್ಮಪ್ಪ, ಆಬ್ಸೆಂಟ್. ಚಂದ್ರಕಾಂತ್ ಬೆಲ್ಲದ್ ತಾವು ಮಾತನಾಡಿ. ೧೦ ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ (ಧಾರವಾಡ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಶಿಕ್ಷಣ ಮಂತ್ರಿಗಳು ಮಂಡಿಸಿರುವ ಶಿಕ್ಷಣ ಇಲಾಖೆಯ ಬೇಡಿಕೆಯನ್ನು ನಾನು ಸ್ವಾಗತಿಸುತ್ತೇನೆ. ಜನತಾ ಸರ್ಕಾರ ಕಳೆದ ೪ ವರ್ಷಗಳಿಂದ ಶಿಕ್ಷಣ ಇಲಾಖೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಶಿಕ್ಷಣ ಇಲಾಖೆಗೆ ಎಲ್ಲಾ ಇಲಾಖೆಗಳಿಗಿಂತ ಹೆಚ್ಚಿನ ಆದ್ಯತೆ ಕೊಡಬೇಕಾದ್ದು ಅತಿ ಅವಶ್ಯ. ಇಡೀ ಮಾನವನ ಸರ್ವತೋಮುಖವಾದ ಬೆಳವಣಿಗೆಗೆ ಶಿಕ್ಷಣ ಬಹಳ ಮಹತ್ವದ್ದು. ಅದರಲ್ಲೂ ರಾಷ್ಟ್ರದ ಸಂಪನ್ಮೂಲಗಳಲ್ಲಿ ಮೊಟ್ಟ ಮೊದಲನೆಯ ಈ ಮಾನವನ ಸಂಪನ್ಮೂಲವನ್ನು ಸರಿಯಾದ ದಿಸೆಯಲ್ಲಿ ಬಳಸಿಕೊಳ್ಳಬೇಕಾದರೆ ಶಿಕ್ಷಣ ತರಬೇತಿ ಬಹಳ ಮುಖ್ಯವಾದುದು.

ಇವತ್ತಿನ ದಿವಸ ಇರುವ ಅನೇಕ ಸಂಪನ್ಮೂಲಗಳನ್ನು ನಾವು ಸರಿಯಾಗಿ ಬಳಸಿಕೊಳ್ಳಬೇಕಾದರೆ ಈ ಶಿಕ್ಷಣ ಅತ್ಯಾವಶ್ಯಕವಾದುದು. ಈಗಿನ ನಮ್ಮ ಕೇಂದ್ರ ಸರಕಾರದ ಹಾಗೂ ರಾಜ್ಯ ಸರಕಾರದ ನೀತಿಯಂತೆ, ಕನಿಷ್ಟ ಪಕ್ಷ ೬ ರಿಂದ ೧೪ ವರ್ಷದವರೆಗಿನ ಎಲ್ಲಾ ಶಿಕ್ಷಣವನ್ನೂ ಮಕ್ಕಳಿಗೆ ಉಚಿತವಾಗಿ ಕೊಡಬೇಕಾದುದು ಸೂಕ್ತ. ಅದರಲ್ಲಿ ಜನತಾ ಸರಕಾರ ೧೦ನೇ ವರ್ಷದವರೆಗಿನ ಶಿಕ್ಷಣವನ್ನು ಉಚಿತವಾಗಿ ಕೊಡುವ ಪ್ರಯತ್ನ ಮಾಡುತ್ತಿದೆ, ಅದನ್ನು ನಾವು ಸ್ವಾಗತಿಸಬೇಕಾಗಿದೆ. ಇವತ್ತಿನ ಶಿಕ್ಷಣದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ನಾವು ಹೆಚ್ಚು ಒತ್ತು ಕೊಡಬೇಕಾಗಿದೆ. ಪ್ರಾಥಮಿಕ ಶಿಕ್ಷಣ ಮನುಷ್ಯನ ಬೆಳವಣಿಗೆಗೆ ಒಂದು ಬುನಾದಿಯಾಗಿದೆ. ಆದರೆ ನಮ್ಮ ಇವತ್ತಿನ ಪ್ರಾಥಮಿಕ ಶಿಕ್ಷಣ ಬಹಳ ದುರಾದೃಷ್ಟಕರವಾಗಿದೆ. ಮುಖ್ಯವಾಗಿ ಶಾಲೆಗೆ ಮಕ್ಕಳು ಬರಬೇಕು. ಬಡಮಕ್ಕಳ ಸಹಿತ ಎಲ್ಲಾ ಮಕ್ಕಳೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆಯಬೇಕೆಂಬ ದೃಷ್ಟಿಯಲ್ಲಿ ಸರಕಾರ ಉಚಿತವಾಗಿ ಪಠ್ಯಪುಸ್ತಕಗಳನ್ನು ನೀಡುತ್ತಿರುವುದು ಬಹಳ ಸ್ವಾಗತಾರ್ಹವಾದ ಕಾರ್ಯ. ಬಡಮಕ್ಕಳಿಗೆ ಹಿಂದುಳಿದ ವರ್ಗದ ಮಕ್ಕಳಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ಹಂಚುವುದರ ಜೊತೆಗೆ ಉಚಿತವಾಗಿ ಬಟ್ಟೆಗಳನ್ನು ಅಂದರೆ ಸಮವಸ್ತ್ರಗಳನ್ನು ಹಂಚುತ್ತಿದ್ದಾರೆ, ಇದೂ ಸಹ ಮೆಚ್ಚಿಕೊಳ್ಳತಕ್ಕ ಸಂಗತಿಯಾಗಿದೆ. ಇದರಿಂದ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಹಾಜರಿ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ಮೊಟ್ಟಮೊದಲನೆಯದಾಗಿ ಈಗಿನ ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳಿಗೆ ಕೂಡಲಿಕ್ಕೆ ಸ್ಥಳ ಇಲ್ಲ, ಸರಿಯಾದಂಥ ಶಾಲಾ ಕಟ್ಟಡಗಳು ಇಲ್ಲ ಎನ್ನುವ ಕೂಗು ಎಲ್ಲಾ ಕಡೆಗೆ ಕೇಳಿಬರುತ್ತಿದೆ. ಅದರಲ್ಲೂ ಮುಖ್ಯವಾಗಿ ಧಾರವಾಡದಂತಹ ಸುಶಿಕ್ಷಿತ ಶೈಕ್ಷಣಿಕ ಕೇಂದ್ರದಲ್ಲಿ ಶಾಲಾ ಕಟ್ಟಡಗಳ ಕೊರತೆ ಬಹಳ ದಿವಸದಿಂದ ಇದೆ, ಒಂದೇ ಒಂದು ಕೊಠಡಿಯಲ್ಲಿ ನಾಲ್ಕು ನಾಲ್ಕು ವರ್ಗಗಳನ್ನು ನಡೆಸುತ್ತಿರುವುದನ್ನು ಧಾರವಾಡದಂತಹ ಸುಶಿಕ್ಷಿತ ಕೇಂದ್ರದಲ್ಲಿ ನಾವು ಕಾಣುತ್ತಿದ್ದೇವೆ. ಶಾಲಾ ಕಟ್ಟಡಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾನು ಹಿಂದಿನ ಶಿಕ್ಷಣ ಮಂತ್ರಿಗಳಿಗೆ ಕೇಳಿಕೊಂಡಿದ್ದೆ. ಇದು ಬರಗಾಲದ ದೃಷ್ಟಿಯಿಂದ ಹಾಗೂ ಇನ್ನೂ ಅನೇಕ ಕಾರಣಗಳಿಂದ ಆಗಲಿಲ್ಲ. ಇವತ್ತಿನ ಮಾನ್ಯ ಶಿಕ್ಷಣ ಮಂತ್ರಿಗಳು ಶಾಲಾ ಕಟ್ಟಡಗಳಿಗೆ ಹೆಚ್ಚಿನ ಅವಕಾಶ ನೀಡಿದ್ದಾರೆ, ಹಾಗೂ ನೀಡುತ್ತಿದ್ದಾರೆ. ಇದರ ಬಗ್ಗೆ ಆಶ್ವಾಸನೆಯನ್ನು ಸಹಿತ ಮಾನ್ಯ ಮಂತ್ರಿಗಳಾದ ಮಂಜುನಾಥ್‌ರವರು ಕೊಟ್ಟಿದ್ದಾರೆ. ಇದನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಧಾರವಾಡದಲ್ಲಿ ಅನೇಕ ಕಡೆಗಳಿಗೆ ಪ್ರಾಥಮಿಕ ಶಾಲಾ ಕಟ್ಟಡಗಳು ಬೇಕಾಗಿದೆ. ಅದನ್ನು ಪೂರೈಸಬೇಕೆಂದು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಶಿಕ್ಷಣ ಗುಣಮಟ್ಟವೂ ಸಹ ಮುಖ್ಯವಾದುದು. ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಬಹಳ ಸುಧಾರಿಸಬೇಕಾಗಿದೆ, ಶಿಕ್ಷಕರಿಗೆ ನೀಡುತ್ತಿರುವ ತರಬೇತಿ ಏನಿದೆ ಅದಕ್ಕೆ ಎಲ್ಲದಕ್ಕಿಂತ ಹೆಚ್ಚಿನ ಆದ್ಯತೆ ಕೊಡಬೇಕು. ಪಠ್ಯಪುಸ್ತಕಕ್ಕೆ ಬಹಳ ಮಹತ್ವ ಕೊಟ್ಟು ಮಕ್ಕಳಿಗೆ ಪಠ್ಯಕ್ರಮದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಬೇಕಾಗಿದೆ. ಏತಕ್ಕೆಂದರೆ ಮೂಲಭೂತವಾಗಿ ಶಿಕ್ಷಣದಲ್ಲಿ ದೋಷ ಇರುವುದನ್ನು ಎಲ್ಲರೂ ಹೇಳುತ್ತಿದ್ದಾರೆ. ಈ ಮೂಲಭೂತ ಶಿಕ್ಷಣದಲ್ಲಿ ಇರುವಂತಹ ದೋಷವನ್ನು ತಿದ್ದಬೇಕಾದರೆ ಪ್ರಾಥಮಿಕ ಹಂತದ ಪಠ್ಯಕ್ರಮದಲ್ಲಿ ಬದಲಾವಣೆಯನ್ನು ಕಾಣಬೇಕಾಗಿದೆ. ಅದರ ಜೊತೆಗೆ ಎಲ್ಲಾ ಗ್ರಾಹಕರಿಗೆ ಗ್ರಾಮೀಣ ಪ್ರದೇಶದಲ್ಲಿ ವಸತಿಗೃಹಗಳು ಇಲ್ಲ. ಹಳ್ಳಿಗಳಿಗೆ ಹೋಗಬೇಕೆಂದು ಅವರಿಗೆ ಒತ್ತಾಯ ಮಾಡಿದರೂ ಸಹ ಅವರು ಹೋಗಲಿಕ್ಕೆ ತಯಾರಾಗಿಲ್ಲ. ಇದಕ್ಕೆ ಕಾರಣ

ವಸತಿಯು ಒಂದು ಅನುಕೂಲತೆ ಅವರಿಗೆ ಇಲ್ಲ ಎನ್ನುವುದು. ಈ ಕೂಗು ಸಹ ಇವತ್ತೂ ಕೇಳಿ ಬರುತ್ತಿದೆ.

೨-೩೦ ಪಿ. ಎಂ.

ಮೊಟ್ಟಮೊದಲನೆಯದಾಗಿ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರು ಆಯಾಯ ಜಾಗಗಳಲ್ಲಿಯೇ ವಾಸ ಮಾಡಬೇಕು. ಆ ಗ್ರಾಮದಲ್ಲಿ ಉಪಾಧ್ಯಾಯರು ವಾಸ ಮಾಡುವುದಕ್ಕೆ ಅವರಿಗೆ ಅವಶ್ಯಕತೆ ಇರುವಂತಹ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯ. ಆದ್ದರಿಂದ ಸರ್ಕಾರದವರು ಎಲ್ಲಾ ಉಪಾಧ್ಯಾಯರಿಗೂ ವಸತಿ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಗಮನ ಕೊಡಬೇಕು. ಪ್ರಾಥಮಿಕ ಶಾಲೆಗಳಾದ ನಂತರ ಬರುವುದು ಪ್ರೌಢಶಾಲೆಗಳು. ಈ ಬಗ್ಗೆ ಕೂಡ ಸರ್ಕಾರದವರು ಹೆಚ್ಚು ಗಮನ ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ಪ್ರೌಢಶಾಲೆ ಶಿಕ್ಷಣದ ಮಟ್ಟದಲ್ಲಿ ವೃತ್ತಿಪರ ಶಿಕ್ಷಣವನ್ನು ಕೂಡ ಅಳವಡಿಸಿದರೆ ಅದರಿಂದ ವಿದ್ಯಾರ್ಥಿಗಳ ಮುಂದಿನ ಜನಜೀವನಕ್ಕೆ ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಸರ್ಕಾರ ಈಗಾಗಲೇ ನಾನಾ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ಸ್ವಾಗತಾರ್ಹವಾದುದು. ವೃತ್ತಿ ಶಿಕ್ಷಣವನ್ನು ಈ ಪ್ರೌಢಶಾಲೆಗಳಲ್ಲಿ ಅಳವಡಿಸಿಕೊಂಡು ತರಬೇತಿಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ನಾನಾ ರೀತಿಯ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಿಕೊಡುತ್ತಿದ್ದಾರೆ. ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಬೇಕಾದರೆ ಒದಗಿಸಿ ಕೊಡಲಿ. ಆದರೆ ಸರ್ಕಾರಿ ನೌಕರರು ಸಹ ಚೆನ್ನಾಗಿ ಕೆಲಸ ಮಾಡುವುದು ಅವಶ್ಯಕವಿದೆ. ಶಿಕ್ಷಣ ಕ್ಷೇತ್ರದಲ್ಲಿ ಉಪಾಧ್ಯಾಯರು ಹೆಚ್ಚಿನ ಶ್ರದ್ಧೆಯನ್ನು ವಹಿಸಿ ಕೆಲಸ ಮಾಡಬೇಕು. ಸಣ್ಣ ವಯಸ್ಸಿನ ಮಕ್ಕಳ ಮನಸ್ಸಿನ ಮೇಲೆ ಒಳ್ಳೆಯ ಪ್ರಭಾವವನ್ನು ಬೀರುವಂತಹ ರೀತಿಯಲ್ಲಿ ಶಿಕ್ಷಕರು ಕೆಲಸ ಮಾಡಬೇಕಾಗುತ್ತದೆ. ಇಂದಿನ ಮಕ್ಕಳೇ ಮುಂದಿನ ಸತ್ಪ್ರಜೆಗಳು. ಅವರು ನಾಡಿನ ನಾನಾ ಭಾಗಗಳಲ್ಲಿ ಬೇರೆಬೇರೆ ರೀತಿಯಲ್ಲಿ ಸೇವೆಯನ್ನು ಸಲ್ಲಿಸುವ ಸತ್ಪ್ರಜೆಗಳು ಅವರನ್ನು ಒಳ್ಳೆಯ ರೀತಿಯಲ್ಲಿ ತರಬೇತಿ ಕೊಟ್ಟು ಕಳುಹಿಸಿಕೊಡುವುದು ಉಪಾಧ್ಯಾಯರ ಕರ್ತವ್ಯ. ಇದರ ಜೊತೆಗೆ ಎಲ್ಲಾ ಪ್ರೌಢ ಶಾಲೆಗಳಲ್ಲಿ ಗ್ರಂಥಾಲಯಗಳನ್ನು ಕೊಡುವುದು ಅವಶ್ಯಕತೆ ಇದೆ. ಈಗ ಅನೇಕ ಕಡೆಗಳಲ್ಲಿ ಗ್ರಂಥಾಲಯಗಳು ಇಲ್ಲ. ಎಲ್ಲಾ ಪ್ರೌಢ ಶಾಲಾ ಮಕ್ಕಳಿಗೆ ತಿಳಿವಳಿಕೆ ಬೇಕಾದರೆ ಈ ಗ್ರಂಥಾಲಯಗಳು ಅತ್ಯಾವಶ್ಯಕವಾಗಿ ಬೇಕಾಗಿವೆ. ಇದರ ಜೊತೆಗೆ ಪ್ರಯೋಗಾಲಯಗಳು ಸಹ ಬೇಕು. ಈಗ ಅನೇಕ ಪ್ರೌಢಶಾಲೆಗಳಲ್ಲಿ ಪ್ರಯೋಗಾಲಯಗಳು ಇಲ್ಲ. ಈ ಬಗ್ಗೆ ಸರ್ಕಾರ ಆದ್ಯತೆ ಕೊಡಬೇಕು. ಪ್ರೌಢಶಾಲೆಗಳಿಂದ ಹೋದ ಮಕ್ಕಳು ಈ ನಾಡಿನಲ್ಲಿ ಮುಂದಿನ ವಿಜ್ಞಾನಿಗಳಾಗುವವರು. ಒಳ್ಳೆಯ ತಾಂತ್ರಿಕ ಸಲಹೆಗಾರರಾಗುವವರು. ಆದ್ದರಿಂದ ಈ ಬಗ್ಗೆ ಸರ್ಕಾರ ಹೆಚ್ಚು ಗಮನ ಕೊಡುವುದು ಅವಶ್ಯಕ. ಇವೊತ್ತಿನ ದಿವಸ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಪಠ್ಯ ಕ್ರಮದಲ್ಲಿ ಸ್ವಲ್ಪ ವ್ಯತ್ಯಾಸಗಳು ಇವೆ. ಅದನ್ನು ಸಹ ಸರ್ಕಾರದವರು ಸರಿಪಡಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಜೂನಿಯರ್ ಕಾಲೇಜುಗಳ ಬಗ್ಗೆ ಮತ್ತು ವೃತ್ತಿಪರ ಶಿಕ್ಷಣದ ಬಗ್ಗೆ ನಾನು ಹೇಳುವುದಾದರೆ ವಿಶ್ವವಿದ್ಯಾನಿಲಯದ ಡಿಗ್ರಿ ಪದವಿಗಿಂತ ಈ ವೃತ್ತಿಪರ ಶಿಕ್ಷಣಕ್ಕೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕಾಗುತ್ತದೆ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಈ ವೃತ್ತಿಪರ ಶಿಕ್ಷಣದಿಂದ ತೇರ್ಗಡೆಯಾಗಿ ಹೊರಗಡೆ ಹೋದರೆ, ಒಳ್ಳೆಯ ತರಬೇತಿಯನ್ನು ಪಡೆದಿದ್ದರೆ ಅಂತಹವರಿಗೆ ಎಲ್ಲಿಯಾದರೂ ನೌಕರಿ ಸಿಗುತ್ತದೆ. ಆದರೆ ಡಿಗ್ರಿಯನ್ನು ಪಡೆದು ಹೋದಂತಹ ವಿದ್ಯಾರ್ಥಿಗಳಿಗೆ ನೌಕರಿ ಸಿಗುವುದು ಬಲು ಕಷ್ಟದ ಕೆಲಸ. ಇವತ್ತು ಸಾವಿರಾರು ಜನ ವಿದ್ಯಾರ್ಥಿಗಳು ಡಿಗ್ರಿಯನ್ನು ಪಡೆದು ನಿರುದ್ಯೋಗಿಗಳಾಗಿದ್ದಾರೆ. ಈ ಸಮಸ್ಯೆಯನ್ನು ನಿವಾರಣೆ ಮಾಡಲು ಇದುವರೆಗೂ ಸರ್ಕಾರದಿಂದ ಕೂಡ ಸಾಧ್ಯವಾಗಿಲ್ಲ. ಆದ್ದರಿಂದ ಸರ್ಕಾರದವರು ವೃತ್ತಿಪರ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಡಾಕ್ಟರ್ ಸರೋಜಿನಿ ಮಹಿಷಿಯವರು ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅವರ ವರದಿಯ ಪ್ರಕಾರ ಸರ್ಕಾರಿ ಕಛೇರಿಗಳಲ್ಲಿ ಆಗಲಿ ಅಥವಾ ಕೇಂದ್ರ ಸರ್ಕಾರದ ಕಛೇರಿಗಳಲ್ಲಿ ಆಗಲಿ ಕೇಂದ್ರ ಸರ್ಕಾರದ ಉದ್ದಿಮೆಗಳಲ್ಲಿ ಆಗಲಿ ಅಥವಾ ರಾಜ್ಯ ಸರ್ಕಾರದ ಉದ್ದಿಮೆಗಳಲ್ಲಿ ಆಗಲಿ ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಬೇಕು. ನಮ್ಮ ದೇಶದಲ್ಲಿ ಈಗಾಗಲೇ ಟಿ.ವಿ. ಗಳು ಬಂದಿವೆ. ರೇಡಿಯೋಗಳು ಬಂದಿವೆ. ಈ ಬಗ್ಗೆ ವೃತ್ತಿಪರ ಶಿಕ್ಷಣ ಕೊಟ್ಟರೆ ವಿದ್ಯಾರ್ಥಿ

ಗಳಿಗೆ ಅನುಕೂಲವಾಗುತ್ತದೆ. ಅದೇ ರೀತಿಯಲ್ಲಿ ಕಾರ್ಪೆಂಟರಿ, ರೇಷ್ಮೆ ತಯಾರು ಮಾಡುವ ತರಬೇತಿ, ಪಶುಸಾಕಾಣಿಕೆ ತರಬೇತಿ ಕೋಳಿ ಸಾಕಾಣಿಕೆ ತರಬೇತಿ, ಇನ್ನೂ ಹಲವಾರು ರೀತಿಯ ತರಬೇತಿಗಳನ್ನು ವೃತ್ತಿಪರಶಿಕ್ಷಣದಲ್ಲಿ ಕೊಟ್ಟರೆ ಅನುಕೂಲವಾಗುತ್ತದೆ. ಈ ಬಗ್ಗೆ ಸರ್ಕಾರ ಹೆಚ್ಚು ಗಮನ ಕೊಡಬೇಕೆಂದು ನಾನು ವಿನಂತಿ ಮಾಡಿ ಕೊಳ್ಳುತ್ತೇನೆ. ಜನರ ಕೈಗೆ ಕೆಲಸವನ್ನು ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡ ಬೇಕಾಗುತ್ತದೆ. ಪ್ರೊಡಕ್ಟೀವ್ ಇನ್‌ವೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ. ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣ ಶಾಲೆಗಳು, ಇಂಜಿನೀಯರಿಂಗ್ ಕಾಲೇಜುಗಳು ಮತ್ತು ಮೆಡಿಕಲ್ ಕಾಲೇಜುಗಳು ಜಾಸ್ತಿಯಾಗುತ್ತಿವೆ. ಈ ಶಿಕ್ಷಣಕ್ಕೆ ಸಾಮಾನ್ಯ ಜನ, ಸಾಮಾನ್ಯ ಬಡವ, ಹಣವನ್ನು ಎಲ್ಲಿಂದ ತಂದು ಕೊಟ್ಟು ಮುಂದೆ ಬರುವುದಕ್ಕೆ ಸಾಧ್ಯವಿದೆ ? ಇದರಿಂದ ನಮ್ಮ ನಾಡಿಗೆ ಪ್ರಯೋಜನ ವಾಗುತ್ತದೆಯೇ ಅಥವಾ ನಮ್ಮ ರಾಷ್ಟ್ರಕ್ಕೆ ಪ್ರಯೋಜನವಾಗುತ್ತದೆಯೇ ಎನ್ನುವುದನ್ನು ನಾವು ವಿಚಾರ ಮಾಡಬೇಕು. ಮೆಡಿಕಲ್ ಮತ್ತು ಇಂಜಿನೀಯರಿಂಗ್ ಓದತಕ್ಕ ವಿದ್ಯಾರ್ಥಿಗಳಿಗೆ ಲಕ್ಷಾವಧಿ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡುತ್ತಿದೆ. ಇವರುಗಳು ವಿದ್ಯೆಯನ್ನು ಕಲಿತು ಕರ್ನಾಟಕದಲ್ಲಿ ಸೇವೆ ಮಾಡದೇ, ರಾಷ್ಟ್ರದಲ್ಲಿ ಸೇವೆ ಮಾಡದೇ ಪರ ರಾಷ್ಟ್ರಗಳಿಗೆ ಹೋಗಿ ಸೇವೆ ಮಾಡುವುದನ್ನು ನಾವು ಕಾಣುತ್ತಿದ್ದೇವೆ. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ವಾಸ ಮಾಡತಕ್ಕ ರೈತನ ಮಕ್ಕಳಿಗೆ, ಕೃಷಿ ಕಾರ್ಮಿಕರ ಮಕ್ಕಳಿಗೆ ತಾಂತ್ರಿಕ ವಿದ್ಯಾಭ್ಯಾಸ ಹಾಗೂ ವೈದ್ಯಕೀಯ ವಿದ್ಯಾಭ್ಯಾಸ ಮಾಡುವುದಕ್ಕೆ ಕಾಲೇಜುಗಳಲ್ಲಿ ಸೀಟು ಸಿಗುವುದಿಲ್ಲ. ಈಗ ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಮ್ಮ ಸರ್ಕಾರ ಹೆಚ್ಚಿನ ಒಂದು ಗುಣಗಳನ್ನು ಕೊಟ್ಟು ಕೃಷಿ ಮಾಡುವ ರೈತನ ಮಕ್ಕಳಿಗೆ ಹೆಚ್ಚು ತರಬೇತಿಯನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತಿದೆ. ಅದೇ ಪ್ರಕಾರವಾಗಿ ತಾಂತ್ರಿಕ ವಿಜ್ಞಾನದಲ್ಲಿ, ವೈದ್ಯಕೀಯ ವಿಜ್ಞಾನದಲ್ಲಿ ಕೃಷಿ ಮಾಡುವ ರೈತನ ಮಕ್ಕಳಿಗೆ ಹೆಚ್ಚಿನ ಆದ್ಯತೆ ಕೊಡುವುದು ಅವಶ್ಯ ಇದೆ.

ಅಧ್ಯಕ್ಷರು.— ತಾವು ಬೇಗ ಮುಕ್ತಾಯ ಮಾಡಿರಿ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.— ಪಠ್ಯ ಪುಸ್ತಕಗಳನ್ನು ಶಾಲಾ ಮಕ್ಕಳಿಗೆ ಸರಿಯಾಗಿ ವಿತರಣೆ ಮಾಡಬೇಕೆಂದು ಅನೇಕ ಶಿಫಾರಸ್‌ಗಳನ್ನು ಮಾಡಿದ್ದರೂ ಸಹಿತ, ಅನೇಕ ಸಮಿತಿಗಳು ಇದರ ಬಗ್ಗೆ ಅನೇಕ ಸೂಚನೆಗಳನ್ನು ಕೊಟ್ಟಿದ್ದರೂ ಸಹಿತ ಪುಸ್ತಕ ವಿತರಣೆ ಸರಿಯಾಗಿ ಆಗಿಲ್ಲ. ಸರ್ಕಾರ ಇದರ ಬಗ್ಗೆ ಹೆಚ್ಚು ಲಕ್ಷ್ಯ ಕೊಟ್ಟಂತೆ ಕಾಣುತ್ತಿಲ್ಲ. ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ವಿತರಣೆ ಮಾಡು ವುದಕ್ಕೆ ಹೆಚ್ಚಿನ ಲಕ್ಷ್ಯವನ್ನು ಕೊಟ್ಟು ಪರಿಶೀಲಿಸಬೇಕಾಗಿದೆ.

ಅಧ್ಯಕ್ಷರು.— ತಾವು ಬೇಗ ಮುಗಿಸಿ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.— ಇನ್ನು ಗ್ರಂಥಾಲಯಗಳ ಬಗ್ಗೆ ಹೇಳಬೇಕೆಂದರೆ ಧಾರವಾಡ ದಲ್ಲಿ ಒಂದು ಜಿಲ್ಲಾ ಮಟ್ಟದ ಗ್ರಂಥಾಲಯವಾಗಬೇಕಾಗಿದೆ. ಧಾರವಾಡವು ಒಂದು ಕೇಂದ್ರ ಸ್ಥಳ ವಾಗಿದ್ದರೂ ಸಹಿತ, ಗ್ರಂಥಾಲಯವನ್ನು ಕಟ್ಟುವುದಕ್ಕೆ ಜಾಗ ಖಾಲಿ ಇದ್ದರೂ ಇನ್ನೂ ಅಲ್ಲಿ ಗ್ರಂಥಾ ಲಯದ ಕಟ್ಟಡವನ್ನು ಕಟ್ಟುವುದಕ್ಕೆ ಸರ್ಕಾರ ಪ್ರಯತ್ನ ಮಾಡಿಲ್ಲ. ಈ ಜಾಗವನ್ನು ಖಾಲಿ ಮಾಡಿ ೫ ವರ್ಷಗಳಾಯಿತು. ಬೆಂಗಳೂರನ್ನು ಬಿಟ್ಟರೆ ಧಾರವಾಡವು ಎರಡನೇ ಮಹಾನಗರವಾಗಿದೆ. ಮತ್ತು ಶೈಕ್ಷಣಿಕವಾಗಿ ಎರಡು ವಿಶ್ವವಿದ್ಯಾನಿಲಯಗಳು ಧಾರವಾಡದಲ್ಲಿ ಇವೆ. ಎರಡು ವಿಶ್ವವಿದ್ಯಾನಿಲಯ ಗಳಿದ್ದರೂ ಗ್ರಂಥಾಲಯದ ಕಟ್ಟಡವನ್ನು ಅಲ್ಲಿ ಕಟ್ಟಿಲ್ಲ. ಗ್ರಂಥಾಲಯವನ್ನು ಒಂದು ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಬಾಡಿಗೆ ಕೊಟ್ಟವರು ಈ ಕಟ್ಟಡವನ್ನು ಖಾಲಿ ಮಾಡಿ ಕೊಡಿ ಎಂದು ಅವರು ಕೋರ್ಟ್‌ಗೆ ಕೇಸ್ ಹಾಕಿದ್ದಾರೆ. ಆದ್ದರಿಂದ, ಮಾನ್ಯ ಮಂತ್ರಿಗಳು ಆದಷ್ಟು ಬೇಗ ಧಾರವಾಡದಲ್ಲಿ ಗ್ರಂಥಾಲಯದ ಕಟ್ಟಡವನ್ನು ಕಟ್ಟಿಸಿಕೊಡಬೇಕು. ಈ ವರ್ಷದಲ್ಲೇ ಕಟ್ಟಡವನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿರುವ ಮಕ್ಕಳ ವಸತಿ ಶಾಲೆಗಳಿಗೆ ಸರ್ಕಾರವು ಹೆಚ್ಚಿನ ಗ್ರ್ಯಾಂಟ್ ಕೊಡಬೇಕು. ಈ ವಿಚಾರದಲ್ಲಿ ಮಾನ್ಯ ಮಂತ್ರಿ ಯವರು ಗಮನ ಹರಿಸಿ ಹೆಚ್ಚಿನ ಗ್ರ್ಯಾಂಟನ್ನು ಈ ವಸತಿ ಶಾಲೆಗಳಿಗೆ ಕೊಟ್ಟು ಬಡ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ತಾವು ಭಾಷಣ ಮಾಡುವುದನ್ನು ನಿಲ್ಲಿಸಿರಿ

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್—ಧಾರವಾಡದಲ್ಲಿರುವ ಮುದ್ರಣಾಲಯದ ಬಗ್ಗೆ ಕಳೆದ ಎರಡು ವರ್ಷಗಳ ಹಿಂದೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಈ ಮುದ್ರಣಾಲಯವನ್ನು ಆಧುನೀಕರಣಗೊಳಿಸುವುದಕ್ಕೆ ೩೦ ಲಕ್ಷ ರೂಪಾಯಿಗಳನ್ನು ಸರ್ಕಾರ ಮಂಜೂರು ಮಾಡಿರುವುದು ಸ್ವಾಗತಾರ್ಹವಾದುದೆಂದು ಹೇಳುತ್ತೇನೆ. ಈ ಮುದ್ರಣಾಲಯವನ್ನು ಅತ್ಯಾಧುನಿಕವಾಗಿ ಮಾರ್ಪಡಿಸಬೇಕು. ಅಲ್ಲಿ ಉತ್ತಮವಾದ ಸಂಪನ್ಮೂಲ ಇದೆ ಹಾಗೂ ಸಫಿಶಿಯೆಂಟ್ ಜಾಗ ಇದೆ. ಆ ದೃಷ್ಟಿಯಲ್ಲಿ ಮಾನ್ಯ ಮಂತ್ರಿಯವರು ಹೆಚ್ಚು ಗಮನ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಧಾರವಾಡದಲ್ಲಿರುವ ಸರ್ಕಾರಿ ಪ್ರೌಢಶಾಲೆಯನ್ನು ಅನೇಕ ದಿವಸಗಳಿಂದ ಪ್ರಾಥಮಿಕ ಶಾಲೆಯಲ್ಲಿ ನಡೆಸುತ್ತಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ಪ್ರೌಢಶಾಲೆಯನ್ನು ನಡೆಸುತ್ತಿರುವುದರಿಂದ ಪ್ರಾಥಮಿಕ ಶಾಲೆಯ ಮಕ್ಕಳು ಕುಳಿತುಕೊಳ್ಳಲಿಕ್ಕೆ ಜಾಗ ಇಲ್ಲದಂತಾಗಿದೆ. ಆದ್ದರಿಂದ, ಈ ಪ್ರಾಥಮಿಕ ಶಾಲೆಗೆ ಒಂದು ಹೊಸ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಅದರ ಎಸ್ಟಿಮೇಟ್ ತಯಾರಾಗಿರುವುದರಿಂದ ಮಾನ್ಯ ಮಂತ್ರಿಗಳು ಈ ಕಟ್ಟಡವನ್ನು ಕಟ್ಟಿಸಲಿಕ್ಕೆ ಹಣವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ

ಅಧ್ಯಕ್ಷರು.— ಜೊತೆಗೂ ಬೇಡ ಏನೂ ಬೇಡ ತಾವು ಕುಳಿತುಕೊಳ್ಳಿ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.— ರಾಜ್ಯದಲ್ಲಿ ಅತಿ ಉತ್ತಮವಾದಂಥ ಮಾದರಿಯ ೪ ಶಾಲೆಗಳನ್ನು ಸರ್ಕಾರ ಪ್ರಾರಂಭಿಸಿದೆ. ಈ ಶಾಲೆಗಳ ಪೈಕಿ ಒಂದು ಶಾಲೆಯು ಧಾರವಾಡದಲ್ಲಿ ಇದೆ. ಈ ಶಾಲೆಯಲ್ಲಿ ಓದತಕ್ಕಂಥ ಮಕ್ಕಳಿಗೆ ವಸತಿಯ ಸಮಸ್ಯೆ ಇರುವುದಿಲ್ಲ. ನನಗೆ ತಿಳಿದ ಮಟ್ಟಿಗೆ ಬೇರೆ ಮೂರು ಡಿವಿಷನ್‌ಗಳಲ್ಲಿರುವ ಈ ತರಹ ವಸತಿ ಪ್ರೌಢಶಾಲೆಗೆ ಸ್ವಂತ ಕಟ್ಟಡಗಳು ಇವೆ. ಧಾರವಾಡದಲ್ಲಿರುವ ಈ ವಸತಿ ಪ್ರೌಢ ಶಾಲೆಗೆ ಸ್ವಂತ ಕಟ್ಟಡ ಇರುವುದಿಲ್ಲವಾದ್ದರಿಂದ ಅಲ್ಲಿ ಓದತಕ್ಕಂಥ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ. ಆ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಲಕ್ಷ್ಯವಹಿಸಿ ಈ ಮಾದರಿ ವಸತಿ ಪ್ರೌಢ ಶಾಲೆಗೆ, ಸರ್ಕಾರದ ಈ ಪ್ರತಿಷ್ಠೆಯ ಪ್ರೌಢ ಶಾಲೆಗೆ ಒಂದು ಉತ್ತಮವಾದ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ಜನತಾ ಸರ್ಕಾರ ಪ್ರಗತಿಪರ ಯೋಜನೆಗಳ ಕಾರ್ಯವನ್ನು ಇನ್ನೂ ಹೆಚ್ಚಿಗೆ ಮಾಡುತ್ತದೆಂದು ನಂಬಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ಭಾರತಿನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾಮಂತ್ರಿಯವರು ಈ ಸದನದಲ್ಲಿ ಮಂಡಿಸಿರತಕ್ಕಂಥ ಬೇಡಿಕೆಯನ್ನು ನಾನು ವಿರೋಧ ಮಾಡುತ್ತಾ, ಒಂದೆರಡು ಮಾತುಗಳನ್ನು ಆಡಲು ಬಯಸುತ್ತೇನೆ.

ವಿದ್ಯೆಯು ಪ್ರಗತಿಗೆ ಮೂಲಭೂತವಾದುದು. ಯಾವುದೇ ರಾಷ್ಟ್ರವಾಗಲೀ, ಅಥವಾ ಯಾವುದೇ ರಾಜ್ಯವಾಗಲೀ, ಮುಂದುವರಿಯಬೇಕಾದರೆ ಸರಿಯಾದ ವಿದ್ಯಾನೀತಿಯನ್ನು ಇಟ್ಟುಕೊಂಡು ಅದರ ಮೂಲಕ ನಡೆದರೆ ಮಾತ್ರ ಪ್ರಗತಿಯನ್ನು ಸಾಧಿಸಲಿಕ್ಕೆ, ಸಾಧ್ಯವಾಗುತ್ತದೆ. ಈ ವಿದ್ಯೆಯು ರಾಜ್ಯದ ಸಬ್‌ಜೆಕ್ಟ್ ಆಗಿರುವುದರಿಂದ ರಾಜ್ಯಸರಕಾರದವರು ತಮ್ಮ ನೀತಿಯಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಎಂದು ನಾನು ಹೇಳಬಯಸುತ್ತೇನೆ.

ಸ್ವಾತಂತ್ರ್ಯ ನಂತರ, ರಾಷ್ಟ್ರದಲ್ಲಿ. ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಾಲಾ ಕಾಲೇಜುಗಳು ಬಂದಿವೆ. ಅದರ ಮೂಲಕ ಸಾಕಷ್ಟು ಜನರು ಕೂಡ ವಿದ್ಯಾವಂತರಾಗಿದ್ದಾರೆ. ಆದರೆ ನಮಗೆ ನಾವು ನಿರೀಕ್ಷೆ ಮಾಡಿದಷ್ಟು ಫಲ ದೊರೆಯಲಿಲ್ಲ. ಎಂದು ಹೇಳಬಯಸುತ್ತೇನೆ. ನಾವುಗಳು ಪ್ರಗತಿಪರವಾದ ಒಂದು ವಿದ್ಯೆಯ ನೀತಿಯನ್ನು ನಿರೀಕ್ಷೆ ಮಾಡಿದ್ದೆವು. ನಮ್ಮಲ್ಲಿ ಇವೊತ್ತು ಎಷ್ಟು ಜನ ಡಾಕ್ಟರ್ಸ್ ಬೇಕು. ಎಷ್ಟು ಜನ ಇಂಜಿನೀಯರ್ಸ್ ಬೇಕು, ಎಷ್ಟು ಜನ ಸೈಂಟಿಸ್ಟ್ಸ್ ಬೇಕು, ಎಷ್ಟು ಜನ ಅಗ್ರಿಕಲ್ಚರ್ ಗ್ರಾಜುಯೇಟ್ಸ್ ಬೇಕು. ಎಂಬುದನ್ನು ನಾವು ನೋಡಿಕೊಳ್ಳಬೇಕಾಗಿದೆ. ಆದರೆ ಹಲವಾರು ಸಂದರ್ಭಗಳ ಬೇಡಿಕೆಗನುಗುಣವಾಗಿ ನಾವು ಒಂದು ವಿದ್ಯೆಯನ್ನು ಕೊಡುತ್ತಾ ಇಲ್ಲ, ಉದಾಹರಣೆಗೆ ಹೇಳುವುದಾದರೆ, ವೆಟರ್‌ನರಿ ಡಾಕ್ಟರ್ಸ್ ಮತ್ತು ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್ಸ್‌ಗಳ ಕೊರತೆ ನಮ್ಮಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ಇದೆ. ಇದರಿಂದಾಗಿ ತುಂಬಾ ತೊಂದರೆ ಕೂಡ ಆಗಿದೆ. ಆದರೆ ಸರಕಾರದವರು ಇದನ್ನು ಗಮನಿಸಿ ಕ್ರಮಗಳನ್ನು ತೆಗೆದುಕೊಂಡಿದ್ದರೆ ಈ ತೊಂದರೆಗಳು ಉದ್ಭವವಾಗುತ್ತಿರಲಿಲ್ಲ ಮತ್ತು ಎಷ್ಟೋ ಜನ ಯುವಕರಿಗೆ ಕೆಲಸ ಕೂಡ ಸಿಗುತ್ತಾ ಇತ್ತು.

ಇವೊತ್ತು ನಮ್ಮಲ್ಲಿ ನಿರುದ್ಯೋಗಿಗಳ ಸಂಖ್ಯೆ ನಮ್ಮ ಸರಕಾರದ ದಾಖಲೆಗಳ ಪ್ರಕಾರ ೯ ಲಕ್ಷಗಳು ಇವರು ಎಲ್ಲರು ವಿದ್ಯಾವಂತರಾಗಿದ್ದಾರೆ. ಇವರಲ್ಲಿ ಹಲವಾರು ಜನ ಯಾವುದೇ ರೀತಿಯಲ್ಲಿ ವಿದ್ಯೆಯನ್ನು ಪಡೆದಿದ್ದಾರೆ. ಉನ್ನತ ವ್ಯಾಸಂಗವನ್ನು ಪಡೆದವರೂ ಕೂಡ ಸರ್ಕಾರಿ ವಲಯ ಮತ್ತು ಇತರ ವಲಯಗಳಲ್ಲಿ ಕ್ಲರ್ಕ್ ಅಥವಾ ಅಟೆಂಡರ್ ಕೆಲಸಕ್ಕೆ ಕೂಡ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ವಿದ್ಯೆಯ ನೀತಿಯಲ್ಲಿ ಮೂಲಭೂತವಾಗಿ ತಪ್ಪುಗಳು ಇವೆ ಎಂಬುದನ್ನು ಇದು ತೋರಿಸುತ್ತದೆ. ನಾವು ಸರಿಯಾದ ವಿದ್ಯಾನೀತಿಯನ್ನು ಅವಲಂಬಿಸಿಲ್ಲ. ನಾವು ನಮ್ಮವರಿಗೆ ವಿದ್ಯೆಯನ್ನು ಕೊಟ್ಟ ಮೇಲೆ, ಅವರು ತಮ್ಮ ವಿದ್ಯಾಭ್ಯಾಸವನ್ನು ಮಾಡಿ ಮುಗಿಸಿದ ಮೇಲೆ, ಅವರು ತಮ್ಮ ಕಾಲಮೇಲೆ ತಾವುಗಳು ನಿಲ್ಲುವಂತಹ ಒಂದು ಶಕ್ತಿಯನ್ನು ನಾವು ನಮ್ಮ ವಿದ್ಯಾನೀತಿಯಲ್ಲಿ ಕೊಟ್ಟಿದ್ದರೆ, ಅವರಲ್ಲಿ ಒಂದು ತರನಾದ ಧೈರ್ಯವನ್ನು ತುಂಬುವ ಕೆಲಸವನ್ನು ಮಾಡಿದ್ದರೆ, ಒಳ್ಳೆಯದಾಗುತ್ತಿತ್ತು. ಆದರೆ ನಮ್ಮ ಈ ಸರಕಾರದವರು ಆ ಬಗ್ಗೆ ಯಾವುದೇ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ.

ಉದ್ಯೋಗಕ್ಕೂ, ವಿದ್ಯೆಗೂ ಯಾವುದೇ ಸಂಬಂಧವೂ ಇಲ್ಲ. ಯಾವುದೇ ಹೊಂದಾಣಿಕೆಯೂ ಇಲ್ಲ. ಇವೊತ್ತು, ಮೂಲಭೂತವಾಗಿ ಒಂದು ಶಿಕ್ಷಣ ಯಾವ ರೀತಿಯಲ್ಲಿರಬೇಕೆಂದರೆ, ನಮ್ಮಲ್ಲಿ ಯಾರಿಗೂ ಸಾಕಷ್ಟು ಉದ್ಯೋಗವನ್ನು ಯಾವತ್ತೂ ಕೊಡಲಿಕ್ಕೆ ಆಗುವುದಿಲ್ಲ. ಇವೊತ್ತು ನಮ್ಮ ಮ್ಯಾನ್‌ಪವರ್ ನೋಡಿದರೆ ಸಾಲದು, ದೇಶದ ಮ್ಯಾನ್‌ಪವರ್ ನೋಡಿದರೂ ಸಾಲದು. ವಿಶ್ವದ ಮ್ಯಾನ್‌ಪವರ್‌ನ್ನು ನಾವು ನೋಡಬೇಕಾಗುತ್ತದೆ. ಅದನ್ನು ನಾವುಗಳು ಅವಲಂಬಿಸಬೇಕಾಗುತ್ತದೆ. ಇವೊತ್ತು ನಮ್ಮಲ್ಲಿ ೯ ಲಕ್ಷ ಜನ ನಿರುದ್ಯೋಗಿಗಳಿಗೆ ಕೆಲಸ ಕೊಡುವುದಕ್ಕಾಗುವುದಿಲ್ಲ. ಮುಂದಿನ ವರ್ಷ ಮತ್ತೂ ಇದು ಹೆಚ್ಚಿಗೆ ಆಗುತ್ತಾ ಹೋಗಬಹುದು. ನಮ್ಮಲ್ಲಿ ಈಗ ಯಾವರೀತಿಯ ವಿದ್ಯಾನೀತಿಯನ್ನು ಅನುಸರಿಸುತ್ತಿದ್ದೇವೆ ಎಂದರೆ, ಇಂಗ್ಲೀಷ್ ಮಾಧ್ಯಮದ ಶಾಲೆಗಳು ಬೇಡ ಎಂದು ಹೇಳುತ್ತಿದ್ದೇವೆ. ನನ್ನ ಅನಿಸಿಕೆಯಂತೆ ಇಂಗ್ಲೀಷ್ ಮಾಧ್ಯಮದ ಶಾಲೆಗಳಲ್ಲಿ ಬೇಕಾದರೆ ಕನ್ನಡವನ್ನೂ ಕೂಡ ಕಡ್ಡಾಯ ಮಾಡಿ. ಅದನ್ನು ಬಿಟ್ಟು ಇಂಗ್ಲೀಷ್ ಮಾಧ್ಯಮದ ಶಾಲೆಗಳು ಬೇಡ ಎಂದರೆ ಹೇಗೆ ? ಕೆಲಸವನ್ನು ಹುಡುಕಿಕೊಂಡು ನಮ್ಮ ಜನರು ದೇಶದ, ವಿಶ್ವದ ಎಲ್ಲಾ ಕಡೆಗಳಲ್ಲಿಯೂ ಹೋಗಬೇಕಾದಂತಹ ಪರಿಸ್ಥಿತಿ ಇವೊತ್ತು ಇದೆ, ಆಗ ಕನ್ನಡ ಭಾಷೆ ಮಾತ್ರ ಇದ್ದರೆ ಉಪಯೋಗಕ್ಕೆ ಬರುವುದಿಲ್ಲ ಎಂಬ ಮಾತನ್ನು ಇಲ್ಲಿ ನಾನು ಹೇಳಬಯಸುತ್ತೇನೆ.

ಇವೊತ್ತು ಏನಾದರೂ ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ಪ್ರಾರಂಭಿಸುವುದನ್ನು ನಿಲ್ಲಿಸಿದರೆ ನಮ್ಮ ಯುವಕರಿಗೆ ಅನ್ಯಾಯ ಮಾಡಿದಂತಾಗುತ್ತದೆ. ೧೫—೨೦ ವರ್ಷಗಳು ಕಳೆದ ಮೇಲೆ ನಾವು ಮಾಡಿದ ಅವಿವೇಕ ಗೊತ್ತಾಗುತ್ತದೆ. ಆದ್ದರಿಂದ ನಾನು ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಬೇಕಾದರೆ ಕನ್ನಡ ಮಾಧ್ಯಮ ಶಾಲೆಗಳಿಗೆ ನೀವು ಹೆಚ್ಚಿನ ಸೌಲಭ್ಯ ಕೊಡಿ. ಅವುಗಳ ಸಂಖ್ಯೆಯನ್ನು ಹೆಚ್ಚು ಮಾಡಿ, ಆದರೆ ಇಂಗ್ಲೀಷ್ ಶಾಲೆಗಳನ್ನು ಬೇಡ ಎಂದರೆ ಮುಂದಿನ ಪೀಳಿಗೆಗೇ ಅನ್ಯಾಯವಾಗುತ್ತದೆ. ಮತ್ತು ಅದು ಪ್ರಜಾಪ್ರಭುತ್ವದ ನೀತಿಗೇ ವಿರೋಧವಾಗುತ್ತದೆ,

ಈಗ ವಿದ್ಯಾಭ್ಯಾಸ ನೀತಿಯಲ್ಲಿ ಬಹಳ ಬದಲಾವಣೆ ಮಾಡುತ್ತಿದ್ದಾರೆ. ಮೊದಲು ಪಿಯುಸಿ ಒಂದು ವರ್ಷ ಇದ್ದದನ್ನು ಈಗ ಎರಡು ವರ್ಷ ಮಾಡಿದ್ದಾರೆ, ೧೦ನೇ ಸ್ಟ್ಯಾಂಡರ್ಡ್ ಇದ್ದದನ್ನು ೧೧ನೇ ಸ್ಟ್ಯಾಂಡರ್ಡ್ ಮಾಡಿದ್ದೇವೆ. ಈ ತರಹ ಇದರಲ್ಲಿ ಸ್ಟ್ರಕ್ಚರಲ್ ಬದಲಾವಣೆ ಮಾಡುತ್ತಿದ್ದೇವೆಯೇ ಹೊರತು ಮೂಲಭೂತ ಬದಲಾವಣೆ ಮಾಡುತ್ತಿಲ್ಲ. ಕೇಂದ್ರ ಸರ್ಕಾರದವರು ಈ ಹಿನ್ನೆಲೆಯಲ್ಲಿ ಹೊಸ ನೀತಿಯನ್ನು ತಂದಿದ್ದಾರೆ. ಅದನ್ನು ನಾವೆಲ್ಲರೂ ಪಕ್ಷಭೇದ ಮರೆತು ಸಂಪೂರ್ಣ ಬೆಂಬಲ ಕೊಡತಕ್ಕ ಪ್ರಸಂಗ ಬಂದಿದೆ. ಆದರೆ ಕೇವಲ ರಾಜಕೀಯ ದೃಷ್ಟಿಯಿಂದ ನಮ್ಮ ರಾಜ್ಯ ಸರ್ಕಾರದವರು ಅದರಲ್ಲೂ ಮುಖ್ಯಮಂತ್ರಿಗಳು ಅದನ್ನು ಟೀಕೆ ಮಾಡಿ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೈಮರಿ ಶಾಲೆಗಳಿಗೇ ಕಟ್ಟಡ ಇಲ್ಲದಂತಾಗಿದೆ, ಅಂಥಾದ್ದರಲ್ಲಿ ಕೇಂದ್ರ ಅದರ ನವೋದಯ ಶಾಲೆಗಳಿಗೆಂದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತದೆ ಎಂದು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ಪ್ರೈಮರಿ ಸ್ಕೂಲುಗಳನ್ನು ಕಟ್ಟಿ ನಡೆಸುವ ಕೆಲಸ ರಾಜ್ಯದ್ದು ಅದನ್ನು ಇವರು ಮಾಡಲಿ, ಕೇಂದ್ರದವರು ಗ್ರಾಮಾಂತರ ಪ್ರದೇಶಗಳಲ್ಲಿ ಬಡವರು ಮತ್ತು ಪರಿಶಿಷ್ಟ ಜಾತಿಗಳವರಿಗಾಗಿ ನವೋದಯ ಶಾಲೆಗಳನ್ನು ತೆರೆಯುತ್ತಿದ್ದಾರೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).–ಕಳೆದ ವರ್ಷ ತಾನೇ ೬ ಶಾಲೆಗಳು ಮಂಜೂರಾಗಿವೆ ನಾವು ಕೇಂದ್ರಕ್ಕೆ ೧೨ ಶಾಲೆಗಳನ್ನು ಕೇಳಿದ್ದೆವು. ಕೇಂದ್ರದ ಹೊಸ ನೀತಿಯನ್ನು ನಾವು ಒಪ್ಪಿಕೊಂಡಿದ್ದೇವೆ ಮತ್ತು ಅದನ್ನು ಇಲ್ಲಿ ಇಂಪ್ಲಿಮೆಂಟ್ ಮಾಡುತ್ತಿದ್ದೇವೆ.

ಶ್ರೀ ಕೆ.ಜೆ. ಜಾರ್ಜ್,—ಇವರು ಹೀಗೆ ಹೇಳುತ್ತಿದ್ದಾರೆ. ಆದರೆ ಇವರ ಮುಖ್ಯಮಂತ್ರಿಗಳು ಅದನ್ನು ಟೀಕೆ ಮಾಡಿದ್ದಾರೆ. ಹಳ್ಳಿಗಳಲ್ಲಿ ಒಂದೊಂದು ಜಿಲ್ಲೆಯಲ್ಲೂ ಯಾರು ಯಾರು ಟ್ಯಾಲೆಂಟ್ ಇದ್ದಾರೋ ಅವರು ಬಡವರು, ರೈತರು, ಪರಿಶಿಷ್ಟ ಜಾತಿಯವರು ಯಾರೇ ಇರಲಿ ಅಂಥವರಿಗೆ ಸಂಪೂರ್ಣ ಸೌಲಭ್ಯ ಕೊಟ್ಟು ವಿದ್ಯಾವಂತರನ್ನು ಮಾಡುವ ಕೆಲಸವನ್ನು ಕೇಂದ್ರ ಮಾಡುತ್ತಿದೆ. ನಾವು ಪಕ್ಷಭೇದ ಬಿಟ್ಟು ಎಲ್ಲರೂ ಇದನ್ನು ಸ್ವಾಗತಮಾಡಬೇಕೆಂದು ಕೋರುತ್ತೇನೆ. ನಮ್ಮಲ್ಲಿ ಹೆಚ್ಚಿನ ಯುವಕರಿಗೆ ಉದ್ಯೋಗ ಸಿಕ್ಕಬೇಕಾದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮ್ಯಾನ್‌ಪವರ್ ಎಷ್ಟು ರಿಕ್ವೈರ್‌ಮೆಂಟಿದೆ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಪತ್ರಿಕೆಗಳಲ್ಲಿ ಮೊನ್ನೆ ನೋಡಿದ ಪ್ರಕಾರ ನಮ್ಮ ಮುಖ್ಯಮಂತ್ರಿಗಳು ವಿದೇಶಿಗಳಿಗೆ ಹೋಗಿ ಅನಿವಾಸಿ ಭಾರತೀಯರಿಂದ ಇನ್‌ವೆಸ್ಟ್‌ಮೆಂಟ್ ಕಂಟ್ರಾಕ್ಟ್‌ಗಾಗಿ ಪ್ರಯತ್ನ ಮಾಡಿರುವರೆಂದು ಕೇಳಿದೆ. ಅವರ ಉದ್ದೇಶ ಇಂಡಸ್ಟ್ರಿಯನ್ನು ತೆರೆಯುವುದಾಗಿರಬಹುದು, ಅದಕ್ಕೆ ಈಗಾಗಲೇ ನಮ್ಮಲ್ಲಿ ವಿದ್ಯುತ್ ಇಲ್ಲ. ಇವತ್ತು ಇಂಟರ್‌ನ್ಯಾಷನಲ್ ಮಾರ್ಕೆಟ್‌ನಲ್ಲಿ ಸಾಕಷ್ಟು ಮ್ಯಾನ್‌ಪವರ್ ಇಲ್ಲ, ಅಮೇರಿಕಾದ ನಾಸಾಗಗನ ಕೇಂದ್ರದಲ್ಲಿ ಇರುವ ಶೇಕಡ ೬೦ರಷ್ಟು ಸೈಂಟಿಸ್ಟ್‌ಗಳು ಭಾರತೀಯರಾಗಿದ್ದಾರೆ. ಈ ಕಂಪ್ಯೂಟರ್ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಬೇಕಾದಷ್ಟು ಅವಕಾಶ ಇದೆ, ಮಾರ್ಕೆಟ್ಟೂ ಇದೆ ಈ ಉದ್ಯಮವನ್ನು ನಾವು ಬರಮಾಡಿಕೊಂಡರೆ ನಮ್ಮ ಯುವಕರಿಗೆ ಒಳ್ಳೆಯ ದಾರಿ ತೋರಿಸಿದಂತಾಗುತ್ತದೆ. ಈಗಾಗಲೇ ಭಾರತದಲ್ಲಿ ಟಾಟಾ ಅವರು ಇದನ್ನು ಕೈಗೆತ್ತಿಕೊಂಡಿದ್ದಾರೆ. ಈ ಬಗ್ಗೆ ನಮ್ಮ ಯುವಕರಿಗೆ ಮೊದಲೇ ಟ್ರೈನಿಂಗ್ ಕೊಡಿಸಿದರೆ ಆ ಫೀಲ್ಡ್‌ನಲ್ಲಿ ಅವರು ಮುಂದೆ ಬರಲು ಅವಕಾಶ ಆಗುತ್ತದೆ.

ಸ್ಪೇಸ್‌ನ ಚುಕ್ಕಾಣಿಯನ್ನು ಹಿಡಿದಂತಹವರಲ್ಲಿ ಭಾರತೀಯರೂ ಕೂಡ ಇದ್ದಾರೆ. ನಮ್ಮಲ್ಲಿ ಬೇಕಾದಷ್ಟು ಜನ ಸೈಂಟಿಸ್ಟ್ ಇದ್ದಾರೆ, ಸರಕಾರ ಇವರಿಗೆ ಸರಿಯಾದಂತಹ ಒಂದು ಗೈಡ್‌ಲೈನ್ಸ್ ಅನ್ನು ಕೊಟ್ಟರೆ ನಮ್ಮ ಯುವಕರು ಅಂತರರಾಷ್ಟ್ರೀಯ ಮಟ್ಟದಲ್ಲಿ ಮುಂದೆ ಬರುವುದಕ್ಕೆ ಸಾಧ್ಯವಿದೆ.

ಕ ಮೊನ್ನೆ ಪತ್ರಿಕೆಯಲ್ಲಿ ಸಿಂಗಪೂರಿನಲ್ಲಿ ಬೆಂಗಳೂರಿನ ಒಬ್ಬ ಹುಡುಗ ಇಂಟರ್‌ನ್ಯಾಷನಲ್ ಂಪ್ಯೂಟರ್ ಬಗ್ಗೆ ಒಂದು ಥೀಸ್ ಅನ್ನು ಬರೆದು ಇಡೀ ಜಗತ್ತನ್ನೇ ಬೆರಗುಗೊಳಿಸಿದ್ದಾನೆ. ಇಂತಹ ಹುಡುಗರನ್ನು ಅಡಾಪ್ಟ್ ಮಾಡಿ ಅವರಿಗೆ ಬೇಕಾದಷ್ಟು ಸೌಲಭ್ಯಗಳನ್ನು ಕೊಡಬೇಕಾಗಿತ್ತು ಆದರೆ ಅದನ್ನು ನೀವು ಮಾಡಿದ್ದೀರೋ ಇಲ್ಲವೋ ಗೊತ್ತಿಲ್ಲ, ಮಾಡದಿದ್ದರೆ, ಅದನ್ನು ದಯವಿಟ್ಟು ಮಾಡಬೇಕು. ಇವರು ಮಹಿಳಾ ಯೂನಿವರ್ಸಿಟಿಯನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದರು. ಮಾನ್ಯ ರಾಚಯ್ಯನವರು ಮಂತ್ರಿಗಳಾಗಿದ್ದಾಗ ಹೇಳಿರಬಹುದು ಬೆಳಗಾಂ ಜಿಲ್ಲೆಯಲ್ಲಿ ಕಿತ್ತೂರು ರಾಣಿ ಚನ್ನಮ್ಮ ಯೂನಿವರ್ಸಿಟಿಯನ್ನು ಮಾಡುತ್ತೇವೆಂದು ಅದರ ಬಗ್ಗೆ ಯಾವ ಕ್ರಮವನ್ನು ಕೈಗೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಇನ್ನು ಹಲವಾರು ಕಡೆಗಳಲ್ಲಿನ ಪ್ರೈಮರಿ ಸ್ಕೂಲುಗಳಲ್ಲಿ ಕಟ್ಟಡಗಳು ಇಲ್ಲ, ಬೆಂಚುಗಳು ಇಲ್ಲ, ಅಧ್ಯಾಪಕರಿಲ್ಲ ಹಾಗೂ ಎಲ್ಲದಕ್ಕಿಂತ ಮುಖ್ಯವಾಗಿ ಬ್ಲಾಕ್ ಬೋರ್ಡ್‌ಗಳು ಇಲ್ಲ ಪರಿಸರವನ್ನಂತೂ ನೋಡುವುದಕ್ಕಾಗುವುದಿಲ್ಲ, ಅಲ್ಲಿ ಟಾಯ್‌ಲೆಟ್ ಇಲ್ಲ ನೀರು ಇಲ್ಲ. ಮಕ್ಕಳಿಗೆ ಪುಸ್ತಕ ಕೊಡುವುದು, ಯೂನಿಫಾರಂ ಕೊಡುವುದು ಮುಂತಾದ ಕಾರ್ಯಕ್ರಮವನ್ನು ಹಾಕಿ ಇದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಮೂಲಭೂತವಾಗಿ ಕುಳಿತುಕೊಳ್ಳುವುದಕ್ಕೆ ಖುರ್ಚಿ ಬೆಂಚು ಇಲ್ಲದಿದ್ದರೆ ಏನು ಪ್ರಯೋಜನವಾಗುತ್ತದೆ? ಇದರ ಬಗ್ಗೆ ತಾವು ಯೋಚನೆ ಮಾಡಬೇಕು ಮೊದಲು ಇದಕ್ಕೆ ಆದ್ಯತೆಯನ್ನು ಕೊಡಬೇಕಾಗಿತ್ತು. ನನ್ನ ಕ್ಷೇತ್ರದಲ್ಲಿ ಅಂಬೇಡ್ಕರ್ ಕಾಲೇಜು ಇದೆ ಇದನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಕಟ್ಟಡ ಇಲ್ಲವೆಂದು ಅಲ್ಲಿ ನಡೆಯುತ್ತಿದ್ದ ಹೈಸ್ಕೂಲುಗಳನ್ನು ಮುಚ್ಚಿ ಅವರನ್ನು ಇನ್ನೊಂದು ಕಡೆಗೆ ಷಿಫ್ಟ್ ಮಾಡಿ ಕಾಲೇಜಿಗೆ ಕಟ್ಟಡವನ್ನು ಕೊಟ್ಟಿದೆ. ಈಗ ಅಂಬೇಡ್ಕರ್ ಕಾಲೇಜಿನವರು ಸ್ವಂತ ಕಟ್ಟಡವನ್ನು ಕಟ್ಟಿದ್ದಾರೆ ಆದರೆ ಅವರು ಇನ್ನೂ ಹಳೆಯ ಕಟ್ಟಡದಲ್ಲೇ ಇದ್ದಾರೆ ಇನ್ನೂ ಖಾಲಿ ಮಾಡಿಲ್ಲ. ನನ್ನ ಕ್ಷೇತ್ರದಲ್ಲಿ ಜೂನಿಯರ್ ಕಾಲೇಜು, ಹೈಸ್ಕೂಲು ಇಲ್ಲ,

ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಯವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿರುವ ಹಣವಂತರಾಗಲೀ ಮಧ್ಯಮ ವರ್ಗದವರಾಗಲೀ ಖಾಸಗೀ ಕಾಲೇಜುಗಳಿಗೆ ಹೋಗಬಹುದು, ಆದರೆ ಪರಿಶಿಷ್ಟ ವರ್ಗದವರು, ಹಿಂದುಳಿದ ವರ್ಗದವರು ಸರಕಾರೀ ಕಾಲೇಜುಗಳಿಗೆ ಹೋಗಬೇಕಾಗುತ್ತದೆ. ಇನ್ನು ಖಾಸಗೀ ಕಾಲೇಜುಗಳಲ್ಲಿ ಚೀಫ್ ಇಂಜಿನಿಯರ್‌ಗಳು, ಸೂಪರಿಂಟೆಂಡೆಂಟ್ ಇಂಜಿನಿಯರ್‌ಗಳು ಅಧ್ಯಕ್ಷರಾಗಿ, ಸೆಕ್ರೆಟರಿಗಳಾಗಿ ಕೆಲಸ ಮಾಡುತ್ತಾರೆ ಲಕ್ಷಾಂತರ ರೂಪಾಯಿಗಳ ವ್ಯವಹಾರಕ್ಕೆ ಯಾವ ರೀತಿಯಲ್ಲಿ ತಾವು ಅನುಮತಿಯನ್ನು ಕೊಡುತ್ತಿದ್ದೀರಿ ? ಕೆಂಪೇಗೌಡ ಕಾಲೇಜಿನಲ್ಲಿ ಮರೀಗೌಡರು ರಿಟೈರ್ಡ್ ಆದ ಮೇಲೆ ಅಧ್ಯಕ್ಷರಾಗಿದ್ದಾರೆ. ಡಾ. ಅಂಬೇಡ್ಕರ್ ಕಾಲೇಜನ್ನು ಆದಷ್ಟು ಬೇಗನೆ ಹೊಸ ಕಟ್ಟಡಕ್ಕೆ ವರ್ಗಾವಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ವಿನಂತಿಸುತ್ತೇನೆ.

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ, ಎಲ್ಲರಿಗೂ ಅವಕಾಶ ಕೊಡುವುದು ನನ್ನ ಕರ್ತವ್ಯ.

ಶ್ರೀ ಕೆ. ಜೆ. ಜಾರ್ಜ್.—ಇನ್ನು ಕೆಲವು ನಿಮಿಷಗಳಲ್ಲಿ ಮುಗಿಸುತ್ತೇನೆ. ಎಸ್‌ಸಿ ಎಸ್‌ಟಿ ವಿದ್ಯಾರ್ಥಿಗಳು ಸ್ಕಾಲರ್‌ಷಿಪ್ ತೆಗೆದುಕೊಳ್ಳಬೇಕಾದರೆ ಪ್ರತಿ ವರ್ಷ ಜಾತಿ ಸರ್ಟಿಫಿಕೇಟ್ ಕೊಡಬೇಕೆಂದು ಹೇಳುತ್ತಿದ್ದಾರೆ. ಪ್ರತಿ ವರ್ಷ ಈ ಸರ್ಟಿಫಿಕೇಟ್ ಅನ್ನು ಕೇಳುವ ಬದಲು ಅಡ್ಮಿಷನ್‌ಗೆ ಬರುವಾಗ ಸರ್ಟಿಫಿಕೇಟ್ ತೆಗೆದುಕೊಳ್ಳಿ, ಅದನ್ನು ಬೇಕಾದರೆ ವೆರಿಫೈ ಮಾಡಿ, ಅದನ್ನು ಬಿಟ್ಟು ಪ್ರತಿ ವರ್ಷ ಸರ್ಟಿಫಿಕೇಟ್ ಕೊಡಿ ಎಂದು ಹೇಳಿದರೆ ಸಾವಿರಾರು ಜನರಿಗೆ ಸರ್ಟಿಫಿಕೇಟ್ ಸಿಗುವುದಿಲ್ಲ ಇದರಿಂದಾಗಿ ಬಹಳ ಜನರಿಗೆ ತೊಂದರೆಯಾಗುತ್ತದೆ. ಮಾನ್ಯ ವಿದ್ಯಾ ಸಚಿವರು ಇದನ್ನು ಗಮನಕ್ಕೆ ತೆಗೆದುಕೊಂಡು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಸನ್ಮಾನ್ಯ ಅಧ್ಯಕ್ಷರೇ, ೧೯೮೭-೮೮ನೇ ಸಾಲಿನ ಶಿಕ್ಷಣ ಇಲಾಖೆಯ ವಾರ್ಷಿಕ ವರದಿಯ ಮಂಡನೆಯನ್ನು ನಾನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಈ ಶಿಕ್ಷಣ ಇಲಾಖೆ ಯಾವ ಮಟ್ಟದಲ್ಲಿ ಒಂದು ಪವಿತ್ರತೆಯನ್ನು ಕಾಪಾಡಿಕೊಂಡು ಬರಬೇಕಾಗಿತ್ತೋ ಆ ಪವಿತ್ರತೆಯನ್ನು ಕಾಪಾಡಿಕೊಳ್ಳುವುದರಲ್ಲಿ ವಿಫಲವಾಗಿದೆ ಎನ್ನತಕ್ಕಂಥದ್ದು ದುಃಖದ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇವೊತ್ತು ಸ್ವಾತಂತ್ರ್ಯ ಬಂದು ೪೦ ವರ್ಷಗಳು ಕಳೆದರೂ ಕೂಡಾ ಇನ್ನು ನಾವು ಅನಕ್ಷರತೆಯನ್ನು ತೊಡೆದುಹಾಕಲಿಕ್ಕೆ ಸಾಧ್ಯವಾಗಲಿಲ್ಲ ಎಂದರೆ ಬಹುಶಃ ನಾವೆಲ್ಲರೂ ಕೂಡಾ ಈ ಕಾರ್ಯದಲ್ಲಿ ವಿಫಲರಾಗಿದ್ದೇವೆ ಎನ್ನತಕ್ಕಂಥದ್ದನ್ನು ಇವತ್ತು ವಿರೋಧ ಪಕ್ಷವಾಗಲೀ ನಾವಾಗಲೀ ಒಪ್ಪಿಕೊಳ್ಳಬೇಕಾಗಿದೆ. ಇವತ್ತು ನಾವು ಹೇಳುವಾಗ ಪ್ರತಿಯೊಬ್ಬರಿಗೂ ಕೂಡಾ ವಿದ್ಯೆಯನ್ನು ಕೊಡಬೇಕು ಎಂದು ದೊಡ್ಡ ದೊಡ್ಡ ಮಾತುಗಳನ್ನು ಯೋಜನೆಗಳನ್ನು ಪ್ರತಿ ವರ್ಷದ ಬಜೆಟ್‌ನಲ್ಲೂ ಕೂಡಾ ನಾವು ಮಂಡನೆ ಮಾಡುತ್ತಾ ಬಂದಿದ್ದೇವೆ. ಇದನ್ನು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತಂದಿದ್ದೇವೆ ಎನ್ನತಕ್ಕಂಥ ವಿಚಾರವನ್ನು ನಾವು ಚಿಂತನೆ ಮಾಡಿದಾಗ ನಾವು ಬಹಳ ಹಿಂದುಳಿದಿದ್ದೇವೆ ಎನ್ನುವುದು ನಮಗೆ ಗೋಚರವಾಗುತ್ತದೆ. ನಾನು ಬಜೆಟ್‌ನ ಮೇಲೆ ಭಾಷಣ ಮಾಡುವಂಥ ಸಂದರ್ಭದಲ್ಲಿ ಬುದ್ಧಿವಂತಿಕೆ ಎನ್ನುವುದು ಒಬ್ಬ ಮಾನವನ ಚೌಕಟ್ಟಿನಲ್ಲಿ ಒಂದು ಸಮಾಜದ ಕಲ್ಯಾಣವನ್ನು ಕಾಣಬೇಕಾದರೆ ಅವನಿಗೆ ಮೊಟ್ಟಮೊದಲನೆಯದಾಗಿ ಇರುವ ಪ್ರಶ್ನೆ ಎಂದರೆ ಅವನಲ್ಲಿರತಕ್ಕಂಥ ಅಜ್ಞಾನವು ತೊಲಗಬೇಕು. ಅಜ್ಞಾನ ಎಲ್ಲಿಯತನಕ ತೊಲಗುವುದಿಲ್ಲವೋ ಅಲ್ಲಿಯತನಕವೂ ಅವನಿಗೆ ಯಾರುಕೆಟ್ಟದ್ದು ಮಾಡುತ್ತಾರೆ, ಯಾರು ಒಳ್ಳೆಯದು ಮಾಡುತ್ತಾರೆ, ಸರ್ಕಾರ ಎಂದರೇನು ? ರಾಷ್ಟ್ರ ಎಂದರೇನು ? ಶಾಲೆ ಎಂದರೇನು ? ಶಿಕ್ಷಣ ಎಂದರೇನು ? ಇದು ಯಾವುದೂ ಗೊತ್ತಾಗುವುದಿಲ್ಲ. ಇವನ್ನು ತೊಲಗಿಸತಕ್ಕಂಥ ಶಕ್ತಿ ಇಲ್ಲದೇ ಇದ್ದರೆ ಮನುಷ್ಯನಿಗೆ ಅವನಿಂದ ಯಾವ ರೀತಿಯ ಲಾಭವನ್ನು ಈ ಸಮಾಜಕ್ಕೆ ಅವನಿಂದ ಒಳ್ಳೆಯದನ್ನು ಅಪೇಕ್ಷೆ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥದ್ದನ್ನು ಬಜೆಟ್ ಮೇಲೆ ಭಾಷಣ ಮಾಡುವಾಗ ಈ ಮಾತನ್ನು ಹೇಳಿದ್ದೆ. ಬೇಳೆಕಾಳು ಕೆಜಿ ೨ ರೂಪಾಯಿ, ತರಕಾರಿ, ಬೇಳೆಕಾಳುಗಳನ್ನು ಕೊಡುಕೊಳ್ಳುತಕ್ಕಂಥ ರೀತಿಯಲ್ಲಿ ಬುದ್ಧಿವಂತಿಕೆಯನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಇದಕ್ಕೆ ಇರತಕ್ಕಂಥ ಏಕೈಕ ಮಾರ್ಗ ಎಂದರೆ ವಿದ್ಯೆ ಒಂದೇ. ಆದ್ದರಿಂದ ಈ ಸಂದರ್ಭದಲ್ಲಿ ಎಲ್ಲರಿಗೂ ವಿದ್ಯೆಯನ್ನು ಕೊಟ್ಟರೆ,

ಎಲ್ಲರೂ ಬುದ್ಧಿವಂತರಾಗಿ, ಆಗ ಸರ್ಕಾರ ಉದ್ಧಾರವಾಗಬೇಕು ಎನ್ನತಂಥ ಗುರಿಯನ್ನು ಇಟ್ಟುಕೊಳ್ಳತಕ್ಕಂಥ ವಿಚಾರ ಏನು ಇದೆ, ಅತ್ತ ಕಡೆಗೆ ಆದ್ಯತೆಯನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಈ ರಾಷ್ಟ್ರದಲ್ಲಿ ಸುಮಾರು ೩/೪ ಭಾಗದಷ್ಟು ಜನರು ಇನ್ನೂ ಕೂಡಾ ಅನಕ್ಷರಸ್ಥರಿದ್ದಾರೆ. ನಾವು ಬೇರೆ ರಾಷ್ಟ್ರಗಳಿಗೆ ಇದನ್ನು ಹೋಲಿಸಿ ನೋಡಿದರೆ ನನ್ನ ಸ್ನೇಹಿತರೂ ಸಹಾ ಹೊರರಾಷ್ಟ್ರಗಳಲ್ಲಿ ಹೋಗಿ ನೋಡಿದ್ದಾರೆ ನಾನು ಕೂಡಾ ರಷ್ಯಾದೇಶಕ್ಕೆ ಹೋಗಿದ್ದೆ. ಅಲ್ಲಿ ಶಿಕ್ಷಣ ಮಾಧ್ಯಮದಲ್ಲಿ ಯಾವ ರೀತಿಯ ಪ್ರಗತಿಯನ್ನು ಸಾಧಿಸಿದ್ದಾರೆ ಎನ್ನತಕ್ಕಂಥ ವಿಚಾರದಲ್ಲಿ ನನ್ನ ಸ್ನೇಹಿತರು ರಷ್ಯಾ, ಚೈನಾ, ಸಿಯೋಲ್‌ಗಳಿಗೆ ಹೋಗಿ ನೋಡಿದಾಗ ಅಲ್ಲಿಯ ಜನರು ಅವರು ಶಿಕ್ಷಣ ಮಟ್ಟವನ್ನು ಸಾಧಿಸಿಕೊಂಡು ನೂರಕ್ಕೆ ನೂರು ಪಾಲು ಅಕ್ಷರಸ್ಥರಿದ್ದಾರೆ. ಅಲ್ಲಿ ಅಷ್ಟೊಂದು ಜನ ಅಕ್ಷರಸ್ಥರಾಗಲಿಕ್ಕೆ ಹೇಗೆ ಸಾಧ್ಯವಾಯಿತು ಎನ್ನತಕ್ಕಂಥ ವಿಚಾರವನ್ನು ಮಾಡಿದಂಥ ಸಂದರ್ಭದಲ್ಲಿ ಅವರು ಒಂದು ಯೋಜನೆಯನ್ನು ತಂದಿದ್ದಾರೆ. ಚೈನಾ ದೇಶದಲ್ಲಿ ಯಾವುದೇ ಒಬ್ಬ ವಿದ್ಯಾರ್ಥಿ ಎಸ್ ಎಸ್ ಎಲ್ ಸಿ, ಪಾಸು ಮಾಡಿದರೆ ಅವನು ತೇರ್ಗಡೆ ಹೊಂದಿದ ಎಂದು ಘೋಷಣೆ ಮಾಡಬೇಕಾದರೆ ಅವನು ಕನಿಷ್ಟಪಕ್ಷ ತನ್ನ ಗ್ರಾಮದಲ್ಲಿ ಐದು ಜನರಿಗೆ ಓದುಬರಹವನ್ನು ಕಲಿಸಬೇಕು. ಅದೇ ರೀತಿ ಒಬ್ಬ ವಿದ್ಯಾರ್ಥಿಯು ಪದವೀಧರನಾಗಬೇಕಾದರೆ, ಬಿ. ಎ., ಬಿ. ಎಸ್. ಸಿ., ಬಿ. ಕಾಂ. ಈ ರೀತಿಯಲ್ಲಿ ಅವನು ಡಿಗ್ರಿಯನ್ನು ಪಡೆಯತಕ್ಕಂಥ ಒಬ್ಬ ವಿದ್ಯಾರ್ಥಿಯು ಅದನ್ನು ಡಿಕ್ಲೇರ್ ಮಾಡಬೇಕಾದರೆ ಅವನು ಕನಿಷ್ಟ ಪಕ್ಷ ೧೦ ಜನರಿಗೆ ವಿದ್ಯಾರ್ಥಿಗಳನ್ನಾಗಿ ಸರಿಸಮಾನರನ್ನಾಗಿ ಅವರಿಗೆ ಬರೆಯುವುದನ್ನು ಓದುವುದನ್ನು ಕಲಿಸಬೇಕು. ಅದನ್ನು ಅವರಿಗೆ ಕಲಿಸದೇ ಹೋದರೆ ಆ ಪರೀಕ್ಷೆಯನ್ನು ಆ ವಿದ್ಯಾರ್ಥಿ ಪಾಸಾಗುವುದಿಲ್ಲ, ಇದನ್ನು ಹೇಗೆ ಕಂಡುಕೊಳ್ಳುತ್ತಾರೆಂದರೆ ಆ ಅನಕ್ಷರಸ್ಥರು ಪಾಸ್ ಆದರೆ ಮಾತ್ರ ಈ ಪದವೀಧರನಿಗೆ ಡಿಗ್ರಿಯನ್ನು ಕೊಡುತ್ತಾರೆ, ಇಲ್ಲದಿದ್ದರೆ ಇಲ್ಲ ಅವರು ಈ ರೀತಿಯ ಒಂದು ಕಾರ್ಯಕ್ರಮವನ್ನು ರೂಪಿಸಿ ಕೊಂಡಿರುವುದರಿಂದ ನೂರಕ್ಕೆ ನೂರು ಪಾಲು ಅನಕ್ಷರಸ್ಥರನ್ನು ತೊಡೆದುಹಾಕಿ ಅವರು ಇಡೀ ಸಮಾಜಕ್ಕೆ ಅಕ್ಷರಸ್ಥರ ಒಂದು ದೊಡ್ಡ ಕೊಡುಗೆಯನ್ನೇ ಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಶಿಕ್ಷಣ ವಿಷಯದಲ್ಲಿ ನಾನು ಅಂಕಿಅಂಶಗಳ ಬಗ್ಗೆ ಹೆಚ್ಚು ವಿವರವನ್ನು ಹೇಳಲಿಕ್ಕೆ ನಾನು ಹೋಗುವುದಿಲ್ಲ ಏಕೆಂದರೆ ಸಾಕಷ್ಟು ವೇಳೆ ಇಲ್ಲದಿರುವುದರಿಂದ ಅಂಕಿಅಂಶಗಳ ಒಂದು ಹೊರೆಯನ್ನು ಅಚ್ಚುಹಾಕಿಸಿ ಕೊಟ್ಟಿದ್ದಾರೆ.

೩-೦೦ ಪಿ. ಎಂ.

ಅಲ್ಲಿ ಒಂದು ವಿಚಾರವನ್ನು ಹೇಳತಕ್ಕಂಥ ಸಂದರ್ಭದಲ್ಲಿ ನಮ್ಮಲ್ಲಿ ಕೂಡ ಒಂದು ತರಬೇತಿ ಶಿಕ್ಷಣ ಸಂಸ್ಥೆ, ಸಂಶೋಧನಾ ಕೇಂದ್ರ ಇದೆಯೆಂದು ವರದಿಯಲ್ಲಿ ಒಪ್ಪಿಸಿದ್ದಾರೆ. ಇದರ ಕೆಲಸ ಏನು ಅಂದರೆ ಕರ್ನಾಟಕದಲ್ಲಿ ಶೈಕ್ಷಣಿಕ ತರಬೇತಿಯನ್ನು ಶ್ರೀ ಸಾಮಾನ್ಯನಿಗೆ ಕೊಡುವುದು. ಇದರ ಕಾರ್ಯ ಏನು ? ಧ್ಯೇಯೋದ್ದೇಶ ಏನು ? ಎಂಬುದನ್ನೆಲ್ಲಾ ಶ್ರೀ ಸಾಮಾನ್ಯನಿಗೆ ತಲುಪಿಸುವಂತೆ ಮಾಡತಕ್ಕದ್ದು. ಆದರೆ ಇದರ ಉದ್ದೇಶಗಳು. ನಾವು ಮಾಡತಕ್ಕ ಒಂದು ಕಾರ್ಯಕ್ರಮ ಯಾವ ಉದ್ದೇಶದಿಂದ ತಲುಪ ಬೇಕಾಗಿತ್ತೋ ಆ ಮಟ್ಟಿಗೆ ಶ್ರೀ ಸಾಮಾನ್ಯನಿಗೆ ತಲುಪಿಲ್ಲ ಇದರ ಜೊತೆಗೆ ಇಂಜಿನಿಯರಿಂಗ್, ವೈದ್ಯಕೀಯ ಪದವೀಧರರನ್ನು ಹೆಚ್ಚು ಮಾಡುವುದಕ್ಕಿಂತ ಹೆಚ್ಚಾಗಿ ಪ್ರತಿಯೊಬ್ಬರಿಗೂ ಶಿಕ್ಷಣ ತಲುಪಬೇಕು ತನ್ಮೂಲಕ ಸಮಾಜದ ಸುಧಾರಣೆ ಆಗಬೇಕು. ೩೮ ವರ್ಷಗಳಿಂದ ೫ ಪರ್ಸೆಂಟ್, ೨ ಪರ್ಸೆಂಟ್ ಶಿಕ್ಷಣವನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಇವೊತ್ತು ಜನತಾ ಸರ್ಕಾರ ಬಂದಮೇಲೆ ಯಾವ ಹಳ್ಳಿಯ ಶಾಲೆಯಲ್ಲಿ ೩೦-೪೦ ಮಕ್ಕಳು ಬರುತ್ತಿದ್ದರೋ ಅತ್ತ ಕಡೆ ಇವೊತ್ತು ೧೦೦ರಿಂದ ೧೫೦ ಜನ ಬರುತ್ತಿದ್ದಾರೆ ಎಂಬುದನ್ನು ತಿಳಿದು ಸಂತೋಷವಾಗುತ್ತಿದೆ. ಹಳ್ಳಿಗಳಿಗೆ ಹೋದಾಗ ನಮಗೆ ಸರಿಯಾದ ಉಪಾಧ್ಯಾಯರನ್ನು ಕೊಡಿ ಎಂದು ಅಲ್ಲಿಯವರು ಕೇಳುತ್ತಿದ್ದಾರೆ. ಬಹುಶಃ ಇಷ್ಟು ವರ್ಷಗಳಲ್ಲಿ ಹಳ್ಳಿಯ ಜನರು ಸ್ವಾಮಿ, ನಮಗೆ ಈಗ ಉಪಾಧ್ಯಾಯರನ್ನು ಕೊಡಿ ಎಂದು ಕೇಳುತ್ತಿರುವುದು, ನಮಗೆ ಒಳ್ಳೆಯ ಶಾಲಾ ಕಟ್ಟಡ ಕೊಡಿ ಎಂದು ಕೇಳುತ್ತಿರುವುದು, ೩೦ ಮಕ್ಕಳು ಇದ್ದ ಕಡೆ ೧೪೦ ಮಕ್ಕಳು ಬರುತ್ತಾ ಇರುವುದು ಸಂತೋಷದ ಸಂಗತಿ ಹಾಗೂ ಇದು ಅಭಿವೃದ್ಧಿಯ ಸಂಕೇತವಾಗಿದೆ. ಇದಕ್ಕೆ ಕಾರಣ ಏನು ? ಇದು ಜನತಾ ಸರ್ಕಾರದ ಸಾಧನೆ. ಕಾಂಗ್ರೆಸ್ ಸರ್ಕಾರ ಇದ್ದಾಗ ಏನು ಆಗಿತ್ತು ಎಂದರೆ ಜನಗಳು ಎಲ್ಲಿಯು

ತನಕ ದಡ್ಡರಾಗಿರುತ್ತಾರೋ ಅಲ್ಲಿಯವರೆಗೆ ನಮಗೆ ಲಾಭವಿದೆ ಎಂದು ತಿಳಿದಿದ್ದರು. ಒಬ್ಬ ಬುದ್ಧಿವಂತ ಹುಟ್ಟಬೇಕಾದರೆ ನೂರಾರು ಜನ ಮೂರ್ಖರು ಹುಟ್ಟಬೇಕು. ಎಲ್ಲಿಯವರೆಗೆ ಜನ ಬುದ್ಧಿವಂತರಾಗುವುದಿಲ್ಲ ಅಲ್ಲಿಯವರೆಗೆ ನಾವು ಅಧಿಕಾರದಲ್ಲಿ ಸಾಗಬಹುದು ಎಂದು ತಿಳಿದುಕೊಂಡಿದ್ದರು. ಜನರು ದಡ್ಡರಾಗಿದ್ದರೆ ನಾವು ಯಾವ ರೀತಿ ಬೇಕಾದರೂ ರಾಜ್ಯಭಾರ ಮಾಡಬಹುದು ಎಂದು ಅವರು ತಿಳಿದಿದ್ದರು. ಅವರ ಈ ಒಂದು ಕುತಂತ್ರವನ್ನು ನಾನು ಗೇಲಿ ಮಾಡುತ್ತೇನೆ. ಉಚಿತ ಪಠ್ಯ ಪುಸ್ತಕವನ್ನು ಏಕೆ ಕೊಡಬೇಕು ಒಂದು ರೂಪಾಯಿ ಕೊಟ್ಟು ಪುಸ್ತಕವನ್ನು ಕೊಳ್ಳಲು ಆಗುವುದಿಲ್ಲವೇ ಎಂದು ಕೇಳುತ್ತಾರೆ. ಸಮವಸ್ತ್ರವನ್ನು ಏತಕ್ಕೆ ಕೊಡಬೇಕುಎನ್ನುವುದರ ಬಗ್ಗೆ ಸಹಾ ಇವರು ಕೇಳುತ್ತಿದ್ದಾರೆ. ಬಡಮಕ್ಕಳಿಗೆ ಈ ಸಮವಸ್ತ್ರ ಹಾಗೂ ಉಚಿತಕೊಡುವುದರಿಂದ ವಿಷ್ಟೋ ಸಹಾಯವಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬಹುಶಃ ಇವರಿಗೆ ಆ ಪ್ರೋಗ್ರಾಂ ಗೊತ್ತಿಲ್ಲದೇ ಇರಬಹುದು. ಈಚ್ ಒನ್ ಟೀಚ್ ಒನ್ ಇವರು ಮಾಡಿದರೆ ಹೇಗೆ?

ಶ್ರೀ ಡಿ. ಟಿ. ಜಯಕುಮಾರ್.— ಈ ಕಾರ್ಯಕ್ರಮ ಬರೀ ಪುಸ್ತಕದಲ್ಲಿ ಮಾತ್ರ ಇತ್ತು, ಕಾರ್ಯ ರೂಪದಲ್ಲಿ ಇರಲಿಲ್ಲ.

ಅಧ್ಯಕ್ಷರು.—ಒಬ್ಬರು ಮಾತನಾಡಿ.

ಶ್ರೀ ಡಿ. ಟಿ. ಜಯಕುಮಾರ್.—ನಾವು ಮಾತನಾಡುವಾಗ ಹೀಗೆ ಮಧ್ಯೆ ಮಧ್ಯೆ ಯಾರು ಪ್ರವೇಶ ಮಾಡಬಾರದು. ಮಾನ್ಯ ಅಧ್ಯಕ್ಷರೇ, ಸಮವಸ್ತ್ರವನ್ನು ಕೊಡುತ್ತಿರುವ ಬಗ್ಗೆ ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಮಾನ್ಯ ವಿದ್ಯಾ ಸಚಿವರು ಈ ಕಡೆ ಗಮನ ಕೊಡಬೇಕು. ಇಡೀ ಕರ್ನಾಟಕದಲ್ಲಿ ಏಕರೂಪತೆಯ ಸಮವಸ್ತ್ರವನ್ನು ಕೊಡತಕ್ಕದು ಸೂಕ್ತ. ಇದನ್ನು ತಂದರೆ ಬಹಳ ಜನರಲ್ಲಿ ಮೇಲು-ಕೀಳು ಎಂಬ ಭಾವನೆ ಹೋಗುವುದರ ಮುಖಾಂತರ ನಾವು ಉನ್ನತ ಶಿಕ್ಷಣವನ್ನು ತರತಕ್ಕಂಥ ಪ್ರಯತ್ನವನ್ನು ಮಾಡಬಹುದು. ಕರ್ನಾಟಕದ ಪ್ರತಿ ಪ್ರೈಮರಿ ಶಾಲೆಯಲ್ಲಿ ಒಂದೇ ತರನಾದ ಬಟ್ಟೆಯನ್ನು ಒದಗಿಸಬೇಕು. ಇದರಿಂದ ಹಳ್ಳಿಯಲ್ಲೇ ಇರಲಿ, ಅಥವಾ ಪಟ್ಟಣದಲ್ಲಿಯೇ ಇರಲಿ ಅವರ ಬಟ್ಟೆಯನ್ನು ನೋಡಿದಾಕ್ಷಣ ಇವರು ಪ್ರೈಮರಿ ಶಾಲೆಯ ಮಕ್ಕಳು ಎಂದು ಗುರುತಿಸಬಹುದು. ನಂತರ ಮಿಡಲ್ ಸ್ಕೂಲ್ ಎಂದರೆ ಮಾಧ್ಯಮಿಕ ಶಾಲೆಯ ಮಕ್ಕಳಿಗೆ ಒಂದೇ ರೀತಿಯ ವಸ್ತ್ರಗಳನ್ನು ಕೊಡಬೇಕು. ಇದೇ ರೀತಿ ಪ್ರೌಢ ಶಾಲೆಗಳಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಗೂ ಒಂದೇ ರೀತಿಯ ಯೂನಿಫಾರಂ ಒದಗಿಸಬೇಕು. ಹೀಗೆ ಮೂರು ಹಂತಗಳಲ್ಲಿ ಏಕರೂಪತೆಯ ಸಮವಸ್ತ್ರವನ್ನು ಒದಗಿಸಿಕೊಡಬೇಕು. ಏಕರೂಪತೆ ಸಮವಸ್ತ್ರವನ್ನು ಕೊಟ್ಟ ಮಾತ್ರಕ್ಕೆ ಶಿಕ್ಷಣದ ಮಟ್ಟ ಅಥವಾ ಉನ್ನತಿ ಆಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಿಲ್ಲ. ಆದರೆ ಈ ಕಾರ್ಯಕ್ರಮವನ್ನು ಮಾಡುವುದರಿಂದ ಒಳ್ಳೆಯದಾಗುತ್ತದೆಂದು ನನ್ನ ಭಾವನೆ. ಇದರ ಬಗ್ಗೆ ಸೂಕ್ತ ನಿರ್ಣಯ ಮಾಡಬೇಕೆಂದು ಮಾನ್ಯ ವಿದ್ಯಾ ಸಚಿವರನ್ನು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಕೊನೆಯದಾಗಿ ಹೇಳಿ. ೧೦ ನಿಮಿಷ ಆಯಿತು.

ಶ್ರೀ ಡಿ. ಟಿ. ಜಯಕುಮಾರ್.—ಕೊನೆಯದಾಗಿ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ಮಾತೃದೇವೋ ಭವ, ಪಿತೃ ದೇವೋ ಭವ, ಗುರು ದೇವೋ ಭವ ಇತ್ಯಾದಿಯಾಗಿ ಗೌರವ ಭಾವನೆಗಳು ನಮ್ಮ ಸಮಾಜದಲ್ಲಿ ಇದೆ. ನಾನು ಕೂಡ ಒಬ್ಬ ಉಪಾಧ್ಯಾಯರ ಮಗನಾಗಿರುವುದರಿಂದ, ಉಪಾಧ್ಯಾಯರ ಕಷ್ಟ ಏನು, ಸುಖ ಏನು ಎನ್ನುವ ವಿಚಾರ ಗೊತ್ತಿದೆ. ಸ್ವಾಮಿ ಅವರಿಗೆ ಕೊಡತಕ್ಕಂಥ ಸಂಬಳದಲ್ಲಿ ಉಪ್ಪು ಮೆಣಸಿನ ಕಾಯಿ ಇತ್ಯಾದಿಯಾಗಿ ಕೊಂಡು ಮನೆಯಲ್ಲಿ ನೆಮ್ಮದಿಯಿಂದ ಜೀವನ ಮಾಡಲು ವಾತಾವರಣ ಇದ್ದರೆ ಅವರು ಶಾಲೆಗಳಲ್ಲಿ ಮಕ್ಕಳಿಗೆ ಸರಿಯಾಗಿ ಬೋಧನೆಯನ್ನು ಮಾಡುತ್ತಾರೆ. ಅಕಸ್ಮಾತ್ತಾಗಿ ಇದು ದೊರೆಯದಿದ್ದರೆ, ಇಂತಹ ಸಂದರ್ಭದಲ್ಲಿ, ಮನೆಯಲ್ಲಿ ಜಂಜಾಟ ಅಥವಾ ಬಡಿದಾಟ ಇದ್ದರೆ ಅವರು ನೆಮ್ಮದಿಯಿಂದ ಪಾಠ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಉಪಾಧ್ಯಾಯರ ಸಂಬಳಕ್ಕಾಗಿ ಒಂದು ಸಮಿತಿಯನ್ನು ರಚನೆ ಮಾಡಿ ಅವರ ಸ್ಥಿತಿಗಳನ್ನು ಉತ್ತಮ ಪಡಿಸುವುದಕ್ಕಾಗಿ ಹೆಚ್ಚಿನ ಸಂಬಳವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ಒಂದು ಮಾತು ಹೇಳಬಯಸುತ್ತೇನೆ. ಇವೊತ್ತು ರಾಷ್ಟ್ರ ಪ್ರಜ್ಞೆ ಸಮಾಜ ಪ್ರಜ್ಞೆ ಬೆಳೆಯುತಕ್ಕಂಥ ಒಂದು ಉನ್ನತ ಮಟ್ಟವನ್ನು ನಾವು ಕಾಪಾಡಿಕೊಂಡು ಬರಬೇಕಾದರೆ ಈಗಿರುವ ಪಠ್ಯಪುಸ್ತಕಗಳ ನೀತಿ ನಿಯಮಗಳನ್ನು ಬದಲಾವಣೆ ಮಾಡಬೇಕು. ಇದಕ್ಕಾಗಿ ಒಂದು ಉನ್ನತ ಮಟ್ಟದ ಪಠ್ಯ ಪುಸ್ತಕಗಳನ್ನು ಅಳವಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕೊನೆಯದಾಗಿ, ವಯಸ್ಕರ ಶಿಕ್ಷಣದ ಬಗ್ಗೆ ಇಲ್ಲಿ ಏನೊಂದು ಅಂಕಿ ಅಂಶಗಳನ್ನು ಇಟ್ಟಿದ್ದಾರೆ ಅದೆಲ್ಲವೂ ಮಕ್ಕಿಕಾಮಕ್ಕಿಯ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆಂದರೆ ತಪ್ಪಾಗದು. ಸ್ವಾಮಿ ರಾಜ್ಯದಲ್ಲಿ ೫,೧೯೩ ವಯಸ್ಕರ ಶಿಕ್ಷಣ ಕೇಂದ್ರಗಳಿವೆ. ಈ ಕೇಂದ್ರಗಳಲ್ಲಿ ಓದುವುದಕ್ಕೆ ಬರತಕ್ಕಂಥ ಪುರುಷರು ಮತ್ತು ಸ್ತ್ರೀಯರ ಸಂಖ್ಯೆ ಸುಮಾರು ಹದಿನೆಂಟು ಲಕ್ಷ ಎಂಭತ್ತೆಂಟು ಸಾವಿರದ ಒಂಭತ್ತು ಆಗಿರುತ್ತದೆ. ಇಲ್ಲಿನ ಉಪಾಧ್ಯಾಯರಿಗೆ ತಿಂಗಳಿಗೆ ರೂ. ೫೦-೬೦ನ್ನು ನೀಡುತ್ತೀರಿ. ಪ್ರತಿಯೊಂದು ವಯಸ್ಕರ ಶಿಕ್ಷಣ ಕೇಂದ್ರಕ್ಕೆ ೩೦ ಜನರು ಬರುತ್ತಾರೆ. ಈ ಮೂವತ್ತು ಜನರನ್ನು ಪರೀಕ್ಷೆ ಮಾಡಿದರೆ ಪತ್ರಿಕೆ ಓದುವುದಕ್ಕೆ ಸಹಿ ಮಾಡುವುದಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲ. ಆದಕಾರಣ, ಸ್ಲೇಟು ಬಳಪಗಳು ಇತ್ಯಾದಿಗಳಿಗೆ ಏತಕ್ಕಾಗಿ ಇಷ್ಟೊಂದು ದುಂದು ವೆಚ್ಚ ಮಾಡುತ್ತೀರೆಂದು ವಿದ್ಯಾಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ಇನ್ನೊಂದು ವಿಚಾರವಾಗಿ ಮಾತನಾಡುತ್ತೇನೆ. ನಮ್ಮ ರಾಜ್ಯದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಇದೆ. ಮೈಸೂರು ವಿಶ್ವವಿದ್ಯಾನಿಲಯ ಇದೆ. ಬೆಂಗಳೂರು ವಿಶ್ವವಿದ್ಯಾನಿಲಯ ಇದೆ, ಈ ವಿಶ್ವವಿದ್ಯಾನಿಲಯಗಳಲ್ಲಿ ಜಾತಿಯತೆ ಹಾಗೂ ರಾಜಕೀಯ ತುಂಬಿಕೊಂಡಿದೆ. ಇದರಿಂದಾಗಿ ಈ ವಿಶ್ವವಿದ್ಯಾನಿಲಯಗಳು ಯಾವ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸಬೇಕೋ ಅದನ್ನು ಸಾಧನೆ ಮಾಡುವುದಕ್ಕಾಗುತ್ತಿಲ್ಲ. ಆದಕಾರಣ, ಈ ಒಂದು ಜಾತೀಯತೆಯನ್ನು ನಿವಾರಿಸಲು ತಾವು ಒಂದು ನೀತಿ ನಿರೂಪಣೆ ಮಾಡಬೇಕು. ಅದಕ್ಕೊಂದು ಉನ್ನತ ಸಲಹಾ ಸಮಿತಿಯನ್ನು ಮಾಡಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಅಲ್ಲದೆ ಶಿಕ್ಷಣದ ಗುಣಮಟ್ಟವನ್ನು ಸಂಧಾರಣೆ ಮಾಡುವುದಕ್ಕೆ ಸೂಕ್ತ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ. ಮಾನ್ಯ ಮುಖ್ಯಮಂತ್ರಿಯವರು ಈ ಶಿಕ್ಷಣಕ್ಕೆ ಏನು ಹಣವನ್ನು ಕೊಟ್ಟಿದ್ದಾರೆ, ಅದು ಸಾಲದೆಂದು ನನ್ನ ಅಭಿಪ್ರಾಯ, ಇನ್ನು ಹೆಚ್ಚಿನ ಹಣದ ಸಹಾಯವನ್ನು ಈ ಶಿಕ್ಷಣಕ್ಕೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ ನಾರಾಯಣಸ್ವಾಮಿ (ಬಾಗೇಪಲ್ಲಿ).—ಮಾನ್ಯ ಅಧ್ಯಕ್ಷರೇ, ಶಾಲೆಗಳ ಬಗ್ಗೆ ನನ್ನ ಮಾತನ್ನು ಪ್ರಾರಂಭಿಸುವ ಮೊದಲು, ಕಟ್ಟಡ ಹಾಗೂ ಮೈದಾನಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಬಸ್‌ಸ್ಟ್ಯಾಂಡ್ ಬಳಿ ಇರತಕ್ಕ ಶಾಲೆಗಳಿಗೆ ಮೈದಾನವಿರುವುದಿಲ್ಲ. ಅಲ್ಲದೆ ಹಲವು ಶಾಲೆಗಳಿಗೆ ಶೌಚಗೃಹವಿರುವುದಿಲ್ಲ, ಹಾಗೂ ಕುಡಿಯುವ ನೀರು ಇರುವುದಿಲ್ಲ. ಈ ಮಕ್ಕಳು ಮೈದಾನದ ಕಂಪೌಂಡಿನಲ್ಲಿ ಮಲವಿಸರ್ಜನೆ ಮಾಡುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಪ್ರತಿಶಾಲೆಗೂ ಬೋರ್‌ವೆಲ್ ಹಾಕಿಸಬೇಕು ಎಂದು ನಾನು ವಿದ್ಯಾಮಂತ್ರಿಗಳಲ್ಲಿ ಹೇಳುತ್ತಿದ್ದೇನೆ.

(ಶ್ರೀಮತಿ ಮನೋರಮ ಮಧ್ವರಾಜ್ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಮ್ಮ ರಾಜ್ಯದ ಹಲವಾರು ಶಾಲೆಗಳಲ್ಲಿ ಪುಸ್ತಕ ಭಂಡಾರಗಳಿಲ್ಲ. ಅಲ್ಲಿರತಕ್ಕಂಥ ಶಾಲೆಗಳಿಗೆ ಪುಸ್ತಕ ಭಂಡಾರವನ್ನು ತೆರೆಯಬೇಕು ಹಾಗೂ ಪತ್ರಿಕೆಗಳನ್ನು ಒದಗಿಸಿ ವಾಚನಾಲಯವನ್ನು ತೆರೆಯಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ವಿಜ್ಞಾನದ ಕೆಲವು ಕಾಲೇಜುಗಳಲ್ಲಿ ಉಪಕರಣಗಳು ಇರುವುದಿಲ್ಲ. ವಿಜ್ಞಾನದ ಅಧ್ಯಾಪಕರು ಕಾಲೇಜು ಮುಗಿಯುವ ಮುಂಚಿತವಾಗಿ ೩-೪ ತಿಂಗಳು ಮೊದಲು ನೇಮಕವಾಗುತ್ತಾರೆ. ಇದು ಸರಿಯಲ್ಲ ಆದಕಾರಣ ಈ ಒಂದು ಕೊರತೆಯನ್ನು ನೀಗಿಸಬೇಕೆಂದು ನಾನು ಕೋರುತ್ತೇನೆ, ಇನ್ನು ಕೆಲವು ಖಾಸಗೀ ಹಾಗೂ ಸರ್ಕಾರೀ ಕಾಲೇಜುಗಳಿಗೆ ಕಂಟ್ರಾಕ್ಟ್ ಬೇಸಿಸ್ ಮೇಲೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತಾರೆ, ಬಿಜಾಪುರದವರನ್ನು ಕೋಲಾರ ಜಿಲ್ಲೆಗೆ ನೇಮಕ ಮಾಡುತ್ತಾರೆ. ಈ ರೀತಿ ಮಾಡಿದರೆ, ಇವರು ಇಷ್ಟೊಂದು ದೂರ ಪ್ರಯಾಣ ಮಾಡುವುದಕ್ಕೆ ಬಹಳ ತೊಂದರೆಯಾಗುತ್ತದೆ. ಆದಕಾರಣ ಅಂತಹ ಜನರನ್ನು ಆಯಾ ಜಿಲ್ಲೆಯಲ್ಲಿ ನೇಮಕ ಮಾಡುವುದು ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ಪ್ರತಿಯೊಂದು ಶಾಲೆಯಲ್ಲಿ ಈ ಮೆಡಿಕಲ್ ಚೆಕಪ್‌ನ್ನು ಸರಿಯಾಗಿ ಮಾಡುತ್ತಿಲ್ಲ.

ಈ ತರಹ ಕೆಲವು ನ್ಯೂನತೆಗಳು ಈ ರೂಪದಲ್ಲಿ ಕಾಡುತ್ತಿವೆ. ಆದ್ದರಿಂದ ಮಕ್ಕಳಿಗೆ ಪ್ರತಿಯೊಂದು ಶಾಲೆಯಲ್ಲೂ ಒಂದು ಫೈಲನ್ನು ಓಪನ್ ಮಾಡಿ ಆ ಮಕ್ಕಳಿಗೆ ಏನು ಖಾಯಿಲೆ ಇದೆ ಅವರ ಬ್ಲಡ್ ಗ್ರೂಪ್ ಯಾವುದು, ಆ ಮಕ್ಕಳಲ್ಲಿರತಕ್ಕ ಖಾಯಿಲೆಗಳೇನು ಎಂಬುದನ್ನು ಆ ಫೈಲ್‌ನಲ್ಲಿ ನಮೂದಿಸಿ ನಂತರ ಆ ಮಕ್ಕಳ ತಂದೆ ತಾಯಿಗಳ ಗಮನಕ್ಕೆ ತಂದು ನಿಮ್ಮ ಮಗುವಿಗೆ ಇಂತಹ ಕಾಯಿಲೆ ಇದೆ ಯೆಂದು ತಿಳಿಸಿ ಚಿಕಿತ್ಸೆಗಾಗಿ ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಮಾಡಬೇಕೆನ್ನುವ ಸಲಹೆಯನ್ನು ನಾನು ಮಾನ್ಯ ವಿದ್ಯಾ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಕೆಲವು ಶಾಲೆಗಳಲ್ಲಿ ಬರತಕ್ಕಂತಹ ಹುಡುಗರು ಬಹಳ ಬಡವರು, ಅವರಿಗೆ ಒಂದು ಹೊತ್ತಿನ ಉಪಹಾರವನ್ನಾದರೂ ತಾವು ಕೊಡಬೇಕು, ಹಾಗೂ ಈಗ ಹಾಲಿನ ಉತ್ಪಾದನೆ ಹೆಚ್ಚಿರುವುದರಿಂದ ಕೆಲವು ವೇಳೆ ಹಾಲು ವೇಸ್ಟ್ ಆಗುತ್ತಿರುವುದರಿಂದ ಈ ಪ್ರೈಮರಿ ಶಾಲಾ ಮಕ್ಕಳಿಗೆ ಒಂದು ಹೊತ್ತಿನ ಹಾಲನ್ನು ಕೊಡಬೇಕೆಂದು ನಾನು ಹೇಳುತ್ತೇವೆ. ಈ ನ್ಯೂಟ್ರೀಷಿಯಸ್ ಫುಡ್ ಎಂದು ಏನು ಕೊಡುತ್ತಿದ್ದೀರಿ ಇದನ್ನು ಮುಂದುವರಿಸಬೇಕೆಂದು ಹೇಳುತ್ತೇನೆ, ಇನ್ನು ಕೆಲವು ಶಾಲೆಗಳಲ್ಲಿ ಶಿಕ್ಷಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅಂತಹ ಕಡೆಗೆ ಇನ್ಸ್‌ಪೆಕ್ಟರ್‌ಗಳನ್ನು ಕಳುಹಿಸಬೇಕು ಇನ್ನು ಕೆಲವು ಶಾಲೆಗಳಲ್ಲಿ ಒಬ್ಬ ಉಪಾಧ್ಯಾಯರು ಎರಡು ಕಡೆ ಕೆಲಸ ಮಾಡುವುದು ನನ್ನ ಗಮನಕ್ಕೆ ಬಂದಿದೆ ಅದೂ ನನ್ನ ಕ್ಷೇತ್ರದಲ್ಲಿಯೇ ಎರಡು ಕಡೆ ಎಂದರೆ ಬೆಳಗ್ಗೆ ಒಂದು ಶಾಲೆಯಲ್ಲಿ ನಂತರ ಮಧ್ಯಾಹ್ನ ಮತ್ತೊಂದು ಶಾಲೆಯಲ್ಲಿ, ಆದ್ದರಿಂದ ಇಂಥ ಹಳ್ಳಿಗಳಿಗೆ ತಾವು ಇನ್ಸ್‌ಪೆಕ್ಟರ್‌ಗಳನ್ನು ಹೆಚ್ಚು ಕಳುಹಿಸಬೇಕು. ಈ ಇನ್ಸ್‌ಪೆಕ್ಟರ್‌ಗಳು ಹಳ್ಳಿಗಳಿಗೆ ಹೋಗದಿರಲು ಕೆಲವು ಕಾರಣಗಳಿವೆ. ಅವುಗಳಲ್ಲಿ ಮೊದಲನೆಯದಾಗಿ ಹಳ್ಳಿಗಳಲ್ಲಿ ರಸ್ತೆಗಳು ಸರಿಯಾಗಿಲ್ಲ, ಬಸ್ ವ್ಯವಸ್ಥೆ ಸರಿಯಾಗಿಲ್ಲ, ಆದ್ದರಿಂದ ನೀವು ಇನ್ಸ್‌ಪೆಕ್ಟರ್‌ಗಳಿಗೆ ಅನುಕೂಲವಾಗುವಂತೆ ಅವರಿಗೆ ಒಂದು ವೆಹಿಕಲ್‌ನ್ನು ಸರ್ಕಾರದ ವತಿಯಿಂದ ಕೊಡಿಸಿ ಅವರು ಪ್ರವಾಸ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಇನ್ನು ಕೆಲವು ಶಾಲೆಗಳಲ್ಲಿ ಉಪಾಧ್ಯಾಯರೇ ಕಸ ಗುಡಿಸತಕ್ಕ ಪರಿಸ್ಥಿತಿ ಇದೆ. ಇದಕ್ಕೆ ಕಾರಣ ಸಾಕಷ್ಟು ಅಟೆಂಡರ್‌ಗಳು ಇಲ್ಲದಿರುವುದು. ಆದ್ದರಿಂದ ತಾವು ಶಾಲೆಗಳಿಗೆ ಹೆಚ್ಚು ಅಟೆಂಡರ್‌ಗಳನ್ನು ನೇಮಕ ಮಾಡಬೇಕು. ಇನ್ನು ಮಕ್ಕಳು ಪ್ರವಾಸ ಮಾಡಲು ಪಾಸುಗಳನ್ನು ಏನು ಕೊಟ್ಟಿದ್ದೀರಿ ಇದರಲ್ಲಿ ಒರಿಜಿನಲ್ ಯಾವುದು ಡೂಪ್ಲಿಕೇಟ್ ಯಾವುದು ಎಂದು ಸರಿಯಾಗಿ ಗೊತ್ತಾಗುವುದಿಲ್ಲ, ಕೆಲವರು ನಾನು ಒಬ್ಬ ವಿದ್ಯಾರ್ಥಿ ಎಂದು ಹೇಳಿ ಡೂಪ್ಲಿಕೇಟ್ ಪಾಸನ್ನು ಇಟ್ಟುಕೊಂಡು ಬೆಂಗಳೂರಿನಲ್ಲಿ ತರಕಾರಿ ವ್ಯಾಪಾರ ಮಾಡಿಕೊಂಡು ಬಸ್‌ನಲ್ಲಿ ಓಡಾಡು ತ್ತಿದ್ದಾರೆ. ಇದು ನಿಮ್ಮ ಗಮನಕ್ಕೆ ಬಂದಿಲ್ಲವೇ ? ನಾನು ಈ ವಿಷಯವನ್ನು ಪೋಲಿಸರ ಗಮನಕ್ಕೆ ತೆಗೆದುಕೊಂಡು ಬಂದರೂ ಕೂಡ ಅವರು ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ವಿದ್ಯಾರ್ಥಿಗಳಲ್ಲ ದವರಿಂದ ಈ ರೀತಿಯ ಅನಾಹುತಿ ನಡೆಯುತ್ತಿರುವುದರಿಂದ ತಾವು ಸೂಕ್ತ ಕ್ರಮವನ್ನು ತೆಗೆದು ಕೊಳ್ಳಬೇಕು.

ಇನ್ನು ನನ್ನ ಕ್ಷೇತ್ರದಲ್ಲಿ ಎ.ಜಿ.ಟಿ.ಎಸ್. ಎಂದು ಒಂದು ಸೋಷಿಯಲ್ ಆರ್ಗನೈಸೇಸ್ ಮಾಡಿ ಸುಮಾರು ೮೦ ಕ್ಲಾಸ್‌ಗಳನ್ನು ನಡೆಸುತ್ತಿದ್ದಾರೆ, ಇದು ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ? ಅವರೇ ಪುಸ್ತಕಗಳನ್ನು ತಯಾರು ಮಾಡುತ್ತಿದ್ದಾರೆ ಇದಕ್ಕೆ ಸರ್ಕಾರವೇನಾದರೂ ಅನುಮತಿ ಕೊಟ್ಟಿದೆಯೇ ? ಬಾಗೇಪಲ್ಲಿಯಲ್ಲಿ ಈ ಕ್ಲಾಸ್‌ಗಳಲ್ಲಿ ಬಹಳ ಜನರು, ರೈತರು ಹಾಗೂ ಕೂಲಿಗಳು, ಇವರಿಂದ ೨೦-೩೦ ರೂಪಾಯಿಗಳನ್ನು ಪಾಠವನ್ನು ಹೇಳಿ ಕೊಡುವ ನೆಪದಲ್ಲಿ ವಸೂಲು ಮಾಡುತ್ತಾ ಬಹಳ ಕಿರುಕುಳ ಕೊಡುತ್ತಿದ್ದಾರೆ. ಈ ಕ್ಲಾಸ್‌ಗಳನ್ನು ನಡೆಸಲು ತಾವು ಏನಾದರೂ ಅನುಮತಿಯನ್ನು ಕೊಟ್ಟಿದ್ದೀರೋ ಇಲ್ಲವೇ ಪರಿಶೀಲನೆ ಮಾಡಬೇಕೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನು ತಾಲ್ಲೂಕುಗಳಲ್ಲಿ ಮಕ್ಕಳು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವಾಗ, ಅವರಿಗೆ ಆರು ರೂಪಾಯಿಗಳನ್ನು ಊಟತಿಂಡಿಗಳಿಗೆ ಕೊಡುತ್ತಾರೆ. ಅದು ಅವರಿಗೆ ಸಾಕಾಗುವುದಿಲ್ಲ. ಒಂದು ಬಾಳೆ ಹಣ್ಣಿನ ಬೆಲೆ ೮೦ ಪೈಸೆಯಾಗಿದೆ ಅವರಿಗೆ ಕೊಡುವ ೬ ರೂಪಾಯಿಗಳಲ್ಲಿ ಎರಡು ಹೊತ್ತಿನ ಊಟತಿಂಡಿಗಳಿಗೆ ಸಾಕಾಗುವುದಿಲ್ಲ. ಈಗಿನ ಕಾಲದಲ್ಲಿ ಒಬ್ಬ ಮನುಷ್ಯನಿಗೆ ಕನಿಷ್ಟ ದಿನಕ್ಕೆ ೧೦ ರೂಪಾಯಿಗಳಾದರೂ ಬೇಕು, ಆದ್ದರಿಂದ ಈ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಕೊಡುವ ಭತ್ಯವನ್ನು ಹೆಚ್ಚಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಪಠ್ಯಪುಸ್ತಕಗಳ ವಿಚಾರವೆಂದರೆ ಈ ಪುಸ್ತಕಗಳು ಛಿದ್ರಛಿದ್ರವಾಗಿದ್ದು, ಅಲ್ಲಿನ ಮಕ್ಕಳಿಗೆ ಬಹಳ ತೊಂದರೆಯಾಗಿದೆ. ಮತ್ತೆ ಈ ಪುಸ್ತಕ ಗಳನ್ನು ಒಳ್ಳೆಯ ಪೇಪರ್‌ನಲ್ಲಿ ಪ್ರಿಂಟ್ ಮಾಡಿಸಬೇಕೆಂದು ನಾನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ

ಇನ್ನೂ ೩೦ ಪರ್ಸೆಂಟ್‌ನಷ್ಟು ಪುಸ್ತಕಗಳು ವಿತರಣೆಯಾಗಿಲ್ಲ. ಇನ್ನು ಬಟ್ಟೆಗಳನ್ನು ಹೊಲಿಸಿ ಕಳುಹಿಸುತ್ತೀರಿ, ಅವು ಇನ್ನೂ ವಿತರಣೆಯಾಗಿಲ್ಲ. ಈ ಶಾಲಾ ಬಟ್ಟೆಗಳನ್ನು ಹೊಲಿಸಿ ಕಳುಹಿಸಲು ದರ್ಜಿಗಳಿಗೆ ಕಾಂಟ್ರಾಕ್ಟ್ ಕೊಡುತ್ತೀರಿ. ಬಟ್ಟೆಗಳನ್ನು ಹೊಲಿಸಲು ೧೦ ಸಾವಿರವಾದರೆ, ಅದಕ್ಕೆ ಲಾರಿ ಬಾಡಿಗೆ ೧೦ ಸಾವಿರವಾಗುತ್ತದೆ. ಅದರ ಬದಲು ಈ ತಾಲ್ಲೂಕಿನಲ್ಲೆ ಒಂದು ಟೈಲರಿಂಗ್ ಕ್ಲಾಸ್‌ನ್ನು ತೆಗೆದು ಇಲ್ಲಿನ ಹೆಣ್ಣುಮಕ್ಕಳಿಗೆ ತರಬೇತಿ ಕೊಟ್ಟು ಅವರಿಂದಲೇ ಈ ಬಟ್ಟೆಗಳನ್ನು ಹೊಲೆಸಿದರೆ, ಲಾರಿ ಬಾಡಿಗೆಯೂ ಉಳಿಯುತ್ತದೆ, ಮತ್ತು ಅಲ್ಲಿನ ಹೆಣ್ಣು ಮಕ್ಕಳಿಗೂ ದಿನಗೂಲಿ ಸಿಕ್ಕಿದಂತಾಗುತ್ತದೆ. ಆದ್ದರಿಂದ ಮಾನ್ಯ ವಿದ್ಯಾ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಈ ತಾಲ್ಲೂಕಿನಲ್ಲೂ ಒಂದು ಟೈಲರಿಂಗ್ ಕ್ಲಾಸ್‌ನ್ನು ಆದಷ್ಟು ಬೇಗ ತೆರೆಯಿರಿ. ಕೆಲವು ಕಡೆ ಶಾಲೆಗಳಲ್ಲಿ ಒಳ್ಳೆಯ ಫರ್ನಿಚರ್ ಇಲ್ಲ ಕಟ್ಟಡಗಳು ಇಲ್ಲ. ನನ್ನ ಕ್ಷೇತ್ರದಲ್ಲಿ ಬೆಳ್ಳೂರು ಎನ್ನತಕ್ಕಂಥ ಒಂದು ಗ್ರಾಮ ಇದೆ. ಅಲ್ಲಿ ಒಂದು ಬಸ್ ಸೆಂಟರ್ ಇದೆ. ರಾತ್ರಿ ಹೊತ್ತು ಅಲ್ಲಿ ಭಿಕ್ಷುಕರು ಇರುತ್ತಾರೆ, ಬೆಳಿಗ್ಗೆ ೯ ರಿಂದ ೧೧ರ ತನಕ ದನಕರುಗಳನ್ನು ಕಟ್ಟುತ್ತಾರೆ. ನಂತರ ಅಲ್ಲಿಯೇ ಹೆಣ್ಣು ಮಕ್ಕಳಿಗೆ ಪ್ರೌಢ ಶಾಲೆಯನ್ನು ನಡೆಸುತ್ತಾರೆ ಒಂದೇ ಸ್ಥಳದಲ್ಲಿ ಈ ರೀತಿಯಲ್ಲಿ ಮೂರು ಶಿಫ್ಟ್‌ಗಳು ಕೆಲಸಗಳು ನಡೆಯುತ್ತವೆ. ಅಲ್ಲಿನ ಹೆಣ್ಣು ಮಕ್ಕಳು ಮರದ ಕೆಳಗೆ ಕುಳಿತು ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಆದ್ದರಿಂದ ಈ ಹೆಣ್ಣುಮಕ್ಕಳು ಪಡುತ್ತಿರುವ ಅನೇಕ ತೊಂದರೆಗಳನ್ನು ತಮ್ಮ ಗಮನಕ್ಕೆ ತರುತ್ತಾ, ಆದಷ್ಟು ಜಾಗ್ರತೆಯಾಗಿ ಈ ತಾಲ್ಲೂಕಿಗೆ ಒಂದು ಶಾಲಾ ಕಟ್ಟಡವನ್ನು ಒದಗಿಸಬೇಕೆಂದು ಕೇಳುತ್ತೇನೆ.

† ಶ್ರೀ ಎಸ್. ಹೆಚ್. ಗೌಡ (ಕುಮಟಾ).—ಸನ್ಮಾನ್ಯ ಸಭಾಪತಿಗಳೇ, ನಾನು ಪ್ರಪ್ರಥಮವಾಗಿ ಯಾವ ಶಕ್ತಿ ನಮ್ಮನ್ನಿಲ್ಲಿ ಅಸತ್ಯದಿಂದ ಸತ್ಯದ ಕಡೆಗೆ, ಕತ್ತಲೆಯಿಂದ ಬೆಳಕಿನ ಕಡೆಗೆ, ಮೃತ್ಯುವಿನಿಂದ ಅಮೃತತ್ವದ ಕಡೆಗೆ ಕೊಂಡೊಯ್ಯುತ್ತದೆಯೋ. ಆ ಶಕ್ತಿ ಸ್ವರೂಪಿಸಿ. ದಿವ್ಯ ವಾಣಿ, ಬ್ರಹ್ಮನ ರಾಣಿ, ಮಯೂರವಾಣಿಗೆ ಮನಃಪೂರ್ವಕ ವಂದಿಸಿ, ನಮ್ಮ ಕರ್ನಾಟಕ ರಾಜ್ಯದ ವಿದ್ಯಾ ಸಚಿವರಾದ ಸನ್ಮಾನ್ಯ ಶ್ರೀ ಡಿ. ಮಂಜುನಾಥರವರು ಇವತ್ತು ಈ ಸದನದ ಮುಂದಿಟ್ಟಿರುವ ಅಭ್ಯಾಚನೆಯನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಪ್ರಥಮವಾಗಿ ನಾವು ವಿಚಾರಮಾಡಬೇಕಾದ ವಿಷಯ ಶಿಕ್ಷಕ ಮತ್ತು ಶಿಕ್ಷಣದ ಗುರಿ. ಶಿಕ್ಷಣ ಅಂದರೆ ಏನು ? ಶಿಕ್ಷಣ ಅಂದರೆ ಯಾರು ? ಇದನ್ನು ಕುರಿತು ನಾವು ಸ್ವಲ್ಪ ಮಟ್ಟಿಗಾದರೂ ಕೂಡ ತಿಳಿದುಕೊಳ್ಳಬೇಕು. ಶಿಕ್ಷಣ ಅಂದರೆ ಅದು ನಿಜವಾಗಿಯೂ ನಮ್ಮ ಜೀವನಕ್ಕೆ ಸಂಬಂಧಿಸಿದ್ದುದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನದಲ್ಲಿ ಪಡೆಯಬೇಕಾದಂಥ ಅನುಭವ ಈ ಶಿಕ್ಷಣ. ಈ ಶಿಕ್ಷಣಕ್ಕೆ ಆತನ ಜೀವನವೇ ಆಧಾರ. ಆದ್ದರಿಂದ ಈ ಅನುಭವ ಎಂದರೆ ಜೀವನ, ಜೀವನವೆಂದರೆ ಶಿಕ್ಷಣ ಎಂಬುದಾಗಿ ನಾವು ಪರಿಗಣಿಸಬೇಕು.

ಅಂತೆಯೇ ಶಿಕ್ಷಕ ಎಂದರೆ ಯಾರು ಶಿಕ್ಷಕ ಆಗಿರುತ್ತಾರೋ, ಈ ಶಿಕ್ಷಕ ಎಂಬ ೩ ಅಕ್ಷರ ಪದಗಳಿಗೆ ಒಂದು ದೊಡ್ಡ ಅರ್ಥ ಇದೆ. ಶಿ ಎಂದರೆ ಶಿವಸ್ವರೂಪ, ಕ್ಷ ಎಂದರೆ ಕ್ಷಕಿರಣೋಪಾದಿಯಲ್ಲಿ, ಕ ಎಂದರೆ ಕರ್ಮ ಮಾಡುವವ ಎಂದು ಅರ್ಥ. ಯಾರು ಮಕ್ಕಳ ದೃಷ್ಟಿಯಲ್ಲಿ ಶಿವಸ್ವರೂಪಿಯಾಗಿದ್ದುಕೊಂಡು ಆ ಮಕ್ಕಳ ಗುಣದೋಷಗಳನ್ನು ಕ್ಷಕಿರಣೋಪಾದಿಯಲ್ಲಿ ಕಂಡುಹಿಡಿದು ಕರ್ಮಯೋಗವನ್ನು ಪಡೆದುಕೊಂಡು ಸವಿಸುತ್ತಾನೋ ಅವನು ಶಿಕ್ಷಕ, ಈ ಶಿಕ್ಷಣ ಮತ್ತು ಶಿಕ್ಷಕ ಸಂಯೋಜಿತವಾಗಿದ್ದರೂ ನಮ್ಮ ದೇಶದಲ್ಲಿ ನಾವು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಶಿಕ್ಷಣ ನೀಡುವಂಥ ಒಂದು ವಾತಾವರಣ ನಮ್ಮ ದೇಶದಲ್ಲಿ ನಿರ್ಮಾಣವಾಗಿದ್ದುದನ್ನು ನಾವು ವಿಚಾರ ಮಾಡಬೇಕಾಗಿದೆ. ಏತಕ್ಕೆಂದರೆ ಸ್ವಾತಂತ್ರ್ಯ ಬಂದಕೂಡಲೇ ನಾವು ಏನು ಒಂದು ವಿಚಾರ ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ನಾವು ಆ ಒಂದು ಪರಂಪರೆಯನ್ನು ಹಾಕಿಕೊಂಡು ಬಂದು ಈ ಶಿಕ್ಷಣದಲ್ಲಿ ಹೆಜ್ಜೆಯನ್ನು ಇಡುತ್ತಿದ್ದೇವೆ, ಯಾವ ಪರಂಪರೆ ಎಂದರೆ ಹಿಂದೆ ಈಸ್ಟ್ ಇಂಡಿಯಾ ಕಂಪನಿಯವರು ಈ ದೇಶವನ್ನು ಆಳುವುದಕ್ಕಾಗಿ ಈ ದೇಶದ ಜನರನ್ನು ಕಾರಕೂನರನ್ನಾಗಿ ಮಾಡುವುದಕ್ಕೆ ಯಾವ ಶಿಕ್ಷಣವನ್ನು ಕೊಡುತ್ತಿದ್ದರೋ ಅದೇ ಪರಂಪರೆಯನ್ನು ನಾವು ಹಾಕಿಕೊಂಡು ಮುಂದಿಡುತ್ತಿದ್ದೇವೆ. ನಮ್ಮ ದೇಶ ಯಾವುದನ್ನೂ ಕೂಡ ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಏತಕ್ಕೆಂದರೆ ನಿಜವಾಗಿಯೂ ವಿಚಾರ ಮಾಡುವುದಾದರೆ ನಮ್ಮ ದೇಶಕ್ಕೆ ನಮ್ಮ ದೇಶದ ಒಂದು ಉದ್ಯೋಗಕ್ಕೆ ಇರುವಂಥ ಸಂಬಂಧವನ್ನು ಕಲ್ಪಿಸಿಕೊಳ್ಳಬೇಕಾಗಿತ್ತು. ನಮ್ಮ ದೇಶದಲ್ಲಿ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇರುವಂಥಾದ್ದು ಒಕ್ಕಲುತನ, ನಮ್ಮದು ಒಕ್ಕಲುತನದ ದೇಶ. ಈ ಒಕ್ಕಲುತನದೇಶದಲ್ಲಿ ನಡೆಯುವಂಥ ಉದ್ಯೋಗ ಒಕ್ಕಲುತನ. ಈ ಒಕ್ಕಲುತನಕ್ಕೆ ಸರಿಯಾದಂಥ ವಿದ್ಯಾಭ್ಯಾಸವನ್ನು ನಾವು ರೂಪಿಸಿದ್ದೇವೆಯೋ ಇದನ್ನು ವಿಚಾರ ಮಾಡಬೇಕು. ನಾವು ಜಪಾನ್ ತತ್ವ ತೆಗೆದುಕೊಂಡರೆ ಜಪಾನ್ ದೇಶದಲ್ಲಿ ಹಿಂದೆ ಸಾಮುಯಲ್ ಟೈಲ್ಸ್ ಎಂಬ ವಿಜ್ಞಾನಿ ಸೆಲ್ಫ್ ಹೆಲ್ಪ್ ಅಂದರೆ ಸ್ವಸಹಾಯ ಎನ್ನುವಂಥ ಒಂದು ಗ್ರಂಥವನ್ನು ಬರೆದಿದ್ದಾನೆ. ಜಪಾನಿನ ಎಲ್ಲಾ ವಿಜ್ಞಾನಿಗಳನ್ನೂ ಕೂಡ ಗ್ರಂಥವನ್ನು ಓದಿದ್ದಾರೆ. ಮತ್ತು ಸರ್ಕಾರವೂ ಸಹ ಆ ಗ್ರಂಥವನ್ನು ಓದಿ ತಮ್ಮ ದೇಶಕ್ಕ ಯಾವ ಲಾಭವನ್ನು ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಂಡಿದ್ದಾರೆ. ಆ ಗ್ರಂಥದಲ್ಲಿ ಮುಖ್ಯವಾದ ವಿಷಯಗಳನ್ನು ಆಯ್ದುಕೊಂಡು ತಮ್ಮ ಮಕ್ಕಳಿಗೆ ಯಾವರೀತಿಯಾ ಪಠ್ಯಪುಸ್ತಕಗಳಲ್ಲಿ ಇದನ್ನು ರೂಪಿಸಬೇಕೋ ಆ ರೀತಿಯಾಗಿ ರೂಪಿಸಿದರು ಆ ಪುಸ್ತಕಗಳನ್ನು ಎಲ್ಲರೂ ಓದಿಕೊಂಡಿದ್ದಾರೆ. ಅದನ್ನು ಅವರು ಓದಿಕೊಂಡು ತಮ್ಮ ಅಭಿಮಾನ ಇರುವ ಹಾಗೆ ವಿದ್ಯಾರ್ಥಿಗಳು ಗೌರವ ಇರುವ ಹಾಗೆ ತಮ್ಮ ದೇಶದಲ್ಲಿ ನಡೆಯುತ್ತಾ ಇರತಕ್ಕಂಥ ಉದ್ಯೋಗದ ಮೇಲೆ ಒಂದು ಗೌರವ ಮತ್ತು ಭಾವನೆಯನ್ನು ಇರುವ ಹಾಗೆ ತಾಳಿದರು. ಆ ಒಂದು ಕ್ರಮ ಆ ತರಹ ಸ್ವರೂಪದ್ದಾಗಿತ್ತು. ಆ ರೀತಿಯಾಗಿ ನಮ್ಮ ದೇಶದಲ್ಲೂ ಬರಬೇಕಾಗಿತ್ತು.

ಮನುಷ್ಯ ತನ್ನ ಒಂದು ಸಂಸ್ಕೃತಿಯನ್ನು ಕಟ್ಟಿಕೊಂಡು ಏನು ಕುಳಿತಿದ್ದಾನೋ ಅದನ್ನು ನೋಡಿದರೂ ಕೂಡ ಅದು ಹಾಲಿ ಉದ್ಯೋಗದಿಂದಲೇ, ಈವೊತ್ತು ಜಗತ್ತಿನ ಯಾವ ಮೂಲೆಯಲ್ಲಿ ನೋಡಿದರೂ ಈ ಒಂದು ಸಂಸ್ಕೃತಿಯನ್ನು ಅಭ್ಯಾಸ ಮಾಡಿ ನೋಡಿದರೂ ಮಾನವ ತನ್ನ ಸಂಸ್ಕೃತಿಯನ್ನು ಏನು ನಿರ್ಮಾಣ ಮಾಡಿದ್ದಾನೆ ಅದನ್ನು ನೋಡಿದರೂ ಕೂಡ ಅವನು ಅವಲಂಬಿಸಿರುವುದು ಈ ಉದ್ಯೋಗದ ಮೇಲೆ, ಆದುದರಿಂದ ಈ ಉದ್ಯೋಗಕ್ಕೂ ಶಿಕ್ಷಣಕ್ಕೂ ಅನ್ಯೋನ್ಯ ಸಂಬಂಧ ಇದೆ. ಇದನ್ನು ನಾವು ನೆನಪಿಗೆ ತಂದುಕೊಂಡು ಈ ದೇಶದಲ್ಲಿ ಅಂತಹ ಒಂದು ಶಿಕ್ಷಣ ಕೊಡಬೇಕಾಗಿತ್ತು. ಈಗ ಪರಿಸ್ಥಿತಿ ಏನಾಗಿದೆ. ಈ ೪ ವರ್ಷಗಳಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ನಮ್ಮ ಈ ಹಿಂದೆ ಸಿಂಹಾವಲೋಕನ ಕಾರ್ಯಕ್ರಮ ಹಾಕಿಕೊಂಡಿರುವುದನ್ನು ನೋಡಿದರೆ ೧೯೫೧ರ ಹೊತ್ತಿಗೆ ನಮ್ಮ ದೇಶದಲ್ಲಿ ಸಾಕ್ಷರತೆ ಸಂಖ್ಯೆ ೧೬ರಷ್ಟು ಇತ್ತು. ೧೯೬೧ರಿಂದ ಈಚೆಗೆ ಶೇಕಡ ೩೦ರಷ್ಟು ಆಗಿವೆ, ಸಾಮಾನ್ಯವಾಗಿ ಇನ್ನೂ ಕೂಡ ಅಷ್ಟೇ ಇದೆ.

ಆದರಲ್ಲಿಯೂ ಕೂಡ ಹಳ್ಳಿಗಳಲ್ಲಿ ವಿದ್ಯಾವಂತರ ಸಂಖ್ಯೆ ಬಹಳ ಕಡಿಮೆ ಇದೆ, ಇವೊತ್ತು ಹಳ್ಳಿಗಳಲ್ಲಿ ಶೇಕಡಾ ೭೦ರಷ್ಟು ಜನರು ಒಕ್ಕಲುತನದಿಂದ ಜೀವನ ಸಾಗಿಸುತ್ತಿದ್ದಾರೆ. ಇಂತಹವರು ಬದುಕುತ್ತಿರುವ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಸಾಕ್ಷರಿಗಳ ವಿದ್ಯಾವಂತರ ಸಂಖ್ಯೆ ಶೇಕಡ ೩೦ಕ್ಕಿಂತಲೂ ಕಡಿಮೆ ಇದೆ. ಮಹಿಳೆಯರ ದೃಷ್ಟಿಯಿಂದ ವಿಚಾರ ಮಾಡಿದರೆ ಸುಶಿಕ್ಷಿತ ಮಹಿಳೆಯರು ಇನ್ನೂ ಕಡಿಮೆ ಇದ್ದಾರೆ, ಅಂದರೆ ಗಂಡಸರಿಗಿಂತ ಎರಡನೇ ಮೂರು ಅಂಶದಷ್ಟು ಕಡಿಮೆ ಇದ್ದಾರೆ. ಇಂತಹ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿದೆ. ಈ ಕಾರಣದಿಂದ ಇನ್ನು ಮುಂದೆಯಾದರೂ ಕೂಡ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಆಮೂಲಾಗ್ರವಾದಂಥ ಬದಲಾವಣೆಯನ್ನು ತರಬೇಕೆಂದು ನಮ್ಮ ಸರ್ಕಾರ ಪ್ರಯತ್ನ ಮಾಡುತ್ತಿದೆ. ಈ ದಿಶೆಯಲ್ಲಿ ನಮ್ಮ ಸರ್ಕಾರ ವಿದ್ಯಾವಿಕಾಸ ಯೋಜನೆಯನ್ನು ಜಾರಿಯಲ್ಲಿ ತಂದಿದೆ. ಕಳೆದ ಕೆಲವು ವರ್ಷಗಳಿಂದೀಚೆಗೆ ನಾವು ವಿದ್ಯಾಭ್ಯಾಸ ಪದ್ಧತಿಯಲ್ಲಿ ಕೆಲವು ಸುಧಾರಣೆಗಳನ್ನು ಕಾಣುತ್ತಿದ್ದೇವೆ, ಇದರಿಂದ ಹಳ್ಳಿಗರ ಜೀವನದಲ್ಲಿ ಆಶಾಕಿರಣ ಮೂಡಿದೆ. ಈ ಪದ್ಧತಿ ಜಾರಿಯಲ್ಲಿ ಬಂದಮೇಲೆ ಹಳ್ಳಿಗಳಲ್ಲಿ ವಿವಿಧ ಆರ್ಥಿಕ ಅಂತಸ್ತಿನ ಜನರು ಏನಿದ್ದಾರೆ, ಅವರು ತಮ್ಮ ಮಕ್ಕಳನ್ನು ವಿದ್ಯೆ ಕಲಿಯಲು ಶಾಲೆಗೆ ಕಳುಹಿಸಿ ಕೊಡುತ್ತಿದ್ದಾರೆ, ನಾನೂ ಸಹ ಹಳ್ಳಿಯಲ್ಲಿ ಹುಟ್ಟಿ ಬೆಳೆದವನು. ನಾನು ಶಾಲೆಗೆ ಹೋಗುವಾಗ ಹೊಸ ಪುಸ್ತಕ ಪಡೆಯಲು ಬಹಳ ಕಷ್ಟಪಡಬೇಕಾಗಿತ್ತು, ಇದಕ್ಕಾಗಿ ನಾನು ನನ್ನ ತಂದೆ ತಾಯಿಯರನ್ನು ನಿತ್ಯವೂ ಕಾಡಬೇಕಾಗಿತ್ತು, ನಾನು ಎರಡನೇ ತರಗತಿಯಿಂದ ಮೂರನೇ ತರಗತಿಗೆ ಹೋದಾಗ ನಾನು ಯಾವ ತರಗತಿಯಲ್ಲಿ ಓದುತ್ತಿದ್ದೇನೆಂಬುದು ಸಹ ನನ್ನ ಅಪ್ಪಅಮ್ಮನಿಗೆ ಗೊತ್ತಿರಲಿಲ್ಲ, ನನಗೆ ಎಲ್ಲಿಂದ ಪುಸ್ತಕ ತಂದುಕೊಡಬೇಕೆಂಬುದು ಸಹ ಅವರಿಗೆ ತಿಳಿದಿರಲಿಲ್ಲ. ಕೆಲವು ಸಲ ನನ್ನ ತಂದೆ ನನಗೆ ಹೊಸ ಪುಸ್ತಕ ತಂದು ಕೊಟ್ಟಾಗ ನನಗೆ ಬಹಳ ಆನಂದವಾಗುತ್ತಿತ್ತು. ಇಂತಹ ಒಂದು ಕಷ್ಟ ಈಗಿನ ಮಕ್ಕಳಿಗೆ ಬರಬಾರದೆಂದು ನಮ್ಮ ಸರ್ಕಾರದವರು ಎಲ್ಲ ಮಕ್ಕಳಿಗೂ ಉಚಿತವಾಗಿ ಪಠ್ಯಪುಸ್ತಕಗಳನ್ನು ಮತ್ತು ಉಚಿತವಾಗಿ ಸಮವಸ್ತ್ರಗಳನ್ನು ಹಂಚುತ್ತಿದ್ದಾರೆ.

ಇದು ನಮ್ಮ ವಿದ್ಯಾವಿಕಾಸ ಯೋಜನೆಯ ಒಂದು ದೊಡ್ಡ ಕೊಡುಗೆಯಾಗಿದೆ. ಆದ್ದರಿಂದ ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ.

ಇನ್ನು ಎರಡನೆಯದಾಗಿ ನಮ್ಮ ದೇಶದ ಎಲ್ಲಾ ಮಕ್ಕಳಿಗೂ ದೈಹಿಕ ಶಿಕ್ಷಣ ಅಗತ್ಯವಾಗಿದೆ ನಮ್ಮ ಮಕ್ಕಳ ದೇಹ ಸದೃಢವಾಗಿ ಬೆಳೆಯದಿದ್ದರೆ ಅವರ ಮನಸ್ಸು ಮತ್ತು ಬುದ್ಧಿ ಕ್ಷೀಣವಾಗುತ್ತದೆ. ಯಾವ ವ್ಯಕ್ತಿಯ ಮನಸ್ಸು ಮತ್ತು ಬುದ್ಧಿ ಕ್ಷೀಣವಾಗುತ್ತದೋ, ಅಂತಹ ವ್ಯಕ್ತಿಗೆ ಒಳ್ಳೆಯದನ್ನು ಚಿಂತನೆ ಮಾಡುವುದಕ್ಕೆ ಇಲ್ಲವೇ ವಿವೇಚನೆ ಮಾಡುವುದಕ್ಕೆ ಆಗುವುದಿಲ್ಲ. ತನ್ನ ಮುಂದಿನ ಜೀವನದ ರಸ ನಿಮಿಷಗಳ ಬಗ್ಗೆ ಸಹ ಯೋಚನೆ ಮಾಡುವ ಶಕ್ತಿ ಬರುವುದಿಲ್ಲ. ಆದ್ದರಿಂದ ಎಲ್ಲಾ ಮಕ್ಕಳಿಗೂ ಸಹ ಈ ದೈಹಿಕ ಶಿಕ್ಷಣ ಬಹಳ ಅತ್ಯಗತ್ಯ. ಆದರೆ ಇವೊತ್ತಿನ ಸರ್ಕಾರದ ಆರ್ಥಿಕ ಪರಿಸ್ಥಿತಿಯಲ್ಲಿ ಹಳ್ಳಿಗಳಲ್ಲಿ ಓದುತ್ತಿರುವ ಎಲ್ಲಾ ಮಕ್ಕಳಿಗೂ ದೈಹಿಕ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಲು ಸಾಧ್ಯವಾಗುವುದಿಲ್ಲವೆಂದು ಕಾಣುತ್ತದೆ. ನಾನು ಸಹ ಅಧ್ಯಾಪಕನಾಗಿ ಕೆಲಸ ಮಾಡಿರುವುದರಿಂದ ನನ್ನ ಅನುಭವವನ್ನು ಹೇಳಬೇಕೆಂದರೆ, ಪ್ರೌಢಶಾಲೆಗಳಲ್ಲಿ ಕಲಿಯುವ ಅನೇಕ ಮಕ್ಕಳು ಮುಂಜಾನೆ ಊಟ ಸಹ ಮಾಡದೆ ಶಾಲೆಗೆ ಬರುತ್ತವೆ, ೧೧ ಗಂಟೆಯ ಬಿಸಿಲಿನಲ್ಲಿ ಈ ಮಕ್ಕಳು ಕ್ರೀಡಾಂಗಣದಲ್ಲಿ ಪ್ರಾರ್ಥನೆ ಮಾಡಲು ನಿಂತಾಗ ಎಷ್ಟೋ ಮಕ್ಕಳು ಬಿಸಿಲಿನ ತಾಪವನ್ನು ತಡೆಯಲಾರದೆ ನೆಲದ ಮೇಲೆ ಉರುಳಿ ಬೀಳುವುದನ್ನು ನಾನು ನೋಡಿದ್ದೇನೆ. ಇಂತಹ ಮಕ್ಕಳಿಗೆ ದೈಹಿಕ ಶಿಕ್ಷಣವನ್ನು ಕೊಡಬೇಕೆಂದು ಯೋಚನೆ ಮಾಡಿದಾಗ ಆ ಮಕ್ಕಳಿಗೆ ಒಳ್ಳೆಯ ಆಹಾರವನ್ನು ಸಹ ಕೊಡಬೇಕಾಗುತ್ತದೆ. ಅದೇ ಇಂಗ್ಲೆಂಡ್ ದೇಶದಲ್ಲಿ ಮಕ್ಕಳ ದೈಹಿಕ ಶಿಕ್ಷಣಕ್ಕೆ ಬೇಕಾಗುವ ಖರ್ಚಿನಲ್ಲಿ ಒಂದು ಭಾಗವನ್ನು ಅಲ್ಲಿನ ಸಮಾಜ ವಹಿಸಿಕೊಂಡಿದೆ. ಅಲ್ಲಿನ ಮಕ್ಕಳಿಗೆ ಬೇಕಾಗುವಂಥ ಆಹಾರವನ್ನು ಅಲ್ಲಿನ ಸಮಾಜವೇ ಪೂರೈಸುತ್ತದೆ' ಆದ್ದರಿಂದ ಇಲ್ಲಿಯೂ ಸಹ ಅನುಕೂಲವಿರುವಂತಹ ಪಾಲಕರು ತಮ್ಮ ಹತ್ತಿರದ ಶಾಲೆಗಳಿಗೆ ತಮ್ಮ ಕೈಲಾದ ಸಹಾಯವನ್ನು ನೀಡುವುದು ಒಳ್ಳೆಯದು. ಸರ್ಕಾರದವರು ಈ ವಿಚಾರದಲ್ಲಿ ನಮ್ಮ ಸಮಾಜದಲ್ಲಿರುವ ಅನುಕೂಲಸ್ಥ ಜನರೊಡನೆ ನಿಕಟ ಸಂಪರ್ಕವನ್ನು ಇಟ್ಟುಕೊಂಡು, ಅವರ ಸಹಾಯವನ್ನು ಪಡೆದುಕೊಂಡರೆ ಈ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬಹುದೆಂದು ನಾನು ತಿಳಿಯುತ್ತೇನೆ.

೩-೩೦ ಪಿ. ಎಂ.

ಮಾನ್ಯ ಅಧ್ಯಕ್ಷರೆ, ಇನ್ನು ಒಂದೇ ಮಾತನ್ನು ಹೇಳುತ್ತೇನೆ. ಅದು ಪರೀಕ್ಷೆಯನ್ನು ಕುರಿತು. ಏಕೆಂದರೆ, ವಿದ್ಯಾರ್ಥಿ ವಿದ್ಯಾರ್ಥಿಯೂ ಆಗಿರುತ್ತಾರೆ, ಪರೀಕ್ಷಾರ್ಥಿಯೂ ಆಗಿರುತ್ತಾನೆ. ಈಗ ದೃಷ್ಟಿಯೇನಾಗಿದೆಯೆಂದರೆ, ವಿದ್ಯಾಭ್ಯಾಸಕ್ಕಿಂತಲೂ ಪರೀಕ್ಷಾರ್ಥಿಯಾಗುವ ದೃಷ್ಟಿ ದೊಡ್ಡದಾಗುತ್ತಿದೆ, ಇದು ಪಾಲಕರಲ್ಲೂ ಹೌದು, ಬಾಲಕರಲ್ಲೂ ಹೌದು. ಪರೀಕ್ಷಾರ್ಥಿ ಎನ್ನುವುದಕ್ಕಿಂತ ವಿದ್ಯಾರ್ಥಿ ಎನ್ನುವ ದೃಷ್ಟಿಯಿಟ್ಟುಕೊಂಡು ಅಭ್ಯಾಸ ಮಾಡಬೇಕು, ಇದು ಆಗುತ್ತಿಲ್ಲ, ಇದಕ್ಕೆ ಪರೀಕ್ಷೆಗಳ ದುರ್ದೈವವೂ ಕಾರಣ, ಇವತ್ತು ನಾವು ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶ ಅಳೆಯುವಂಥ ಮೌಲ್ಯಮಾಪನ ಅದು ಹೇಗೆ ನಡೆಯುತ್ತದೆ ಎನ್ನುವುದನ್ನು ನಾವು ಸ್ವಲ್ಪ ನೋಡಬೇಕು. ಆ ಸಂದರ್ಭ ಒಂದು ಜಾತ್ರೆ ಎನ್ನುವಂಥ ಒಂದು ಭಾವನೆಯನ್ನು ತಂದು ಕೊಡುತ್ತದೆ. ಮೌಲ್ಯಮಾಪಕರಾದವರು ಅಹೋರಾತ್ರಿ ಅಭ್ಯಾಸ ಮಾಡಿದಂಥ ಮಕ್ಕಳ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನ ಮಾಡುತ್ತೇವೆ ಎನ್ನುವ ಭಾವನೆಯನ್ನು ತಂದುಕೊಳ್ಳುವುದಿಲ್ಲ. ಮೌಲ್ಯಮಾಪನ ಕ್ರಮವನ್ನು ಅಭ್ಯಾಸ ಮಾಡುವುದಿಲ್ಲ, ಅದರಲ್ಲೂ ೩ ಪ್ಯಾಕೆಟ್ಟುಗಳನ್ನು ಕೊಡುವಂಥ ಪದ್ಧತಿ ಇದೆ. ನಮ್ಮ ಶಿಕ್ಷಣ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಈ ಪದ್ಧತಿಯನ್ನು ತೆಗೆದು ಹಾಕಬೇಕು. ಮೌಲ್ಯಮಾಪನ ಕೇಂದ್ರದಲ್ಲಿ ಒಬ್ಬ ಮೌಲ್ಯಮಾಪಕನಿಗೆ ಕೇವಲ ಎರಡು ಪ್ಯಾಕೆಟ್ಟುಗಳನ್ನು ಕೊಡಬೇಕೇ ಹೊರತು ಮೂರು ಪ್ಯಾಕೆಟುಗಳನ್ನು ಕೊಡುವುದನ್ನು ನಿಲ್ಲಿಸಬೇಕು. ಮೌಲ್ಯಮಾಪನ ಹೇಗೆ ಮಾಡುತ್ತಾರೆ ಎನ್ನುವುದು ನನಗೆ ಗೊತ್ತು. ನಾನು ಕೂಡ ಮೌಲ್ಯಮಾಪನ ಕೆಲಸ ಮಾಡಿದವನೇ. ಈ ಪದ್ಧತಿಯಲ್ಲಿ ಬದಲಾವಣೆ ಮಾಡಬೇಕು. ಶಿಕ್ಷಣದಲ್ಲಿ ಸುಧಾರಣೆ ಆಗಬೇಕು. ಶಿಕ್ಷಣಕ್ಕೆ ನಿಜವಾಗಿ ನಮ್ಮ ಮುಂಗಡ ಪತ್ರದಲ್ಲಿ ಕೊಟ್ಟ ಹಣ ಸಾಲದು ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಲಿಕ್ಕೆ ಶಿಕ್ಷಣ ಮಂತ್ರಿಗಳು ಪ್ರಯತ್ನ ಮಾಡಬೇಕು ಎಂದು ವಿನಂತಿಸುತ್ತಾ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ (ಮಡಕೇರಿ).—ಸನ್ಮಾನ್ಯ ಅಧ್ಯಕ್ಷಿಣೀಯವರೆ, ಇವತ್ತು ಶಿಕ್ಷಣದ ಬಗ್ಗೆ ಇರತಕ್ಕಂಥ ಬೇಡಿಕೆ ಮೇಲೆ ಚರ್ಚೆ ಮಾಡಲು ಬಯಸುತ್ತಿದ್ದೇನೆ. ಶಿಕ್ಷಣ ಯಾವ ದೇಶದಲ್ಲಿ ಹೆಚ್ಚಿನ ಪರ್ಸೆಂಟೇಜ್ ಇಲ್ಲ ಆ ದೇಶ ಬಡದೇಶ ಎಂದು ಹೇಳಲಿಕ್ಕೆ ಸಾಧ್ಯವಿದೆ. ನಾವು ಇವತ್ತು ಎಲ್ಲಾ ಸಂಪತ್ತುಗಳನ್ನು ಹೊಂದಿದ್ದೇವೆ, ನಮ್ಮಲ್ಲಿ ಖನಿಜ ಸಂಪತ್ತು ಇದೆ, ನೀರಿನ ಸಂಪತ್ತು ಇದೆ, ಅರಣ್ಯ ಸಂಪತ್ತು ಇದೆ, ಜನರ ಸಂಪತ್ತೂ ಇದೆ. ನಮ್ಮ ದುರಾದೃಷ್ಟಕ್ಕೆ ಇವತ್ತು ವಿದ್ಯೆಯ ಸಂಪತ್ತು ಇಲ್ಲ. ಈ ವಿದ್ಯಾ ಸಂಪತ್ತನ್ನು ನಾವು ಯಾವ ರೀತಿಯಲ್ಲಿ ಹೆಚ್ಚಿಸಿಕೊಂಡು ಹೋಗಬೇಕು ಎಂದು ನಾನಾ ರೀತಿಯ ಕಾರ್ಯಕ್ರಮಗಳನ್ನು ಹಾಕಿದರೂ ಸಹ ಇವತ್ತಿನವರೆಗೆ ಇದರಲ್ಲಿ ಹೆಚ್ಚಿನ ಅಂಶ ಬಂದಿಲ್ಲ. ಸುಮಾರು ವರ್ಷಗಳಿಂದಲೂ ೩೨ ರಿಂದ ೩೮ ಪರ್ಸೆಂಟ್ ಮಾತ್ರ ವಿದ್ಯಾವಂತರು ನಮ್ಮ ದೇಶದಲ್ಲಿದ್ದಾರೆಯೇ ವಿನಹ ಅವರ ಸಂಖ್ಯೆ ಹೆಚ್ಚಾಗಿಲ್ಲ. ಇದಕ್ಕೆ ದೋಷ, ಕಾರಣಗಳು ಏನೆಂದರೆ, ವಿದ್ಯಾರ್ಥಿಗಳಿಗೆ ಪ್ರೈಮರಿ ಶಾಲೆಗಳಲ್ಲಿ ಎಷ್ಟರಮಟ್ಟಿಗೆ ಅನುಕೂಲಗಳನ್ನು ಒದಗಿಸಬೇಕೋ ಅಷ್ಟು ಅನುಕೂಲಗಳನ್ನು ನಾವು ಇವತ್ತು ಒದಗಿಸಿಕೊಡುತ್ತಾ ಇಲ್ಲ. ನಮಗೆ ಬೇಕಾದಂಥ ಅನುಕೂಲಗಳಾದ ಶಾಲಾ ಕಟ್ಟಡ, ಕೊಡಲಿಕ್ಕೆ ಕುರ್ಚಿಮೇಜುಗಳು, ಬ್ಲಾಕ್ ಬೋರ್ಡುಗಳು, ಇವೆಲ್ಲಕ್ಕಿಂತ ಮಿಗಿಲಾಗಿ ನಮ್ಮ ಶಾಲೆಗಳಲ್ಲಿ ಅಧ್ಯಾಪಕರ ಕೊರತೆ ಇದೆ. ಒಳ್ಳೆಯ ಸ್ಟಾಂಡರ್ಡ್ ಅಧ್ಯಾಪಕರನ್ನು ನೇಮಕ ಮಾಡತಕ್ಕಂಥಾದ್ದು ನಮ್ಮಲ್ಲಿ ಇಲ್ಲ. ಇವತ್ತು ಶಾಲೆಗಳಲ್ಲಿಅಧ್ಯಾಪಕರು ಇಲ್ಲದೆ ಮಕ್ಕಳೂ ಶಾಲೆಗೆ ಬರುವುದಿಲ್ಲ. ಪಾಠ ಹೇಳಿಸಿಕೊಳ್ಳಲಿಕ್ಕೆ ಮಕ್ಕಳನ್ನು ಕಳಿಸುವುದಿಲ್ಲ ಆ ಮೇಲೆ ವಿದ್ಯಾರ್ಥಿಗಳು ಪಾಸ್ ಆಗುವುದಿಲ್ಲ. ಇದರ ಪರಿಣಾಮ ಏನಾಗುತ್ತದೆಯೆಂದರೆ, ಪ್ರತಿವರ್ಷ ಮಕ್ಕಳ ಡ್ರಾಪ್‌ಔಟ್ ಏನಿದೆ ಅದು ಜಾಸ್ತಿಯಾಗುತ್ತಾ ಹೋಗಿ ಕಡೆಗೆ ನಾಲ್ಕು ಐದನೇ ತರಗತಿಗೆ ಬರತಕ್ಕಂಥ ಕಾಲದಲ್ಲಿ ೨೫ ವಿದ್ಯಾರ್ಥಿಗಳು ಡ್ರಾಪೌಟ್ ಆಗುತ್ತಾರೆ. ಇದಕ್ಕೆ ಕಾರಣಕರ್ತರು ಅಧ್ಯಾಪಕರು ಮತ್ತು ನಮ್ಮ ಸರ್ಕಾರ. ಸರ್ಕಾರದವರು ನೇರವಾಗಿ ಒಳ್ಳೆಯ ಅಧ್ಯಾಪಕರನ್ನು ನೇಮಕ ಮಾಡಿದರೆ, ಸಮಯಕ್ಕೆ ಸರಿಯಾಗಿ ನೇಮಕ ಮಾಡಿದರೆ, ಒಳ್ಳೆಯ ಇಂಟೆಲಿಜೆಂಟ್ಸ್, ಕೆಲಸದಲ್ಲಿ ಸ್ಯಾಕ್ರಿಫೈಸ್ ಮಾಡತಕ್ಕಂಥ ಅಧ್ಯಾಪಕರನ್ನು ನೇಮಕ ಮಾಡಿದರೆ ನಿಜವಾಗಿಯೂ ನಮ್ಮ ವಿದ್ಯೆ ಸ್ಟಾಂಡರ್ಡ್ ಆಗೇ ಆಗುತ್ತದೆ ಮತ್ತು ಶಾಲೆಗೂ ಮಕ್ಕಳು ಬರುತ್ತಾರೆ. ಆದರೆ ಇವೊತ್ತು ಈ ರೀತಿ ಇಲ್ಲ. ವಿದ್ಯಾರ್ಥಿಗಳು ಬರದೇ ಇರತಕ್ಕಂಥ ಪರಿಸ್ಥಿತಿ ಇದೆ. ಅಧ್ಯಾಪಕರು ಸ್ಟ್ರೈಕ್ ಮಾಡತಕ್ಕದ್ದು, ಅಧ್ಯಾಪಕರು ಇನ್‌ಫ್ಲುಯೆನ್ಸ್ ಮಾಡಿ ಟ್ರಾನ್ಸ್‌ಫರ್ ಮಾಡಿಸಿಕೊಳ್ಳತಕ್ಕದ್ದು ಈ ತರಹ ದೋಷಗಳಿಂದ ನಮ್ಮ ವಿದ್ಯಾಭ್ಯಾಸದ ಮಟ್ಟ ಕುಸಿದಿದೆ. ಈ ಟ್ರಾನ್ಸ್‌ಫರ್ ಮಾಡತಕ್ಕ ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಭರವಸೆ ಕೊಟ್ಟಿದ್ದಾರೆ. ಟ್ರಾನ್ಸ್‌ಫರ್ ಮಾಡುವಾಗ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅದನ್ನು ಮಾಡಲಿಲ್ಲ. ಈ ಮಾತನ್ನು ಉಳಿಸಿಕೊಳ್ಳುವುದರಲ್ಲಿ ಆಗಿರುವ ವಿಳಂಬದಿಂದ ಕೆಲವು ಕಡೆ ಅಧ್ಯಾಪಕರುಗಳು ಕಳೆದ ಆರು ತಿಂಗಳಿಂದ ವರ್ಗವಾದ ಸ್ಥಳಗಳಿಗೆ ಹೋಗಿರುವುದಿಲ್ಲ. ನಮ್ಮ ಮಲೆನಾಡಿನಲ್ಲಿ ಹಲವು ಭಾಗಗಳಲ್ಲಿ ಉದಾಹರಣೆಗೆ ಧಾರವಾಡ, ಗುಲ್ಬರ್ಗಾ ಮುಂತಾದ ಪ್ರದೇಶಗಳಿಗೆ ಯಾರನ್ನಾದರೂ ಪೋಸ್ಟ್ ಮಾಡಿದರೆ ಅವನ ಪರಿಸ್ಥಿತಿ ಅನುಕೂಲವಾಗುತ್ತದೆ. ಅಲ್ಲದೆ ಅವನಿಗೆ ಅನುಕೂಲತೆಯನ್ನು ಕಲ್ಪಿಸಿಕೊಡಬೇಕು ಇಲ್ಲದಿದ್ದರೆ ಅವನು ಈ ಸ್ಥಿತಿಯಲ್ಲಿ ವರ್ಗವಾದಾಗ ಹೋಗುವುದೇ ಇಲ್ಲ. ಈ ಪರಿಸ್ಥಿತಿಯಿಂದ ನೋಡುವುದಾದರೆ ನಮ್ಮ ಸರ್ಕಾರದ ಧೋರಣೆ ಬಹಳಷ್ಟು ಸುಧಾರಣೆ ಆಗಿಲ್ಲವೆಂದರೆ ತಪ್ಪಾಗಲಾರದು. ಆ ಮೇಲೆ ತಾವು ಸೆಕೆಂಡರಿ ಎಜುಕೇಶನ್‌ಗೆ ಬಂದಾಗ ತಾವು ಇವೊತ್ತು ಸುಮಾರು ೧೮ ಹೈಸ್ಕೂಲುಗಳನ್ನು ತೆಗೆಯಬೇಕೆಂದು ಹೇಳಿದ್ದೀರಿ. ೧೮ ಕಾಲೇಜುಗಳನ್ನು ತೆರೆಯಬೇಕಾದರೆ ಇವರಿಗೆ ಅಗತ್ಯವಾದ ಕಟ್ಟಡಗಳು ಇಲ್ಲ ಅಥವಾ ಇದಕ್ಕೆ ಬೇಕಾದಂತಹ ಕುರ್ಚಿ ಮೇಜುಗಳು ಇಲ್ಲ. ಅಧ್ಯಾಪಕರು ಸುಮ್ಮನೆ ಕುಳಿತುಕೊಂಡು ಹೋಗುತ್ತಿದ್ದಾರೆ.

ಶ್ರೀ ಡಿ. ಮಂಜುನಾಥ್.—೧೮ ಕಾಲೇಜುಗಳನ್ನು ಈ ವರ್ಷ ತೆಗೆಯುತ್ತೇವೆಂದು ಹೇಳಿಲ್ಲ. ಮೊದಲನೆಯದಾಗಿ, ಈಗ ಕೆಲವು ಕಡೆ ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಯೂನಿವರ್ಸಿಟಿ ಅಫಿಲಿಯೇಷನ್ ತುಂಬ ಬೇಕಾಗಿದೆ ಆದ್ದರಿಂದ ೧೮ ಕಾಲೇಜುಗಳನ್ನು ಯೂನಿವರ್ಸಿಟಿಗೆ ಅರ್ಜಿ ಹಾಕಿ ಅದನ್ನು ಮಾಡಬೇಕೋ ಇಲ್ಲವೋ ಎಂಬುದನ್ನು ತೀರ್ಮಾನ ಮಾಡಬೇಕು.

ಶ್ರೀ ಡಿ. ಎ. ಚಿನ್ನಪ್ಪ.—ಇಂಗ್ಲೀಷ್ ನರ್ಸರಿ ಶಾಲೆಗಳಿಗೆ ಪರ್ಮಿಷನ್ ಕೊಡುತ್ತೇವೆಂದು ಹೇಳಿರುವುದನ್ನು ಪೇಪರ್‌ನಲ್ಲಿ ನೋಡಿದೆ. ಈ ಡೊನೇಷನ್, ಕ್ಯಾಪಿಟೇಷನ್ ಶುಲ್ಕ ಮೊದಲನೆಯ

ಸ್ಟ್ಯಾಂಡರ್ಡ್‌ನಿಂದ ಹಿಡಿದು ಎಂ.ಬಿ.ಬಿ.ಎಸ್., ಇಂಜಿನಿಯರಿಂಗ್ ಕಾಲೇಜ್, ಟೆಕ್ನಿಕಲ್ ಕಾಲೇಜ್ ತನಕ ಈ ವ್ಯಾಪಾರ ನಡೆಯುತ್ತಿದೆ. ನರ್ಸರಿ ಶಾಲೆಗಳಿಗೆ ಸೇರಬೇಕಾದರೆ ೨ ಸಾವಿರದಿಂದ ೫ ಸಾವಿರದ ವರೆಗೆ ಕೊಡಬೇಕು. ಇದರಿಂದ ಐಶ್ವರ್ಯವಂತರು ಮಾತ್ರ ಡೊನೇಷನ್ ಕೊಟ್ಟು ಸೇರಿಕೊಳ್ಳುತ್ತಾರೆ. ಇಂತಹ ಪರಿಸ್ಥಿತಿ ರಾಜ್ಯದಲ್ಲಿ ಇದೆ. ಈ ಕ್ಯಾಪಿಟೇಷನ್ ವಿಷಯದ ಬಗ್ಗೆ ೮೫ರಲ್ಲಿ ಒಂದು ವೈಟ್ ಪೇಪರ್‌ನಲ್ಲಿ ಹೊರಡಿಸಿದ್ದಾರೆ. ೫ ವರ್ಷಗಳ ಒಳಗೆ ಈ ಕ್ಯಾಪಿಟೇಷನ್ ವಿಷಯವನ್ನು ನಿಲ್ಲಿಸುತ್ತೇವೆಂದು ಹೇಳಿದ್ದೀರಿ. ಆದರೆ ಈಗಾಗಲೇ ೪ ವರ್ಷಗಳಾದರೂ ಇದು ಮುಕ್ತಾಯವಾಗದೇ ಹೋಯಿತು. ಅಲ್ಲದೆ, ಇದು ಜಾಸ್ತಿ ಆಗುತ್ತಾ ಹೋಗುತ್ತಿದೆ. ಮೆಡಿಕಲ್ ಕಾಲೇಜ್ ಮತ್ತು ಇಂಜಿನಿಯರಿಂಗ್ ಕಾಲೇಜ್‌ಗೆ ಸರ್ಕಾರ ಇನ್ನು ಮುಂದೆ ಅನುಮತಿ ಕೊಡುವುದಿಲ್ಲವೆಂದು ಭರವಸೆ ಕೊಟ್ಟಿದ್ದಾರೆ, ಈಗ ಪ್ರತಿಯೊಂದು ಡಿಸ್ಟ್ರಿಕ್ಟ್‌ಗೆ ಮೆಡಿಕಲ್ ಕಾಲೇಜ್ ಆಗಬೇಕೆಂದು ಹೇಳತಕ್ಕ ಧೋರಣೆ ಏನು ಇದೆ ಇದರಿಂದ ಏನೋ ಲಾಭ ಇದೆ. ಇದರಿಂದ ಬಡವರಿಗೆ ಮಾತ್ರ ಪ್ರಯೋಜನ ಆಗಲಾರದು. ಕ್ಯಾಪಿಟೇಷನ್ ಫೀ ತೆಗೆದುಕೊಂಡು ಖಾಸಗೀ ಸಂಸ್ಥೆಗಳು ಬಹಳಷ್ಟು ಐಶ್ವರ್ಯವಂತ ಸಂಸ್ಥೆಗಳಾಗಿ ಬೆಳೆಯತಕ್ಕ ಸಂದರ್ಭವನ್ನು ಇಲ್ಲಿ ಕಾಣಬೇಕಾಗುತ್ತದೆ. ಇವೊತ್ತು ಹೆಚ್ಚಿಗೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ಕೊಡತಕ್ಕದ್ದು ಏನಿದೆ, ಇದನ್ನು ಇಷ್ಟೊಂದು ಪ್ರಮಾಣದಲ್ಲಿ ಕೊಡದೇ ಇದ್ದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಇವೊತ್ತು ರಾಜ್ಯದಲ್ಲಿ ಸುಮಾರು ನಲವತ್ತಾರು ಇಂಜಿನಿಯರಿಂಗ್ ಕಾಲೇಜುಗಳು, ಸುಮಾರು ಹದಿಮೂರು ಮೆಡಿಕಲ್ ಕಾಲೇಜುಗಳು ಇವೆ. ಈ ಕಾಲೇಜುಗಳಿಂದ ಬಹಳಷ್ಟು ಜನ ಪಾಸಾಗಿ ಬರುತ್ತಾರೆ, ಅವರೆಲ್ಲರೂ ಎಲ್ಲಿ ಹೋಗುತ್ತಾರೆ ಎಂದು ಗೊತ್ತಾಗುವುದಿಲ್ಲ. ಇವೊತ್ತು ಇಂಜಿನಿಯರ್ಸ್ ಡಾಕ್ಟರ್ಸ್ ಇಲ್ಲ, ಇಷ್ಟೆಲ್ಲಾ ಪಾಸಾಗಿ ಬಂದರೂ ಇವರು ಎಲ್ಲಿಗೆ ಹೋಗುತ್ತಾರೆ, ಎಲ್ಲಿ ಇದ್ದಾರೆ ಎನ್ನುವುದು ಒಂದೂ ಗೊತ್ತಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ನಮ್ಮ ಶಿಕ್ಷಣ ಮಟ್ಟ ಎಷ್ಟರ ಮಟ್ಟಿಗೆ ಹಾಳಾಗಿದೆ ಎಂದರೆ ಪರೀಕ್ಷೆಗೆ ಕೂಡದೇ ಇರುವವರೂ ಸಹ ಪಾಸ್ ಆಗಿರುತ್ತಾರೆ ಪರೀಕ್ಷೆಗೆ ಕುಳಿತವರು ಫೇಲ್ ಆಗಿರುತ್ತಾರೆ. ಇನ್‌ಫ್ಲೂಯನ್ಸ್ ಮಾಡಿ ಯಾರು ಯಾರ ಹೆಸರಿನಲ್ಲಿಯೋ ಪಾಸ್ ಮಾಡತಕ್ಕದ್ದು ಇದೆ. ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಈ ರೀತಿ ಪಾಸ್ ಆಗಿದ್ದಾರೆ.

ಶ್ರೀ ಪಟಪಂಕ್ತಿ ರತ್ನಾಕರ್.—ಅಧ್ಯಕ್ಷರೆ, ಮಾನ್ಯ ಸದಸ್ಯರು ಪರೀಕ್ಷೆಗೆ ಕೂಡದೇ ಪಾಸಾಗಿದ್ದಾರೆಂದು ಹೇಳಿದರು, ಅದು ಏನು ಶ್ರೀ ಮಂಜುನಾಥ ಸ್ವಾಮಿ ದೇವರ ಕೃಪೆಯಿಂದ ಆಗಿದ್ದಾರೋ ಹೇಗೆ...?

ಶ್ರೀ ಡಿ.ಎ. ಚಿನ್ನಪ್ಪ.—ಇನ್ನೊಂದು ವಿಚಾರ ಎಂದರೆ ಪರೀಕ್ಷೆಗೆ ಮುಂಚೆ ಈ ಪ್ರಶ್ನೆ ಪತ್ರಿಕೆಗಳು ಲೀಕ್ ಆಗುತ್ತವೆ. ಇವೊತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆ ಆಗಲಿ, ಪ್ರೀಯೂನಿವರ್ಸಿಟಿ ಪರೀಕ್ಷೆ ಆಗಲಿ, ಬಿ.ಎ. ಅಥವಾ ಬಿ.ಎಸ್.ಸಿ. ಯಾವುದೇ ಪರೀಕ್ಷೆಗಳನ್ನು ತೆಗೆದುಕೊಳ್ಳಿ, ಕಳೆದ ಐದು ವರ್ಷಗಳಿಂದಲೂ ಇದು ನಡೆಯುತ್ತಿದೆ. ಇದು ಬಹಳ ಅನ್ಯಾಯ, ಇದು ಇಲಾಖೆಗೆ ನಾಚಿಕೆಗೇಡು ಎಂದರೆ ತಪ್ಪಾಗುವುದಿಲ್ಲ. ಆದ್ದರಿಂದ, ಈ ಪ್ರಶ್ನೆ ಪತ್ರಿಕೆಗಳು ಲೀಕ್ ಆಗತಕ್ಕದ್ದನ್ನು ಏನಾದರೂ ಮಾಡಿ ತಡೆಗಟ್ಟಬೇಕು. ಇನ್ನು ವೈಸ್-ಛಾನ್ಸಲರ್ ನೇಮಕ ಮಾಡತಕ್ಕ ಕಾಲದಲ್ಲಿ ಬಹಳಷ್ಟು ಜನ ಪೊಲಿಟಿಕಲ್ ಇನ್‌ಫ್ಲೂಯೆನ್ಸ್ ಇಟ್ಟುಕೊಂಡು ಮಾಡತಕ್ಕ ವ್ಯವಸ್ಥೆಯಾಗಿದೆ ಅಂತಹವರಿಗೆ ವೈಸ್ ಛಾನ್ಸಲರ್ ಮಾಡುತ್ತೀರಿ. ಇವೊತ್ತು ಒಳ್ಳೆಯ ಸ್ಟ್ಯಾಂಡರ್ಡ್ ಇಟ್ಟುಕೊಂಡು, ಯೂನಿವರ್ಸಿಟಿ ನಡೆಸತಕ್ಕ ಸಾಮರ್ಥ್ಯ ಇರತಕ್ಕವರನ್ನು ನೇಮಕ ಮಾಡತಕ್ಕದ್ದು ಸೂಕ್ತ ಅಲ್ಲದೇ ಅದನ್ನು ಬಿಟ್ಟು ಪೊಲಿಟಿಕಲ್ ಮೇಲೆ ಅಪಾಯಿಂಟ್‌ಮೆಂಟ್ ಮಾಡಿ ವಿದ್ಯಾಸಂಸ್ಥೆಗಳನ್ನು ಹಾಳು ಮಾಡತಕ್ಕ ವ್ಯವಸ್ಥೆ ಮಾಡಬಾರದು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕಡೆಯದಾಗಿ ಎಜುಕೇಷನ್ ಬಗ್ಗೆ ಹೇಳಬೇಕಾಗಿದೆ. ಸುಮಾರು ೪೦–೪೫ ವರ್ಷಗಳಿಂದ ಒಂದು ಕೌನ್ಸಿಲ್ ಎಂದು ನಡೆಯುತ್ತಿತ್ತು. ಆ ಕೌನ್ಸಿಲನ್ನು ಡೈರೆಕ್ಟರೇಟ್ ಎಂದು ಸರ್ಕಾರ ಒಂದು ಇಲಾಖೆ ನೇಮಕ ಮಾಡಿದ್ದರಿಂದ ಆ ಕೌನ್ಸಿಲ್ ಈಗ ನಡೆಯುತ್ತಿಲ್ಲ. ಈ ಕಡೆ ಡೈರೆಕ್ಟರ್ ಎರಡು ಜನ ಡೆಪ್ಯೂಟಿ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್, ಎಲ್ಲಾ ಸೇರಿ ಈ ಸಂಸ್ಥೆಗಳು ಸರಿಯಾಗಿ ನಡೆಯುತ್ತಿಲ್ಲ. ಈ ರೂರಲ್ ಫಂಕ್ಷನಲ್ ಲಿಟರಸಿ ಪ್ರೋಗ್ರಾಮ್ ಏನಿದೆ ಅದು ಕಂಪ್ಲೀಟ್ ಆಗಿ ನಿಂತುಹೋಗಿದೆ, ಇದಕ್ಕೆ ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇದರಲ್ಲಿ ೧೫ ರಿಂದ ೩೫ ವರ್ಷದೊಳಗಿರುವವರು ಯಾರೂ ಕೂಡ ವಿದ್ಯೆಯನ್ನು ಕಲಿಯಲು ಹೋಗುತ್ತಿಲ್ಲ. ತಮ್ಮ ಈ ಉದ್ದೇಶ

ಸಫಲವಾಗಬೇಕಾದರೆ ಅವರೆಲ್ಲರೂ ಅಲ್ಲಿ ಬಂದು ವಿದ್ಯಾಭ್ಯಾಸ ಕಲಿಯಬೇಕು. ಅಲ್ಲಿ ಈಗ ಏನಾಗುತ್ತಿದೆ ಎಂದರೆ, ಕೇವಲ ಅಟೆಂಡೆನ್ಸ್‌ನ್ನು ಹಾಕುತ್ತಿದ್ದಾರೆ. ಆದರೆ ವಿದ್ಯೆ ಕಲಿಯಲು ಯಾರೂ ಹೋಗುತ್ತಿಲ್ಲ ಇದರ ಬಗ್ಗೆ ಸರ್ಕಾರ ತನ್ನ ಗಮನ ಹರಿಸಬೇಕು. ಈ ಬಗ್ಗೆ ನೀವು ಹೆಚ್ಚಿನ ಪ್ರೋತ್ಸಾಹ ಕೊಟ್ಟಲ್ಲಿ ಈಗ ಏನು ೩೮ ಪರ್ಸೆಂಟ್ ವಿದ್ಯಾವಂತರಿದ್ದಾರೆ ಇವರ ಸಂಖ್ಯೆ ಇನ್ನೂ ಹೆಚ್ಚಾಗುವುದಕ್ಕೆ ಅವಕಾಶ ಇದೆ. ತಾವು ಹಲವಾರು ವಿದ್ಯಾಪೀಠಗಳನ್ನು ಸ್ಥಾಪನೆ ಮಾಡಿದ್ದೀರಿ. ಆದರೆ ಯಾವ ಪೀಠಗಳೂ ಸರಿಯಾಗಿ ತಮ್ಮ ಕೆಲಸವನ್ನು ಮಾಡುತ್ತಿಲ್ಲ. ಅಲ್ಲಿ ಭತ್ತ, ತೆಂಗಿನಕಾಯಿ ಇನ್ನೂ ಮುಂತಾದುವನ್ನು ಬೆಳೆಯುತ್ತಾರೆ, ಆದರೆ ಅದೆಲ್ಲಾ ಎಲ್ಲಿಗೆ ಹೋಗುತ್ತದೆಯೋ ಗೊತ್ತಿಲ್ಲ. ಇದರ ಬಗ್ಗೆ ಕೂಡ ಸರ್ಕಾರ ತನ್ನ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳುವುದಾದರೆ, ರಾಜ್ಯದಲ್ಲಿ ಅಡಲ್ಟ್ ಎಜುಕೇಷನ್‌ನ್ನು ಒಳ್ಳೆಯ ದಕ್ಷತೆಯಿಂದ ತಂದು ಒಳ್ಳೆಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದು ಕರ್ನಾಟಕದಲ್ಲಿ ಹುಟ್ಟಿರತಕ್ಕ ಪ್ರತಿಯೊಂದು ಮಗುವೂ ತನ್ನ ಭವಿಷ್ಯವನ್ನು ತಾನು ರೂಪಿಸಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೀರಿ ಎಂದು ಆಶಿಸಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಮಲ್ಲಪ್ಪ (ಹರಿಹರ).—ಸನ್ಮಾನ್ಯ ಸಭಾಧ್ಯಕ್ಷರೆ, ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ ಇದರ ಬಗ್ಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಸ್ವಾಮಿ, ನಮ್ಮ ರಾಜ್ಯದಲ್ಲಿ ಈಗ್ಗೆ ಕೆಲವು ವರ್ಷಗಳ ಹಿಂದೆ ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದರೂ ಗಣನೀಯ ಪ್ರಮಾಣದಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಬೇಕೆಂಬ ಅಭಿಲಾಷೆ ಮಕ್ಕಳ ತಂದೆತಾಯಿಗಳ ಮನಸ್ಸಿನಲ್ಲಿ ಬರಲಿಲ್ಲ. ಇದು ತಮ್ಮ ಗಮನಕ್ಕೆ ಬಂದಮೇಲೆ ಕಳೆದ ಎರಡು ವರ್ಷಗಳಿಂದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತೇಜನವನ್ನು ಕೊಡಬೇಕೆಂಬ ಉದ್ದೇಶದಿಂದ ಸರ್ಕಾರ ಉಚಿತ ಸಮವಸ್ತ್ರ ಮತ್ತು ಉಚಿತ ಪುಸ್ತಕಗಳನ್ನು ಕೊಡುವುದರ ಮೂಲಕ ಈ ಬಗ್ಗೆ ಆಸಕ್ತಿಯನ್ನು ಮೂಡಿಸಲು ಪ್ರಯತ್ನ ಮಾಡಿದಿರಿ. ಕೇವಲ ನೀವು ಪ್ರಯತ್ನ ಮಾಡಿದರೇ ಸಾಲದು. ಆ ಮಕ್ಕಳ ತಂದೆತಾಯಿಗಳೂ ಇದರ ಬಗ್ಗೆ ಆಸಕ್ತಿವಹಿಸಬೇಕು. ಸರ್ಕಾರದವರು ಈ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವ್ಯಾಪಕವಾದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳತಕ್ಕದ್ದು ಆದ್ಯಕರ್ತವ್ಯ. ಇದಕ್ಕನುಗುಣವಾಗಿ ತಂದೆತಾಯಿಗಳ ಹೊಣೆಗಾರಿಕೆಯೂ ಇದೆ. ಇವೊತ್ತಿನ ಮುಖ್ಯ ಸಮಸ್ಯೆ ಎಂದರೆ, ಗ್ರಾಮಾಂತರ ಪ್ರದೇಶದಲ್ಲಿ ಶಿಕ್ಷಕರ ಕೊರತೆ ಇದೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯಾಭ್ಯಾಸದ ಮಟ್ಟ ಕುಂಠಿತವಾಗುತ್ತಿದೆ. ಅಲ್ಲಿಂದ ಬರತಕ್ಕ ಮಕ್ಕಳು ಪಟ್ಟಣ ಪ್ರದೇಶದ ಮಕ್ಕಳ ಜೊತೆ ಸರಿಸಾಟಿಯಾಗಿ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಿಗೆ ಸರ್ಕಾರದವರು ಶಿಕ್ಷಕರನ್ನು ವರ್ಗಮಾಡಿದರೆ ಅವರು ಯಾರೂ ಕೂಡ ಅಲ್ಲಿಗೆ ಹೋಗಲು ಇಷ್ಟಪಡುವುದಿಲ್ಲ. ಕಾರಣ ಅಲ್ಲಿ ವಾಸದ ಮನೆಗಳ ಕೊರತೆ ಇರುವುದು. ನೀವು ಶಿಕ್ಷಕರನ್ನು ಕೊಟ್ಟರೂ ಅವರಿಗೆ ಬೇಕಾದ ವಾಸದ ಮನೆಗಳನ್ನು ಕಟ್ಟಿಸಿ ಕೊಡದೇ ಇರುವ ಕಾರಣ ಯಾರೂ ಅಲ್ಲಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ನಾನಾದರೂ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಪ್ರತಿಯೊಂದು ಗ್ರಾಮಗಳಿಗೂ ತಾವು ಶಾಲೆಗಳನ್ನು ಕೊಡಬೇಕೆಂದು ಏನು ಉದ್ದೇಶವನ್ನು ಇಟ್ಟುಕೊಂಡಿದ್ದೀರೋ ಅದೇರೀತಿ ಆಯಾಯ ಶಾಲೆಗಳಿಗೆ ಬರತಕ್ಕ ಉಪಾಧ್ಯಾಯರಿಗೆ ಬೇಕಾದ ಮನೆಗಳನ್ನೂ ಕೂಡ ಆರ್. ಎಲ್. ಇ. ಜಿ. ಪಿ. ಯಲ್ಲೋ ಎನ್. ಆರ್. ಇ. ಪಿ. ಯಲ್ಲೋ, ಹುಡ್ಕೋ ದಲ್ಲೋ, ಅಥವಾ ಬೇರೆ ಯಾವುದೋ ಯೋಜನೆಯ ಅಡಿಯಲ್ಲಿ ಕಟ್ಟಿಸಿಕೊಟ್ಟರೆ ಅನುಕೂಲವಾಗುತ್ತದೆ. ಉಪಾಧ್ಯಾಯರೂ ಕೂಡ ನೀವು ವರ್ಗ ಮಾಡಿದ ಊರಿಗೆ ಹೋಗುತ್ತಾರೆ. ಈ ಒಂದು ಕೆಲಸವನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯ ವಿಚಾರ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ೨-೩ ಮೈಲಿ ದೂರದ ವರೆಗೂ ಮಕ್ಕಳು ನಡೆದುಕೊಂಡು ೫-೬-೭ನೇ ತರಗತಿಗಳಿಗೆ ಹೋಗಬೇಕಾಗಿದೆ, ಇಷ್ಟೊಂದು ದೂರದವರೆಗೆ ಮಕ್ಕಳನ್ನು ಕಳುಹಿಸಲು ಕಷ್ಟವಾಗುತ್ತದೆ. ಆದ್ದರಿಂದ ಪ್ರತಿಯೊಂದು ಗ್ರಾಮಾಂತರ ಪ್ರದೇಶದಲ್ಲೂ ೫, ೬, ೭ನೇ ತರಗತಿಗಳನ್ನು ತೆಗೆಯಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಪರಿವರ್ತನೆ ಮಾಡಬೇಕೆಂದು ನನ್ನ ಕೋರಿಕೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ಅತಿ ಮುಖ್ಯವಾದ ವಿಚಾರ ಎಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಜೂನಿಯರ್ ಕಾಲೇಜುಗಳನ್ನು ತೆರೆಯಲು ಅನುಮತಿ ನೀಡುತ್ತೀರಿ. ಆದರೆ ಅಲ್ಲಿ ಕೇವಲ ವಾಣಿಜ್ಯ ಮತ್ತು ಕಲಾ ತರಗತಿಗಳು ಮಾತ್ರ ನಡೆಯುತ್ತವೆ. ವಿದ್ಯಾರ್ಥಿಗಳು ಯಾರಾದರೂ ವಿಜ್ಞಾನದ ವಿಷಯದಲ್ಲಿ ಓದಬೇಕೆಂದರೆ ಅವರು ಪಟ್ಟಣ ಪ್ರದೇಶಗಳಿಗೇ ಬರಬೇಕಾಗುತ್ತದೆ. ಏಕೆಂದರೆ ಆ ಶಾಲೆಯಲ್ಲಿ ವಿಜ್ಞಾನದ ವಿಷಯ ಇರುವುದಿಲ್ಲ.

ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನರ ಮಕ್ಕಳು ವಿಜ್ಞಾನವನ್ನು ಓದಬೇಕೆಂಬ ಆಸಕ್ತಿ ಇದ್ದರೂ ಸಹ ಆರ್ಥಿಕ ಮುಗ್ಗಟ್ಟಿನಿಂದ ಕೇವಲ ಎರಡು ವಿಷಯಗಳನ್ನು ಅಂದರೆ ತಾಂತ್ರಿಕ ಶಿಕ್ಷಣವನ್ನಾಗಲಿ, ಅಥವಾ ವೈದ್ಯಕೀಯ ಶಿಕ್ಷಣದಲ್ಲಿಯಾಗಲಿ ಅವಕಾಶ ಇಲ್ಲದೆ ಹೋಗುತ್ತಿದೆ. ಆದ್ದರಿಂದ ಗ್ರಾಮಾಂತರ ಪ್ರದೇಶದಿಂದ ಬರತಕ್ಕಂಥ ಮಕ್ಕಳಿಗೆ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಮತ್ತು ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟು ಅವರ ಕಷ್ಟವನ್ನು ತಪ್ಪಿಸುವುದಕ್ಕೆ ಪ್ರಯತ್ನ ಪಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಗ್ರಾಮಾಂತರ ಪ್ರದೇಶಗಳ ಮಕ್ಕಳಿಗೆ ಹೆಚ್ಚಿನ ಅನುಕೂಲವನ್ನು ಮಾಡಿಕೊಡಬೇಕೆಂದು ಹೇಳತಕ್ಕಂಥ ಸಂದರ್ಭದಲ್ಲಿ ಏನೆಂದರೆ ಇಂದು ಅನೇಕ ವಿಧವಾದ ವಿದ್ಯಾಭ್ಯಾಸವನ್ನು ಸರ್ಕಾರದವರು ಅನುಸರಿಸುತ್ತಿದ್ದಾರೆ. ರೋಸ್ಟರ್ ಸಿಸ್ಟಮ್‌ನ್ನು ಅನುಸರಿಸುತ್ತಿದ್ದಾರೆ. ತಾಂತ್ರಿಕದಲ್ಲಿಯಾಗಲಿ, ಡಿಪ್ಲೊಮ, ವೈದ್ಯಕೀಯ, ಡಿಎಸ್‌ಸಿಬಿ ಇವೇ ಮುಂತಾದ ವಿಷಯಗಳಲ್ಲಿ, ೭ನೇ ತರಗತಿಯನ್ನು ಪರಿಗಣನೆಗೆ ತೆಗೆದುಕೊಂಡ ಸಂದರ್ಭದಲ್ಲಿ ಕೆಲವು ಹೆಸರಾಂತ ಸಂಸ್ಥೆಗಳು ಇರುತ್ತವೆ ಅವರಿಗೆ ಬಹಳ ದೊಡ್ಡಸ್ತಿಕೆ, ಕೇವಲ ಒಳ್ಳೆಯ ಅಂಕಗಳನ್ನು ಪಡೆದವರಿಗೆ ಮಾತ್ರ ಇವರು ಪ್ರವೇಶಾವಕಾಶವನ್ನು ಕೊಡುತ್ತಾರೆ. ಸಾಮಾನ್ಯ ವರ್ಗದ ಮಕ್ಕಳಿಗೆ ಅಂಥ ಹೆಸರಾಂತ ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಣಕ್ಕೆ ಪ್ರವೇಶಾವಕಾಶವನ್ನು ಕೊಡುತ್ತಿಲ್ಲ. ಬುದ್ಧಿವಂತ ಮಕ್ಕಳನ್ನು ಆಯ್ಕೆ ಮಾಡಿಕೊಂಡು ಬಹಳ ದೊಡ್ಡದಾಗಿ ಸಮಾಜದಲ್ಲಿ ಸೇವೆ ಮಾಡುತ್ತಿದ್ದೇವೆಂದು ಹೆಗ್ಗಳಿಕೆಯ ಮಾತುಗಳನ್ನು ಆಡುತ್ತಿರುತ್ತಾರೆ. ಬುದ್ಧಿವಂತ ಮಕ್ಕಳನ್ನು ಬಹಳ ಬುದ್ಧಿವಂತರನ್ನಾಗಿ ಮಾಡುತ್ತಿದ್ದೇವೆಂದು ಹೇಳುವ ಹೆಸರಾಂತ ಸಂಸ್ಥೆಗಳು ಅನುದಾನ ಪಡೆಯಲು ಅರ್ಹರೇ ಎಂದು ಈ ಸಭೆಯಲ್ಲಿ ನಾನು ಹೇಳುತ್ತೇನೆ. ಇಲ್ಲಿಯೂ ಸರ್ಕಾರದವರು ರೋಸ್ಟರ್ ಸಿಸ್ಟಮ್‌ನ್ನು ಅನುಸರಿಸಬೇಕು ಎಂದು ತಿಳಿಸಬೇಕು. ರಾಜ್ಯದಲ್ಲಿ ವಿದ್ಯಾಸಂಸ್ಥೆಗಳು ಸಾಮಾನ್ಯ ವರ್ಗದ ಮಕ್ಕಳುಗಳಿಗೆ ಸಹಾಯ ನೀಡತಕ್ಕಂಥ ರೀತಿಯಲ್ಲಿ ವ್ಯವಸ್ಥೆಯನ್ನು ನೋಡಿದಾಗ ದುರ್ಬಲವರ್ಗದ ಮಕ್ಕಳಿಗೆ ಅಂಕೆಗಳನ್ನು ಕಡಿಮೆ ಪಡೆದಂಥ ಮಕ್ಕಳನ್ನು ಒಂದು ಉತ್ತಮವಾದ ಮಕ್ಕಳನ್ನಾಗಿ ಮಾಡಲು ಸಹಾಯವಾಗುವಂಥ ನೀತಿಯನ್ನು ಅನುಸರಿಸದೆ ಹೋದರೆ ಅವರಿಗೆ ಕೊಡತಕ್ಕಂಥ ಸರ್ಕಾರದ ಅನುದಾನವನ್ನು ನಿಲ್ಲಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಚಾರವೇನೆಂದರೆ ರಾಜ್ಯ ಪ್ರಶಸ್ತಿಯನ್ನು ಶಿಕ್ಷಕರಿಗೆ ಕೊಡುತ್ತಿರುತ್ತಾರೆ. ಅದನ್ನು ಯಾವ ಆಧಾರದಮೇಲೆ ಕೊಡುತ್ತಿದ್ದಾರೋ ಗೊತ್ತಿಲ್ಲ. ಕಾಲೇಜುಗಳಲ್ಲಿಯೂ ಕೂಡ ಇರತಕ್ಕಂಥ ಉಪನ್ಯಾಸಕರಿಗೆ ಪ್ರೌಢಶಾಲೆಯಿಂದ ಹಿಡಿದು ಪ್ರಾಥಮಿಕ ಶಾಲೆಗಳಲ್ಲಿರತಕ್ಕಂಥ ಉಪನ್ಯಾಸಕರಿಗೇ ಪ್ರಶಸ್ತಿಗಳನ್ನು ಕೊಡುತ್ತಿರುವ ಪ್ರಕಾರ ಕಾಲೇಜುಗಳಲ್ಲಿನತಕ್ಕಂಥವರಿಗೂ ಈ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ,

ಇದರ ಜೊತೆಗೆ ಸರ್ಕಾರ ವಿದ್ಯಾಶಾಲೆಗಳಲ್ಲಿ ಅದರಲ್ಲೂ ಪ್ರೌಢಶಾಲೆಗಳಲ್ಲಿ ಕ್ರೀಡೆಗಳನ್ನು ಬೆಳೆಸಲು ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಮೂಡಿಸಬೇಕು ಎನ್ನುವ ದೃಷ್ಟಿಯಿಂದ ರಾಜ್ಯಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ವಿಭಾಗ ಮಟ್ಟದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ರಾಷ್ಟ್ರ ಮಟ್ಟದಲ್ಲಿ ನಡೆಸುತ್ತಿದ್ದರು. ಇತ್ತೀಚೆಗೆ ಯಾವ ಕಾರಣಕ್ಕಾಗಿ ಅದು ನಿಂತು ಹೋಗಿದೆಯೋ ಗೊತ್ತಿಲ್ಲ. ೪-೫ ವರ್ಷಗಳಿಂದ ಕ್ರೀಡೆಗಳನ್ನು ನಿಲ್ಲಿಸಿಬಿಟ್ಟಿದ್ದಾರೆ. ಇದನ್ನು ಮುಂದುವರಿಸುವುದರಿಂದ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸತಕ್ಕಂಥ ಪ್ರೌಢಶಾಲೆ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳಿಗೆ ಅವಕಾಶವನ್ನು ಕೊಟ್ಟು ಅವರಿಗೆ ಕ್ರೀಡೆಗಳಲ್ಲಿ ಆಸಕ್ತಿಯನ್ನು ಬೆಳೆಸಲಿಕ್ಕೆ ಸಹಾಯ ಮಾಡಿದಂತಾಗುತ್ತದೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಕಾಲೇಜುಗಳಲ್ಲಿ ಲೈಬ್ರರಿಯನ್ನಾಗಿ ಕೆಲಸ ಮಾಡುತ್ತಿರತಕ್ಕಂಥವರು ಸುಮಾರು ೨೫–೩೦ ಜನರು ಇರಬಹುದು. ಅವರು ಸಹ ಸ್ನಾತಕೋತ್ತರ ಪದವೀಧರರಾಗಿರುತ್ತಾರೆ. ಅವರಿಗೆ ಉಪನ್ಯಾಸಕರ ಮಟ್ಟದಲ್ಲಿ ಸರ್ಕಾರದವರು ವೇತನವನ್ನು ಕೊಟ್ಟರೆ ಅವರಿಗೆ ಸಹಾಯ ಮಾಡಿದಂತಾಗುತ್ತದೆ. ಇವರನ್ನು ಉಪನ್ಯಾಸಕರಿಗೆ ತತ್ಸಮಾನರೆಂದು ಪರಿಗಣಿಸಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ,

ಶ್ರೀಮತಿ ಮುಕ್ತಾರುನ್ನೀಸ ಬೇಗಂರವರು ಹೇಳಿದರು, ಉರ್ದು ಶಾಲೆಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿಲ್ಲವೆಂದು ಈಗ ಉರ್ದು ನಿರ್ದೇಶನಾಲಯ ಎಂದು ಮಾಡಲಾಗಿದೆ. ಉರ್ದುವಿಗೆ ರಾಜ್ಯದಲ್ಲಿ ಸಂವಿಧಾನದ ಪ್ರಕಾರ ಆಸಕ್ತಿ ಕೊಟ್ಟು, ವ್ಯಾಪಕವಾದ ರೀತಿಯಲ್ಲಿ ಉರ್ದು ವ್ಯಾಪಕವಾದ ರೀತಿಯಲ್ಲಿ ಶಾಲೆ ಪ್ರಾರಂಭಿಸುವುದರ ಜೊತೆಗೆಅರಬ್ಬಿ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ. ಅದಕ್ಕೂ ಅನುದಾನ ಕೊಡಲಾಗುತ್ತಿದೆ, ಮತ್ತು ಉರ್ದು ಶಾಲೆಗಳಿಗೂ ಕೊಡಲಾಗುತ್ತಿದೆ, ಅದನ್ನು ಸಮಾಜ ಬಳಸಿಕೊಳ್ಳಬೇಕು ಹೆಚ್ಚಿನರೀತಿಯಲ್ಲಿ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ದಿಸೆಯಲ್ಲಿ ಜನರು ಈ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

ದಾವಣಗೆರೆ ನಗರದಲ್ಲಿ ಡಿ.ಆರ್.ಆರ್. ಪಾಲಿಟೆಕ್ನಿಕ್ ಇದೆ. ಅಲ್ಲಿ ಕಂಪ್ಯೂಟರ್ ಸೈನ್ಸ್ ಆಟೋಮೊಬೈಲ್ ಇಂಜನಿಯರಿಂಗ್ ಕೋರ್ಸನ್ನು ಪ್ರಾರಂಭಿಸಬೇಕೆಂದು ಕೋರಿದ್ದೆವು. ಕಂಪ್ಯೂಟರ್ ಸೈನ್ಸ್ ಅನ್ನು ಸರ್ಕಾರ ಪ್ರಾರಂಭಿಸುವುದರಿಂದ ಸರ್ಕಾರಕ್ಕೆ ಹೆಚ್ಚಿನ ಹೊರೆ ಏನೂ ಬೀಳುವುದಿಲ್ಲ, ೮೭–೮೮ನೇ ಸಾಲಿನಿಂದ ಅದನ್ನು ಪ್ರಾರಂಭಿಸಿದರೆ ಗ್ರಾಮಾಂತರ ಪ್ರದೇಶದಿಂದ ಬಂದು ಪಾಲಿಟೆಕ್ನಿಕ್‌ನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ, ದುರ್ಬಲ ವರ್ಗದ ಮಕ್ಕಳಿಗೆ ತುಂಬಾ ಅನುಕೂಲವಾಗುತ್ತದೆ. ರಾಜ್ಯದಲ್ಲಿ ಆಟೋಮೊಬೈಲ್ ಮತ್ತು ಕಂಪ್ಯೂಟರ್ ಸೈನ್ಸ್ ಕೋರ್ಸ್‌ಗಳನ್ನು ಪ್ರಾರಂಭಿಸುವುದರಿಂದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ದಾವಣಗೆರೆ ಪಾಲಿಟೆಕ್ನಿಕ್‌ನಲ್ಲಿ ಈ ವರ್ಷದಿಂದ ಈ ಎರಡು ಕೋರ್ಸ್‌ಗಳನ್ನು ಪ್ರಾರಂಭಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ದಾವಣಗೆರೆ ಐ.ಟಿ.ಐ.ನಲ್ಲಿ ಸರ್ಕಾರೀ ಕಲಾಶಾಲೆ ಇದೆ. ಆದರೆ ಅಲ್ಲಿ ಕಟ್ಟಡದ ಕೊರತೆ ಇದೆ. ಅದಕ್ಕಾಗಿ ಸಚಿವರು ಸ್ಥಳ ಪರಿಶೀಲನೆ ಮಾಡಿ ಬಂದಿದ್ದಾರೆ. ದಾವಣಗೆರೆಯಲ್ಲಿರತಕ್ಕ ಸರ್ಕಾರಿ ಕಲಾಶಾಲೆಯನ್ನು ದುರಸ್ತಿ ಮಾಡಬೇಕು, ಹೆಚ್ಚಿನ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಕೊಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ನಮ್ಮ ಮಾಯಕೊಂಡದಲ್ಲಿ ಕಿರಿಯ ಕಾಲೇಜು ಇದೆ. ಅಲ್ಲಿ ವಿಜ್ಞಾನ ವಿಭಾಗ ಇಲ್ಲ. ಅಲ್ಲಿ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಬೇಕೆಂದು ಗ್ರಾಮಾಂತರ ಪ್ರದೇಶದ ಜನರು ಮತ್ತು ನಾವು ಮಾನ್ಯ ಸಚಿವರನ್ನು ಕೋರಿದ್ದೆವು. ೧೯೮೭–೮೮ನೇ ಸಾಲಿನಲ್ಲಿ ವಿಜ್ಞಾನ ವಿಭಾಗವನ್ನು ಪ್ರಾರಂಭಿಸುವುದರ ಜೊತೆಗೆ ರಾಜ್ಯದಲ್ಲಿ ೧೮ ಪದವೀಧರ ಕಾಲೇಜುಗಳನ್ನು ಪ್ರಾರಂಭಿಸುತ್ತೇವೆಂದು ಹೇಳಿದ್ದಾರೆ. ಮಾಯಕೊಂಡದಲ್ಲಿ ಪದವೀಧರ ಕಾಲೇಜನ್ನು ಮಾಡಬೇಕೆಂದು ಈಗಾಗಲೇ ವರದಿ ಕೊಟ್ಟಿದ್ದಾರೆ ೧೮ ಕಾಲೇಜುಗಳನ್ನು ಮಾಡುವುದನ್ನು ಓದಿ ನೋಡಿದಾಗ ಸಾಮಾನ್ಯ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗತಕ್ಕ ದಿಸೆಯಲ್ಲಿ ವಿದ್ಯಾ ಸಚಿವರು ತೀರ್ಮಾನ ತೆಗೆದುಕೊಂಡಿದ್ದಾರೆ. ಅದರ ಜೊತೆಗೆ ಇನ್ನು ಕೆಲವು ಪದವೀಧರ ಕಾಲೇಜುಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಪ್ರಾರಂಭಿಸಬೇಕೆಂದೂ, ಅದರಲ್ಲಿ ಕಲಾ ಮತ್ತು ವಾಣಿಜ್ಯ ವಿಭಾಗಗಳು ಮಾತ್ರ ಇರದೆ ವಿಜ್ಞಾನ ವಿಭಾಗ ಕೂಡ ಇರಬೇಕೆಂದು ಸಲಹೆ ಮಾಡುತ್ತೇನೆ. ಈ ದಿಸೆಯಲ್ಲಿ ಸರ್ಕಾರ ಕ್ರಮ ಕೈಗೊಂಡು ಗ್ರಾಮೀಣ ಜನರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಿಕೊಡಬೇಕೆಂದು ಕೋರುತ್ತೇನೆ.

ಕೊನೆಯದಾಗಿ, ಸರ್ಕಾರ ವಿದ್ಯಾರ್ಥಿನಿಲಯಗಳಿಗೆ ಸಾಕಷ್ಟು ಹಣ ಖರ್ಚು ಮಾಡುವುದರ ಮೂಲಕ ಸವಲತ್ತು ಕೊಡುತ್ತಿದೆ. ೨೫ ವಿದ್ಯಾರ್ಥಿಗಳಿಗೆ ಮಾತ್ರ ಅಲ್ಲಿ ಊಟದ ವ್ಯವಸ್ಥೆ ಇದೆ. ಪ್ರೀಮೆಟ್ರಿಕ್‌ನಲ್ಲಿ ೨೫ ವಿದ್ಯಾರ್ಥಿಗಳೂ ಇರುವುದಿಲ್ಲ. ಆದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ಪ್ರೀಮೆಟ್ರಿಕ್ ಮತ್ತು ಮಾಧ್ಯಮಿಕ ಶಾಲಾ ಮಕ್ಕಳನ್ನು ಒಳಗೊಳ್ಳುವಂತೆ ೨೫ ಸಂಖ್ಯೆ ಇರುವುದನ್ನು ೧೦೦ ಕ್ಕೆ ಏರಿಸುವುದರ ಮೂಲಕ ಮಕ್ಕಳಿಗೆ ಹೆಚ್ಚಿನ ಸವಲತ್ತನ್ನು ಕೊಡಬೇಕೆಂದು ಹೇಳುತ್ತೇನೆ. ಆ ಮೂಲಕ ಗ್ರಾಮೀಣ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅನುಕೂಲ ಕಲ್ಪಿಸಿಕೊಟ್ಟಂತಾಗುತ್ತದೆ. ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿ ಅಂಥ ವಿದ್ಯಾರ್ಥಿನಿಲಯಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ

ಕೊಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೪-೦೦ ಪಿ.ಎಂ

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಸನ್ಮಾನ್ಯ ಅಧ್ಯಕ್ಷರೆ, ಈ ದಿನ ಈ ಸದನದಲ್ಲಿ ಈ ರಾಜ್ಯದ ಶಿಕ್ಷಣ ಸಚಿವರು ಮಂಡಿಸಿರತಕ್ಕ ೧೯೮೭-೮೮ನೇ ಸಾಲಿನ ಶಿಕ್ಷಣ ಇಲಾಖೆ ಬೇಡಿಕೆಯನ್ನು ಕೆಲವಾರು ನ್ಯೂನತೆಗಳಿಗಾಗಿ ವಿರೋಧಿಸುತ್ತಾ ನನ್ನ ಮಾತನ್ನು ಪ್ರಾರಂಭಿಸುತ್ತಿದ್ದೇನೆ. ಅಧ್ಯಕ್ಷರೆ, ಯಶಸ್ವಿಯಾದ ಪ್ರಜಾಪ್ರಭುತ್ವದ ಮುನ್ನಡೆ ಮತ್ತು ದೇಶದ ಪ್ರಗತಿ ನಮ್ಮ ವಿದ್ಯಾಭ್ಯಾಸ ಮತ್ತು ಅದರ ಗುಣ ಮಟ್ಟವನ್ನು ಅವಲಂಬಿಸಿದೆ. ಯಾವುದೇ ರಾಷ್ಟ್ರ, ಅಥವಾ ರಾಜ್ಯ ಈ ದಿನ ಅಭಿವೃದ್ಧಿಯನ್ನು ಸಾಧಿಸಿದ್ದರೆ ಪ್ರಥಮತಃ ಅದು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ವಿದ್ಯಾವಂತರ ಮಟ್ಟವನ್ನು ಅಥವಾ ಸಂಖ್ಯೆಯನ್ನು ಹೆಚ್ಚಿಸಿದ್ದುದರ ಪರಿಣಾಮದಿಂದ ಎಂದು ಹೇಳಬೇಕಾಗಿದೆ. ಆ ರೀತಿಯ ಪ್ರಗತಿಯನ್ನು ಸಾಧಿಸಿರತಕ್ಕದ್ದನ್ನು ಅನೇಕ ಹೊರ ರಾಜ್ಯಗಳಲ್ಲಿ, ರಾಷ್ಟ್ರಗಳಲ್ಲಿ ಕಾಣಬಹುದಾಗಿದೆ. ಆದರೆ ನಮ್ಮಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದರೂ ಕೂಡ ನಾವು ಆ ದಿಸೆಯಲ್ಲಿ ಯಾವ ಪ್ರಗತಿಯನ್ನು ಸಾಧಿಸಬಹುದಾಗಿತ್ತೋ ಅದನ್ನು ೪೦ ವರ್ಷಗಳ ಕಾಲದಲ್ಲಿ ಸಾಧಿಸುವುದಕ್ಕೆ ಆಗಲಿಲ್ಲ. ಮೊದಲನೆಯದಾಗಿ ವಿದ್ಯಾಭ್ಯಾಸದ ಗುಣಮಟ್ಟ ಏನಿದೆ ಅದು ಬಹಳ ಕೀಳು ಮಟ್ಟದ್ದು ಎಂಬ ಭಾವನೆ ಇದೆ. ಏಕೆಂದರೆ ಸಮಾಜದ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕೆ ಅಥವಾ ಜನರಲ್ಲಿ ರಾಷ್ಟ್ರ ಪ್ರಜ್ಞೆಯನ್ನು ತರತಕ್ಕ, ಸಾಮಾಜಿಕ ಪ್ರಜ್ಞೆಯನ್ನು ಮೂಡಿಸತಕ್ಕ ವಿದ್ಯಾಭ್ಯಾಸ ನಮ್ಮಲ್ಲಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ಬಹುಸಂಖ್ಯೆಯಲ್ಲಿ ಅವಿದ್ಯಾವಂತರು ಅವಿದ್ಯಾವಂತ ಮತದಾರರು ನಮ್ಮ ರಾಷ್ಟ್ರದಲ್ಲಿದ್ದಾರೆ. ಆದರೆ ವಿದ್ಯಾವಂತರಾಗಿರತಕ್ಕ ನಾವು ಅವರ ವಿಚಾರದಲ್ಲಿ ಅವರ ಅಭಿವೃದ್ಧಿಯ ದಿಸೆಯಲ್ಲಿ ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಎಷ್ಟರಮಟ್ಟಿಗೆ ಸ್ವಚ್ಛವಾಗಿ ನಡೆದುಕೊಳ್ಳುತ್ತಿದ್ದೇವೆ ಎಂದು ವಿಚಾರ ಮಾಡುತ್ತಾ ಹೋದರೆ ಖಂಡಿತವಾಗಿ ನಾವು ಈ ಸಮಾಜಕ್ಕೆ, ದೇಶಕ್ಕೆ ದ್ರೋಹ ಮಾಡಿದ್ದೇವೆ ಎಂದೆನಿಸುತ್ತದೆ. ಈ ಸಮಾಜಕ್ಕೆ, ದೇಶಕ್ಕೆ ದ್ರೋಹ ಮಾಡತಕ್ಕವರು ವಿದ್ಯಾವಂತರೇ ವಿನಹ ಅವಿದ್ಯಾವಂತರಲ್ಲ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ೪೦ ವರ್ಷಗಳ ದೀರ್ಘಕಾಲ ಇಷ್ಟು ಅವಿದ್ಯಾವಂತರನ್ನು ಮುನ್ನಡೆಸಿಕೊಂಡು ಬಂದಿದ್ದೇವೆ ಎಂಬ ಹೆಗ್ಗಳಿಕೆ ನಮ್ಮದಲ್ಲ. ಕಾರಣ ಏನೆಂದರೆ ಇಲ್ಲಿ ಅವಿದ್ಯಾವಂತರಿರುವುದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇರತಕ್ಕ ಹಕ್ಕುಬಾಧ್ಯತೆಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಶಕ್ತಿ ಇಲ್ಲದೇ ಇರತಕ್ಕ ಅವಿದ್ಯಾವಂತರು ಏನನ್ನೂ ಕೇಳದಂಥ ಮೂಕರಾಗಿರುವುದರಿಂದ ೪೦ ವರ್ಷಗಳ ಕಾಲ ಈ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಉಳಿದಿದೆಯೋ ವಿನಹ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅರಿವು ಹೊಂದಿರುವುದರಿಂದ ಇಷ್ಟು ದೀರ್ಘಕಾಲ ಉಳಿಸಿಕೊಂಡು ಬಂದಿದ್ದೇವೆ ಎಂದು ಹೇಳಿದರೆ ತಪ್ಪಾಗುತ್ತದೆ. ಇವತ್ತಿನ ದಿವಸ ೩೦೦ ಕೋಟಿ ರೂಪಾಯಿಗಳ ಬೇಡಿಕೆಯನ್ನು ಮಾನ್ಯ ವಿದ್ಯಾ ಸಚಿವರು ಸದನದ ಮುಂದೆ ಇಟ್ಟಿದ್ದಾರೆ. ಇಷ್ಟು ದೊಡ್ಡ ಮೊತ್ತದ ಹಣವನ್ನು ಎಲ್ಲಿಂದ ತರುತ್ತಿದ್ದೇವೆ? ಜನಸಾಮಾನ್ಯರ ಮೇಲೆ ತೆರಿಗೆ ಹೇರಿ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುತ್ತಿದ್ದೇವೆ. ಏತಕ್ಕಾಗಿ ಮಾಡುತ್ತಿದ್ದೇವೆಂದರೆ ವಿದ್ಯಾವಂತರ ಸಂಖ್ಯೆಯನ್ನು ಹೆಚ್ಚಿಸಿದರೆ, ವಿದ್ಯಾಭ್ಯಾಸವನ್ನು ಹೆಚ್ಚಾಗಿ ಕೊಟ್ಟರೆ ಕಲಿತಂಥ ಜನ ಸಮಾಜದ ಒಳಿತಿಗಾಗಿ ತಮ್ಮ ಸೇವೆಯನ್ನು ಕೊಡುತ್ತಾರೆ, ತಮ್ಮ ಕಾಂಟ್ರಿಬ್ಯೂಷನ್ ಕೊಡುತ್ತಾರೆ ಎಂಬ ದೃಷ್ಟಿಯಿಂದ ಇಷ್ಟೆಲ್ಲಾ ತೆರಿಗೆಯನ್ನು ಹೇರಿ ಖರ್ಚು ಮಾಡುತ್ತಿದ್ದೇವೆ. ಶಾಲಾ ಕಾಲೇಜುಗಳಲ್ಲಿ ಪುಸ್ತಕ, ಯೂನಿಫಾರಂ ಮುಂತಾದ ಸೌಲಭ್ಯಗಳನ್ನು ನೀಡಿ ಇಷ್ಟೆಲ್ಲಾ ಸೌಲಭ್ಯ ನೀಡುತ್ತಿರುವ ಸಮಾಜಕ್ಕೆ ನಮ್ಮ ಕಾಣಿಕೆ ಏನೆಂದರೆ ಎಲ್ಲಾ ಹಂತದಲ್ಲೂ ಕೂಡ ಭ್ರಷ್ಟಾಚಾರ ಕಾಣುತ್ತಿದ್ದೇವೆ. ನಾವು ಜನ ಮೆಚ್ಚಿಸುವುದಕ್ಕೆ ಇಲ್ಲಿ ಏನೂ ಇಲ್ಲ ಎಂದು ಹೇಳುತ್ತೇವೆಯೋ ವಿನಹ ಗ್ರಾಮ ಲೆಕ್ಕಿಗನ ಮಟ್ಟದಿಂದ ಮೇಲ್ಮಟ್ಟದವರೆಗೆ ಭ್ರಷ್ಟಾಚಾರ ಈ ದಿನ ತುಂಬಿದೆ. ಅಂದರೆ ವಿದ್ಯಾವಂತರಾಗಿ ಏನು ಫಲ ಆಯಿತು. ಹಿಂದಿನಿಂದ ಕೊಟ್ಟ ವಿದ್ಯಾಭ್ಯಾಸ ಎಲ್ಲಿ ಹೋಯಿತು ಎಂದು ಯೋಚನೆ ಮಾಡಿದರೆ ನಾವು ಏನು ವಿದ್ಯಾಭ್ಯಾಸ ಕೊಡುತ್ತಿದ್ದೇವೆ ಅದು ರಾಷ್ಟ್ರ ಪ್ರಜ್ಞೆಯನ್ನು ಮೂಡಿಸುವುದಕ್ಕೆ ಸಹಾಯಕವಾಗಿಲ್ಲ. ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯತಕ್ಕ ಶಿಕ್ಷಣವನ್ನು ನಮ್ಮಲ್ಲಿ ಕೊಡುತ್ತಿಲ್ಲ. ಸಮಾಜವನ್ನು ಲೂಟಿ

ಹೊಡೆಯುತಕ್ಕ, ಕೆಟ್ಟ ಮನೋಭಾವ ತರತಕ್ಕ ವಿದ್ಯಾಭ್ಯಾಸ ಇವೊತ್ತಿನ ದಿನ ಇದೆಯೇ ವಿನಹ ಒಳ್ಳೆಯ ವಿದ್ಯಾಭ್ಯಾಸ ಇಲ್ಲ. ಇದನ್ನು ಸುಧಾರಣೆ ಮಾಡದೇಹೋದರೆ ಗುಣಮಟ್ಟವನ್ನು ಎತ್ತಿಹಿಡಿಯದೇ ಹೋದರೆ ಇಷ್ಟೊಂದು ಹಣವನ್ನು ಖರ್ಚು ಮಾಡಿ ಸೌಲಭ್ಯವನ್ನು ಕೊಟ್ಟರೂ ಅದು ಒಂದು ರೀತಿಯಲ್ಲಿ ಹುಲಿಗೆ ಹಾಲೆರೆದಂಥ ಪರಿಸ್ಥಿತಿಯಾಗುತ್ತಿದೆ. ಆದ್ದರಿಂದ ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಇವತ್ತಿನ ದಿವಸ ಕೇಂದ್ರ ಸರ್ಕಾರ ನವೋದಯ ವಿದ್ಯಾ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಪೂರ್ವ ಪ್ರಾಥಮಿಕ ಶಿಕ್ಷಣವೇನಾಗಿದೆ ಯೆಂದರೆ ಎರಡು ರೀತಿಯ ಶಿಕ್ಷಣ ಆಗಿದೆ. ಪಟ್ಟಣದ ಮಕ್ಕಳಿಗೆ ಸಿಗತಕ್ಕ ಶಿಕ್ಷಣ ಒಂದು ರೀತಿ, ಗ್ರಾಮಾಂತರ ಪ್ರದೇಶದಲ್ಲಿರುವ ಮಕ್ಕಳಿಗೆ ಸಿಗತಕ್ಕ ಶಿಕ್ಷಣ ಬೇರೆ.

ಇಲ್ಲಿ ಏನಾಗಿದೆ ಎಂದರೆ, ಪ್ರಾಥಮಿಕ ಪೂರ್ವದಲ್ಲಿ ಒಂದು ಮಗು ಯಾವಾಗ ತೊದಲು ಮಾತಿನಿಂದಲೇ ಅಕ್ಷರಾಭ್ಯಾಸವನ್ನು ಕಲಿಸಬೇಕಾದದು ಪ್ರಾರಂಭವಾಗುತ್ತದೆ. ಪಟ್ಟಣ ಪ್ರದೇಶದಲ್ಲಿ ಇವಕ್ಕಾಗಿ ಕಾನ್ವೆಂಟ್ ಮೊದಲಾದ ಸೌಲಭ್ಯಗಳು ಇರುತ್ತವೆ. ಅದೇ ಗ್ರಾಮಾಂತರ ಪ್ರದೇಶದಲ್ಲಿರ ತಕ್ಕಂತಹ ಮಕ್ಕಳಿಗೆ ಈ ಒಂದು ಸೌಲಭ್ಯ ಸಿಕ್ಕುತ್ತಿಲ್ಲ. ಇದರಿಂದ ಏನಾಗುತ್ತದೆ ಎಂದರೆ ಆ ಮಕ್ಕಳು ನಗರ ಪ್ರದೇಶದಲ್ಲಿರತಕ್ಕ ಮಕ್ಕಳ ಜೊತೆಯಲ್ಲಿ ಬಂದು ಪೈಪೋಟಿಯನ್ನು ಎದುರಿಸುವುದಕ್ಕೆ ಸಾಧ್ಯ ವಾಗುವುದಿಲ್ಲ. ಕೆಲವಾರು ವಿಶೇಷ ಸಂದರ್ಭದಲ್ಲಿ ಸಾಧ್ಯವಾಗಬಹುದು. ಶ್ರೀಮಾನ್ ರಾಮಕೃಷ್ಣ ಹೆಗಡೆಯವರೂ ಕೂಡ ಗ್ರಾಮಾಂತರ ಪ್ರದೇಶದಿಂದ ಬಂದಿದ್ದರೂ ಬುದ್ಧಿವಂತರು ಆಗಿದ್ದಾರೆ. ಈ ರೀತಿಯವರು ೨ ಪರ್ಸೆಂಟ್ ಇರಬಹುದು. ಆದರೆ ಎಲ್ಲರೂ ಆ ರೀತಿ ಬರುವುದಕ್ಕಾಗುವುದಿಲ್ಲ. ಇದರಿಂದ ಪ್ರಾಥಮಿಕ ಪೂರ್ವ ಶಿಕ್ಷಣಕ್ಕೆ ಅದರಲ್ಲೂ ಗ್ರಾಮಾಂತರ ಪ್ರದೇಶಗಳ ಬಗ್ಗೆ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಹೆಚ್ಚಿನ ಸೌಲಭ್ಯವನ್ನು ಒದಗಿಸುವುದರ ಜೊತೆಗೆ ಒಳ್ಳೆಯ ಆಹಾರವನ್ನು ಅವರಿಗೆ ಒದಗಿಸಬೇಕು. ೧ ರಿಂದ ೫ ವರ್ಷದವರೆಗಿನ ಮಕ್ಕಳು ಏನು ಕಲಿಯುತ್ತಿದ್ದಾರೆ, ಆ ಮಕ್ಕಳ ಬಗ್ಗೆ ಸರ್ಕಾರ ಹೆಚ್ಚಿನ ಆಸಕ್ತಿ ವಹಿಸದಿದ್ದರೆ, ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ೧ ರಿಂದ ೫ ವರ್ಷದ ಸಣ್ಣ ಮಕ್ಕಳ ಅನುಕೂಲಕ್ಕೋಸ್ಕರ ಅಂಗನವಾಡಿ ಯೋಜನೆ ಇದೆ. ಇದನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಹಿಂದೆ ರಾಜ್ಯ ಸರ್ಕಾರ ತನ್ನ ವತಿಯಿಂದ ಅಂಗನವಾಡಿಗಳನ್ನು ಪ್ರಾರಂಭ ಮಾಡುತ್ತಿತ್ತು. ಆದರೆ ೧೯೮೩ರಿಂದೀಚೆಗೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನನಗೆ ಗೊತ್ತಿರುವ ಹಾಗೆ ಒಂದು ಅಂಗನವಾಡಿಯನ್ನೂ ತೆರೆದಿಲ್ಲ, ಏಕೆ ತೆರೆದಿಲ್ಲ ಎಂಬುದು ನನಗೆ ಗೊತ್ತಾಗಲಿಲ್ಲ. ಕೇಂದ್ರ ಸರ್ಕಾರದ ಯೋಜನೆಗಳು ಈ ಬಾಬಿನಲ್ಲಿ ಅನೇಕವಿವೆ. ಅಲ್ಲಿಂದ ಬರತಕ್ಕ ಯೋಜನೆಯಲ್ಲಿ ಎಲ್ಲಿ ತಮ್ಮವರು ಆಯ್ಕೆಯಾಗಿದ್ದಾರೋ ಅಂತಹ ಕಡೆ ಅವುಗಳನ್ನು ಹಾಕಿಸಿಕೊಳ್ಳತಕ್ಕಂತಹ ಬುದ್ಧಿವಂತಿಕೆಯನ್ನು ಬಿಟ್ಟರೆ ಗ್ರಾಮಾಂತರ ಪ್ರದೇಶದ ಮಕ್ಕಳ ಅಭಿವೃದ್ಧಿ ಬಗ್ಗೆ ಇವರಿಗೆ ಚಿಂತೆಯೇ ಇಲ್ಲ.

ಶ್ರೀ ಡಿ. ಮಂಜುನಾಥ್.—ನೀವು ಹೇಳುವಂಥದ್ದು ಸಮಾಜ ಕಲ್ಯಾಣ ಇಲಾಖೆಗೆ ಬರುತ್ತದೆ. ನಮ್ಮ ಇಲಾಖೆಯ ವತಿಯಿಂದ ಅಂಗನವಾಡಿ ಯೋಜನೆ ಜಾರಿಯಲ್ಲಿಲ್ಲ.

ಶ್ರೀ ಬಿ. ಲಕ್ಕಪ್ಪ.—ಪೂರ್ವ ಪ್ರಾಥಮಿಕ ಶಾಲೆಯ ಬಗ್ಗೆ ನಾನು ಹೇಳಿದ್ದುದು. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಮಟ್ಟ ಯಾವ ರೀತಿಯಲ್ಲಿದೆ ಎಂಬುದನ್ನು ಅನೇಕ ಜನ ಈಗಾಗಲೇ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಇದರಲ್ಲೂ ನಾನು ಆ ಬಗ್ಗೆ ಹೇಳುವುದಾದರೆ, ಕಳೆದ ಸಾರಿ ಶ್ರೀಮಾನ್ ಗೋವಿಂದ ಗೌಡರು ಈ ಖಾತೆಯ ಮಂತ್ರಿಗಳಾಗಿದ್ದಾಗ ಶಿಕ್ಷಕರು ಏನು ಇದ್ದಾರೆ, ಅವರನ್ನು ಅದೇ ತಾಲ್ಲೂಕಿನಲ್ಲಿ ಇಡುವುದಿಲ್ಲ ಎನ್ನತಕ್ಕಂತಹ ಮಾತನ್ನು ಹೇಳಿ ಅದಕ್ಕಾಗಿ ಒಂದು ಕಾರ್ಯಕ್ರಮವನ್ನೂ ಹಾಕಿಕೊಂಡಿದ್ದರು. ಬಹುಶಃ ಶಿಕ್ಷಕರ ಒಂದು ಒಗ್ಗಟ್ಟು, ಅವರ ಒಂದು ಹೋರಾಟಕ್ಕೆ ಹೆದರಿ ಪುನಃ ಅದನ್ನು ಬದಲಾಯಿಸತಕ್ಕಂತಹ ಧೋರಣೆಯನ್ನು ಸರ್ಕಾರ ತಾಳಿತು. ಇದರಿಂದ ಏನಾಗುತ್ತಿದೆ ಎಂದರೆ, ನನ್ನ ಕ್ಷೇತ್ರದಲ್ಲಿ ತರಬೇನಹಳ್ಳಿ ಎಂದು ಒಂದು ಊರು ಇದೆ, ಆ ಒಂದು ಊರಿನಲ್ಲಿ ನಿಮ್ಮ ವರ್ಗದವರೇ ಇದ್ದಾರೆ. ಆ ಊರಿಗೆ ಒಂದೂವರೆ ಮೈಲಿ ದೂರದಲ್ಲಿ ತರಬೇನಹಳ್ಳಿಯ ಪ್ರಾಥಮಿಕ ಶಾಲೆಯ ಉಪಾಧ್ಯಾಯರು ಇದ್ದಾರೆ. ಅವರು ವ್ಯವಸಾಯವನ್ನೂ ಮಾಡುತ್ತಾರೆ ಜೊತೆಗೆ ಶಾಲಾ ಮಾಸ್ಟರ್ ಕೂಡ, ಇವರನ್ನು ಬದಲಾಯಿಸಿ ಎಂಬುದಾಗಿ ಆ ಗ್ರಾಮದವರು ಹೇಳುತ್ತಿದ್ದಾರೆ, ಇದಕ್ಕೆ ಕಾರಣವೇನೆಂದರೆ, ಅವರು ೧೦ ಗಂಟೆಯವರೆಗೂ ಹೊಲದಲ್ಲಿ ಬೇಸಾಯ ಮಾಡುತ್ತಾರೆ, ನಂತರ ಅವರು ಅಲ್ಲಿಂದ ನೇರವಾಗಿ ಶಾಲೆಗೆ ಬರಬೇಕು,

ಶಾಲೆಗೆ ಬರಬೇಕಾದರೆ ಸುಸ್ತಾಗಿರುತ್ತಾರೆ, ಬಂದ ಮೇಲೆ ಶಾಲೆಯಲ್ಲಿರತಕ್ಕ ಎರಡು ಬೆಂಚುಗಳನ್ನು ಸೇರಿಸಿ ಮಲಗುತ್ತಾರೆ. ಹುಡುಗರನ್ನು ಆಟ ಆಡುವುದಕ್ಕೆ ಬಿಟ್ಟು ಬಿಡುತ್ತಾರೆ ಸರಿಯಾಗಿ ಅಭ್ಯಾಸವನ್ನು ಮಾಡಿಸುತ್ತಿಲ್ಲ ಇದರಿಂದ ಅವರನ್ನು ವರ್ಗಾವಣೆ ಮಾಡಿಸಿಕೊಡಿ ಎಂಬುದಾಗಿ ಆ ಹಳ್ಳಿಯ ಜನರು ಕೇಳಿದರು. ನಾವೆಲ್ಲ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕವರೆ. ಉಪಾಧ್ಯಾಯರು ತನ್ನ ಕರ್ತವ್ಯವನ್ನು ಎಷ್ಟರ ಮಟ್ಟಿಗೆ ನಿರ್ವಹಿಸುತ್ತಿದ್ದಾರೆಂಬುದನ್ನು ನಾವೆಲ್ಲರೂ ತಿಳಿದುಕೊಂಡಿರತಕ್ಕಂತಹವರು, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಉಪಾಧ್ಯಾಯ ಶಾಲೆಗಳನ್ನು ನಡೆಸುವವರು ಅವರೇ. ಗ್ರಾಮಗಳಲ್ಲಿ ಆದಂತಹ ವ್ಯಾಜ್ಯಗಳನ್ನು ಬಗೆಹರಿಸುವಂತಹವರು ಅವರೆ. ಅಲ್ಲಿ ರಾಜಕಾರಣವನ್ನು ಮಾಡತಕ್ಕಂತಹವರು ಅವರೆ ಇದರಿಂದಾಗಿ ಅವರು ಶಾಲೆಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸದೆ ಬೇರೆ ಚಟುವಟಿಕೆಗಳಲ್ಲಿ ತೊಡಗುವುದರಿಂದ ಆ ರೀತಿಯ ತೊಂದರೆಗಳು ಗ್ರಾಮಾಂತರ ಪ್ರದೇಶಗಳಿರತಕ್ಕ ಶಾಲೆಗಳಲ್ಲಿ ಬರುತ್ತಿವೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಏಕೋಪಾಧ್ಯಾಯರ ಶಾಲೆಗಳು ಏನು ಇವೆ. ಅವುಗಳನ್ನು ಕಡ್ಡಾಯವಾಗಿ ನಿಲ್ಲಿಸಿ, ಒಂದೊಂದು ಸೆಕ್ಷನ್‌ಗೂ ಒಬ್ಬೊಬ್ಬ ಉಪಾಧ್ಯಾಯರು ಇರುವಂತೆ ಉಪಾಧ್ಯಾಯರ ಸಂಖ್ಯೆಯನ್ನು ಜಾಸ್ತಿ ಮಾಡಿ, ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡದಿದ್ದರೆ, ಇಷ್ಟೊಂದು ಹಣವನ್ನು ಖರ್ಚು ಮಾಡಿದ್ದಕ್ಕೂ ಏನು ಪ್ರಯೋಜನವಿಲ್ಲದಂತಾಗುತ್ತದೆ. ನನ್ನ ತಾಲ್ಲೂಕಿನಲ್ಲಿ ಏಕೋಪಾಧ್ಯಾಯರ ಎರಡು ಶಾಲೆಗಳು ಇವೆ. ಅದರಲ್ಲಿ ಗೈನಾಪುರ ಎಂಬಲ್ಲಿರುವ ಏಕೋಪಾಧ್ಯಾಯರ ಶಾಲೆ ಒಂದು. ಆ ಎರಡೂ ಶಾಲೆಗೆ ಒಬ್ಬರೇ ಉಪಾಧ್ಯಾಯರು, ನಾನು ಅಲ್ಲಿನ ಜನರಿಗೆ ಕೇಳಿದಾಗ ೩ ದಿವಸ ಈ ಶಾಲೆಯಲ್ಲಿ ಮತ್ತೆ ೩ ದಿವಸ ಆ ಶಾಲೆಯಲ್ಲಿ ಆ ಉಪಾಧ್ಯಾಯರು ಇರುತ್ತಾರೆಂದು ಹೇಳಿದರು. ಹೀಗಾದರೆ ಗ್ರಾಮಾಂತರ ಪ್ರದೇಶದ ಮಕ್ಕಳ ವಿದ್ಯಾಭ್ಯಾಸ ಹೇಗಾಗುತ್ತದೆ? ಇಷ್ಟೊಂದು ಬೇಡಿಕೆ ಇರುವ ಇಲಾಖೆ, ತನಗೆ ಕೊಟ್ಟ ಹಣವನ್ನು ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡುವುದಕ್ಕೆ ಉಪಯೋಗಿಸುತ್ತದೆಯೇ ಎಂದು ಕೇಳುತ್ತೇನೆ. ಇವತ್ತು ಹಳ್ಳಿಗಳ ಶಾಲೆಗಳಲ್ಲಿ ಉಪಾಧ್ಯಾಯರು ಸಾಕಷ್ಟು ಇರಬೇಕು, ಶಾಲೆಗಳಿಗೆ ಕಟ್ಟಡ ಇರಬೇಕು, ಪಿಠೋಪಕರಣಗಳು ಇರಬೇಕೆಂದು ಹೇಳುತ್ತೇನೆ. ಕೆಲವು ಶಾಲೆಗಳಲ್ಲಿ ಬ್ಲಾಕ್ ಬೋರ್ಡ್‌ಗಳೇ ಇಲ್ಲ. ಒಬ್ಬ ಉಪಾಧ್ಯಾಯರು ಅವರಿವರಿಂದ ಹಣ ಕಲೆಕ್ಟ್ ಮಾಡಿ ಅರ್ಧ ಮೂಟೆ ಸಿಮೆಂಟ್ ಹಾಗೂ ಮರಳನ್ನು ಶಾಲೆ ಮುಂದೆ ಹಾಕಿದ್ದನ್ನು ನೋಡಿದೆ. ಶಾಲೆಯ ಬೋರ್ಡ್ ಎಲ್ಲಾ ಕಿತ್ತಿದ್ದು ಅದನ್ನು ರಿಪೇರಿ ಮಾಡಿಸಲು ತಂದಿರುವುದಾಗಿ ಅವರು ನನಗೆ ಹೇಳಿದರು. ಇಂತಹದ್ದನ್ನು ನೋಡಿಯೋ ಏನೋ ಬಹುಶಃ ನಮ್ಮ ರಾಜ್ಯದ ಇಂತಹ ಸ್ಥಿತಿಯನ್ನು ನೋಡಿಯೇ ಕೇಂದ್ರ ಸರ್ಕಾರ ಒಂದು ೯೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬ್ಲಾಕ್ ಬೋರ್ಡ್ ಸ್ಕೀಂ ಎಂದು ಮಾಡಿ ಆ ಮುಖಾಂತರ ಬ್ಲಾಕ್ ಬೋರ್ಡ್ ಒದಗಿಸುವ ಒಂದು ಯೋಜನೆಯನ್ನು ಕೈಗೊಂಡಿದ್ದಾರೆ. ಇನ್ನು ಪ್ರೌಢ ಶಾಲೆಗಳ ಬಗ್ಗೆ ಹೇಳುವುದಾದರೆ, ೫ ಕಿ.ಮೀ. ಒಳಗಡೆ ಕೊನೆಯ ಪಕ್ಷ ಒಂದು ಶಾಲೆ ಇರಬೇಕೆಂದು ನಿಯಮ ಇದೆ, ಆದರೆ ಇವತ್ತು ೫ ಕಿ.ಮೀ. ಅಂತರದಲ್ಲಿ ೪-೫ ಶಾಲೆಗಳನ್ನು ನಾವು ನೋಡುತ್ತಿದ್ದೇವೆ. ಅಂಥ ಕಡೆ ಒಂದೊಂದು ತರಗತಿಯಲ್ಲೂ ಸ್ಟ್ರೆಂತ್ ಕಡಿಮೆ ಆಗಿದೆ. ಖಾಸಗಿಯವರು ನಡೆಸುವ ಶಾಲೆಗಳಲ್ಲೂ ಕೂಡಾ ಸ್ಟ್ರೆಂತ್ ೫-೧೦ ಇರುವುದನ್ನು ನೋಡಿದ್ದೇವೆ. ಕೆಲವು ಶಾಲೆಗಳಲ್ಲಿ ಬರೀ-ಉಪಾಧ್ಯಾಯರು ಮಾತ್ರ ಓಡಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅಟೆಂಡೆನ್ಸ್‌ನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೩೦ ಇದ್ದರೂ ಅವರ್‍ಯಾರೂ ಶಾಲೆಯಲ್ಲಿ ಇರುವುದಿಲ್ಲ, ನಿಮ್ಮ ವರ್ಗದವರು ತೆಗೆಯತಕ್ಕ ಶಾಲೆಗಳಲ್ಲಿ ಕಡ್ಡಾಯವಾಗಿ ೫೦ ಪರ್ಸೆಂಟ್ ಜಾಗಗಳನ್ನು ನಿಮ್ಮ ವರ್ಗದವರಿಗೇ ಕೊಡಬೇಕೆಂದು ಇದ್ದು ಅಷ್ಟು ಮಕ್ಕಳು ಸಿಗುವುದೇ ಕಷ್ಟವಾಗಿದೆ. ಇವತ್ತು ಅಷ್ಟು ಮಕ್ಕಳು ಸಿಗದೇ ೨೫ ಪರ್ಸೆಂಟ್‌ನಷ್ಟು ಕೂಡಾ ಮೆಂಟೇನ್ - ಮಾಡುವುದಕ್ಕೂ ಆಗದ ಸ್ಥಿತಿಯಲ್ಲಿ ಆ ಶಾಲೆಗಳು ಇವೆ. ಆ ಶಾಲೆಗಳಿಗೆ ಮತ್ತೊಂದು ತೊಂದರೆ ಏನೆಂದರೆ, ೫ ವರ್ಷಗಳ ಕಾಲ ೫೦ ಪರ್ಸೆಂಟ್ ಮೆಂಟೇನ್ ಮಾಡಿದರೆ ನಂತರ ಅನುದಾನವನ್ನು ಖಾಯಂ ಮಾಡುತ್ತೇವೆನ್ನುವ ನಿಯಮ ಇತ್ತು. ಆದರೆ ಇತ್ತೀಚೆಗೆ ಇದು ಬದಲಾವಣೆ ಆಗಿ ಕೊನೆಯವರೆವಿಗೂ ೫೦ ನಿಮ್ಮ ವರ್ಗದವರು ಇರಬೇಕು ಎಂದು ಇದೆ. ಅದು ಆಗುವುದಿಲ್ಲವೆಂದು ನಾನು ಈಗ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊನೆಯದಾಗಿ, ೧೮ ಕಾಲೇಜುಗಳನ್ನು ಈ ವರ್ಷದಿಂದ ಪ್ರಾರಂಭ ಮಾಡುತ್ತೇವೆಂದು ಹೇಳಿ ಇಲ್ಲಿದೆ. ಆದರೆ ವಿದ್ಯಾಸಚಿವರು ಅದು ಇನ್ನೂ ತೆಗೆಯಬೇಕೆಂದಿದೆ, ಅದನ್ನು ಬದಲಾವಣೆ ಮಾಡಿಕೊಳ್ಳಬೇಕೆಂದರು. ನಮ್ಮ ಚಿಕ್ಕನಾಯ್ಕನ ಹಳ್ಳಿಯಲ್ಲಿ ೧ ಲಕ್ಷ ೮೦ ಸಾವಿರ ಜನಸಂಖ್ಯೆ ಇದ್ದು ೬ ಜೂನಿಯರ್ ಕಾಲೇಜು ಇವೆ,

ಶ್ರೀ ಡಿ. ಮಂಜುನಾಥ್.—ಅಲ್ಲಿ ತಪ್ಪು ಪ್ರಿಂಟ್ ಆಗಿದೆ. ಈಗ ಏನಾಗಿದೆ ಎಂದರೆ ಯಾವುದೇ ಸರ್ಕಾರಿ ಕಾಲೇಜನ್ನು ತೆಗೆಯಬೇಕಾದರೆ ಯೂನಿವರ್ಸಿಟಿಗೆ ಅರ್ಜಿಯನ್ನು ಕೊಡಬೇಕು. ಅದರ ಪ್ರಕಾರ ಸರ್ವೇ ಕೆಲಸ ನಡೆಯುತ್ತದೆ. ಅವಶ್ಯಕತೆ ಎಲ್ಲೆಲ್ಲಿ ಇದೆಯೋ ಅಲ್ಲಿಗೆ ಮಂಜೂರಾತಿಗೆ ಯೂನಿವರ್ಸಿಟಿಗೆ ಅರ್ಜಿ ಹಾಕಿ ಎಂದು ಹೇಳಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ನಮ್ಮ ಚಿಕ್ಕನಾಯಕನಹಳ್ಳಿಯಲ್ಲಿ ೧ ಲಕ್ಷ ೮೦ ಸಾವಿರ ಪ್ರಜಾ ಸಂಖ್ಯೆ ಇದ್ದು ೬ ಜೂನಿಯರ್ ಕಾಲೇಜುಗಳು ಇವೆ. ಹಾಗೂ ಅಲ್ಲಿ ಒಳ್ಳೆಯ ಕಟ್ಟಡ ಕೂಡಾ ಇದ್ದು ಸುಮಾರು ೧೨ ಎಕರೆ ಮೈದಾನ ಕೂಡಾ ಇವೆ. ಇಲ್ಲಿನ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣಕ್ಕೆ ಪ್ರತಿದಿನ ಗಂಡು ಹೆಣ್ಣುಮಕ್ಕಳೆನ್ನದೇ ೨೮ ಮೈಲಿ ದೂರವಿರುವ ತಿಪಟೂರು ಅಥವಾ ೪೨ ಮೈಲಿ ಇರುವ ತುಮಕೂರಿಗೆ ಕೆ.ಎಸ್.ಆರ್.ಟಿ.ಸಿ. ಬಸ್‌ಗಳಲ್ಲಿ ಹೋಗಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಇಲ್ಲಿಗೆ ಕಾಲೇಜು ಬೇಕೆಂದು ಮುಖ್ಯ ಮಂತ್ರಿಗಳಿಗೂ ಮನವಿ ಕೊಟ್ಟಿದ್ದೇನೆ. ಆಗಿನ ಸಂಬಂಧಪಟ್ಟ ಮಂತ್ರಿಗಳಿಗೂ ಮನವಿ ಕೊಟ್ಟಿದ್ದೆನು. ಆಗಿನ ವಿದ್ಯಾ ಸಚಿವರು ಕಾಲೇಜು ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಅಲ್ಲಿಗೆ ಬಂದಿದ್ದ ಸಮಿತಿಯವರೂ ಕೂಡಾ ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಅಲ್ಲಿ ವಿಶಾಲ ಕಟ್ಟಡ ಇದೆ. ಸರ್ಕಾರಿ ಕಟ್ಟಡ ಕೂಡಾ ಇದ್ದು ೧೨ ಎಕರೆ ಮೈದಾನ ಇದೆ. ಅಲ್ಲಿಗೆ ಪ್ರಥಮ ದರ್ಜೆ ಕಾಲೇಜು ಬೇಕೆಂದು ಹಿಂದಿನ ವಿದ್ಯಾ ಮಂತ್ರಿಗಳಿಗೂ ಹೇಳಿದ್ದೆನು. ಮಾನ್ಯ ಮಂಜುನಾಥ್ ಅವರ ಹತ್ತಿರ ಕೂಡಾ ಕೇಳಿದ್ದೇನೆ. ಆದರೆ ಈಗ ಕೊಟ್ಟಿರತಕ್ಕ ೧೮ ಕಾಲೇಜುಗಳನ್ನು ನೋಡಿದರೆ ನಮ್ಮನ್ನು ಪೂರ್ಣವಾಗಿ ಕೈಬಿಟ್ಟಹಾಗೆ ಕಾಣುತ್ತದೆ. ಇಲ್ಲಿಯೇ ಮುಖ್ಯಮಂತ್ರಿಗಳೂ ಇದ್ದಾರೆ. ದಯಮಾಡಿ ನಮ್ಮ ತಾಲ್ಲೂಕಿನ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸದ ಸಲುವಾಗಿ ಒಂದು ಪ್ರಥಮದರ್ಜೆ ಕಾಲೇಜನ್ನು ಕೊಡಬೇಕೆಂದು ಹೇಳಿ, ಇನ್ನು ೧೮ ಕಾಲೇಜುಗಳನ್ನು ಏನು ಕೊಟ್ಟಿದ್ದಾರೆ ಇದರಲ್ಲಿ ಸ್ವಲ್ಪ ರಾಜಕೀಯ ನಡೆದಿದೆಯೆಂದು ನನಗನ್ನಿಸುತ್ತದೆ. ಇದರಲ್ಲಿ ಯಾವುದೇ ಒಬ್ಬ ಕಾಂಗ್ರೆಸ್ ಸದಸ್ಯರ ಕ್ಷೇತ್ರದಲ್ಲಿ ಒಂದನ್ನು ಕೊಟ್ಟಿದ್ದರೆ ನಾನು ಒಪ್ಪಿಕೊಳ್ಳುತ್ತಾ ಇದ್ದೆ.

ಶ್ರೀ ಡಿ. ಮಂಜುನಾಥ್.— ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲೆಲ್ಲ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳತಕ್ಕದ್ದು ಸತ್ಯಕ್ಕೆ ದೂರವಾದ ಮಾತು. ಯಾರು ಯೂನಿವರ್ಸಿಟಿಗೆ ಅರ್ಜಿ ಹಾಕಿಲ್ಲ, ಅವರಿಗೆ ಕೊಟ್ಟಿಲ್ಲ.

ಶ್ರೀ ಬಿ. ಲಕ್ಕಪ್ಪ.— ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿಗೆ ಕೊಡಿ. ನಮ್ಮ ಬೇಡಿಕೆಗಳ ಬಗ್ಗೆಯೂ ಆದ್ಯತೆಯನ್ನು ಕೊಡಿ. ದಯವಿಟ್ಟು ನಮಗೆ ಫಸ್ಟ್‌ಗ್ರೇಡ್ ಕಾಲೇಜು ಮಾಡಿಕೊಡಬೇಕೆಂದು ಹೇಳಿ, ಇಷ್ಟು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಯ ಬೇಡಿಕೆಯ ಬಗ್ಗೆ ಮಾತನಾಡುವಾಗ, ಶಿಕ್ಷಣಕ್ಕೆ ಸಂಬಂಧಪಟ್ಟ ವಿಚಾರ ಏನಿದೆ ಅದು ರಾಜ್ಯಕ್ಕೆ ಮಾತ್ರ ಸೀಮಿತ ವಾಗಿಲ್ಲ, ಹಲವಾರು ವಿಷಯಗಳು ರಾಷ್ಟ್ರಮಟ್ಟದಲ್ಲಿ ರೂಪಿತವಾಗುವುದರಿಂದ ಆ ದೃಷ್ಟಿಯಿಂದಲೂ ಇದನ್ನು ನೋಡಬೇಕಾಗುತ್ತದೆ. ಮೇಲಾಗಿ ನಮ್ಮ ರಾಷ್ಟ್ರದಲ್ಲಿ ಶಿಕ್ಷಣಕ್ಕಾಗಿ ರಾಷ್ಟ್ರದ ಸಮಗ್ರ ಉತ್ಪಾದನೆಯಲ್ಲಿ ಶೇಕಡ ೬.೫ ರಷ್ಟು ಹಣವನ್ನು ಬಡ್ಜೆಟ್‌ನಲ್ಲಿ ನಿಗದಿ ಮಾಡುತ್ತಿದ್ದರು. ಇತ್ತೀಚೆಗೆ ಅದು ಎಷ್ಟಾಗಿದೆ ಎಂದರೆ ರಾಷ್ಟ್ರ ಮಟ್ಟದಲ್ಲಿಯೇ ಶೇಕಡ ೨ಕ್ಕೆ ಬಂದಿದೆ. ಅದು ಬರುತ್ತಾ ಬರುತ್ತಾ ಈಗ ೧.೨ ಪರ್ಸೆಂಟ್‌ಗೆ ಬಂದಿದೆ. ಇಡೀ ರಾಷ್ಟ್ರದ ಬಡ್ಜೆಟ್‌ನಲ್ಲಿ ನಾವು ಶಿಕ್ಷಣಕ್ಕಾಗಿ ಖರ್ಚು ಮಾಡತಕ್ಕ ಹಣ ಎಷ್ಟಿದೆಯೆಂದು ಹೇಳಿದರೆ ನೂರಕ್ಕೆ ೧.೨ ರಷ್ಟು ಅದರ ಮೇಲೆ ಲೆಕ್ಕಹಾಕಿದರೆ ನಾವು ಶಿಕ್ಷಣವನ್ನು ಬೆಳೆಸುವುದಕ್ಕೆ, ಹಾಗೂ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಎಷ್ಟರಮಟ್ಟಿಗೆ ಗಮನ ಕೊಡುತ್ತಿದ್ದೇವೆ, ಎಷ್ಟರಮಟ್ಟಿಗೆ ಇದರಲ್ಲಿ ಪ್ರಗತಿಯಾಗುತ್ತಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳ ಬೇಕು. ನನ್ನ ಸ್ನೇಹಿತರೊಬ್ಬರು ಮಾತನಾಡುವಾಗ ಕೇಂದ್ರ ಸರ್ಕಾರ ಇಷ್ಟು ಹಣ ಕೊಡುತ್ತಿದೆ ಯೆಂದು ಹೇಳುತ್ತಿದ್ದರು ಆದರೆ ವಾಸ್ತವಾಂಶವನ್ನು ನೋಡಿದಾಗ ಗೊತ್ತಾಗುತ್ತದೆ. ನಮ್ಮ ಬಡ್ಜೆಟ್ ನಲ್ಲಿ ಶಿಕ್ಷಣಕ್ಕೆ ನಾವು ಖರ್ಚು ಮಾಡುತ್ತಿರುವುದು ಬಹಳ ಕಡಿಮೆಯಿರುವುದರಿಂದ ನಮ್ಮಲ್ಲಿ ಸರ್ಕಾರಿ ವಿದ್ಯಾ ಸಂಸ್ಥೆಗಳಿಗಿಂತ ಖಾಸಗೀ ವಿದ್ಯಾಸಂಸ್ಥೆಗಳು ಬಹಳಷ್ಟು ಇವೆ. ಖಾಸಗೀ ದ್ಯಾಸಂಸ್ಥೆಗಳವರು ಎಲ್ಲಿಯವರೆಗೆ ಹೋಗಿದ್ದಾರೆನ್ನುವುದನ್ನು ಎರಡು ನಿಮಿಷಗಳ ಹಿಂದೆ ಮಾತನಾಡಿದಂತಹ ನನ್ನ ಮಿತ್ರರು

ಹೇಳಿದರು. ಖಾಸಗೀ ವಿದ್ಯಾಸಂಸ್ಥೆಗಳು ವ್ಯಾಪಾರಿ ಸಂಸ್ಥೆಗಳಾಗಿವೆ. ಶಿಕ್ಷಣ ಮಂತ್ರಿಗಳು ಸಹ ಒಂದು ಖಾಸಗಿ ವಿದ್ಯಾಸಂಸ್ಥೆಯನ್ನು ನಡೆಸುತ್ತಿದ್ದಾರೆಂದು ಕೇಳಿದ್ದೇನೆ.

ಶ್ರೀ ಡಿ. ಮಂಜುನಾಥ್.—ನಾನು ಯಾವುದನ್ನೂ ನಡೆಸುತ್ತಿಲ್ಲ.

ಶ್ರೀ ಯು ಭೂಪತಿ.— ಶಿಕ್ಷಣ ಮಂತ್ರಿಗಳು ಚಳ್ಳಕೆರೆಯಲ್ಲಿ ಯಾವರೀತಿ ನಡೆಯುತ್ತಿದೆ ಎಂಬುದನ್ನು ನೋಡಿದ್ದಾರೆ, ನಗರಸಭೆಯವರು ಕಟ್ಟಿಸಿರತಕ್ಕ ಭಾಗ್ಯಮಂದಿರಗಳು ಏನಿವೆ ಅವುಗಳಲ್ಲಿ ಶಾರದಾಂಬ ವಿದ್ಯಾಸಂಸ್ಥೆಯೆಂದು ಒಂದು ಶಾಲೆಯಿದೆ ಅದರ ಪಕ್ಕದಲ್ಲೇ ಹೈಸ್ಕೂಲ್ ಇದೆ. ಅದರ ಪಕ್ಕದಲ್ಲಿಯೇ ಪ್ರಾಥಮಿಕ ಶಾಲೆಯನ್ನು ನಡೆಸುತ್ತಿದ್ದಾರೆ. ಇದು ಮಾನ್ಯ ಮಂತ್ರಿಗಳಿಗೆ ಗೊತ್ತಿರಬೇಕು. ಅದರ ಬದಿಯಲ್ಲಿ ಒಂದು ಸಣ್ಣ ಮನೆಯಲ್ಲಿ ಜೂನಿಯರ್ ಕಾಲೇಜನ್ನು ನಡೆಸುತ್ತಿದ್ದಾರೆ. ಮೂರೂ ಕೂಡ ಒಂದೇ ಲೈನಿನಲ್ಲಿವೆ. ನಮ್ಮ ರಾಜ್ಯದ ಶಿಕ್ಷಣ ಎಷ್ಟರಮಟ್ಟಿಗೆ ನಡೆಯುತ್ತಿದೆ ಎನ್ನುವುದಕ್ಕೆ ಕಳೆದ ವರ್ಷದ ಎಸ್. ಎಸ್. ಎಲ್. ಸಿ. ಫಲಿತಾಂಶ ಬಂತು. ಫಲಿತಾಂಶ ಪ್ರಕಟವಾದ ಮೇಲೆ ರಾಜ್ಯದ ಫಲಿತಾಂಶ ಕಡಿಮೆಯಾಗಿದೆಯೆಂದು ಸರ್ಕಾರ ಆದೇಶ ಹೊರಡಿಸಿತು. ಎಲ್ಲಾ ಹೈಸ್ಕೂಲ್‌ಗಳಲ್ಲಿ ಫೇಲಾದ ವಿದ್ಯಾರ್ಥಿಗಳಿಗೆ ೮+೮+೪ ಈ ತರಹ ಮಾರ್ಕ್ಸ್‌ಗಳನ್ನು ಕೊಟ್ಟು ಫಲಿತಾಂಶ ಪ್ರಕಟ ಮಾಡಿದ್ದಾರೆ. ಇಷ್ಟು ಮಾರ್ಕ್ಸ್ ಕೊಟ್ಟರೆ ಯಾರು ಪಾಸ್ ಆಗುತ್ತಾರೆ ಅಂತಹವರನ್ನು ಕಳೆದ ವರ್ಷ ಪಾಸ್ ಮಾಡಿದ್ದಾರೆ. ಇಂತಹ ಕೆಲಸ ಮಾಡಲಿಕ್ಕೆ ನಾವು ಇವತ್ತಿನ ದಿವಸ ಇಳಿದಿದ್ದೇವೆ ನೀವು ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಸ್ಟೇಟ್ ಆವರೇಜ್ ೩೪ ಪರ್ಸೆಂಟ್. ಮಾರ್ಚಿ ಏಪ್ರಿಲ್ ತಿಂಗಳಿನಲ್ಲಿ ನಡೆದ ಎಕ್ಸಾಮಿನೇಷನ್‌ಗಳಲ್ಲಿ, ಸೆಪ್ಟೆಂಬರ್‌ನಲ್ಲಿ ನಡೆದ ಎಕ್ಸಾಮಿನೇಷನ್‌ಗಳಲ್ಲಿ ಫಲಿತಾಂಶ ಶೇಕಡ ೨೧ ರಷ್ಟು, ನಾವು ೫೦ ರಷ್ಟು ಮುಟ್ಟಲಿಕ್ಕೆ ಯಾವಾಗ ಸಾಧ್ಯವಾಗುತ್ತದೆ ಪ್ರಾಥಮಿಕ ಶಾಲೆಗಳ ಬಗ್ಗೆ ಎಲ್ಲಾ ಸ್ನೇಹಿತರು ಹೇಳಿರುವುದರಿಂದ ನಾನು ಅದರ ಬಗ್ಗೆ ರಿಪೀಟ್ ಮಾಡುವುದಿಲ್ಲ. ಇವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ತಾಂತ್ರಿಕ ಮಹಾವಿದ್ಯಾಲಯಂಗಳಲ್ಲಿ, ಪ್ರಥಮ ದರ್ಜೆ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಪ್ರಮಾಣವನ್ನು ಕೊಟ್ಟಿದ್ದಾರೆ, ಆದರೆ ಪ್ರಾಥಮಿಕ ಶಾಲೆಯವರನ್ನು ಕೊಟ್ಟಿಲ್ಲ. ಏಕೆಂದರೆ ಆ ರೀತಿ ಪ್ರಮಾಣ ಅಲ್ಲಿ ಇಲ್ಲ. ಅಲ್ಲಿ ಬೋಧಕರ ಮತ್ತು ವಿದ್ಯಾರ್ಥಿಗಳ ಪ್ರಮಾಣ ಬಹಳ ಕಡಿಮೆ ಇದೆ. ಒಬ್ಬೊಬ್ಬ ಬೋಧಕರಿಗೆ ೮೦ ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡತಕ್ಕ ಪರಿಸ್ಥಿತಿ ಪ್ರಾಥಮಿಕ ಶಾಲೆಗಳಲ್ಲಿ ಇದೆ. ಒಬ್ಬ ಉಪಾಧ್ಯಾಯ ಪಾಠ ಮಾಡತಕ್ಕ ಸಂದರ್ಭದಲ್ಲಿ, ಒಬ್ಬ ವಿದ್ಯಾರ್ಥಿ ಮೇಲೆ ಒಂದು ನಿಮಿಷ ಕಾನ್‌ಸೆಂಟ್ರೇಟ್ ಮಾಡಿದರೆ ಒಂದು ಗಂಟೆ ಕಾಲ ೬೦ ವಿದ್ಯಾರ್ಥಿಗಳನ್ನು ನೋಡುವುದಕ್ಕೆ ಬೇಕು. ಈ ರೀತಿ ಶಿಕ್ಷಣ ವ್ಯವಸ್ಥೆಯನ್ನು ಬೆಳೆಸಿಕೊಂಡು ಹೋಗುತ್ತೇವೆಂದರೆ ಅದು ಸಾಧ್ಯವಾಗದ ಮಾತು. ವಿದ್ಯಾಭ್ಯಾಸಕ್ಕೆ ಸಾಕಷ್ಟು ಹಣ ಕೊಡುತ್ತಿಲ್ಲ ಅದರ ಗುಣಮಟ್ಟ ಕುಸಿದಿದೆ. ಕುಸಿದಿರತಕ್ಕ ಗುಣಮಟ್ಟವನ್ನು ಮುಚ್ಚಿಕೊಳ್ಳುವುದಕ್ಕೆ, ಫೇಯಿಲ್ ಆದವರನ್ನು ಪಾಸ್ ಮಾಡತಕ್ಕ ವ್ಯವಸ್ಥೆಯಿಂದಾಗಿ ಇಷ್ಟೊಂದು ಹದಗೆಟ್ಟಿದೆ ಶಿಕ್ಷಣ ಕ್ಷೇತ್ರ ಇನ್ನು ವಿಶ್ವವಿದ್ಯಾನಿಲಯಗಳಿಗೆ ಬಂದರೆ ನಮ್ಮ ಸರ್ಕಾರ ಬೇರೆ ಕಾರ್ಯಕ್ರಮಗಳ ತರಹ ಇವುಗಳನ್ನು ರಚಿಸುವ ಟಾರ್ಗೆಟ್ ಇಟ್ಟುಕೊಂಡಿದೆ. ಅದನ್ನು ಅಚೀವ್ ಮಾಡಬೇಕೆಂದು ವಿಶ್ವವಿದ್ಯಾನಿಲಯಗಳ ಸಂಖ್ಯೆಯನ್ನು ಹೆಚ್ಚು ಮಾಡುತ್ತಿದ್ದಾರೆ ಏತಕ್ಕೆ ಈ ರೀತಿ ಮಾಡುತ್ತಿದ್ದಾರೆ ? ಕಾರಣವೇನು ? ಎಲ್ಲೆಲ್ಲಿ ಹೆಚ್ಚು ಮಾಡಬೇಕೆಂಬುದು ಇಲ್ಲ. ವಿಶ್ವವಿದ್ಯಾನಿಲಯಗಳು ಅಟಾನಮಸ್. ಬಾಡೀಸ ಅವುಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದು. ಆದರೆ ಅದು ಇಲ್ಲ. ಬಳ್ಳಾರಿಯಲ್ಲಿ ಒಂದು ಹಂಪೆಯಲ್ಲಿ ಒಂದು ಮಾಡುತ್ತೇವೆಂದು ಅನೌನ್ಸ್ ಮಾಡುತ್ತಾರೆ. ಇದಕ್ಕೆ ಒಂದು ಮಿತಿ ಬೇಕು. ಇನ್ನು ಮೌಲ್ಯದ ಬಗ್ಗೆ ಹೇಳುವುದಾದರೆ ಪೇಪರ್ ಔಟ್ .ಆಗುವುದು ಎಲ್ಲಿಯವರೆಗೆ ಬಂತು ಎಂದರೆ ಕುಲಪತಿಗಳು ಉಪಕುಲಪತಿಗಳು, ಹಾಗೂ ನಾಯಕರು ಕೂಡ ರಾಜೀನಾಮೆ ಕೊಡುವ ಪರಿಸ್ಥಿತಿ ಬಂತು, ಪ್ರಶ್ನೆ ಪತ್ರಿಕೆ ಔಟ್ ಆಗಿದೆ ಎಂದು ಯಾರು ರಾಜೀನಾಮೆ ಕೊಡಬೇಕು ? ಕಂಟ್ರೋಲರ್ ಆಫ್ ಎಕ್ಸಾಮಿನೇಷನ್ ಕೊಡಬೇಕು. ಆದರೆ ಅವರು ಕೊಡಲಿಲ್ಲ ರಾಜೀನಾಮೆ ಕೊಟ್ಟದ್ದು ವೈಸ್ ಚಾನ್ಸಲರ್. ಈ ರೀತಿ ವಿಶ್ವವಿದ್ಯಾನಿಲಯದ ಶಿಕ್ಷಣ ಇದೆ. ಪಿ. ಜಿ. ಸೆಂಟರ್‌ಗಳನ್ನು ತೆಗೆದುಕೊಂಡರೆ ಅಲ್ಲಿ ಎಂ. ಎಸ್ಸಿ. ಜೀಯಾಲಜಿ ಇದೆ, ಅಪ್ಲೈಡ್ ಸೈನ್ಸ್ ಇದೆ. ಅಂಥ ಕಡೆ ಟೀಚ್ ಮಾಡತಕ್ಕ ಕ್ವಾಲಿಫೈಡ್ ಪರ್ಸನ್ಸ್ ಅನ್ನು ಇವತ್ತಿನವರೆಗೆ ಅಪಾಯಿಂಟ್ ಮಾಡಲಿಲ್ಲ. ಯಾರೋ ಪಾರ್ಟ್‌ಟೈಂನಲ್ಲಿ ಟೀಚ್ ಮಾಡುತ್ತಾರೆ. ಅವರು ಮುಂದೆ ದೊಡ್ಡ ದೊಡ್ಡ ಕೆಲಸಗಳಿಗೆ ಹೋಗಬೇಕಾದ

ವಿದ್ಯಾರ್ಥಿಗಳು. ಬಳ್ಳಾರಿ ಜಿಲ್ಲೆಯ ನಂದಿಹಳ್ಳಿಯಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸಿದ್ದಾರೆ ಅಂಥ ಸ್ಥಳದಲ್ಲಿ ಎಲ್ಲಾ ಅನುಕೂಲವು ಸಿಗುವುದಕ್ಕೆ ಸಾಧ್ಯವಿಲ್ಲ. ಅವುಗಳಿಗೆ ಬೇಕಾದ ಅನುಕೂಲ ಗಳನ್ನು ಕಲ್ಪಿಸಿಕೊಡುವತ್ತ ಗಮನ ಕೊಡಬೇಕು. ಬಿಲ್ಡಿಂಗ್‌ಗಳನ್ನು ಪೂರ್ತಿ ಮಾಡಿ, ಸರಿಯಾದ ಸ್ಟಾಫ್ ಕೊಡಿ. ಅಲ್ಲಿ ಬೇರೆ ಬೇರೆ ವಿಷಯಗಳನ್ನು ಕೊಡುವುದಿದ್ದರೆ ಬಿಲ್ಡಿಂಗ್ ಮಾಡಿ ಎಂದರೆ, ಅದನ್ನು ಮಾಡುವುದಕ್ಕೆ ತಯಾರಿಲ್ಲ. ಬಳ್ಳಾರಿಯಲ್ಲಿ ಪಿ. ಜಿ. ಸೆಂಟರ್ ಮಾಡುತ್ತೇವೆ ಎನ್ನುತ್ತಾರೆ. ಅದನ್ನು ಸರ್ಕಾರ ಪರಿಶೀಲಿಸಬೇಕು. ಅಂಥ ಸ್ನಾತಕೋತ್ತರ ಕೇಂದ್ರಕ್ಕೆ ಮೊದಲು ಒಬ್ಬ ಡೈರೆಕ್ಟರ್ ಇದ್ದರು. ಈಗ ಅವರು ಇಲ್ಲ. ಅಪಾಯಿಂಟ್ ಮಾಡುತ್ತೇವೆಂದರೂ ಇದುವರೆಗೆ ಮಾಡಿಲ್ಲ. ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಯ ಬಗ್ಗೆ ರಾಜ್ಯ ಸರ್ಕಾರದ ನಿಲುವು ಏನು ಎಂದು ಪ್ರಶ್ನೆ ಕೇಳಿದ್ದೆ, ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಇವರು ಬಹಿರಂಗವಾಗಿ ವೇದಿಕೆಗಳ ಮೇಲೆ ಹೊಸ ಶಿಕ್ಷಣ ನೀತಿಯನ್ನು ವಿರೋಧಿಸಿದ್ದರ ಬಗ್ಗೆ, ಟೀಕೆ ಮಾಡಿದ್ದರ ಬಗ್ಗೆ ಕೇಳಿದ್ದೇನೆ, ಅನೇಕರು ಕೇಳಿದ್ದಾರೆ. ಒಂದು ಕಡೆ ಟೀಕೆ ಮಾಡುತ್ತಾ, ಇನ್ನೊಂದು ಕಡೆ ನವೋದಯ ಶಾಲೆಗಳನ್ನು ಸ್ಥಾಪಿಸುವುದು ಏತಕ್ಕೆ ಎಂದು ಅರ್ಥ ವಾಗುತ್ತಿಲ್ಲ. ಒಂದು ಕಡೆ ವಿರೋಧ ಮಾಡುವುದು, ಇನ್ನೊಂದು ಕಡೆ ಪರೋಕ್ಷವಾಗಿ ಸ್ವಾಗತಿ ಸುವುದು ಸರಿಯಾದುದಲ್ಲ. ಪ್ರಾಥಮಿಕ ಶಿಕ್ಷಕರ ಬಗ್ಗೆ ಸರ್ಕಾರಕ್ಕೆ ಹಿಡಿತ ಬೇಕು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಅದನ್ನು ತಾವು ಒಪ್ಪಬಹುದು. ಅಥವಾ ಬಿಡಬಹುದು. ಅವರು ರಾಜಕೀಯ ಪ್ರಭಾವದಲ್ಲಿ ಬೆಳೆದಿದ್ದಾರೆ. ಹತ್ತಿಪ್ಪತ್ತು ವರ್ಷಗಳ ಕಾಲ ಒಂದೇ ಕಡೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪ್ರಾಥಮಿಕ ಶಾಲೆಯ ಶಿಕ್ಷಕ ರಾಜಕೀಯ ಮಾಡತಕ್ಕ ಪರಿಸ್ಥಿತಿ ಬಂದಿದೆ. ಬೆಂಗಳೂರಿನಲ್ಲಿ ಯಾವುದೇ ವರ್ಗದ ನೌಕರರು ಚಳುವಳಿ ಹೂಡಿ ಕಬ್ಬನ್‌ಪಾರ್ಕ್‌ನಲ್ಲಿ ಹೋಗಿ ಕುಳಿತಾಗ ಮಂತ್ರಿಗಳು ಹೋಗಿ ಭಾಷಣ ಮಾಡಿದ್ದು ನೋಡಲಿಲ್ಲ. ಆದರೆ ಪ್ರಾಥಮಿಕ ಶಾಲಾ ಶಿಕ್ಷಕರು ಹೈದರಾಬಾದ್ ವೇತನ ಶ್ರೇಣಿ ನೀಡಬೇಕೆಂಬ ಬೇಡಿಕೆ ಇಟ್ಟಾಗ ಗೋವಿಂದೇಗೌಡರು ಶಿಕ್ಷಣ ಮಂತ್ರಿ ಗಳಾಗಿದ್ದರು. ಅವರು ಹೋಗಿ ಭಾಷಣ ಮಾಡಿದರೂ ಅವರು ಕೇಳಲಿಲ್ಲ.

ಕೊನೆಗೆ ಮಾನ್ಯ ಬೊಮ್ಮಾಯಿಯವರು ಹೋಗಿ ಭಾಷಣ ಮಾಡಿದರು. ದಯವಿಟ್ಟು ಯೋಚನೆ ಮಾಡಿ, ಉಪಾಧ್ಯಾಯರು ಎಷ್ಟು ಪ್ರಬಲರಾಗಿದ್ದಾರೆ ಎಂಬುದನ್ನು. ಆದುದರಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇವರನ್ನು ಬೇರೆ ಕಡೆ ವರ್ಗ ಮಾಡಬೇಕೆಂದರೆ, ತಾಲ್ಲೂಕಿನ ಎ.ಇ.ಓ.ಗಳಿಗೆ ಅವರ ಕೈಯಲ್ಲಿ ಅಧಿಕಾರ ಇಲ್ಲ. ಇವತ್ತು ಶಾಲೆಗಳು ಏನಾಗಿವೆ ಎಂದರೆ ಉಪಾಧ್ಯಾಯರುಗಳು ಅಲ್ಲಿ ಪಾಠ ಮಾಡುತ್ತಿದ್ದಾರೋ, ನಿದ್ದೆ ಮಾಡುತ್ತಿದ್ದಾರೋ ಗೊತ್ತಿಲ್ಲ. ತಾಲ್ಲೂಕಿನ ಎ.ಇ.ಓ. ಕೈಯಲ್ಲಿ ಯಾವುದೇ ಗಾಡಿ ಇಲ್ಲ. ಶಾಲೆಗಳ ತನಿಖೆ ಬಗ್ಗೆ ಇನ್‌ಸ್ಪೆಕ್ಟರುಗಳು ಒಂದು ಕಡೆ ಹೋಗುತ್ತಾರೆ, ಎ.ಇ.ಓ.ಗಳು ಒಂದು ಕಡೆ ಹೋಗುತ್ತಾರೆ. ಕೊನೆಗೆ ಮೇಲಧಿಕಾರಿಗಳಿಗೆ ಒಂದು ರಿಪೋರ್ಟ್ ಕಳುಹಿಸಿ ಕೊಡುತ್ತಾರೆ ಆದುದರಿಂದ ದಯವಿಟ್ಟು ಇದನ್ನು ಸುಧಾರಣೆ ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ಒಬ್ಬರು ಎ.ಇ.ಓ. ಇದ್ದರು. ಇವರನ್ನು ಹೊಸಪೇಟೆ ಹೈಸ್ಕೂಲಿಗೆ ಹೆಡ್ಮಾಸ್ಟರ್ ಆಗಿ ಕಳುಹಿಸಿದರು. ಈ ಹೆಡ್ಮಾಸ್ಟರ್ ಆಗಿ ಹೋದ ವ್ಯಕ್ತಿ ಹಣ ದುರುಪಯೋಗ ಮಾಡಿದ್ದನ್ನು ಕಲ್ಪನೆ ಮಾಡಿಕೊಳ್ಳುವುದೂ ಕಷ್ಟ. ಅಷ್ಟು ದುರುಪಯೋಗ ಮಾಡಿಕೊಂಡಿದ್ದಾರೆ. ಇದೆಲ್ಲಾ ಪ್ರತಿಕೆಯಲ್ಲೂ ಬಂದಿದೆ, ಸುಮಾರು 2 ಲಕ್ಷ ರೂಪಾಯಿಗಳನ್ನು ತಿಂದಿರತಕ್ಕ ಒಬ್ಬ ವ್ಯಕ್ತಿಯ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಆತನ ಹಿಂದಿನ ಇತಿಹಾಸ ಬಹಳ ದೊಡ್ಡದು. ಈತನಿಗೆ ಪ್ರಾಥಮಿಕ ಶಾಲಾ ಶಿಕ್ಷಕರು ಹೆದರಿಕೊಂಡು, ಎಷ್ಟೋ ಜನ ಈತನ ಸಾಲ ತೀರಿಸುವುದಕ್ಕೆ ತನ್ನ ಮನೆಯಲ್ಲಿದ್ದ ದನಗಳನ್ನೂ ಮಾರಿದ್ದಾರೆ. ಕೊನೆಗೆ ಈತನ ವಿಚಾರವನ್ನು ಮಾನ್ಯ ರಘುಪತಿಯವರಿಗೆ ಹೇಳಿದೆ ಹೋದವರ್ಷ ಆತನನ್ನು ವರ್ಗಾವಣೆ ಮಾಡಿ ದ್ದಾರೆ. ಇಂತಹವರಿಗೆ ಡಿಸ್‌ಮಿಸ್ ಮಾಡುವುದು, ಎನ್‌ಕ್ವೈರಿ ಮಾಡುವುದು ಆ ಮೇಲೆ. ಮೊದಲು ಅತ್ಯಂತ ಎಷ್ಟು ಹೆಚ್ಚಿನ ಶಿಕ್ಷೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟು ಶಿಕ್ಷೆಯನ್ನು ಕೊಡಬೇಕು. ಇಲ್ಲದೇಹೋದರೆ ಇಂತಹ ಜನರನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ. ಇಂಥವರಿಂದ ಶಿಕ್ಷಣ ಇಲಾಖೆ ಉಳಿಯುವುದಿಲ್ಲ.

ಅಧ್ಯಕ್ಷರು.— ಮಾನ್ಯ ಭೂಪತಿಯವರೇ ತಾವು ಮುಕ್ತಾಯ ಮಾಡಿ. ಟೈಮ್ ಆಯಿತು.

ಶ್ರೀ ಯು. ಭೂಪತಿ.— ಮಾನ್ಯ ಅಧ್ಯಕ್ಷರೇ, ಒಂದೇಒಂದು ವಿಚಾರವನ್ನು ಹೇಳುತ್ತೇನೆ. ಸರ್ಕಾರಿ ಹೈಸ್ಕೂಲುಗಳಿಗೆ, ಅಲ್ಲಿಯ ಶಾಸಕರನ್ನು, ಶಾಲಾ ಸುಧಾರಣಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡುತ್ತಿದ್ದಾರೆ. ನಾವು ಸಭೆಗೆ ಹೋದಕಡೆಯಲ್ಲೆಲ್ಲಾ ಶಾಲೆಗೆ ಲ್ಯಾಬೊರೇಟರಿ ವ್ಯವಸ್ಥೆ ಮಾಡಿಸಿ

ಕೊಡಿ ಎಂದು ಕೇಳುತ್ತಾರೆ. ಪ್ರಾಥಮಿಕ ಶಾಲೆಗಳ ಸುಧಾರಣಾ ಸಮಿತಿಯವರು, ಚೇರ್ಮನ್‌ಗಳು, ಸದಸ್ಯರು ಬೆಂಚು, ಚೇರ್ ಇತ್ಯಾದಿ ಪೀಠೋಪಕರಣಗಳನ್ನು ಕೊಡಿಸುತ್ತಾರೆ, ಹಾಗೆಯೇ ನೀವೂ ಶಾಲೆಗೆ ಕೊಡಿಸಿ ಎಂದು ನಮ್ಮನ್ನು ಕೇಳಿದರೆ, ನಾವು ಎಲ್ಲಿಂದ ಕೊಡಿಸಬೇಕು ? ಆದುದರಿಂದ ಎಲ್ಲಾ ಹೈಸ್ಕೂಲುಗಳಿಗೂ ದಯಮಾಡಿ ಲ್ಯಾಬೊರೇಟರಿ ವ್ಯವಸ್ಥೆ ಮಾಡಿಸಿಕೊಡಬೇಕು. ಮುಂದೆ ಪಿ.ಯು.ಸಿ ಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಇಲ್ಲಿ ಸ್ವಲ್ಪ ತರಬೇತಿ ಆದರೆ ಮುಂದೆ ಅನುಕೂಲವಾಗುತ್ತದೆ. ಇಲ್ಲಿ, ಈ ಬಜೆಟ್‌ನಲ್ಲಿ ತಮ್ಮ ಇಲಾಖೆಗೆ ಏನು ಹಣ ಕೇಳಿದ್ದೀರಿ, ಇದು ತೀರಾ ಕಡಿಮೆ. ಇಂತಹ ಕಡಿಮೆ ಹಣವನ್ನು ತಾವು ಕೇಳಬಾರದಿತ್ತು.

ಇನ್ನು ಗ್ರಂಥಾಲಯಗಳ ಬಗ್ಗೆ ಒಂದು ಮಾತು. ಗ್ರಂಥಾಲಯಗಳಿಗೆ ಹೆಸರಾಂತ ಸಾಹಿತಿಗಳು ಬರೆದಂಥ ಪುಸ್ತಕಗಳನ್ನು ರಾಜ್ಯದ ಎಲ್ಲಾ ಗ್ರಂಥಾಲಯಗಳಿಗೂ ಖರೀದಿ ಮಾಡಬೇಕೆಂಬ ನಿಯಮ ಇದೆ. ಆದರೆ ಆರೀತಿ ಮಾಡುತ್ತಾ ಇಲ್ಲ, ಅಲ್ಲದೇ ಇದನ್ನು ಕಡಿಮೆ ಮಾಡಿದ್ದಾರೆ. ಪುಸ್ತಕ ಕೊಳ್ಳುವಾಗ ಅವುಗಳ ಗುಣಮಟ್ಟವನ್ನೂ ಅಭ್ಯಾಸ ಮಾಡಬೇಕು. ಕಳೆದ ವರ್ಷದಲ್ಲಿ ನಾನು ಒಂದು ಪುಸ್ತಕ ನೋಡಿದ್ದೇನೆ. ಯಾರೋ ಒಬ್ಬ ಉಪಾಧ್ಯಾಯರು ತಮ್ಮ ಮಗಳ ಬಗ್ಗೆ ಉಂಡಿದ್ದು, ತಿಂದಿದ್ದು ಎಲ್ಲಾ ಬರೆದಿದ್ದಾನೆ, ಅಂತಹ ಪುಸ್ತಕವನ್ನು ಗ್ರಂಥಾಲಯಗಳಲ್ಲಿ ಒಂದು ಕಾಪಿ ತೆಗೆದುಕೊಂಡಿದ್ದಾರೆ. ಈ ತರಹ ಮಾಡುವುದು ಸರಿಯಲ್ಲ. ಪುಸ್ತಕ ಕೊಳ್ಳುವುದಕ್ಕೂ ಒಂದು ಅರ್ಥ ಇದೆ. ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಉಪಯೋಗವಾಗುವಂತಹ ಪುಸ್ತಕಗಳನ್ನು ಖರೀದಿ ಮಾಡಿದರೆ ಒಳ್ಳೆಯದು. ಇನ್ನು ಮುಂದೆ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತಿ ಕೇಂದ್ರಗಳು ಬರುತ್ತಿವೆ. ಪ್ರತಿಯೊಂದು ಹೆಡ್‌ಕ್ವಾರ್ಟರ್‌ಗಳಲ್ಲು ಒಂದೊಂದು ಲೈಬ್ರರಿಯನ್ನು ತೆಗೆದರೆ, ಸ್ಥಳೀಯ ವಿದ್ಯಾರ್ಥಿ ಯುವಕರಿಗೆ ಅನುಕೂಲವಾಗುತ್ತದೆಂದು ಹೇಳಿ, ಶಿಕ್ಷಣ ಸಚಿವರು ಈ ವಿಚಾರಗಳ ಬಗ್ಗೆ ಹೇಳಿಕೆಯನ್ನು ನೀಡಬೇಕೆಂದು ತಿಳಿಸುತ್ತಾ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ:

೪.೩೦ ಪಿ.ಎಂ

† ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).— ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಯ ವಾರ್ಷಿಕ ವರದಿ ಮತ್ತು ಬೇಡಿಕೆಗಳನ್ನು ವಿರೋಧಿಸಿ ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನಾಡಲಿಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಪ್ರಾಥಮಿಕ ಶಿಕ್ಷಣದ ವಿಚಾರದಲ್ಲಿ ಈಗಾಗಲೇ ಹಲವಾರ ಸದಸ್ಯರು ಹೆಚ್ಚು ವಿಚಾರವನ್ನು ತಮ್ಮೆದುರು ಇಟ್ಟಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ, ಸಣ್ಣ ಮಗುವಿನ ಮನಸ್ಸನ್ನು ಹಾಗೂ ಅವನ ಅಪೇಕ್ಷೆಗಳನ್ನು ಅರ್ಥಮಾಡಿಕೊಂಡು, ಅವನು ಜೀವನ ದುದ್ದಕ್ಕೂ ಯಾವರೀತಿ ಮುಂದೆ ಬರಲಿಕ್ಕೆ ಸಾಧ್ಯತೆ ಇದೆ ಎಂಬ ವಿಚಾರದಲ್ಲಿ, ರೀತಿಯಲ್ಲಿ, ಪ್ರಾಥಮಿಕ ಶಿಕ್ಷಣವನ್ನು ಮುಂದುವರಿಸಿದರೆ, ಅವನು ಮುಂದೆ ಬರುವುದಕ್ಕೆ ಸಹಾಯವಾಗುತ್ತದೆ. ಈ ದೃಷ್ಟಿಯಲ್ಲಿ ನಾವು ನೋಡಿದರೆ, ಗ್ರಾಮಾಂತರ ಪ್ರದೇಶದಲ್ಲಿರುವಂತಹ ಶಿಕ್ಷಣ ವ್ಯವಸ್ಥೆ ಏನಿದೆ ಇದು ಸಂಪೂರ್ಣವಾಗಿ, ಈ ರೀತಿಗೆ ವಿರೋಧವಾಗಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಉಪಾಧ್ಯಾಯರಾಗಲಿ, ಶಾಲೆಗೆ ಬೇಕಾದ ಅನುಕೂಲತೆಗಳಾಗಲಿ ಇಲ್ಲ. ಕೇವಲ ಪಠ್ಯಪುಸ್ತಕಗಳನ್ನು ಅಥವಾ ಅಂಗಿಚಡ್ಡಿ ಗಳನ್ನು ಕೊಡುವುದರ ಮುಖಾಂತರ ಅನಕ್ಷರತೆ ನಿವಾರಣೆಯಾಗುತ್ತದೆ ಎಂದರೆ ಅದು ದೊಡ್ಡ ತಪ್ಪು ಅಭಿಪ್ರಾಯ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ೮೦೦ ಕ್ಕಿಂತಲೂ ಹೆಚ್ಚು ಮಂದಿ ಉಪಾಧ್ಯಾಯರು ಬೇಕಾಗಿದ್ದಾರೆ. ೫೦ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರು ಎಂದು ಏನಿದೆ ಅದು ಇಲ್ಲ. ಕಳೆದ ಎರಡು ವರ್ಷಗಳಿಂದ ಇದು ಜಾಸ್ತಿಯಾಗುತ್ತಾ ಹೋಗಿದೆ ಇದನ್ನು ಭರ್ತಿ ಮಾಡಲಿಕ್ಕೆ ಯಾವುದೇ ಪ್ರಯತ್ನ ನಡೆದಿಲ್ಲ. ಸರಕಾರ ಪ್ರೌಢ ಶಿಕ್ಷಣ ಶಾಲೆಗಳಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದೆ. ಅಲ್ಲಿ ಮೀಟಿಂಗ್ ಕರೆದು ಶಾಲೆಯ ಅಭಿವೃದ್ಧಿಗೆ ಬೇಕಾದ ಒಂದು ಅನುಕೂಲತೆಗಳ ಪಟ್ಟಿ ಮಾಡುವ ಕೆಲಸ ಕಾರ್ಯ ಆಗಿದೆ. ಇದರ ಬಗ್ಗೆ ಸರಕಾರಕ್ಕೆ ಯಾವರೀತಿಯ ಒತ್ತಾಯ ತಂದರೂ ಹೆಚ್ಚು ಪ್ರತಿಫಲ ಸಿಗಲಿಲ್ಲ. ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ನಾವು ಕಳುಹಿಸಿ ಕೊಟ್ಟಂಥ ರೆಸಲ್ಯೂಷನ್ ಏನಿದೆ, ಅದರ ಮಟ್ಟಿಗೆ ಉತ್ತರ ಕೊಟ್ಟು, ಸರಿಯಾದ ಸಮರ್ಪಕವಾದ ರೀತಿಯಲ್ಲಿ ಕಾರ್ಯಕ್ರಮ ಆಗುವಂತೆ ಮಾಡಿದರೆ, ಸಾರ್ವಜನಿಕರಿಂದ ಏನು ದೇಣಿಗೆ ಸಿಗುತ್ತದೆ ಹಾಗೂ ಸರಕಾರದಿಂದ ಏನು ಅನುಕೂಲ ಸಿಗುತ್ತದೆ ಅದನ್ನು ಒಂದುಗೂಡಿಸತಕ್ಕಂಥ ಕೆಲಸ ಮಾಡಿ, ಶಾಲೆಯ ಅಭಿವೃದ್ಧಿಗೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ, ರಾಜೀವಗಾಂಧಿಯವರ ಹೊಸ ಶಿಕ್ಷಣ ನೀತಿಯನ್ನು ನಾವೆಲ್ಲರೂ

ಸ್ವಾಗತ ಮಾಡಬೇಕಾಗಿದೆ. ನಮ್ಮ ಸರಕಾರವೂ ನೂರರಲ್ಲಿ ೭೫ ಪರ್ಸೆಂಟ್ ಇದನ್ನು ಸ್ವಾಗತ ಮಾಡಿದೆ. ನವೋದಯ ಸ್ಕೂಲ್‌ಗಳು ಎಲ್ಲೆಲ್ಲಿ ಇರಬೇಕು ಎನ್ನುವ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಆದರೆ ಎಲ್ಲೆಲ್ಲಿ ಜನತಾ ಪಕ್ಷದ ಸದಸ್ಯರು ಗೆದ್ದು ಬಂದಿದ್ದಾರೆ ಅಲ್ಲಿ ನವೋದಯ ಸ್ಕೂಲ್‌ಗಳನ್ನು ರಚನೆ ಮಾಡುವಂತಹ ಕೆಲಸ ಕಾರ್ಯಗಳನ್ನು ನಡೆಸಿದ್ದಾರೆ. ಈ ನವೋದಯ ಸ್ಕೂಲ್‌ಗಳು ಏನು ಪ್ರಾರಂಭ ವಾಗಲಿಕ್ಕೆ ಇದೆ, ಇದರಲ್ಲಿ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೂ ಕೂಡಾ ೮೦ ಪರ್ಸೆಂಟ್ ಶಿಕ್ಷಣ ದೊರೆಯುವುದಕ್ಕೆ ಅವಕಾಶ ಇದೆ. ವಿದ್ಯಾರ್ಥಿ ತನ್ನ ಮುಂದಿನ ಜೀವನದಲ್ಲಿ ಯಾವರೀತಿ ಅಭಿಲಾಷೆ ಇಟ್ಟುಕೊಂಡು ಮುಂದೆ ಬರುವುದಕ್ಕೆ ಸಾಧ್ಯತೆ ಇದೆ ಆ ರೀತಿ ಶಿಕ್ಷಣ ವ್ಯವಸ್ಥೆ ಆಗುವುದಕ್ಕೆ ಇದರಿಂದ ಸಾಧ್ಯ ಇದೆ. ಇದನ್ನು ನಾವೆಲ್ಲರೂ ಸ್ವಾಗತ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಇದೇ ರೀತಿಯಾಗಿ ಕಾಲೇಜು ಶಿಕ್ಷಣದ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಅನೇಕ ಯೂನಿವರ್ಸಿಟಿಗಳು ನಡೆಯುತ್ತಿವೆ. ಅದರಲ್ಲಿ ಪ್ರಮುಖವಾಗಿ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ತೆಗೆದುಕೊಂಡರೆ, ಇಲ್ಲಿ ಯಾವರೀತಿ ಶಿಕ್ಷಣ ದೊರೆಯುತ್ತಿದೆ ಎಂಬುದು ಎಲ್ಲರಿಗೂ ತಿಳಿದಂಥ ವಿಚಾರವಾಗಿದೆ. ಯಾವುದಾದರೂ ಒಂದು ಉದ್ಯೋಗಕ್ಕೆ ಪತ್ರಿಕೆಯಲ್ಲಿ ಅಡ್ವರ್‌ಟೈಸ್‌ಮೆಂಟ್ ಬಂದಾಗ ಬೆಂಗಳೂರು ಯೂನಿವರ್ಸಿಟಿ ವಿದ್ಯಾರ್ಥಿಗಳು ಅಪ್ಲೈ ಮಾಡಬಾರದು ಎಂದು ಹೇಳುವಂತಹ ಸ್ಥಿತಿ ಇದೆ. ಈ ದೃಷ್ಟಿಯಿಂದ ಬೆಂಗಳೂರು ಯೂನಿವರ್ಸಿಟಿ ಶಿಕ್ಷಣವನ್ನು ಯಾವರೀತಿ ಸುಧಾರಣೆಗೆ ತರಬಹುದು, ಇದರಲ್ಲಿರುವಂತಹ ಕರಪ್ಷನ್, ಹಾಗೂ ಕುಂದುಕೊರತೆಗಳನ್ನು ಯಾವರೀತಿ ನಿವಾರಣೆ ಮಾಡಬಹುದು ಎನ್ನುವುದರ ಬಗ್ಗೆ ತೀವ್ರ ರೀತಿಯಲ್ಲಿ ತಾವು ಗಮನವನ್ನು ಕೊಡಬೇಕು. ಇದರ ಬಗ್ಗೆ ಶ್ರೀಮಾನ್ ಜಯಕುಮಾರ್‌ರವರು ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಒಂದು ಹೈ ಪವರ್ ಕಮಿಟಿಯನ್ನು ಮಾಡಿ, ಯೂನಿವರ್ಸಿಟಿಗೆ ಸಂಬಂಧಪಟ್ಟಹಾಗೆ ಯಾವರೀತಿ ಸುಧಾರಣೆ ಮಾಡುವುದಕ್ಕೆ ಸಾಧ್ಯತೆ ಇದೆ ಎಂಬುದನ್ನು ವಿಚಾರ ಮಾಡಬೇಕೆಂದು ಹೇಳುತ್ತೇನೆ ಕಳೆದ ಸಲ ವಿದ್ಯಾಮಂತ್ರಿಗಳಾಗಿದ್ದ ಮಾನ್ಯ ರಘುಪತಿಯವರು ಡ್ರಗ್ ಅಡಿಕ್ಷನ್ ಬಗ್ಗೆ, ಮಾದಕದ್ರವ್ಯಗಳ ಸೇವನೆ ಬಗ್ಗೆ ಒಂದು ಸೆಲ್ ರಚನೆ ಮಾಡುತ್ತೇನೆ ಎನ್ನುವ ದೃಷ್ಟಿಯಲ್ಲಿ ಪ್ರಸ್ತಾಪ ಮಾಡಿದ್ದರು. ಆದರೆ ನಮಗೆ ತಿಳಿದು ಬಂದಹಾಗೆ ಯಾವರೀತಿಯ ಸೆಲ್ ಸಹ ರಚನೆಯಾಗಿಲ್ಲ. ಇದನ್ನು ಹತೋಟಿಗೆ ತರುವಂತಹ ಕೆಲಸ ಕಾರ್ಯಗಳು ಸಹ ಆಗಿಲ್ಲ, ಈ ದಿಸೆಯಲ್ಲಿ ಸರ್ಕಾರದವರು ಹೆಚ್ಚಿನ ನಿಗಾ ತೆಗೆದುಕೊಂಡಂತೆ ಕಾಣಲಿಲ್ಲ, ಇನ್ನು ಕ್ಯಾಪಿಟೇಶನ್ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ತಮ್ಮ ಚುನಾವಣೆಯ ಸಂದರ್ಭದಲ್ಲಿ ತಾವು ಹೇಳಿದ ಮಾತನ್ನು ಮರೆತಂತೆ ಕಾಣುತ್ತದೆ.ಪ್ರತಿ ವರ್ಷ ತಾವು ೪೦–೬೦ ಪರ್ಸೆಂಟ್ ಎಂದು ಮಾಡಿದ್ದರೂ ಕೂಡ ಯಾವ ಹತೋಟಿಯನ್ನು ಸಹ ಸರ್ಕಾರ ಮಾಡಿಲ್ಲ. ಈ ಬಗ್ಗೆ ನಿಗಾ ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದೇ ಸದನದಲ್ಲಿ ಮಾಜಿ ಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು ಅದೇನೆಂದರೆ ಸೆನೆಟ್‌ನಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯವನ್ನು ಕೊಡುತ್ತೇವೆಂದು ಆದರೆ ಇದುವರೆವಿಗೂ ಆ ಬಗ್ಗೆ ಸರ್ಕಾರ ಯಾವುದೇ ಕಾರ್ಯಕ್ರಮ ಹಾಕಿಕೊಂಡಂತೆ ಕಾಣಲಿಲ್ಲ. ಮತ್ತೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳ ಚುನಾವಣೆಗಳಲ್ಲಿ ೧೮ ವರ್ಷದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಮತದಾನ ಮಾಡುವ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದೀರಿ. ಆದರೆ ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿಗಳ ಸಂಘದ ಚುನಾವಣೆಗಳನ್ನು ಸ್ಥಗಿತಗೊಳಿಸಿದ್ದೀರಿ. ಆದ್ದರಿಂದ ಸರ್ಕಾರ ಈ ಬಗ್ಗೆ ಹೆಚ್ಚಿನ ನಿಗಾ ವಹಿಸಿ ಪ್ರತಿಯೊಂದು ಕಾಲೇಜಿನಲ್ಲೂ ಚುನಾವಣೆ ನಡೆಸುವಂತೆ ಸೂಚನೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಕ್ರೀಡೆಗಳ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿದಂತೆ ಕಾಣಿಸಲಿಲ್ಲ. ನಮ್ಮಲ್ಲಿ ಪದವೀ ಪಡೆದಂತಹ ವಿದ್ಯಾರ್ಥಿಗಳನ್ನು ಶಿಕ್ಷಕರನ್ನಾಗಿ ಆಯ್ಕೆ ಮಾಡುತ್ತೀರಿ. ಈ ಕೆಲಸವನ್ನು ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತೀರಿ. ಈಗ ಯಾರು ಉತ್ತಮವಾದ ಅಂಕಗಳನ್ನು ಪಡೆದಿರುತ್ತಾರೋ ಅವರನ್ನು ಮಾತ್ರ ಆಯ್ಕೆ ಮಾಡುವಂತಹ ಪದ್ಧತಿ ಇದೆ. ಇದರಲ್ಲಿ ಹೆಚ್ಚು ಲೋಪದೋಷಗಳು ಇವೆ. ಬೆಂಗಳೂರು ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳನ್ನು ಒಟ್ಟಿಗೆ ಕಲೆಹಾಕಿ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡುತ್ತೀರಿ. ಒಂದೊಂದು ಯೂನಿವರ್ಸಿಟಿಯಲ್ಲಿ ಒಂದೊಂದು ರೀತಿಯಾಗಿ ವಿದ್ಯಾರ್ಥಿಗಳು ಅಂಕಗಳನ್ನು ಪಡೆದಿರುತ್ತಾರೆ. ಈಗ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ಜನ ಫಸ್ಟ್ ಕ್ಲಾಸ್ ಬಂದಿರುತ್ತಾರೆ. ಆದರೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಫಸ್ಟ್‌ಕ್ಲಾಸ್ ಒಬ್ಬರೋ

ಅಥವಾ ಇಬ್ಬರೋ ಬಂದಿರುತ್ತಾರೆ. ಆದರೆ ಆಯ್ಕೆ ಮಾಡುವಂತಹ ಸಂದರ್ಭದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದವರಿಗೆ ಹೆಚ್ಚು ಅವಕಾಶ ಸಿಗುತ್ತದೆ. ಬೇರೆಯವರಿಗೆ ಅವಕಾಶಗಳು ಬಹಳ ಕಡಿಮೆ, ಈ ರೀತಿ ಆಯ್ಕೆ ಮಾಡಿದಂತಹವರಲ್ಲಿ ಟೀಚ್ ಮಾಡುವ ಕೆಪ್ಯಾಸಿಟಿ ಸಹ ಇರುವುದಿಲ್ಲ. ಈ ರೀತಿಯಾಗಿ ಅನೇಕ ಜನ ವಾಪಸ್ ಬಂದಿರುವಂತಹ ನಿದರ್ಶನಗಳು ಇವೆ. ಆದ್ದರಿಂದ ಆಯ್ಕೆ ಮಾಡುವಂತಹ ಕಾಲದಲ್ಲಿ ಆಯಾಯಾ ವಿಶ್ವವಿದ್ಯಾನಿಲಯಂ ಗಳಿಗೆ ಹೊಂದಿಕೊಳ್ಳುವಂತೆ ಆಯ್ಕೆ ಮಾಡಿದರೆ ಒಳ್ಳೆಯದು, ಇದನ್ನು ವೃತ್ತಿ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ರಾಷ್ಟ್ರಾಭಿಮಾನ ಮೂಡಿ ಬರುವಂತಹ ವೃತ್ತಿ ಶಿಕ್ಷಣವನ್ನು ಕಾಲೇಜು ಮತ್ತು ಹೈಸ್ಕೂಲ್‌ಗಳಲ್ಲಿ ಕೊಡಬೇಕು. ಕಳೆದ ಸಲ ಇದೇ ಸದನದಲ್ಲಿ ಮಾಜಿ ಮಂತ್ರಿಗಳು ರೂರಲ್ ಡೆವಲಪ್‌ಮೆಂಟಿನಲ್ಲಿ ಎಂ ಎಸ್. ಸಿ. ಮಾಡತಕ್ಕಂಥ ವಿದ್ಯಾರ್ಥಿಗಳಿಗೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಅವಕಾಶ ಮಾಡಿಕೊಡಲಾಗುವುದೆಂದು ಹೇಳಿದ್ದರು. ಆದರೆ ಆ ಬಗ್ಗೆ ಕೂಡ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಆ ವಿದ್ಯಾರ್ಥಿಗಳು ಈಗಲೂ ಕೂಡ ಚಳುವಳಿಯನ್ನು ಮಾಡುತ್ತಿದ್ದಾರೆ, ಇನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಬಯಸುವುದಾದರೆ ನಮ್ಮ ಕ್ಷೇತ್ರದಲ್ಲಿ ಒಂದು ಪ್ರಾಥಮಿಕ ಶಿಕ್ಷಣ ಕೇಂದ್ರಕ್ಕೆ ಅನುಮತಿಯನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದರು, ಆದರೆ ಇದುವರೆವಿಗೂ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಯಾವ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ಆದ್ದರಿಂದ ಈ ಪ್ರಾಥಮಿಕ ಶಿಕ್ಷಣ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ನಾನು ಏನೇನು ಸಲಹೆಗಳನ್ನು ಕೊಟ್ಟಿದ್ದೇನೆಯೋ ಆ ಸಲಹೆಗಳನ್ನು ಸರ್ಕಾರ ಗಮನಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ).—ಈ ಒಂದು ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ನನ್ನ ಕೆಲವು ಅನಿಸಿಕೆಗಳನ್ನು ತಮ್ಮ ಮುಂದಿಡಲು ಇಚ್ಛಿಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸಮಾಜದಲ್ಲಿ ಈ ವಿದ್ಯೆ ಎಷ್ಟರ ಮಟ್ಟಿಗೆ ಅಖಿರವಾಗಿದೆ. ಈ ಒಂದು ವಿದ್ಯೆ ನಿಜವಾಗಲೂ ಹೇಳಬೇಕೆಂದರೆ, ಎಲ್ಲಾ ಅಂಗಗಳ ಬಹಳ ಮುಖ್ಯವಾದ ಒಂದು ಸಂಸ್ಥೆ. ಈ ಸಂಸ್ಥೆಯಲ್ಲಿ ಒಳ್ಳೆಯ ಕ್ರಮ ಶಿಸ್ತು, ನಡವಳಿಕೆಗಳನ್ನು ಉತ್ತಮ ಮಾಡಲಿಕ್ಕೆ ಏರ್ಪಾಡು ಮಾಡಿದರೆ ರಾಜ್ಯದ ರಾಷ್ಟ್ರದ ಪ್ರಗತಿಯನ್ನು ಅತಿ ಜಾಗ್ರತೆ ಸಾಧಿಸುವುದರಲ್ಲಿ ಸಂಶಯವೇ ಇಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಒಂದು ಸಂಸ್ಥೆ ಉತ್ತಮವಾಗಿ ಸೇವೆ ಸಲ್ಲಿಸಿ, ಇದರಿಂದ ಬಂದಂಥ ವಿದ್ಯಾರ್ಥಿಗಳು ಉತ್ತಮ ಪ್ರಜೆಗಳಾಗಿ ಬಾಳಬೇಕಾದರೆ ನಮ್ಮ ಸರ್ಕಾರ ಹಾಗೂ ಈ ಒಂದು ವೃತ್ತಿಯಲ್ಲಿರತಕ್ಕಂಥ ಉಪಾಧ್ಯಾಯರುಗಳು ಎಷ್ಟರಮಟ್ಟಿಗೆ ಕೆಲಸ ಮಾಡಬೇಕು, ಎಷ್ಟರ ಮಟ್ಟಿಗೆ ಹೊಣೆಗಾರಿಕೆ ಇವರಿಗೆ ಇರಬೇಕು ಎಂಬ ಬಗ್ಗೆ ಕೆಲವಾರು ಸಲಹೆಗಳನ್ನು ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಪ್ರಥಮವಾಗಿ ಈ ಸಂಸ್ಥೆಯಲ್ಲಿ ಉಪಾಧ್ಯಾಯರುಗಳು ಹೆಚ್ಚಿನ ಶ್ರದ್ಧೆಯಿಂದ ದುಡಿಯ ಬೇಕಾದರೆ, ಮೊದಲನೆಯದಾಗಿ ಸರ್ಕಾರವು ಅವರುಗಳಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸಿ ಕೊಡಬೇಕು. ಏಕೆಂದರೆ, ಈ ಒಂದು ವೃತ್ತಿಯಲ್ಲಿ ಉತ್ಸಾಹ ಇಲ್ಲದೆ ಕೆಲಸ ಮಾಡಿದರೆ ಆ ಒಂದು ಪರಿಣಾಮ ವಿದ್ಯಾರ್ಥಿಗಳ ಮೇಲೆ ಬೀಸಿ ಅವರ ಉತ್ತಮ ಭವಿಷ್ಯ ಕೆಡುತ್ತದೆ, ಹಾಗೂ ರಾಜ್ಯದ ರಾಷ್ಟ್ರದ ಭವಿಷ್ಯ ಕೆಡುತ್ತದೆ. ಆದ್ದರಿಂದ, ಉಪಾಧ್ಯಾಯರುಗಳನ್ನು ಬಹಳ ಉತ್ತಮವಾಗಿ ನೋಡ ಬೇಕಾಗುತ್ತದೆ. ಇನ್ನೂ ಒಂದು, ಉಪಾಧ್ಯಾಯರುಗಳನ್ನು ಆರಿಸಬೇಕಾದರೆ ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ಕಾರ್ಯರೂಪಕ್ಕೆ ತರಬೇಕು, ಏಕೆಂದರೆ, ಉದ್ಯೋಗಕ್ಕೋಸ್ಕರ ಉಪಾಧ್ಯಾಯ ವೃತ್ತಿಯಲ್ಲಿ ಬರುವವರು ಈ ವೃತ್ತಿಯಲ್ಲಿ ಆಸಕ್ತಿ ಇಲ್ಲದಿದ್ದರೆ, ಆಸಕ್ತಿ ಇಲ್ಲದಂಥ ಉಪಾಧ್ಯಾಯರು ಗಳಿಂದ ವಿದ್ಯಾರ್ಥಿಗಳ ಜೀವನ ಹಾಳಾಗುತ್ತದೆ. ಆದ್ದರಿಂದ ಉಪಾಧ್ಯಾಯರುಗಳನ್ನು ಆರಿಸಬೇಕಾದರೆ ಬಹಳ ಮುಖ್ಯವಾಗಿ ಅವರುಗಳನ್ನು ಗಮನಿಸಿ ಅವರಿಗೆ ಈ ವೃತ್ತಿಯಲ್ಲಿ ಆಸಕ್ತಿ ಇದೆಯೋ ಇಲ್ಲವೋ ಎಂದು ಮೊದಲು ತಿಳಿದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಕ್ಕೆ ಇಷ್ಟಪಡುತ್ತೇನೆ. ಆರಿಸಿರತಕ್ಕಂಥ ಉಪಾಧ್ಯಾಯರುಗಳು ಹೆಚ್ಚಿನ ರೀತಿಯಲ್ಲಿ ಜ್ಞಾನಾರ್ಜನೆಯನ್ನು ಬೆಳೆಸಿಕೊಂಡಿದ್ದರೆ ಒಳ್ಳೆಯದು. ಅವರು ಪಠ್ಯ ಪುಸ್ತಕಗಳಲ್ಲಿರುವ ವಿಷಯ ಗಳನ್ನೇ ವಿದ್ಯಾರ್ಥಿಗಳಿಗೆ ಬೋಧಿಸಿದರೆ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಜ್ಞಾನಾರ್ಜನೆಯನ್ನು ಪಡೆಯುವುದಕ್ಕೆ ಸಾಧ್ಯ ? ಉಪಾಧ್ಯಾಯರುಗಳಿಗೆ ಅನುಕೂಲವಾಗುವಂತೆ, ತಾಲ್ಲೂಕು ಬೋರ್ಡ್

ಮಂಡಲ ಪಂಚಾಯಿತ್ ಸ್ಥಳಗಳಲ್ಲಿ ಗ್ರಂಥ ಭಂಡಾರಗಳನ್ನು ಸ್ಥಾಪನೆ ಮಾಡಿ ಅದರ ಮೂಲಕ ಉಪಾಧ್ಯಾಯರುಗಳು ಹೆಚ್ಚಿನ ಜ್ಞಾನಾರ್ಜನೆಯನ್ನು ಮಾಡಿ ಮಕ್ಕಳಿಗೆ ಬೋಧಿಸತಕ್ಕಂಥ ಏರ್ಪಾಡು ಮಾಡಬೇಕು. ಮಕ್ಕಳು ಅತಿ ಉತ್ತಮವಾಗಿ ಜ್ಞಾನಾರ್ಜನೆಯನ್ನು ಬೆಳೆಸುವುದಕ್ಕೆ ಇದು ಪ್ರಯೋಜನವಾಗುತ್ತದೆ. ಇಂಥ ಕಟ್ಟುನಿಟ್ಟಿನ ಕ್ರಮಗಳನ್ನು ಉಪಾಧ್ಯಾಯರುಗಳಲ್ಲಿ ತರಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಸ್ಕಾಲರ್‌ಶಿಪ್ ಬಗ್ಗೆ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಸ್ಕಾಲರ್‌ಶಿಪ್‌ನ್ನು ಸಾಮಾನ್ಯವಾಗಿ ವರ್ಷದ ಕೊನೆಯಲ್ಲಿ ಕೊಡುವ ಪದ್ಧತಿ ಇದೆ, ನಾವು ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಡುವ ಉದ್ದೇಶ ಏನೆಂದರೆ, ಬಡ ಜನ ಮಕ್ಕಳಿಗೆ ಅನುಕೂಲವಾಗಲಿ ಎಂದು. ವಿದ್ಯಾರ್ಥಿಗಳಿಗೆ ವರ್ಷದ ಕೊನೆಯಲ್ಲಿ ಕೊಡುವುದರಿಂದ, ಅವರುಗಳಿಗೆ ಯಾವುದೇ ರೂಪದಲ್ಲಿ ಅನುಕೂಲವಾಗುವುದಿಲ್ಲ ಸ್ಕಾಲರ್ ಶಿಪ್‌ನ್ನು ಹುಡುಗರಿಗೆ ಮುಂಚೆ ಕಳುಹಿಸಿದರೆ ಅದರಿಂದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನೂ ಒಂದು ವಿಷಯ. ನಮ್ಮ ಸಮಾಜ, ನಮ್ಮ ರಾಷ್ಟ್ರ ಪ್ರಗತಿಯಾಗಬೇಕಾದರೆ ಹೆಚ್ಚಿನ ಜನ ವಿದ್ಯಾವಂತರಾಗಬೇಕು. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ, ನಮ್ಮ ಸರ್ಕಾರ ಹೆಚ್ಚಿನ ರೀತಿಯಲ್ಲಿ ಶಾಲೆಗಳನ್ನು, ಪ್ರೌಢ ಶಾಲೆಗಳನ್ನು, ಕಾಲೇಜುಗಳನ್ನು ತೆರೆಯುತ್ತಿದೆ. ಇದರ ಉದ್ದೇಶ ಇಷ್ಟೇ, ಎಲ್ಲಾ ಜನರಿಗೂ ವಿದ್ಯೆ ಸಿಗಬೇಕು. ಕೆಲವು ಹಳ್ಳಿಗಳಲ್ಲಿರತಕ್ಕಂಥ ಹೆಣ್ಣು ಮಕ್ಕಳು ಮತ್ತು ಹುಡುಗರು ತಾಲ್ಲೂಕು ಕೇಂದ್ರದಲ್ಲಿ ಹಾಗೂ ಹೋಬಳಿ ಹೆಡ್‌ಕ್ವಾರ್ಟರ್‌ಗಳಲ್ಲಿ ಬಂದು ಪಾಠವನ್ನು ಕಲಿಯುತ್ತಾರೆ. ದೂರದಿಂದ ಬಂದು ಕಲಿಯತಕ್ಕಂಥ ಮಕ್ಕಳಿಗೆ ಹಾಸ್ಟೆಲ್ ಸವಲತ್ತುಗಳು ಇರುವುದಿಲ್ಲ, ಮನೆಗೆ ಹೋಗುವುದಕ್ಕೆ ಬಸ್ಸಿನ ಸವಲತ್ತು ಇರುವುದಿಲ್ಲ, ಆದ್ದರಿಂದ, ಎಲ್ಲೆಲ್ಲಿ ಅನುಕೂಲವಿರುತ್ತದೆಯೋ ಅಂಥ ಕಡೆ ಹಾಸ್ಟೆಲ್‌ಗಳನ್ನು ಕಟ್ಟಿಸುವುದು ಒಳ್ಳೆಯದು. ಜನತಾ ಸರ್ಕಾರ ಬಂದ ಮೇಲೆ ಅನೇಕ ಹಳ್ಳಿಗಳಲ್ಲಿ ಪ್ರೌಢ ಶಾಲೆಗಳನ್ನು ತೆರೆದಿದೆ, ಇದರಿಂದ ಹಳ್ಳಿಯ ಹೆಣ್ಣುಮಕ್ಕಳು ಮತ್ತು ಹುಡುಗರಿಗೆ ಬಹಳ ಸದುಪಯೋಗವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಪರೀಕ್ಷೆಗಳ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ನಮ್ಮಲ್ಲಿ ನಡೆಯುತಕ್ಕಂಥ ಪರೀಕ್ಷೆಗಳ ಕಾಲದಲ್ಲಿ ಕೆಲವಾರು ಲೋಪದೋಷಗಳು ನಡೆಯುತ್ತಿರುವುದು ನಮ್ಮ ಗಮನಕ್ಕೆ ಬಂದಿವೆ. ಇಂತಹ ಲೋಪದೋಷಗಳು ವಿದ್ಯಾರ್ಥಿಗಳಲ್ಲಿ ಬೇರೊಂದು ಮನೋಭಾವನೆಯನ್ನು ಬೆಳೆಯುವಂತೆ ಮಾಡಿ, ಆ ಲೋಪದೋಷಗಳ ಮೂಲಕ, ಆ ಪ್ರವೃತ್ತಿಯ ಮೂಲಕ ಪರೀಕ್ಷೆಗಳಲ್ಲಿ ಪಾಸಾದ ವಿದ್ಯಾರ್ಥಿಯು, ತಮ್ಮ ಜೀವನದಲ್ಲಿ ಮುಂದೆ, ತನ್ನ ಕರ್ತವ್ಯವನ್ನು ನಿರ್ವಹಿಸುವಲ್ಲಿಯೂ ಕೂಡ ಸರಿಯಾಗಿ ಕರ್ತವ್ಯ ನಿರ್ವಹಣೆಯನ್ನು ಮಾಡುವುದಿಲ್ಲ. ಇಂತಹ ಒಂದು ಲೋಪದೋಷಯುಕ್ತವಾದ ರೀತಿಯಲ್ಲಿ ಬಂದ ವಿದ್ಯಾರ್ಥಿಯು, ತಾನು ಪಡೆದುಕೊಂಡು ಬಂದ ಬುದ್ಧಿವಂತಿಕೆಯಿಂದ ಸಮಾಜಕ್ಕೆ ಗಂಡಾಂತರಕಾರಿಯಾಗುತ್ತಾನೆ ಎಂಬುದನ್ನು ಮರೆಯಬಾರದು ಆದುದರಿಂದ ಯಾವುದೇ ಲೋಪದೋಷಗಳು ಇಲ್ಲದೆ, ಇರತಕ್ಕಂಥ ಒಂದು ಪರೀಕ್ಷಾ ಪದ್ಧತಿಯನ್ನು, ಒಂದು ಒಳ್ಳೆಯ ವ್ಯವಸ್ಥೆಯನ್ನು ಈ ದಿಶೆಯಲ್ಲಿ ಜರುಗಿಸುವಲ್ಲಿ ಯೋಚನೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಭಿನ್ನವಿಸಿಕೊಳ್ಳುತ್ತಿದ್ದೇನೆ.

ಇನ್ನು ಜನತಾ ಸರಕಾರ ಆಡಳಿತಕ್ಕೆ ಬಂದ ಮೇಲೆ, ನಮ್ಮ ಮಕ್ಕಳಿಗೆ ಒಂದನೇ ತರಗತಿಯಿಂದ ೭ನೇ ತರಗತಿಯವರೆಗೆ ಪಠ್ಯಪುಸ್ತಕಗಳನ್ನು, ಬಟ್ಟೆಗಳನ್ನು ಉಚಿತವಾಗಿ ಕೊಡುವುದರ ಮೂಲಕ ಕರ್ನಾಟಕದಲ್ಲಿ ಒಂದು ವಿದ್ಯಾಪ್ರಗತಿಯನ್ನು ಮಾಡಿದ್ದಾರೆ. ಅದರಲ್ಲೂ ನಮ್ಮ ಚೆಳ್ಳಕೆರೆ ತಾಲೂಕಿನಲ್ಲಿ ಗಣನೀಯವಾಗಿ ಮಕ್ಕಳು ಶಾಲೆಗೆ ಹೋಗುವುದರಲ್ಲಿ ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಆದರೆ ಅಧಿಕಾಧಿಕ ಸಂಖ್ಯೆಯಲ್ಲಿ ಶಾಲೆಗಳಿಗೆ ಹೋಗತಕ್ಕಂಥ ಸಮಯದಲ್ಲಿ ಅವರಿಗೆ ಬೇಕಾದಂತಹ ಸೌಲಭ್ಯ–ಸೌಕರ್ಯಗಳನ್ನು ಒದಗಿಸಿಕೊಡುವುದು ಕೂಡ ಅಷ್ಟೇ ಮುಖ್ಯವಾದ ವಿಚಾರವಾಗಿದೆ. ನಮ್ಮ ತಾಲೂಕಿನಲ್ಲಿ ಸರಿಯಾದ ಸೌಲಭ್ಯಗಳು ಇಲ್ಲವಾಗಿದೆ. ಪಾಠಶಾಲೆಯ ಕೊಠಡಿಗಳು, ಉಪಾಧ್ಯಾಯರುಗಳು ಮತ್ತು ಇತರ ಮುಖ್ಯ ಸವಲತ್ತುಗಳು ನಮ್ಮಲ್ಲಿ ಕೊರತೆಯಾಗಿ ಕಾಣಿಸುತ್ತಿವೆ. ಆದುದರಿಂದ ಸರಕಾರ ಯಾವುದೇ ಒಳ್ಳೆಯ ಯೋಜನೆಯನ್ನು ಮಾಡಿದ ತರಹದಲ್ಲಿ ಆ ಯೋಜನೆಯು ಉತ್ತಮವಾಗಿ ನಡೆಯುವ ಹಾಗೆ ನೋಡಿಕೊಳ್ಳಬೇಕಾಗುತ್ತದೆ. ಎಲ್ಲಾ ಸವಲತ್ತು ಸೌಕರ್ಯಗಳನ್ನು ಒದಗಿಸಿಕೊಡತಕ್ಕಂಥ ಜವಾಬ್ದಾರಿಯು ಸರ್ಕಾರದ ಮೇಲಿರುತ್ತದೆ. ಆದುದರಿಂದ ಎಲ್ಲಿ ಉಪಾಧ್ಯಾಯರ ಕೊರತೆ ಇದೆ, ಎಲ್ಲಿ ಶಾಲಾ ಕಟ್ಟಡಗಳ ಕೊರತೆ ಇದೆ ಎಂಬುದನ್ನು ಪರಿಶೀಲಿಸಿ, ಸೂಕ್ತ ಕಾಲದಲ್ಲಿ ಅದನ್ನು

ನಿಗಿಸುವತ್ತ ಗಮನಕೊಡಬೇಕು. ಆ ಒಂದು ಜವಾಬ್ದಾರಿಯನ್ನು, ಹೊಣೆಗಾರಿಕೆಯನ್ನು ಸರಕಾರ ಸರಿಯಾಗಿ ನಿರ್ವಹಿಸುತ್ತದೆ ಎಂದು ನಾನು ನಂಬಿದ್ದೇನೆ.

ಇನ್ನು ನನ್ನ ಅನೇಕ ಸ್ನೇಹಿತರುಗಳು ಹೇಳಿದಂತೆ ಅನೇಕ ಹಳ್ಳಿಗಳಲ್ಲಿ ಏಕೋಪಾಧ್ಯಾಯ ಶಾಲೆಗಳು ಇವೆ. ಅಲ್ಲಿ ಒಬ್ಬೊಬ್ಬ ಉಪಾಧ್ಯಾಯರು ಪಾಠ ನಡೆಸಲು ಒಂದು ಪ್ರವೃತ್ತಿ ಇದೆ. ಇದರಿಂದ ಮಕ್ಕಳ ಬುದ್ಧಿ ಬೆಳವಣಿಗೆ ಕುಂಠಿತವಾಗುವ ಸಂಭವ ಇರುತ್ತದೆ ಏಕೆಂದರೆ ಒಬ್ಬ ಉಪಾಧ್ಯಾಯರು ತಮಗೆ ಇಷ್ಟಬಂದಂತೆ ನಡೆದುಕೊಳ್ಳಬಹುದು, ಅಥವಾ ಒಂದು ದಿನ ರಜೆ ಹಾಕಿದರೆ, ಆ ದಿನ ಶಾಲೆಗೆ ರಜೆ ಆಗುತ್ತದೆ. ಅಲ್ಲದೇ ಇನ್ನೂ ಅನೇಕ ಸಮಸ್ಯೆಗಳು ಅಲ್ಲಿ ಇದ್ದೇ ಇರುತ್ತವೆ ಆದುದರಿಂದ ಇಂತಹ ಶಾಲೆಗಳನ್ನು ಮತ್ತು ಅಲ್ಲಿನ ವಿದ್ಯಾಮಟ್ಟವನ್ನು ಸುಧಾರಣೆ ಮಾಡುವ ಬಗ್ಗೆ ಒಂದು ಯೋಗ್ಯ ಪದ್ಧತಿಯನ್ನು ವಿಮರ್ಶೆ ಮಾಡಿ ಅದನ್ನು ಜಾರಿಗೆ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಂತಹ ಎಷ್ಟೊ ಉತ್ತಮವಾದ ಕಾರ್ಯಗಳನ್ನು ಮಾಡಿದ ಜನತಾ ಸರ್ಕಾರ ಈ ವಿದ್ಯಾಭ್ಯಾಸ ಪದ್ಧತಿಯಲ್ಲಿಯೂ ಕೂಡ ಅನೇಕ ಸುಧಾರಣೆಗಳನ್ನು ತಂದು ವಿದ್ಯಾ ಸುಧಾರಣೆಯು ಒಂದು ಉತ್ಕೃತ ಮಟ್ಟವನ್ನು ಹೊಂದುವಂತೆ ಮಾಡಲಿ ಎಂದು ಆಶಯವನ್ನು ವ್ಯಕ್ತಮಾಡಿ, ನನಗೆ ಇಷ್ಟು ಮಾತುಗಳನ್ನು ಆಡಲು ಅವಕಾಶವನ್ನು ಮಾಡಿಕೊಟ್ಟ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ, ಸದನದಲ್ಲಿ ಮಾನ್ಯ ವಿದ್ಯಾಮಂತ್ರಿಯವರು ಮಂಡಿಸಿದ ಬೇಡಿಕೆಯನ್ನು ನಾನು ಅನೇಕ ಕಾರಣಗಳಿಗಾಗಿ ವಿರೋಧಿಸಿ, ಕೆಲವು ಮಾತುಗಳನ್ನಾಡಲು ಬಯಸುತ್ತೇನೆ.

ನಮ್ಮ ದೇಶಕ್ಕೆ ೧೯೪೭ನೇ ಇಸವಿಯ ಆಗಸ್ಟ್ ೧೫ರಂದು ಸ್ವಾತಂತ್ರ್ಯ ಬಂತು. ಈ ದೇಶದ ಆಗಿನ ಮುಖಂಡರಾಗಿ, ೧೭ ವರ್ಷಗಳ ಕಾಲ ದೇಶದ ಪ್ರಧಾನಿಗಳು ಆಗಿದ್ದ ದಿವಂಗತ ಪಂಡಿತ್ ಜವಾಹರಲಾಲ್ ನೆಹರು ಅವರು ತಮ್ಮ ಅನೇಕ ಭಾಷಣಗಳಲ್ಲಿ ಹೇಳುತ್ತಾ ಬಂದ ಮಾತು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ನಮ್ಮ ದೇಶವು ಇತರ ದೇಶಗಳೊಡನೆ ಸಮಾನವಾಗಿ ಮುಂದುವರಿಯ ಬೇಕಾದರೆ ವಿದ್ಯೆಯ ಮೂಲಕ ಮಾತ್ರವೇ ಸಾಧ್ಯವಾಗುತ್ತದೆ. ಅದಕ್ಕಾಗಿ ವಿದ್ಯೆಯಲ್ಲಿ ನಾವು ಮುಂದೆ ಬರಬೇಕು. ಅದಕ್ಕಾಗಿ ಕೇಂದ್ರದಲ್ಲಿಯೂ ರಾಜ್ಯದಲ್ಲಿಯೂ, ವಿದ್ಯಾಭ್ಯಾಸದ ಇಲಾಖೆಗೆ ಹೆಚ್ಚಿಗೆ ಹಣವನ್ನು ಇಡಬೇಕು ಇದಕ್ಕೆ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕು ಎಂದು ಅವರು ಹೇಳುತ್ತಾ ಇದ್ದರು ಅದೇ ರೀತಿಯಲ್ಲಿ ಅವರು ಹೇಳಿದ್ದು ಮಾತ್ರವೇ ಅಲ್ಲ, ಕೇಂದ್ರದಲ್ಲಿಯೂ, ರಾಜ್ಯಗಳಲ್ಲಿಯೂ ಹೆಚ್ಚಿನ ಅಂಶದ ಹಣವನ್ನು ವಿದ್ಯಾಭ್ಯಾಸಕ್ಕೆ ವಿನಿಯೋಗಿಸುವಂತೆ ಮಾಡಿದ್ದರು. ಇದೇ ಪದ್ಧತಿಯನ್ನು ಬೆಳೆಸಿಕೊಂಡು ಬರಬೇಕು ಆಗ ಮಾತ್ರ ಎಲ್ಲರೂ ಅಕ್ಷರಸ್ಥರಾಗಿ, ಜ್ಞಾನಿಗಳಾಗಿ ಬಾಳುವುದಕ್ಕೆ ಸಾಧ್ಯ ಎಂದು ಹೇಳುತ್ತಾ ಇದ್ದರು. ಈ ನೆಲೆಯಲ್ಲಿ ನಾವು ಆಲೋಚನೆ ಮಾಡಿದರೆ, ಇವೊತ್ತು ಕೂಡಾ ವಿದ್ಯಾಖಾತೆಗೆ ಎಲ್ಲದಕ್ಕಿಂತ ಹೆಚ್ಚಿಗೆ ಹಣವನ್ನು ಖರ್ಚು ಮಾಡುತ್ತಾ ಇದ್ದೇವೆ. ೧೯೪೭ಕ್ಕಿಂತಲೂ ಮೊದಲು ನಮ್ಮಲ್ಲಿ ಇದ್ದ ಮೆಡಿಕಲ್ ಇಂಜಿನಿಯರಿಂಗ್, ಮಂತ್ರಿತರ ಕಾಲೇಜುಗಳನ್ನು ಲೆಕ್ಕ ಹಾಕಿದರೆ, ಈಗ ಬೇಕಾದಷ್ಟು ಸಂಖ್ಯೆಯಲ್ಲಿ ಕಾಲೇಜುಗಳು ಲಭ್ಯವಾಗಿವೆ. ಮಾಧ್ಯಮಿಕ, ಪ್ರೌಢ, ಹಾಗೂ ಇತರ ಉನ್ನತ ವಿದ್ಯಾಭ್ಯಾಸವು ಇವೊತ್ತು ನಮಗೆ ಸೂಕ್ತ ರೀತಿಯಲ್ಲಿ ಲಭ್ಯವಾಗಿರುವ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಮೊದಲು ಒಂದು ಪ್ರಾಥಮಿಕ ಶಾಲೆಗೂ, ಮಾಧ್ಯಮಿಕ ಶಾಲೆಗೋ ಹೋಗ ಬೇಕಾದರೆ ಮೈಲುಗಟ್ಟಲೆ ದೂರ ನಡೆದುಕೊಂಡು ಹೋಗಬೇಕಾದ ಪರಿಸ್ಥಿತಿ ಬರುತ್ತಿತ್ತು. ಈಗ ಮೈಲಿಗೊಂದು ಶಾಲೆಗಳು, ಅಲ್ಲೇ ಪಕ್ಕದಲ್ಲಿ ಹೈಸ್ಕೂಲುಗಳು, ಸ್ವಲ್ಪ ದೂರದಲ್ಲಿ ಕಾಲೇಜುಗಳು, ಜಿಲ್ಲೆಗಳಲ್ಲಿ ವೈದ್ಯಕೀಯ, ಇಂಜನೀಯರಿಂಗ್ ಕಾಲೇಜುಗಳು ಇವೆ. ಪಾಲಿಟೆಕ್ನಿಕ್‌ಗಳು, ಐ.ಟಿ.ಐ ಗಳು ಇತರ ಕಾಲೇಜುಗಳು ಗಣನೀಯ ಸಂಖ್ಯೆಯಲ್ಲಿ ಇವೆ. ಕಲಿಯುವ ಮಕ್ಕಳಿಗೆ ಸೌಲಭ್ಯ, ಅವಕಾಶ ಇವೊತ್ತು ಇದೆ. ಅದು ನಮ್ಮ ಹಿಂದಿನವರ ಒಂದು ಮುಂದಾಲೋಚನೆಯಿಂದ ಆಗಿದೆ ಎಂದು ನಾನು ಹೇಳಬಯಸುತ್ತೇನೆ.

ನಮ್ಮ ಜನಸಂಖ್ಯೆ ೩೪ ಕೋಟಿ ಇದ್ದುದು ಈಗ ೭೪ ಕೋಟಿಗೆ ಏರಿದೆ. ಆದರೂ ಹಿಂದಿನ ವಿದ್ಯಾಭ್ಯಾಸದಲ್ಲಿದ್ದ ನಯನಾಜೂಕು, ಶಿಸ್ತು ಇಂದು ಇಲ್ಲ. ಇವತ್ತಿನ ಹೈಸ್ಕೂಲು, ಕಾಲೇಜು, ಐಟಿಐ ಪಾಲಿಟೆಕ್ನಿಕ್‌ಗಳನ್ನು ಭೇಟಿ ಮಾಡಿ ತನಿಖೆ ಮಾಡುವ ಪದ್ಧತಿ ಇಲ್ಲ. ಎಲ್ಲಾ ಕಡೆ ಭ್ರಷ್ಟಾಚಾರ ತುಂಬಿ

ತುಳುಕುತ್ತಿದೆ. ಡಿಡಿಪಿಐ ಆಫೀಸಿನಲ್ಲಾಗಲೀ ಅಥವಾ ಇನ್ನಾವ ಆಫೀಸಿನಲ್ಲೇ ಆಗಲಿ ಸರಿಯಾಗಿ ಕೆಲಸ ಆಗುತ್ತಿಲ್ಲ. ಒಂದು ಪತ್ರ ಬರೆದರೆ ಸರಿಯಾದ ಉತ್ತರ ಬರುವುದಿಲ್ಲ, ಈ ಕಚೇರಿಗಳಲ್ಲಿನ ಭ್ರಷ್ಟಾಚಾರದ ಬಗ್ಗೆ ಪತ್ರಿಕೆಗಳಲ್ಲಿ ಜನ ಬರೆಯುತ್ತಿದ್ದಾರೆ ಆದ್ದರಿಂದ ವಿದ್ಯಾ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಎಷ್ಟು ಕೋಟಿ ನೀವು ಖರ್ಚು ಮಾಡಿದರೂ ವಿದ್ಯಾಶಾಲೆಗಳನ್ನು ಕಚೇರಿಗಳನ್ನು ತನಿಖೆ ಮಾಡುವ ಪದ್ಧತಿ ವ್ಯವಸ್ಥೆ ಇಲ್ಲದಿದ್ದರೆ ಎಲ್ಲಾ ವ್ಯರ್ಥವಾಗುತ್ತದೆ ಅನೇಕ ಗ್ರಾಮೀಣ ಪ್ರದೇಶಗಳ ಶಾಲೆಗಳಲ್ಲಿನ ಅಧ್ಯಾಪಕರಿಗೂ ಇಂದಿನ ಅಧ್ಯಾಪಕರಿಗೂ ಬಹಳ ವ್ಯತ್ಯಾಸ ಇದೆ. ಈಗ ಶಿಸ್ತು ಕಡಿಮೆಯಾಗಿದೆ. ಈಗಿನ ಅಧ್ಯಾಪಕರು ಬೆಳಿಗ್ಗೆ ಬಂದು ರಿಜಿಸ್ಟರಿನಲ್ಲಿ ದಸ್ಕತ್ತು ಹಾಕಿ ಸ್ವಂತ ಕೆಲಸಗಳನ್ನು ಮಾಡುತ್ತಾ ಹೋಗುತ್ತಾರೆ. ಪಾಠಪ್ರವಚನಗಳ ಬಗ್ಗೆ ಪ್ರಮಾಣಿಕತೆಯಾಗಲೀ ನಿಷ್ಠೆ ಇಲ್ಲದಂತಾಗಿದೆ. ಇದರ ಪರಿಣಾಮ ಏನಾಗಿದೆ ಎಂದರೆ ಎರಡು ಮೂರು ನಾಲ್ಕನೇ ತರಗತಿಯ ವಿದ್ಯಾರ್ಥಿಗಳಿಗೂ ಅ ಇ ಈಯನ್ನು ಸರಿಯಾಗಿ ಬರೆಯಲು ಬರುವುದಿಲ್ಲ. ನೂರರವರೆಗೆ ಕೂಡುವುದಕ್ಕೆ ಬರುವುದಿಲ್ಲ. ಹೀಗೆ ವಿದ್ಯಾಭ್ಯಾಸದ ಮಟ್ಟ ಕೆಳಕ್ಕೆ ಬಂದಿದ್ದು ವಾತಾವಾರಣ ಕಲುಷಿತವಾಗಿದೆ. ಇನ್ನೂ ಕೆಲವು ಕಡೆ ಅಗತ್ಯವಾಗಿರುವಷ್ಟು ಅಧ್ಯಾಪಕರೂ ಇರುವುದಿಲ್ಲ. ನಮ್ಮ ಉಳ್ಳಾಲದ ಇನ್ನಿತರ ಶಾಲೆಗಳಿಗೆ ಬೇಕಾದರೆ ನೀವು ಅನಿರೀಕ್ಷಿತವಾಗಿ ಭೇಟಿ ಮಾಡಿ, ಆಗ ನಿಮಗೇ ಗೊತ್ತಾಗುತ್ತದೆ, ಅಲ್ಲಿ ಪಾಠ ಕಲಿಸುವ ವ್ಯವಸ್ಥೆ ಸರಿಯಾಗಿಲ್ಲ ದಸ್ಕತ್ತು ಹಾಕಿ ಎಲ್ಲೆಲ್ಲಿಗೋ ಹೋಗುವ ಮೇಸ್ಟ್ರುಗಳ ಪರಿಸ್ಥಿತಿ ಇದೆ. ಇವರಿಗೆ ಹೇಳುವವರಾಗಲೀ ಕೇಳುವವರಾಗಲೀ ಇಲ್ಲ. ಎರಡು ಮೂರು ತಿಂಗಳಿಗೊಮ್ಮೆ ಇನ್ಸ್‌ಪೆಕ್ಟರ್ ಹೋಗಿ ಪರಿಶೀಲನೆ ಮಾಡುವ ವ್ಯವಸ್ಥೆ ಇಲ್ಲ. ಇದರಿಂದ ವಿದ್ಯಾಭ್ಯಾಸದ ಮಟ್ಟ ಕುಸಿದಿದೆ.

ಇನ್ನು ಪಠ್ಯಪುಸ್ತಕಗಳ ಗುಣಮಟ್ಟ, ವಿಷಯಗಳ ಆಯ್ಕೆ ನೋಡಿದರೆ ಹಿಂದಿನ ಸ್ಥಿತಿಗೂ ಇವತ್ತಿನದಕ್ಕೂ ಹೋಲಿಕೆ ತಾಳಿಕೆಯಾಗಲೀ ಇಲ್ಲ. ನಮ್ಮ ಖ್ಯಾತ ಸಾಹಿತಿ ಶ್ರೀ ಶಿವರಾಮ ಕಾರಂತರು ಏನು ಹೇಳುತ್ತಾರೆಂದರೆ ಒಂದನೇ ಎರಡನೇ ಮಕ್ಕಳಿಗೆ ಚಿತ್ರವನ್ನು ಬರೆದು ದೊಡ್ಡ ಅಕ್ಷರಗಳಲ್ಲಿ ವಿಚಾರಗಳನ್ನು ಹೇಳಿದರೆ ಕೋಮಲವಾದ ಮನಸ್ಸಿಗೆ ಅಂಟಿಕೊಳ್ಳಲು ಸಾಧ್ಯ ಆದರೆ ಇವತ್ತಿನ ಪಠ್ಯಪುಸ್ತಕಗಳಲ್ಲಿ ಇದನ್ನು ನೋಡುತ್ತಿದ್ದೇವೆಯೇ? ಖಂಡಿತ ಇಲ್ಲ ಇನ್ನೊಂದು ವಿಷಯ ಎರಡು ಮೂರು ನಾಲ್ಕನೆಯ ತರಗತಿಗಳ ವಿದ್ಯಾರ್ಥಿಗಳು ಎಷ್ಟೆಷ್ಟು ಪುಸ್ತಕಗಳನ್ನು ಬೆನ್ನಿನ ಮೇಲೆ ಮೂಟೆ ಹೊತ್ತಂತೆ ಹೊರುತ್ತಾರೆ. ಅವರಿಗೆ ಆ ಭಾರ ತಡೆಯಲಾರದೆ ಮುಂದೆ ಗೂನುಬೆನ್ನೇ ಬರಬಹುದು, ಇದು ಬಹಳ ದೊಡ್ಡ ದೋಷ ಪಾಠಗಳಲ್ಲಿ ಏನು ಮುಖ್ಯವಾಗಿರಬೇಕು? ರಾಷ್ಟ್ರಪ್ರೇಮ ದೇಶ ಪ್ರೇಮಗಳನ್ನು ಮಕ್ಕಳಿಗೆ ತುಂಬುವ ಕೆಲಸ ಮಾಡಬೇಕು. ಆದರೆ ಈಗ ಯಾವ ಪಠ್ಯವನ್ನು ತೆಗೆದರೂ ಅವಿರುವುದಿಲ್ಲ. ಅವನ್ನು ಚಿಕ್ಕಮಕ್ಕಳಿಗೆ ಕಲಿಸದೇ ಹೋದರೆ. ಕೋಮಲವಾದ ಮನಸ್ಸಿಗೆ ಇದನ್ನು ಹೇಳದೇ ಹೋದರೆ ಮುಂದೆ ಅವು ನಿಲ್ಲುವುದಿಲ್ಲ. ಚಿಕ್ಕಮಕ್ಕಳ ಮನಸ್ಸು ಎಂಬುದು ಹಸಿ ಗೋಡೆ ಇದ್ದಂತೆ, ಅದು ಹಸಿಯಾಗಿದ್ದಾಗ ಅಲ್ಲಿ ಕಲ್ಲನ್ನು ಇಟ್ಟರೆ ಅದು ಒಣಗಿದ ಮೇಲೆ ಕಲ್ಲು ಭದ್ರವಾಗಿ ಅಲುಗಾಡದಂತೆ ನಿಂತು ಬಿಡುತ್ತದೆ ಇದನ್ನು ಪಠ್ಯ ನಿರ್ಮಾಪಕರುಗಳು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ನಮ್ಮ ಮಕ್ಕಳಿಗೆ ಮಹಾತ್ಮ ಗಾಂಧಿಯವರು, ಯಾರು ಪಂಡಿತ ಜವಾಹರಲಾಲ್ ನೆಹರೂ ಯಾರು, ಮೋತಿಲಾಲ್ ನೆಹರೂ ಯಾರು, ಆಚಾರ್ಯ ವಿನೋಬಾ ಯಾರು, ಮಹಮದಾಲಿ ಯಾರು, ಹಾಗೆಯೇ ಶೌಕತ್ ಆಲಿ ಯಾರು ಎಂಬುದನ್ನೆಲ್ಲ ನಮ್ಮ ಪಠ್ಯಗಳಲ್ಲಿ ಕಾಣುವುದು ಬಹಳ ದುರ್ಲಭ ಈ ಮಹನೀಯರು ತಮ್ಮ ಅಪಾರ ಪರಿಶ್ರಮದಿಂದ ಗಳಿಸಿಕೊಟ್ಟ ಸ್ವಾತಂತ್ರ್ಯದ ವಿಚಾರ ಚಿಕ್ಕವರಿಗೆ ಗೊತ್ತು ಮಾಡಿಕೊಡುವ ಬಗೆ ಹೇಗೆ?

ಇನ್ನು ಕೋಮು ಸಾಮರಸ್ಯದ ಬಗ್ಗೆ ಹೇಳುತ್ತೇನೆ. ಈ ಕೋಮು ಸಾಮರಸ್ಯದ ಬಗ್ಗೆ ಒಂದೆರಡು ಲೇಖನಗಳಾದರೂ ಪಠ್ಯಪುಸ್ತಕಗಳಲ್ಲಿರುವಂತೆ ನೋಡಿಕೊಳ್ಳಬೇಕೇ ಹೊರತು ಬರೀ ಬಾಯಲ್ಲಿ ಹೇಳಿದರೆ ಏನೂ ಆಗುವುದಿಲ್ಲ. ಇದು ಭಾವೈಕ್ಯತೆಗೆ ಸಂಬಂಧಿಸಿದ್ದು ನಾವೆಲ್ಲರೂ ಒಂದು ಎಂಬ ಭಾವನೆ ಚಿಕ್ಕಮಕ್ಕಳ ಮನಸ್ಸಿನಲ್ಲೇ ಬರಬೇಕು. ಆದ್ದರಿಂದ ಪಠ್ಯಪುಸ್ತಕಗಳ ರಚನಾ ಸಮಿತಿ ಮಾಡುವಾಗ ಎಲ್ಲಾ ಕೋಮುಗಳ ವಿದ್ಯಾವಂತರನ್ನೂ ಸೇರಿಸಿ ಆ ಕಮಿಟಿಯಲ್ಲಿ ಕೋಮು ಸಾಮರಸ್ಯವನ್ನು ಪ್ರತಿಪಾದಿಸುವವರು ಇರಲಿ ಇಲ್ಲದಿದ್ದರೆ ಮಕ್ಕಳ ಮನಸ್ಸಿನಲ್ಲಿ ಬಿತ್ತಿದ ವಿಷಬೀಜ ಮುಂದೆ ಅಲ್ಲೋಲಕಲ್ಲೋಲ ಮಾಡುತ್ತದೆ. ಪತ್ರಿಕೆಗಳಲ್ಲಿ ಅನೇಕ ಕಡೆ ನೋಡುತ್ತಿದ್ದೇವೆ. ಬರೆಯುವುದರಲ್ಲಿ ಸ್ವಲ್ಪ ಬ್ಯಾಲೆನ್ಸ್ ತಪ್ಪಿದರೂ ಜನ ಏನು ಮಾಡುತ್ತಾರೆಂಬುದನ್ನು ನಾವೆಲ್ಲರೂ ನೋಡಿದ್ದೇವೆ.

ಆದನ್ನು ತಪ್ಪಿಸಲಿಕ್ಕೆ ಈ ಪಠ್ಯ ಪುಸ್ತಕಗಳನ್ನು ರಚಿಸುವಾಗ ಎಲ್ಲಾ ಕೋಮಿನ ವಿದ್ವಾಂಸರನ್ನು, ಬುದ್ಧಿವಂತರನ್ನು ಸೇರಿಸಿ ಒಂದು ಕಮಿಟಿ ಮಾಡಬೇಕು ಬೇರೆ ಯಾರನ್ನಾದರೂ ಮಾಡಿದರೆ ಅದು ಪ್ರಯೋಜನವಾಗುವುದಿಲ್ಲ ಈ ಪ್ರಯತ್ನ ಈವರೆಗೂ ಆಗಿಲ್ಲ. ಇದರ ಬಗ್ಗೆ ಅನೇಕ ತೊಂದರೆಗಳು ಬಂದಿದೆ ಅದರಲ್ಲೂ ಬಹಳ ಮುಖ್ಯವಾಗಿರುವುದೇನೆಂದರೆ ಈ ಪಠ್ಯಪುಸ್ತಕಗಳನ್ನು ರಚನೆ ಮಾಡುವಾಗ ಅದರ ನೈತಿಕ ಮಟ್ಟವನ್ನು ಮೇಲೆತ್ತುವಂತಹ ವಿಚಾರಗಳು ಬೇಕಾಗುತ್ತದೆ. ಆದರೆ ಅದರಲ್ಲಿ ಅಂತಹ ಯಾವ ವಿಚಾರವೂ ಇಲ್ಲ. ಇದನ್ನೆಲ್ಲಾ ಹೋಗಲಾಡಿಸತಕ್ಕಂತಹ ವಿಚಾರವಿರುವುದಾದರೆ. ಅದರ ನೈತಿಕ ಮಟ್ಟವನ್ನು ಎತ್ತತಕ್ಕಂತಹ ವಿಚಾರವನ್ನು ನಾವು ವಿದ್ಯಾರ್ಥಿ ಜೀವನದಲ್ಲಿ ಅವರಿಗೆ ಕಲಿಸದೇ ಹೋದರೆ ಮಾತ್ರ ಅದು ಸರಿಯಾಗಲಿಕ್ಕೆ ಸಾಧ್ಯವೇ ಇಲ್ಲದಂತಾಗುತ್ತದೆ. ನಮ್ಮ ವಿದ್ಯಾ ಮಟ್ಟವನ್ನು ಬದಲಾವಣೆ ಮಾಡಬೇಕು ಇನು ಉರ್ದು ಶಾಲೆಗಳ ಬಗ್ಗೆ ಹೇಳುವುದಾದರೆ ಅಲ್ಲಿ ಕನ್ನಡ ಕಲಿಯಂದೇ ಇರಲಿಕ್ಕೆ ಕಾರಣವೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಅಲ್ಲಿ ಸರಿಯಾದ ಕನ್ನಡದ ಉಪಾಧ್ಯಾಯರಿಲ್ಲ ಬೇಕಾದಷ್ಟು ಉಪಾಧ್ಯಾಯರನ್ನು ಕೊಟ್ಟಿಲ್ಲ. ಇದನ್ನು ತಪ್ಪಿಸಬೇಕಾದರೆ ಎಲ್ಲಾ ಉರ್ದು ಶಾಲೆಗಳಿಗೂ ಕನ್ನಡ ಕಲಿಸಲು ಬೇಕಾದ ಉಪಾಧ್ಯಾಯರನ್ನು ಕೊಡಬೇಕು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಹೇಳುವುದಾದರೆ ಇದನ್ನೂ ಕೂಡ ನಿಲ್ಲಿಸದಿದ್ದರೆ ವಿದ್ಯಾ ಕ್ಷೇತ್ರ ಖಂಡಿತವಾಗಿಯೂ ಮೇಲ್ಮೆಗೆ ಬರುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಖಂಡಿತವಾಗಿಯೂ ಇದನ್ನು ನಿಲ್ಲಿಸಬೇಕು. ಇನ್ನು ಕರ್ನಾಟಕ ಕಾವಲು ಸಮಿತಿಯನ್ನು ಮಾಡಿ ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಬೇಕು ಬೆಳೆಸಬೇಕೆಂದು ಮಾಡಿದ್ದೀರಿ ಅದು ಒಳ್ಳೆಯದು. ಇಂಗ್ಲೀಷ್ ಶಾಲೆಗಳನ್ನು ಹೆಚ್ಚು ಮಾಡಬೇಡಿ ಎಷ್ಟು ಬೇಕೋ ಅಷ್ಟು ಮಾಡಿ. ಕನ್ನಡ ಶಾಲೆಗಳನ್ನೂ ಕೂಡ ಹೆಚ್ಚಿಗೆ ಮಾಡಿ. ಖಾಸಗೀ ಶಾಲೆಗಳಿಗೂ ಅನುಮತಿ ಕೊಡಬೇಕು ಇದರಲ್ಲಿ ಯಾವ ಧ್ಯೇಯ ಧೋರಣೆಯನ್ನು ಅನುಸರಿಸುತ್ತೀರಿ ಎಂಬುದು ಅರ್ಥವಾಗಿಲ್ಲ ದಯವಿಟ್ಟು ಅದನ್ನು ತಿಳಿಸಬೇಕು ನಾಲ್ಕು ವರ್ಷದಿಂದ ಕೇಳಿದವರಿಗೆ ಪರ್ಮಿಷನ್ ಕೊಡುವುದಿಲ್ಲ. ಇತ್ತೀಚೆಗೆ ಕೇಳಿದವರಿಗೆ ಕೊಡುತ್ತೀರಿ ಉದಾಹರಣೆಗೆ ಹೇಳುವುದಾದರೆ ನನ್ನ ಮಿತ್ರರು ಒಬ್ಬರು ಹೇಳಿದರು ದೊಡ್ಡಬಳ್ಳಾಪುರದಲ್ಲಿ ಲಾವಣ್ಯ ಎಂಬ ಸಂಸ್ಥೆಯವರು ಕಳೆದ ನಾಲ್ಕು ವರ್ಷಗಳಿಂದ ಪರ್ಮಿಷನ್ ಕೇಳುತ್ತಿದ್ದಾರೆ ಇನ್ನೂ ಕೊಡಲಿಲ್ಲ ಕಳೆದ ವರ್ಷ ಕೇಳಿದವರಿಗೆ ಪರ್ಮಿಷನ್ ಕೊಟ್ಟಿದ್ದೀರಿ ಖಾಸಗೀ ಸಂಸ್ಥೆಗಳನ್ನು ತೆರೆಯುವುದರಲ್ಲಿ ನಿಮ್ಮ ನೀತಿ ಏನು ಯಾವ ರೀತಿಯಲ್ಲಿ ಪರ್ಮಿಷನ್ ಕೊಡುತ್ತೀರಿ. ಎಂಬ ಬಗ್ಗೆ ಒಂದು ನಿರ್ಣಯವನ್ನು ಮಾಡಬೇಕು. ಇನ್ನು ದೊಡ್ಡ ದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಫ್ರೆಂಚ್, ಡಚ್ ಭಾಷೆಗಳು ಇದೆ ಅದೇ ರೀತಿಯಲ್ಲಿ ಅರೇಬಿ ಭಾಷೆಯನ್ನು ಅಳವಡಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದು ಇಡೀ ಜಗತ್ತಿಗೇ ಬೇಕಾದಂತಹ ಭಾಷೆ, ಕೇರಳದಲ್ಲಿ ಇದು ಚಾಲೂನಲ್ಲಿದೆ, ಇಲ್ಲೂ ಕೂಡ ಜಾರಿಗೆ ತರಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ. ೧೯೮೬–೮೭ ಇನ್ನು ಉಚಿತ ಪಠ್ಯಪುಸ್ತಕಕ್ಕೆಂದು ೧೯೮೬—೮೭ರಲ್ಲಿ ೩೯೦ ಲಕ್ಷರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಇದರಿಂದಾಗಿ ೫೬.೧೦ ಲಕ್ಷ ಮಕ್ಕಳು ಪ್ರಯೋಜನ ಹೊಂದಿದ್ದಾರೆ. ಉಚಿತ ಸಮವಸ್ತ್ರಕ್ಕೆಂದು ೧೯೮೬–೮೭ನೇ ಸಾಲಿನಲ್ಲಿ ೧೦೦೮.೬೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಆದರೆ ಈ ಕಾರ್ಯಕ್ರಮದಿಂದ ಸ್ವಲ್ಪ ಪ್ರಚಾರ ಸಿಕ್ಕಿದೆಯೇ ಹೊರತು ಇದರಿಂದ ಶಾಶ್ವತವಾದ ಯಾವ ಲಾಭವೂ ಕೂಡ ಆಗುವುದಿಲ್ಲ. ಪಠ್ಯಪುಸ್ತಕ ಹರಿದು ಹೋದರೆ ಪೇಟೆಯಲ್ಲಿ ಸಿಗುವುದಿಲ್ಲ, ಸಮವಸ್ತ್ರ ಹಾಕಿಕೊಂಡು ಯಾವ ವಿದ್ಯಾರ್ಥಿಗಳೂ ಹೋಗುವುದಿಲ್ಲ ಇದಕ್ಕೆ ೧೦೦೮.೬೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಆದರೆ ಕೆಲವುಕಡೆ ಸರಿಯಾದ ಶಾಲೆ ಇಲ್ಲ, ಕಟ್ಟಡ ಇಲ್ಲ. ಉಪಾಧ್ಯಾಯರಿಲ್ಲ ಮೂಲಭೂತವಾಗಿ ಇರಬೇಕಾದುದೇ ಇಲ್ಲ ಉಚಿತ ಸಮವಸ್ತ್ರ, ಪಠ್ಯಪುಸ್ತಕಗಳನ್ನು ಇಟ್ಟುಕೊಂಡು ಏನು ಮಾಡುವುದು? ಮಾಸ್ಟರ್‌ಗಳು ಇಲ್ಲ, ಅವರಿಲ್ಲದೆ ವಿದ್ಯಾರ್ಥಿಗಳು ಪಾಠವನ್ನು ಕಲಿಯುವಂತಿಲ್ಲ, ಹೀಗಾದರೆ ವಿದ್ಯಾರ್ಥಿಗಳ ಗತಿ ಏನು ಎಂಬುದನ್ನು ಯೋಚನೆ ಮಾಡಬೇಕು. ಮೊದಲು ಯಾವುದು ಆಗಬೇಕೋ ಅದನ್ನು ಮಾಡಿ, ಇದರಿಂದ ನಿಮಗೆ ಸ್ವಲ್ಪ ಪ್ರಚಾರ ಸಿಗುತ್ತಿದೆಯೇ ಹೊರತು ಇದು ಶಾಶ್ವತವಾಗಿ ಖಂಡಿತವಾಗಿ ಉಳಿಯುವುದಿಲ್ಲ. ಇನ್ನು ಮಧ್ಯಾಹ್ನದ ಉಪಾಹಾರ ಏನು ಕೊಡುತ್ತಿದ್ದೀರಿ ಅದರಲ್ಲಿ ಕೂಡ ಭ್ರಷ್ಟಾಚಾರ ಆಗುತ್ತಿದೆ ಎಂದು ಅನೇಕರು ಹೇಳುತ್ತಿದ್ದಾರೆ ಇದನ್ನು ಪರಿಶೀಲಿಸಲು ಒಳ್ಳೆಯ ಅಧಿಕಾರಿಗಳನ್ನು ಆಗಾಗ ಅಲ್ಲಿಗೆ ಕಳಿಸಿ ತನಿಖೆ ಮಾಡಿಸಬೇಕು ಇದಾಗದೇ ಇದ್ದರೆ ತುಂಬಾ ಅನ್ಯಾಯವಾಗುತ್ತದೆ. ನೀವು ಇದನ್ನು ಮಾಡಿದರೆ ನಮ್ಮನ್ನು ಕೇಳುವವರಿದ್ದಾರೆ, ನೋಡುವವರಿದ್ದಾರೆ ಎಂಬ ಭಯ ಅವರಲ್ಲಿ ಬರಬೇಕು, ಇದು ಬರುವಂತೆ ಮಾಡಬೇಕು. ಇನ್ನು ಅಧ್ಯಾಪಕರಿಗೆ ರಾಷ್ಟ್ರಪ್ರಶಸ್ತಿ ರಾಜ್ಯ ಪ್ರಶಸ್ತಿ ಸಿಗತಕ್ಕಂತಹ ವಿಚಾರದಲ್ಲೂ ಕೂಡ ಬಹಳ ಅನ್ಯಾಯ

ವಾಗುತ್ತಿದೆ ಒಳ್ಳೆಯ ಅಧ್ಯಾಪಕರಿಗೆ ರಾಜ್ಯಪ್ರಶಸ್ತಿ, ರಾಷ್ಟ್ರ ಪ್ರಶಸ್ತಿ ಸಿಗುವುದಕ್ಕೆ ಸಾಧ್ಯವಿಲ್ಲ ಏಕೆಂದರೆ ಅವರು ಡಿ. ಡಿ. ಪಿ ಐ ಕಾಲು ಹಿಡಿಯುವುದಿಲ್ಲ, ರೆಕಮೆಂಡೇಷನ್ ಮಾಡಿಸುವುದಿಲ್ಲ. ಇವರಲ್ಲಿ ಹೆಚ್ಚಿನವರು ವಶೀಲಿ ಬಾಜಿಯಿಂದ ಪಡೆದಂತಹವರಿದ್ದಾರೆ ಕೆಲವರು ಒಳ್ಳೆಯವರಿರಬಹುದು ಎಲ್ಲರೂ ಇದೇ ರೀತಿ ಮಾಡುತ್ತಾರೆಂದು ಹೇಳುವುದಕ್ಕೆ ಬರುವುದಿಲ್ಲ. ಅದನ್ನು ತನಿಖೆ ಮಾಡುವುದಕ್ಕೋಸ್ಕರ ಸದನ ಸಮಿತಿಯೋ, ವಿದ್ವಾಂಸರ ಸಮಿತಿಯನ್ನೋ ಮಾಡಿ ಆಯಾಯ ತಾಲ್ಲೂಕಿನಲ್ಲಿ ಆಯಾಯ ಜಿಲ್ಲೆಯಲ್ಲಿ ಒಳ್ಳೆಯ ಅಧ್ಯಾಪಕರು ಯಾರಿದ್ದಾರೆ ಎಂಬುದನ್ನು ಆ ಸಮಿತಿ ಪರಿಶೀಲಿಸಿ, ಅವರ ವಿಚಾರವನ್ನು ಕೇಳಿ ಮಾಡುವುದು ಒಳ್ಳೆಯದು. ಇನ್ನು ಮಂಗಳೂರು ವಿಶ್ವವಿದ್ಯಾನಿಲಯ ಮೇಲೆ ಬರಬೇಕೆಂದು ಆಲೋಚನೆ ಮಾಡುತ್ತಿದ್ದೇವೆ ಅದಕ್ಕೆ ಸೂಕ್ತವಾದ ಸವಲತ್ತುಗಳು ಹಾಗೂ ಹಣದ ಸಹಾಯ ಬೇಕಾಗುತ್ತದೆ ಅದನ್ನು ಒದಗಿಸಿಕೊಟ್ಟರೆ ಮಂಗಳೂರು ವಿಶ್ವವಿದ್ಯಾನಿಲಯ ಒಳ್ಳೆಯ ರೀತಿಗೆ ಬರುತ್ತದೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

೫—೦೦ ಪಿ. ಎಂ.

ಇವತ್ತು ಮುಸ್ಲಿಂರಲ್ಲಿ ಹೆಣ್ಣುಮಕ್ಕಳು ಕಲಿಯುವುದು ಬಹಳ ಕಡಿಮೆ ಉಂಟು. ಮುಸ್ಲಿಂರಲ್ಲಿ ಕೂಡಾ ಹೆಣ್ಣುಮಕ್ಕಳು ಇವತ್ತು ವಿದ್ಯಾವಂತರಾಗಬೇಕು ಎಂದು ಅವರಲ್ಲಿ, ಅಪೇಕ್ಷೆ ಉಂಟು. ಆದ್ದರಿಂದ ಪ್ರತಿ ಜಿಲ್ಲೆಯಲ್ಲಾಗಲಿ, ತಾಲ್ಲೂಕಿನಲ್ಲಾಗಲೀ ಮುಸ್ಲಿಂ ಹೆಣ್ಣುಮಕ್ಕಳ ಪ್ರೌಢಶಾಲೆಗಳನ್ನು, ಜೂನಿಯರ್ ಕಾಲೇಜುಗಳನ್ನು ತೆರೆಯಲಿಕ್ಕೆ ತಾವು ಹೆಚ್ಚು ಮನಸ್ಸು ಮಾಡಿದರೆ ಹೆಚ್ಚು ಹೆಣ್ಣು ಮಕ್ಕಳು ವಿದ್ಯಾವಂತರಾಗಲಿಕ್ಕೆ ಸಾಧ್ಯವಾಗುತ್ತದೆ ಎಂದು ನಾನು ತಮ್ಮಲ್ಲಿ ಕೇಳುತ್ತಿದ್ದೇನೆ. ರಾಜ್ಯದ ಅನೇಕ ಶಾಲೆಗಳಲ್ಲಿ ಉಪಾಧ್ಯಾಯರು ೨೦ ವರ್ಷ ೨೫ ವರ್ಷದಿಂದ ಇದ್ದವರೇ ಅಲ್ಲಿ ಇದ್ದಾರೆ. ಮಾನ್ಯ ಗೋವಿಂದೇ ಗೌಡರು ಸಚಿವರು ಆಗಿರುವಾಗ ಕಾರ್ಯಕ್ರಮವನ್ನು ಇದರ ಬಗ್ಗೆ ತೆಗೆದುಕೊಳ್ಳಬೇಕು ಎಂದು ಕಾಲಿಡುವಾಗ ಅವರ ಮಂತ್ರಿ ಪದವಿ ಹೋಯಿತು. ಕೆಲವರು ೨೦ ವರ್ಷ, ೨೫ ವರ್ಷದಿಂದ ಒಂದೇ ಕಡೆಯಲ್ಲಿ ಇದ್ದಾರೆ. ಇದನ್ನು ತಾವು ನೋಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಶಿಕ್ಷಣ, ವಿದ್ಯೆ ಎನ್ನುವುದು ಇಡೀ ನಮ್ಮ ದೇಶದ ಶಕ್ತಿಯನ್ನು, ಗೌರವವನ್ನು, ಮೇಲ್ಮೆಯನ್ನು ತೋರಿಸತಕ್ಕಂಥ ವಿಚಾರವಾದ್ದರಿಂದ ಈ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು ಎಂದು ಹೇಳಿ ಕಾಲಾವಕಾಶ ಸ್ವಲ್ಪವೇ ಇರುವುದರಿಂದ ನಾನೇ ರಚಿಸಿದಂಥ ಕವನವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇಡೀ ಪಠ್ಯಪುಸ್ತಕದ ಬದಲಾವಣೆ ಆದರೆ ಸಾಲದು. ಅದಕ್ಕೆ ಸರಿಯಾದಂಥ ದೇಶ ಪ್ರೇಮ, ರಾಷ್ಟ್ರಪ್ರೇಮದ ಕಡೆಗೆ ಗಮನ ಕೊಡುವಂತೆ ಮತ್ತು ಕೋಮುಸಾಮರಸ್ಯವನ್ನು ತರತಕ್ಕಂಥ ವಿಚಾರ ಮಾಡಿದಾಗ ಮಾತ್ರ ವಿದ್ಯಾರ್ಥಿಗಳ ನೈತಿಕ ಅದಃಪತನ ತಪ್ಪಿ ಒಳ್ಳೆಯ ಕಡೆಗೆ ತಂದಾಗ ಮಾತ್ರ ಸಾಧ್ಯವಾಗುತ್ತದೆ. ನಾನೇ ರಚಿಸಿದಂಥ ಕವನವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

"ಈಗಿನ ಶಿಕ್ಷಣ ನೀತಿಯ ಬದಲಾವಣೆ ಪ್ರಾಮುಖ್ಯ ದೇಶಪ್ರೇಮ, ಕೋಮು
ಸಾಮರಸ್ಯ ಅತಿ ಮುಖ್ಯ ಇದರ ಅನುಷ್ಠಾನ ಕಡ್ಡಾಯ. ಆಗ ಪ್ರಗತಿ ಸಾಧ್ಯ
ನಿರ್ಲಕ್ಷಿಸಿದರೆ ಅದಃಪತನ—ಇದು ವೇದ ವಾಕ್ಯ."

ಅಧ್ಯಕ್ಷರು.—ಈಗ ಮಾನ್ಯಮಂತ್ರಿಗಳಿಂದ ಉತ್ತರ.

ಶ್ರೀ ಡಿ ಮಂಜುನಾಥ್ (ಶಿಕ್ಷಣ ಮಂತ್ರಿಗಳು).— ಮಾನ್ಯ ಸಭಾಧ್ಯಕ್ಷರೇ, ಈಗ ಎಲ್ಲಾ ಸದಸ್ಯರು ಶಿಕ್ಷಣ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆ ಎಂದು ಹೇಳಿದ್ದಾರೆ ನನ್ನ ಇಲಾಖೆಯ ಮೇಲೆ ಮಾತನಾಡಿರತಕ್ಕಂಥ ಎಲ್ಲಾ ಸದಸ್ಯರಿಗೂ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನನ್ನ ಇಲಾಖೆಗೆ ಒದಗಿಸಿರುವ ೫೩೫ ಕೋಟಿ ರೂಪಾಯಿಗಳು ಏನೇನು ಸಾಲದು ಕಟ್ಟಡ ಒದಗಿಸಬೇಕು, ಪೀಠೋಪ ಕರಣ ಒದಗಿಸಬೇಕು. ಉಪಾಧ್ಯಾಯರಿಗೆ ಕೊಡುವ ಸಂಬಳವನ್ನು ಕೊಟ್ಟರೆ ಈ ಹಣ ಏನೂ ಸಾಲು ವುದಿಲ್ಲ. ಕಳೆದವರ್ಷದ ಬಜೆಟ್‌ನಲ್ಲಿ ನಮಗೆ ಸುಮಾರು ೯೦ ಪರ್‌ಸೆಂಟ್‌ಗೂ ಮೇಲ್ಪಟ್ಟು ಉಪಾ ಧ್ಯಾಯರ ಸಂಬಳವನ್ನು ಕೊಡಬೇಕಾಗಿತ್ತು, ಬಾಕಿ ಹಣದಲ್ಲಿ ಶಾಲಾ ಕಟ್ಟಡವನ್ನು ಕಟ್ಟಿಸುವುದಾಗಲೀ, ಪೀಠೋಪಕರಣವನ್ನು ಒದಗಿಸುವುದಾಗಲೀ ಕಷ್ಟವಾಯಿತು. ಮಾನ್ಯ ಸದಸ್ಯರು ಬಹುತೇಕವಾಗಿ ಕಟ್ಟಡ ಇಲ್ಲ. ಪೀಠೋಪಕರಣ ಇಲ್ಲ ಎಂದು ಹೇಳಿದ್ದಾರೆ, ಇದರ ಬಗ್ಗೆ ಒಂದು ವಿಷಯವನು ಹೇಳಲಿಕ್ಕೆ ಬಯಸುತ್ತೇನೆ, ಸರ್ಕಾರ ಎಲ್ಲಾ ರೀತಿಯ ಎಲ್ಲಾ ಸವಲತ್ತುಗಳನ್ನು ಕೊಡುವುದು ಕಷ್ಟ

ಈಗಾಗಲೇ ಇದರ ಬಗ್ಗೆ ಒಂದು ತೀರ್ಮಾನ ಮಾಡಿ ಎಲ್ಲಾ ಪ್ರೈಮರಿ ಶಾಲೆಗಳು, ಹೈಯರ್ ಪ್ರೈಮರಿ ಶಾಲೆಗಳು ಮತ್ತು ಹೈಸ್ಕೂಲ್‌ಗಳಿಗೆ, ಈಗ ಶಾಲಾ ಅಭಿವೃದ್ಧಿ ಸಮಿತಿಗಳನ್ನು ಮಾಡಿದ್ದೇವೆ. ಖಾಸಗಿ ಅಭಿವೃದ್ಧಿ ಸಂಸ್ಥೆಗಳಲ್ಲಿ ಹೈಸ್ಕೂಲ್‌ಗಳಲ್ಲಿ ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಇದನ್ನು ಕಡ್ಡಾಯವಾಗಿ ಎಲ್ಲಾ ಕಡೆಯಲ್ಲೂ ಕೂಡಾ ಮಾಡಿದ್ದೇವೆ. ಈಗ ಆ ಶಾಲೆಗಳ ಅಭಿವೃದ್ಧಿ ಗೋಸ್ಕರ ಯಾವ ರೀತಿ ಮಾಡಬೇಕು, ಏನು ಕೆಲಸ ಮಾಡಬೇಕು ಎಂಬುದರ ಬಗ್ಗೆ ಈಗಾಗಲೇ ಅನೇಕ ಶಾಲಾ ಅಭಿವೃದ್ಧಿ ಸಮಿತಿಯವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮಂಡ್ಯ ದಲ್ಲಿ ಕಳೆದ ವಾರ ಆ ಶಾಲಾ ಅಭಿವೃದ್ಧಿ ಸಮಿತಿಯಲ್ಲಿ ಶಿಕ್ಷಕರ ಸಮ್ಮೇಳನ ಆಯಿತು ಆ ದಿವಸ ನಮ್ಮ ಶಾಸಕರಾದ ಜಯರಾಮ ಅವರು ಇದ್ದರು. ಅಲ್ಲಿ ೪೪ ಲಕ್ಷ ರೂಪಾಯಿಗಳನ್ನು ಕೂಡಿಸಿ ಪೀಠೋಪ ಕರಣಗಳನ್ನು ಸಂಗ್ರಹ ಮಾಡಿದ್ದಾರೆ. ಇದರ ಜೊತೆಗೆ ಕಟ್ಟಡ ಕಟ್ಟುವುದಕ್ಕೆ ಹಣವನ್ನು ಕೊಟ್ಟಿದ್ದಾರೆ. ಇದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಮೂರು ವರ್ಷದಲ್ಲಿ ಅಧಿಕಾರಿಗಳು ಮತ್ತು ಉಪಾಧ್ಯಾಯರು ಮತ್ತು ಶಾಲಾ ಅಭಿವೃದ್ಧಿ ಸಮಿತಿಯವರು ಸೇರಿ ೧೨ ಕೋಟಿ ರೂಪಾಯಿಗಳ ಪೀಠೋಪಕರಣವನ್ನು ಸಂಗ್ರಹ ಮಾಡಿದ್ದಾರೆ. ಇವತ್ತು ಏನಾಗಿದೆ ಎಂಬುದರ ಬಗ್ಗೆ ನಾನು ಈಗಾಗಲೇ ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದೇನೆ. ಈ ಬಜೆಟ್‌ನಲ್ಲಿರುವ ಹಣ ಸಾಲದು, ವಿದ್ಯಾ ಇಲಾಖೆಯಲ್ಲಿ ವ್ಯವಸ್ಥಿತವಾಗಿ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡಬೇಕು. ಆದ್ದರಿಂದ ಇವತ್ತು ನಮಗೆ ಕಷ್ಟ ಇದೆ ಎಂದು ಹೇಳಿದ್ದೇನೆ. ಒಳ್ಳೆಯ ಜನರು ಇದ್ದಾರೆ, ಅನೇಕರು ದಾನಿಗಳು ಇದ್ದಾರೆ. ಮಾನ್ಯ ಬಸವಲಿಂಗಪ್ಪನವರಿಗೆ ಗೊತ್ತಿದ್ದ ಹಾಗೆ ಹಿಂದೆ ಅನೇಕರು ಇದ್ದರು. ಉದಾಹರಣೆಗೆ ಸರ್ ಮಿರ್ಜಾ ಇಸ್ಮಾಯಿಲ್ ಅವರು ಎಲ್ಲರ ಹತ್ತಿರ ಹೋಗಿ ಆ ದಾನಿಗಳಿಂದ ಬಂದಂಥ ದುಡ್ಡಿನಲ್ಲಿ ಶಾಲಾ ಕಟ್ಟಡ ಗಳನ್ನು ಕಟ್ಟಿಸಿದ್ದಾರೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.— ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರು ಯಾವ ರೀತಿ ಕೆಲಸ ಮಾಡುತ್ತಿದ್ದರೋ ಆ ರೀತಿ ನೀವು ಮಾಡಿದ್ದೀರಾ ? ನೀವು ಹೊರಗೇ ಹೋಗುವುದಿಲ್ಲ ? ಹೇಗೆ ಕೆಲಸವಾಗುತ್ತದೆ ?

ಶ್ರೀ ಟಿ ಮಂಜುನಾಥ್.— ಸ್ವಾಮಿ, ಇದು ಸಾರ್ವಜನಿಕ ಶಿಕ್ಷಣ ಇಲಾಖೆ. ಈ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸಾರ್ವಜನಿಕರನ್ನು ಹೆಚ್ಚು ಇನ್‌ವಾಲ್ವ್ ಮಾಡಬೇಕಾದರೆ ಆಯಾಯ ಸ್ಥಳಗಳಲ್ಲಿರ ತಕ್ಕಂಥ ಪ್ರಮುಖರನ್ನು ಇನ್‌ವಾಲ್ವ್ ಮಾಡಿದರೆ ಆಗ ಮಾತ್ರ ಅಲ್ಲಿ ಶಾಲಾ ಕಟ್ಟಡಗಳನ್ನು ಚೆನ್ನಾಗಿ ನಡೆಸುವುದಕ್ಕೆ ಮತ್ತು ಅಲ್ಲಿ ಬೇಕಾಗಿರತಕ್ಕಂಥ ಪೀಠೋಪಕರಣಗಳಿಗೆ ಅನುಕೂಲವಾಗುತ್ತದೆ. ಎಲ್ಲಿಯ ವರೆಗೆ ಇದರಲ್ಲಿ ಅವರು ಇನ್‌ವಾಲ್ವ್ ಆಗುವುದಿಲ್ಲವೋ ಅಲ್ಲಿಯವರೆಗೂ ಶಾಲಾ ಕಾಲೇಜುಗಳಿಗೆ ಕಟ್ಟಡ ಕಟ್ಟುವುದಾಗಲಿ ಪೀಠೋಪಕರಣಗಳನ್ನು ಒದಗಿಸುವುದಾಗಲಿ ಕಷ್ಟ. ಇದಕ್ಕೆಲ್ಲಾ ಬರೀ ಸರ್ಕಾರದವರೇ ಹಣ ಒದಗಿಸಿಕೊಡಬೇಕೆಂದರೆ ಬಹಳ ಕಷ್ಟ. ಸರ್ಕಾರಕ್ಕೂ ಒಂದು ಇತಿಮಿತಿ ಇರುತ್ತದೆ. ಸಮಾಜ ದಲ್ಲಿಗತಕ್ಕಂಥಾವರೆಲ್ಲರಿಗೂ ವಿದ್ಯೆಯನ್ನು ಸರ್ಕಾರದವರು ಒದಗಿಸಿಕೊಡಬೇಕು ಎಂದರೆ ಬಹಳ ಕಷ್ಟ, ಆದಕ್ಕಾಗಿಯೇ ಖಾಸಗೀ ಸಂಸ್ಥೆಗಳಿಗೂ ಕೂಡ ಈ ವಿದ್ಯಾ ಸಂಸ್ಥೆಗಳನ್ನು ನಡೆಸುವುದಕ್ಕೆ ಪರವಾನಗಿ ಕೊಟ್ಟಿದ್ದೇವೆ ಕೆಲವು ಖಾಸಗಿ ಸಂಸ್ಥೆಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾ ಇರುವುದನ್ನು ನಾವು ನೋಡಿದ್ದೇವೆ. ಹಾಗೆಯೇ ಕೆಲವು ಸಂಸ್ಥೆಗಳಿಗೆ ನಾವು ಅನುದಾನ ಕೊಡುತ್ತಿದ್ದೇನೆ, ಕೆಲವಕ್ಕೆ ಅನುದಾನ ಕೊಡುತ್ತಾ ಇಲ್ಲ. ಆದರೂ ಕೆಲವು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿವೆ.

ಇನ್ನು ನಾವು ಕೇಂದ್ರ ಶಿಕ್ಷಣ ನೀತಿ ಬಗ್ಗೆ ಹೇಳುವುದಾದರೆ ಆ ಬಗ್ಗೆ ನಾವು ಹೆಚ್ಚಿನ ಆಸಕ್ತಿ ಕೊಟ್ಟಿದ್ದೇವೆ. ಕೇಂದ್ರ ಸರ್ಕಾರದವರ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರುವುದಕ್ಕೆ ರಾಜ್ಯ ಸರ್ಕಾರ ದವರು ಒಪ್ಪಿಕೊಂಡಿದ್ದಾರೆ. ಈಗಾಗಲೇ ನಾವು ಅದನ್ನು ಜಾರಿಗೆ ತಂದಿದ್ದೇವೆ. ಆ ಬಗ್ಗೆ ನಾವು ಈಗಾಗಲೇ ನವೋದಯ ಸ್ಕೂಲುಗಳನ್ನು ಮಾಡಿ ೬ ಸ್ಕೂಲುಗಳನ್ನು ಪ್ರಾರಂಭ ಮಾಡಿದ್ದೇವೆ. ಕೇಂದ್ರ ಮಂತ್ರಿಗಳು ಇದನ್ನು ತುರ್ತಾಗಿ ಮಾಡಬೇಕು ಎಂದು ಹೇಳಿದಾಗ ನಮಗೆ ಸಧ್ಯದಲ್ಲಿ ಎಲ್ಲೆಲ್ಲಿ ವಿದ್ಯಾ ಪೀಠಗಳು ಇವೆಯೋ ಅಲ್ಲಿ ಎಲ್ಲಾ ಸವಲತ್ತುಗಳೂ ಇದ್ದುದರಿಂದ ಅಲ್ಲಿ ಇವನ್ನು ಪ್ರಾರಂಭ ಮಾಡಿ ದ್ದೇವೆ. ಅವರನ್ನು ನಾವು ಇನ್ನೂ ೧೨ ಸ್ಕೂಲುಗಳನ್ನು ಕೊಡಿ ಎಂದು ಕೇಳಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲೂ ನಾವು ಇದನ್ನು ಮಾಡಬೇಕೆಂದು ಇದ್ದೇವೆ. ಏತಕ್ಕೆಂದರೆ ಈ ನ್ಯಾಷನಲ್ ಇಂಟಿಗ್ರೇಷನ್ ಇದರಲ್ಲಿ ಪ್ರಧಾನವಾಗಿ ಬರುತ್ತದೆ ಆ ಮಕ್ಕಳು ಇಲ್ಲಿಗೆ ಬರುತ್ತಾರೆ, ಈ ಮಕ್ಕಳು ಅಲ್ಲಿಗೆ ಹೋಗು ತ್ತಾರೆ. ಒಬ್ಬರಿಗೊಬ್ಬರಿಗೆ ಪ್ರೀತಿ ವಿಶ್ವಾಸ ಬೆಳೆಯುತ್ತದೆ. ಈ ನವೋದಯ ಶಾಲೆಗಳಲ್ಲಿ ಎಲ್ಲಾ

ವ್ಯವಸ್ಥೆಯೂ ಇದೆ, ಇಲ್ಲಿ ಫ್ರೀ ಹಾಸ್ಟಲ್ ಇರುತ್ತದೆ. ಈ ಸ್ಕೂಲುಗಳು ಸೆಂಟ್ರಲ್ ಬೋರ್ಡ್‌ಗೆ ಅಫಿಲಿಯೇಟ್ ಆಗಿರುತ್ತದೆ. ಕೇಂದ್ರದ ಮಂತ್ರಿಗಳು ಹೇಳಿದರು ಕರ್ನಾಟಕದಲ್ಲಿರುವ ಈ ಸ್ಕೂಲುಗಳು ಬೇರೆ ರಾಜ್ಯಗಳಿಗಿಂತಲೂ ಚೆನ್ನಾಗಿ ನಡೆಯುತ್ತಿದೆ. ಅಂತ ಹೇಳಿ ನಮಗೆ ಶಹಭಾಸ್‌ಗಿರಿ ಕೊಟ್ಟಿದ್ದಾರೆ. ಇದರಲ್ಲಿ ಅತ್ಯಂತ ಮುಖ್ಯವಾದುದು ಏನೆಂದರೆ ನಾವು ಈ ಸಲ ಈ ನವೋದಯ ಸ್ಕೂಲುಗಳನ್ನು ಪ್ರಾರಂಭ ಮಾಡುವುದಕ್ಕೆ ಏನಾಯಿತು ಎಂದರೆ ಇದು ತುರ್ತಾಗಿ ಆಗಬೇಕಾದುದರಿಂದ ಎಲ್ಲಿ ಎಲ್ಲ ಸವಲತ್ತುಗಳು ಇತ್ತೋ, ಅಂದರೆ ನಮಗೇ ಸೇರಿದಂಥಾ ವಿದ್ಯಾಪೀಠಗಳು ಇತ್ತು ಕಟ್ಟಡ ಇತರೇ ಸವಲತ್ತುಗಳು ಇದ್ದುದರಿಂದ ಅಂಥಾ ಕಡೆ ಆರು ಕಡೆಗಳಲ್ಲಿ ಇದನ್ನು ಮಾಡಿದೆವು. ನಾನು ಇದನ್ನು ಮಾಡುವಾಗ ಇಲ್ಲಿ ಕಾಂಗ್ರೆಸ್ಸಿನವರು ಇದ್ದಾರೆ, ಅಲ್ಲಿ ಜನತಾದವರು ಇದ್ದಾರೆಂದು ಮಾಡಲಿಲ್ಲ. ಎಲ್ಲಾ ಸೌಕರ್ಯಗಳು ಇದ್ದ ಕಡೆ ಮಾಡಿದ್ದೇವೆ. ಹೈದ್ರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶ ಅಲ್ಲಿ ಮಾಡಬೇಕು ಎಂದು ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ಎಸ್ ಕೆ ಕಾಂತಾ ಮತ್ತು ಶ್ರೀ ಮಲ್ಲಾರಿಗೌಡ ಪಾಟೀಲರು ಹೇಳಿದರು. ತಮಗೆ ಹೇಳಬಯಸುತ್ತೇನೆ. ಇದಕ್ಕೆ ಒಂದು ಸಮಿತಿ ಇದೆ, ಆ ಸಮಿತಿಯಲ್ಲಿ ಕೇಂದ್ರದ ಅಧಿಕಾರಿಯೂ ಇದ್ದಾರೆ. ನಮ್ಮ ಅಧಿಕಾರಿಯೂ ಇದ್ದಾರೆ. ಇದರ ಬಗ್ಗೆ ಅವರು ತನಿಖೆ ನಡೆಸುತ್ತಾರೆ. ಅವರಿಗೆ ಅಲ್ಲಿ ೩೦–೪೦ ಎಕರೆ ಜಮೀನು ಕೊಡಬೇಕಾಗುತ್ತದೆ. ಈಗ ನಾವು ೬ ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ. ಮತ್ತು ಇನ್ನು ಎಲ್ಲೆಲ್ಲಿ ಈ ಶಾಲೆಗಳನ್ನು ಮಾಡಬೇಕೋ ಅಲ್ಲಲ್ಲಿ ಇದಕ್ಕೆ ಬೇಕಾದ ಜಮೀನುಗಳನ್ನು ಕೊಡುವುದಕ್ಕೂ ಸಹ ಸರ್ಕಾರದವರು ತೀರ್ಮಾನ ಮಾಡಿ ಕೇಂದ್ರಕ್ಕೆ ಒಂದು ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಆದುದರಿಂದ ಮುಂದಿನ ವರ್ಷ ಇದರ ಸಂಖ್ಯೆ ಹೆಚ್ಚಾಗುತ್ತದೆಂದು ಹೇಳುತ್ತೇನೆ. ಅವರು ಜಾಸ್ತಿ ಹಣ ಕೊಟ್ಟರೆ ನಾವು ಶುರು ಮಾಡುತ್ತೇವೆ. ಆದರೆ ಅವರು ಇದನ್ನು ಯಾವ ಸಂಖ್ಯೆಯಲ್ಲಿ ಗೊತ್ತು ಮಾಡುತ್ತಾರೋ ಗೊತ್ತಿಲ್ಲ. ನಾವು ಈಗ ಈ ಬಗ್ಗೆ ಎಷ್ಟು ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೋ ಅವಕ್ಕೆ ಬೇಕಾದ ಎಲ್ಲ ಸವಲತ್ತು ಏನು ಏನು ಒದಗಿಸಿದ್ದೇವೋ ಅದರ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರದವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇದರ ಜೊತೆಗೆ ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಏನೆಂದರೆ ಈಗ ಮೊಟ್ಟ ಮೊದಲಾಗಿ ಪ್ರೈಮರಿ ಎಜುಕೇಷನ್‌ನಲ್ಲಿ ಆಪರೇಷನ್ ಬ್ಲಾಕ್‌ಬೋರ್ಡ್ ಮಾಡಿ ಎಂದು ಹೇಳಿದ್ದಾರೆ.

ಆಪರೇಷನ್ ಬ್ಲಾಕ್ ಬೋರ್ಡ್ ಎಂದರೆ, ಸಿಂಗಲ್ ಟೀಚರ್ ಸ್ಕೂಲುಗಳನ್ನು ಡಬ್ಬಲ್ ಟೀಚರ್ಸ್ ಸ್ಕೂಲುಗಳನ್ನಾಗಿ ಪರಿವರ್ತಿಸುವುದು, ಇದಕ್ಕೆ ೩೦ ಸ್ಕ್ವೈರ್‌ಮೀಟರ್ ಇರುವಂತಹ ಎರಡು ಕೊಠಡಿಗಳು ಇರಬೇಕು. ಆಟದ ಮೈದಾನ ಇರಬೇಕು, ಶೌಚಾಲಯ ವ್ಯವಸ್ಥೆ ಇರಬೇಕು ಎಂದು ಕೇಂದ್ರದವರು ಹೇಳಿದ್ದಾರೆ. ಈ ಒಂದು ವ್ಯವಸ್ಥೆಗೆ ಕೇಂದ್ರದವರು ಹಣ ಕೊಡುವುದಾಗಿ ಹೇಳಿದ್ದಾರೆ. ಈ ಯೋಜನೆ ರಾಜ್ಯದ ಎಲ್ಲಾ ಕಡೆ ಜಾರಿಗೆ ಬರಬೇಕೆಂಬುದೇ ನನ್ನ ಆಶೆ ಆಗಿದೆ. ಈ ಬಗ್ಗೆ ನಾನು ಆಶಾವಾದಿ ಆಗಿದ್ದೇನೆ. ಈ ವಿದ್ಯಾಭ್ಯಾಸದ ವಿಷಯ ಸ್ಟೇಟ್ ಸಬ್ಜೆಕ್ಟ್‌ನಲ್ಲಿ ಬರುತ್ತದೆಂದು ಕೆಲವರು ಹೇಳಿದರು. ಆದರೆ ಇದು ಕನ್‌ಕರೆಂಟ್ ಲಿಸ್ಟ್‌ನಲ್ಲಿ ಬರುತ್ತದೆ. ಏಕೆಂದರೆ, ಇದಕ್ಕೆ ಕೇಂದ್ರ ಸರ್ಕಾರದವರು ಸಹ ಹಣ ಕೊಡುತ್ತಾರೆ. ಈಗಿನ ಹೊಸ ಶಿಕ್ಷಣದ ನೀತಿಯ ಪ್ರಕಾರ ನಮಗೆ ಕೇಂದ್ರದಿಂದ ಹಣ ಬರುತ್ತದೆ, ಆದ್ದರಿಂದ ಸಿಂಗಲ್ ಟೀಚರ್ ಸ್ಕೂಲ್‌ಗಳಲ್ಲಿ ಒಬ್ಬರು ಜೆಂಟ್ಸ್ ಟೀಚರ್ ಇದ್ದರೆ, ಅವರ ಜೊತೆಗೆ ಮತ್ತೊಬ್ಬರನ್ನು ನೇಮಕ ಮಾಡುವಾಗ ಮಹಿಳಾ ಉಪಾಧ್ಯಾಯರನ್ನು ನೇಮಕ ಮಾಡಬೇಕೆಂದು ಹೇಳಿದ್ದೇವೆ, ಇವೊತ್ತು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಯಾರು ಹೆಚ್ಚಾಗಿ ಮಾತನಾಡಲಿಲ್ಲ. ಇವೊತ್ತು ಹೆಂಗಸರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕಾಗಿದೆ. ಏಕೆಂದರೆ, ಇವೊತ್ತು ಗಂಡಸರಷ್ಟೇ ಹೆಂಗಸರೂ ಸಹ ಎಲ್ಲಾ ಕಡೆಗಳಲ್ಲಿ ಇದ್ದಾರೆ. ಇವೊತ್ತು ನಮ್ಮಲ್ಲಿರುವಂತಹ ಸಿಂಗಲ್ ಟೀಚರ್ ಸ್ಕೂಲ್‌ಗಳು ಏನಿವೆ, ಅಲ್ಲಿಗೆ ಮತ್ತೊಬ್ಬರನ್ನು ನೇಮಕ ಮಾಡಬೇಕೆಂಬುದು ಹಾಗೂ ಈ ಶಾಲೆಗಳಿಗೆ ಬೇಕಾದಂಥ ಎಲ್ಲಾ ರೀತಿಯ ಪಿಠೋಪಕರಣಗಳನ್ನು ಒದಗಿಸಬೇಕೆಂಬುದು ಕೇಂದ್ರ ಸರ್ಕಾರದ ನೀತಿಯಾಗಿದೆ. ಈ ಬಾಬಿಗೆ ಕೇಂದ್ರದಿಂದ ನಮಗೆ ಸಾಕಷ್ಟು ಹಣ ಬಂದರೆ ಬಹುತೇಕ ಎಲ್ಲಾ ಇಂತಹ ಶಾಲೆಗಳನ್ನು ಅವರು ಹೇಳಿದ ರೀತಿಯಲ್ಲಿ ಮಾರ್ಪಾಡು ಮಾಡಲು ಸಾಧ್ಯವಾಗುತ್ತದೆ. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಈ ಎನ್ ಆರ್. ಇ. ಪಿ. ಹಾಗೂ ಆರ್ ಎಲ್. ಇ. ಜಿ. ಪಿ ಮೂಲಕ ಸಾಕಷ್ಟು ಕಡೆಗಳಲ್ಲಿ ಶಾಲಾ ಕಟ್ಟಡಗಳನ್ನು ಒದಗಿಸಲು ನಮಗೆ ಸಾಧ್ಯವಾಗಿದೆ. ಇಷ್ಟೇ ಪ್ರಮಾಣದ ಕಟ್ಟಡಗಳನ್ನು ಟೌನ್‌ಗಳಲ್ಲಿ ಕಟ್ಟಿಸಿಕೊಡಲು ನಮಗೆ ಸಾಧ್ಯವಾಗಿಲ್ಲ, ನಾನು ಮೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ ಸಂದರ್ಭದಲ್ಲಿ ಎಲ್ಲಾ ಕಡೆ ಹೊಸದಾಗಿ ಕಟ್ಟಡಗಳು ಆಗಿರುವುದು ಕಂಡುಬಂತು

ಇದೇ ಎನ್. ಆರ್. ಇ. ಪಿ. ಹಾಗೂ ಆರ್. ಎಲ್. ಇ. ಜಿ. ಪಿ. ಕೆಳಗೆ ಟೌನ್ ಮತ್ತು ಸಿಟಿಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಅವಕಾಶವಿಲ್ಲ. ಇವೊತ್ತು ಟೌನ್ ಮತ್ತು ಸಿಟಿಗಳಲ್ಲಿರುವಂಥ ಬಹುತೇಕ ಶಾಲಾ ಕಟ್ಟಡಗಳು ದುಸ್ಥಿತಿಯಲ್ಲಿವೆ. ನಮ್ಮಲ್ಲಿ ಸಾಕಷ್ಟು ಹಣ ಇಲ್ಲದಿರುವ ಕಾರಣ ಅವುಗಳ ರಿಪೇರಿ ಸಹ ಮಾಡಿಸಲು ಸಾಧ್ಯವಾಗಿಲ್ಲ. ನಾನು ಬಿಜಾಪುರಕ್ಕೆ ಹೋದಾಗ ಅಲ್ಲಿನ ಶಾಲಾ ಕಟ್ಟಡ ನೋಡಿ ನನಗೆ ಬಹಳ ಬೇಜಾರಾಯಿತು. ಈ ಶಾಲಾ ಕಟ್ಟಡಗಳ ರಿಪೇರಿಗೆ ಈ ಸಲ ಹೆಚ್ಚು ಹಣವನ್ನು ಒದಗಿಸುತ್ತೇವೆ. ಈ ಚಿಕ್ಕ ಉಳಿತಾಯ ಯೋಜನೆಯಲ್ಲಿ ನಮ್ಮ ಉಪಾಧ್ಯಾಯರುಗಳು ಬಹಳ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ನಮ್ಮ ವಿದ್ಯಾ ಇಲಾಖೆಯಲ್ಲಿ ಹೆಚ್ಚಿನ ಸಿಬ್ಬಂದಿ ವರ್ಗ ಸಹ ಇದೆ. ಆದ್ದರಿಂದ ಇವರೆಲ್ಲರೂ ಸಣ್ಣ ಉಳಿತಾಯ ಯೋಜನೆಯಲ್ಲಿ ಜಾಸ್ತಿ ಹಣವನ್ನು ತೊಡಗಿಸುತ್ತಿದ್ದಾರೆ. ಈ ಕಾರಣದಿಂದ ಈ ಶಾಲಾ ಕಟ್ಟಡಗಳಿಗೆಂದು ಹೆಚ್ಚು ಹಣವನ್ನು ಈ ಬಾಬಿನಿಂದ ಬರುವ ಹಣದಲ್ಲಿ ಕೊಡಿ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ನಮ್ಮ ಪ್ರೈಮರಿ ಶಾಲೆಗಳನ್ನು ಮತ್ತು ಸೆಕೆಂಡರಿ ಶಾಲೆಗಳನ್ನು ನಾವು ಜಿಲ್ಲಾ ಪರಿಷತ್‌ಗಳಿಗೆ ವಹಿಸುತ್ತಿದ್ದೇವೆ. ಜಿಲ್ಲಾ ಪರಿಷತ್‌ಗಳಿಗೆ ಮತ್ತು ಮಂಡಲ್ ಪಂಚಾಯತ್‌ಗಳಿಗೆ ನಾವು ೯೫೦ ಕೋಟಿ ರೂಪಾಯಿಗಳನ್ನು ನಾವು ಕೊಡುತ್ತಿರುವ ಕಾರಣ ಅವರ ಜವಾಬ್ದಾರಿ ಸಹ ಹೆಚ್ಚು ಇದೆ. ಈ ಶಾಲೆಗಳನ್ನು ಅವರಿಗೆ ವಹಿಸಿದ ಮೇಲೆ ನಾವು ಕೇವಲ ಸೂಪರ್‌ವಿಜನ್ ಮಾಡುತ್ತೇವೆ. ಸೆಲೆಕ್ಷನ್ ಆಫ್ ಟೀಚರ್ಸ್ ಹಾಗೂ ಉಸ್ತುವಾರಿ ನಮಗೆ ಸೇರಿದ್ದು ಇದನ್ನು ಬಿಟ್ಟರೆ ಇನ್ನುಳಿದ ಅಧಿಕಾರವನ್ನು ಅವರಿಗೆ ಕೊಡುತ್ತೇವೆ.

(ಶ್ರೀ ಎಂ. ಪಿ. ಪ್ರಕಾಶ್ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇವೊತ್ತು ಶಾಲಾ ಕಟ್ಟಡಗಳು ಮತ್ತು ಪೀಠೋಪಕರಣಗಳು ಇಲ್ಲದಿದ್ದರೆ ನಾವು ಶಾಲೆಗಳನ್ನು ನಡೆಸುವುದು ಕಷ್ಟವಾಗುತ್ತದೆ. ಆದ್ದರಿಂದ ನಾವು ಇನ್ನು ಮುಂದೆಯೂ ಸಹ ಈ ಎನ್‌ಆರ್‌ಇಪಿ ಮತ್ತು ಆರ್‌ಎಲ್‌ಇಜಿಪಿ ಮೂಲಕ ಕಟ್ಟಡಗಳನ್ನು ಕಟ್ಟಿಸಲು ಪ್ರಯತ್ನ ಮಾಡುತ್ತೇವೆ. ಇದರ ಜೊತೆಗೆ ಇವುಗಳ ಗುಣಮಟ್ಟ ಸಹ ಸರಿಯಾಗಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಇದು ಬಹಳ ದಿವಸಗಳಿಂದ ಬೆಳೆದುಕೊಂಡು ಬಂದಿದೆ. ಇದನ್ನು ಒಮ್ಮೆಲೆ ಸರಿಮಾಡುವುದು ಕಷ್ಟವಿದೆ. ಎಲ್ಲಾ ಶಾಲೆಗಳಿಗೂ ವ್ಯವಸ್ಥಿತವಾದ ಶಾಲಾ ಕಟ್ಟಡಗಳು, ಪುಸ್ತಕ ಭಂಡಾರಗಳು ಹಾಗೂ ಉಪಾಧ್ಯಾಯರುಗಳು ಇರಬೇಕಾಗುತ್ತದೆ. ಉಪಾಧ್ಯಾಯರುಗಳನ್ನು ನೇಮಕ ಮಾಡುವುದರ ಜೊತೆಗೆ ಅವರಿಗೆ ಸರಿಯಾದ ತರಬೇತಿಯನ್ನು ಸಹ ಕೊಡಬೇಕಾಗುತ್ತದೆ. ಈ ತರಬೇತಿ ಕೊಡುವ ಬಗ್ಗೆ ನಮಗೆ ಎನ್. ಸಿ. ಇ. ಆರ್. ಟಿ. ನವರು ಸೂಕ್ತ ಆದೇಶ ಕೊಟ್ಟಿದ್ದಾರೆ. ಇವರಿಗೆ ಸರಿಯಾದ ತರಬೇತಿ ಕೊಟ್ಟರೆ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಪಾಠಪ್ರವಚನಗಳನ್ನು ಮಾಡುತ್ತಾರೆಂದು ಅವರು ನಮಗೆ ಆದೇಶ ಕೊಟ್ಟಿರುವುದರಿಂದ ನಾವು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ. ನಮ್ಮಲ್ಲಿ ಕೊರತೆ ಇರುವ ಉಪಾಧ್ಯಾಯರುಗಳನ್ನು ನೇಮಕ ಮಾಡಲು ನಾವು ಕಳೆದ ನವೆಂಬರ್ ತಿಂಗಳಿನಲ್ಲಿಯೇ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೆವು. ಈ ಬಗ್ಗೆ ಅರ್ಜಿಗಳನ್ನು ಸಹ ಕರೆದಿದ್ದೆವು.

ಈ ಮಧ್ಯೆ ಏನಾಯಿತು ಅಂದರೆ ವೆಂಕಟಸ್ವಾಮಿ ಕಮಿಷನ್ ರಿಪೋರ್ಟ್ ಬಂತು ಈ ವೆಂಕಟಸ್ವಾಮಿ ರಿಪೋರ್ಟ್ ರಿಜೆಕ್ಟ್ ಆದಮೇಲೆ ಇವತ್ತು ಮತ್ತೆ ರೋಸ್ಟರ್ ಸಿಸ್ಟಂ ಬದಲಾವಣೆ ಆಯಿತು. ಈ ರೋಸ್ಟರ್ ಸಿಸ್ಟಂ ಬದಲಾವಣೆಯಾಗಿ ಇದಕ್ಕೆ ೩-೪ ತಿಂಗಳು ತೆಗೆದುಕೊಂಡಿತು. ಈಗ ಉಪಾಧ್ಯಾಯರು ಬೇಕು. ಈಗ ಅಕಸ್ಮಾತ್ ಕಟ್ಟಡ ಇಲ್ಲದೇ ಹೋದರೆ ದೇವಸ್ಥಾನದಲ್ಲಾದರೂ ಪಾಠ ಮಾಡಬಹುದು ಆದರೆ ಉಪಾಧ್ಯಾಯರು ಮಾತ್ರ ಬೇಕಾಗುತ್ತದೆ. ಉಪಾಧ್ಯಾಯರ ಕೊರತೆಗೋಸ್ಕರ ಮೊನ್ನೆ ತಾನೇ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ ರಜಾ ಮುಗಿಯುವುದರೊಳಗಾಗಿ ಈಗ ಇರತಕ್ಕ ವೆಕೆನ್ಸಿಯನ್ನು ಫಿಲಪ್ ಮಾಡಬೇಕು ಎಂದು ಈಗ ೮೦೦೦ ಉಪಾಧ್ಯಾಯರು ಆಡಿಷನಲ್ ಹ್ಯಾಂಡ್ಸ್ ನಮಗೆ ಬೇಕಾಗಿದೆ. ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಇದನ್ನು ಕಳುಹಿಸಿ, ಸರ್ಕಾರದ ಮುಂದೆ ತಂದು ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ನಮ್ಮಲ್ಲಿ ಅನೇಕ ಕಡೆ ಹೇಳುತ್ತಿದ್ದಾರೆ. ಒಂದು ಕಡೆ ಹೇಳಿದರು ಬಹಳಷ್ಟು ಹುಡುಗರಿದ್ದರೂ ಉಪಾಧ್ಯಾಯರು ಇಬ್ಬರೇ ಇದ್ದಾರೆ ಎಂದು ಈ ಕೊರತೆಯನ್ನು ತುಂಬುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಆಮೇಲೆ ವಯಸ್ಕರ ಶಿಕ್ಷಣದ ಬಗ್ಗೆ...

ಶ್ರೀ ಡಿ. ಎ. ಚಿನ್ನಪ್ಪ.—೪೦ ಸ್ಟೂಡೆಂಟ್ಸ್‌ಗೆ ಒಬ್ಬ ಟೀಚರನ್ನು ಕೊಡುತ್ತೀರ ?

ಶ್ರೀ ಡಿ. ಮಂಜುನಾಥ್.—ಅದನ್ನು ಮಾಡೋಣ. ವಯಸ್ಕರ ಶಿಕ್ಷಣದ ಬಗ್ಗೆ ಸರ್ವೇಸಾಮಾನ್ಯವಾಗಿ ಎಲ್ಲ ಸದಸ್ಯರೂ ಮಾಡಿದ ಟೀಕೆಗೆ ಉತ್ತರ ಹೇಳಿ ಆಮೇಲೆ ಇತರ ಸದಸ್ಯರಿಗೆ ನಾನು ಉತ್ತರ ಕೊಡುತ್ತೇನೆ. ಎಲ್ಲಾ ಸದಸ್ಯರೂ ಈ ಬಗ್ಗೆ ಟೀಕೆ ಮಾಡಿದ್ದಾರೆ. ಅದನ್ನು ನಾನು ಈಗ ಪ್ರಸ್ತಾಪ ಮಾಡುತ್ತಿದ್ದೇನೆ. ವಯಸ್ಕರ ಶಿಕ್ಷಣದ ಬಗ್ಗೆ ದೊಡ್ಡ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಕೇಂದ್ರ ಸರ್ಕಾರದ ಹಣ ಬರುತ್ತದೆ. ಇದರ ಜೊತೆಗೆ ೪೦ ವರ್ಷಗಳಿಂದ ವಯಸ್ಕರ ಶಿಕ್ಷಣ ಸಮಿತಿ ಮೈಸೂರಿನಲ್ಲಿದೆ. ಅಲ್ಲಿ ನಡೆಯುತ್ತಿದೆ. ನಮ್ಮಲ್ಲಿ ೨೫ ಪ್ರಾಜೆಕ್ಟ್ ಮಾಡಿದೆ. ಅದರಲ್ಲಿ ಒಂದು ಪ್ರಾಜೆಕ್ಟ್‌ಗೆ ಸುಮಾರು ೩೦೦ ಸೆಂಟರ್ಸ್ ಇದೆ. ಇದಕ್ಕೆ ನಮ್ಮ ಅಧಿಕಾರಿಗಳಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ, ಈಗ ೭೫೦ ಸೆಂಟರ್ಸ್ ಆಗುತ್ತದೆ ೩೦೦ ಸೆಂಟರ್ಸ್ ಒಂದು ಪ್ರಾಜೆಕ್ಟ್‌ಗೆ, ಅಂಥಾದ್ದು ೨೫ ಪ್ರಾಜೆಕ್ಟ್ ಇದೆ. ಈಗ ನಾವು ಏನು ಹಣ ಕೊಡುತ್ತಿದ್ದೇವೆ ಅದು ಸಾಲದು ಎಂದು ಸದಸ್ಯರು ಹೇಳುತ್ತಾ ಇದ್ದಾರೆ. ಕೆಲವು ಕಡೆ ೫೦ ರೂಪಾಯಿ ಕೆಲವು ಕಡೆ ೩೦ ರೂಪಾಯಿ ಕೊಡುತ್ತಾ ಇದ್ದೇವೆ. ಇದಕ್ಕೆ ಅನೇಕ ತೊಂದರೆಗಳಿವೆ. ಈ ಶಾಲೆಗಳಿಗೆ ಸಾಯಂಕಾಲದ ಹೊತ್ತು ಜನ ಬರುತ್ತಾ ಇಲ್ಲ ಎನ್ನುವ ಮಾತು ಬಂತು. ಇದಕ್ಕೆ ನಾನು ಹೆಚ್ಚು ಪ್ರಮುಖ ಪಾತ್ರವನ್ನು ಕೊಟ್ಟಿದ್ದೇನೆ ಸ್ವಾತಂತ್ರ್ಯ ಪೂರ್ವದಲ್ಲಿ ಏನು ಪರಿಸ್ಥಿತಿ ಇತ್ತೋ ಇವತ್ತಿಗೂ ಅದೇ ಇದೆ. ಸ್ವಾತಂತ್ರ ಪೂರ್ವದಲ್ಲಿ ಸಾಕ್ಷರತೆ ೩೭ ಪರ್ಸೆಂಟ್ ಇದ್ದರೆ ಇವತ್ತೂ ಅಷ್ಟೆ ಇದೆ, ಅದನ್ನು ಹೆಚ್ಚಿಗೆ ಮಾಡಲಿಕ್ಕೆ ಆಗಲಿಲ್ಲ. ಅನಕ್ಷರತೆಯನ್ನು ಹೋಗಲಾಡಿಸಲಿಕ್ಕೆ ಆಗಿಲ್ಲ. ಅದಕ್ಕೋಸ್ಕರ ಈ ಒಂದು ಯೋಜನೆಯನ್ನು ನಾವು ಜಾರಿಗೆ ತಂದಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಸ್ವಲ್ಪ ಹೆಚ್ಚಾಗಿದೆ ಎಂದು ಹೇಳಿ.

ಶ್ರೀ ಡಿ. ಮಂಜುನಾಥ್.—ಏನೂ ಬದಲಾವಣೆಯಾಗಿಲ್ಲ, ಪರಿಸ್ಥಿತಿ ಹಾಗೆಯೇ ಇದೆ. ನಮ್ಮ ರಾಜ್ಯದಲ್ಲಿ ೧೯೭೮-೭೯ರಲ್ಲಿ ಇದಕ್ಕೆ ಒಂದು ಪ್ರತ್ಯೇಕವಾದ ನಿರ್ದೇಶನಾಲಯ, ಡೈರೆಕ್ಟರೇಟ್ ಆಫ್ ಅಡಲ್ಟ್ ಎಜುಕೇಷನ್ ಎಂದು ಮಾಡಿದ್ದೇವೆ. ಇದರ ಜೊತೆಗೆ ಅಡಲ್ಟ್ ಎಜುಕೇಷನ್ ಕೌನ್ಸಿಲ್ ಇದೆ. ಇದಕ್ಕೆ ಕೇಂದ್ರ ಸರ್ಕಾರದ ಹಣ ಬರುತ್ತದೆ. ಇದರ ಜೊತೆಗೆ ರಾಜ್ಯ ಸರ್ಕಾರವೂ ಹಣವನ್ನು ಖರ್ಚು ಮಾಡುತ್ತದೆ. ಇಡೀ ರಾಷ್ಟ್ರದಲ್ಲಿ ಅಕ್ಷರಸೇನೆ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ಮಾಡಿದ್ದೇವೆ. ಈಗಾಗಲೇ ೮ ಡಿಸ್ಟ್ರಿಕ್ಟ್‌ನಲ್ಲಿ ಅಕ್ಷರಸೇನೆ ಯೋಜನೆಯು ಕೆಲಸ ನಡೆಯುತ್ತಿದೆ. ಈ ಬಗ್ಗೆ ನಾನು ಅನೇಕ ಕಡೆ ಹೋಗಿದ್ದೇನೆ. ವಿಸಿಟ್ ಕೊಟ್ಟಿದ್ದೇನೆ. ದುರದೃಷ್ಟವಶಾತ್ ಜನತೆಯಲ್ಲಿ ಕಲಿಯಬೇಕು ಎನ್ನುವ ಮನೋಭಾವ ಇಲ್ಲ. ಅನೇಕ ಕಡೆ ಜನ ಬರದೆ ಸೆಂಟರ್‌ಗಳನ್ನು ಮುಚ್ಚುವ ಪರಿಸ್ಥಿತಿ ಇದೆ. ಕೇರಳದ ಒಬ್ಬ ಸ್ನೇಹಿತ ಮಂತ್ರಿಯನ್ನು ನಾನು ಕೇಳಿದೆ. ಅಲ್ಲಿ ೮೩ ಪರ್ಸೆಂಟ್ ಸಾಕ್ಷರತೆ ಇದೆ. ಅಲ್ಲಿ ಜನತೆಗೆ ಜನಜನಿತವಾಗಿ ನಾವು ಕಲಿಯಬೇಕು, ಅಕ್ಷರಸ್ಥರಾಗಬೇಕು ಎಂಬ ಮನೋಭಾವ ಇದೆ. ನಾವು ಈಗ ಕೊಟ್ಟಿರುವ ಅಂಕಿಅಂಶಗಳು ಕರೆಕ್ಟಾಗಿದೆ ಎಂದು ಹೇಳುವುದಿಲ್ಲ. ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ಅನೇಕ ಕಡೆ ಜನರಿಗೆ ಸೆಂಟರ್ಸ್‌ಗೆ ಬಂದು ಕಲಿಯುವ ಆಸಕ್ತಿ ಇಲ್ಲ. ಸ್ಥಳೀಯವಾಗಿ ಅಧ್ಯಾಪಕರನ್ನು ನೇಮಕ ಮಾಡಿದರೂ ಕಲಿಯತಕ್ಕ ಆಸಕ್ತಿ ಇಲ್ಲ. ಇದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ಬೇರೆ ರೀತಿಯಲ್ಲಿ ಯೋಚನೆ ಮಾಡಬೇಕಾಗಿದೆ. ಇದರ ಜೊತೆಗೆ ಇವತ್ತು ನೀವೂ ಸಹ ಬೇರೆ ರೀತಿಯಲ್ಲಿ ಜನರಿಗೆ ಹೇಳಿಕೊಡಬೇಕು. ಅವರಿಗೆ ಆಸಕ್ತಿ ಹುಟ್ಟಿಸುವ ರೀತಿಯಲ್ಲಿ, ಸೆಂಟರ್‌ಗಳಲ್ಲಿ ಕುಳಿತುಕೊಳ್ಳುವ ರೀತಿಯಲ್ಲಿ ಮಾಡಿ ಇವುಗಳನ್ನು ವ್ಯವಸ್ಥಿತವಾಗಿ ನಡೆಸುವುದಕ್ಕೆ ಬೇರೆ ರೀತಿಯಲ್ಲಿ ಯೋಚನೆ ಮಾಡುತ್ತಿದ್ದೇವೆ. ಅದನ್ನು ಉತ್ತಮಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇಷ್ಟು ವಿಷಯವನ್ನು ಮಾತ್ರ ಮಾನ್ಯ ಶಾಸಕರಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಖಾಸಗಿ ಶಾಲೆಗಳ ಬಗ್ಗೆ ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಹೇಳಿದರು, ನಾನು ಕಾಲೇಜುಗಳ ಬಗ್ಗೆ ಹೇಳಲಿಕ್ಕೆ ಹೋಗುವುದಿಲ್ಲ ಪ್ರೈಮರಿ ಶಾಲೆಗಳ ಬಗ್ಗೆ ಹೇಳುತ್ತೇನೆ. ಇವೊತ್ತು ನಮ್ಮ ಸರ್ಕಾರಿ ಶಾಲೆಗಳಿಗಿಂತಲೂ ಖಾಸಗಿ ಶಾಲೆಗಳು ಜಾಸ್ತಿ ಇವೆ ಎಂದು ಮಾನ್ಯ ವೆಂಕಟರಾಮಯ್ಯನವರು ಹೇಳಿದರು ಆ ಮಾತನ್ನು ನಾನು ಒಪ್ಪುತ್ತೇನೆ ಈಗ ಏನಾಗಿದೆ, ಕೆಲವು ಕಡೆಗಳಲ್ಲಿ ನಾವು ಅನುದಾನ ಕೊಡುತ್ತಿಲ್ಲ. ಕೆಲವು ಕಡೆಗಳಲ್ಲಿ ಅನುದಾನ ಕೊಡುತ್ತಿದ್ದೇವೆ. ಕೆಲವು ಚೆನ್ನಾಗಿ ನಡೆಯುತ್ತಿವೆ. ಕ್ಯಾಪಿಟೇಷನ್ ಬಗ್ಗೆ ಈಗಾಗಲೇ ತೀರ್ಮಾನ ಮಾಡಿ ಇದನ್ನು ನಿಯಂತ್ರಣ ಮಾಡಬೇಕೆಂದು ಪ್ರಯತ್ನ ಮಾಡಿದ್ದೇವೆ. ಇದಕ್ಕೆ ಒಂದು ಮಸೂದೆಯನ್ನು ತಂದಿದ್ದು ಆಯಿತು. ಆ ಮಸೂದೆ ಈಗ ಕೇಂದ್ರಸರ್ಕಾರದ ಒಪ್ಪಿಗೆಗೆ ಹೋಗಿದೆ...

ಶ್ರೀ ಆರ್. ಎನ್. ನಾಯಕ್.—ಅದನ್ನು ಮಾಡಿಯೇ ಮಾಡುತ್ತೇವೆ ಎಂದು ಹೇಳಿ.

ಶ್ರೀ ಡಿ ಮಂಜುನಾಥ್.—ಈ ನಮ್ಮ ಮಸೂದೆ ಏನಿದೆ ಇದು ಈಗ ಕೇಂದ್ರ ಸರ್ಕಾರದ ಮುಂದೆ ಇದ್ದು, ಈಗ ರಾಷ್ಟ್ರಪತಿಯವರ ಒಪ್ಪಿಗೆಯಾಗಿ ಬರಬೇಕು, ಅದು ಬಂದಮೇಲೆ ಖಂಡಿತ ಮಾಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಡಿ. ಎ. ಚನ್ನಪ್ಪ.—ಖಾಸಗಿ ಸ್ಕೂಲುಗಳನ್ನು ನ್ಯಾಷನಲೈಸ್ ಮಾಡುವ ಬಗ್ಗೆ ಏನು ಹೇಳುತ್ತೀರಾ ?

ಶ್ರೀ ಡಿ. ಮಂಜುನಾಥ್.—ನಾನು ಈ ಬಗ್ಗೆ ಮೊದಲೇ ಹೇಳಿದ್ದೇನೆ, ಇದನ್ನು ಮಾಡಿದರೆ ನಾವು ಜನಗಳ ಮೇಲೆ ಟ್ಯಾಕ್ಸ್ ಹಾಕಬೇಕಾಗುತ್ತದೆ. ಜನರಿಂದ ದುಡ್ಡು ಬರಬೇಕು, ಅವರು ಟ್ಯಾಕ್ಸ್ ಕೊಟ್ಟರೂ ಸಹ ಇವೊತ್ತು ನಾವು ವಿದ್ಯೆಯನ್ನು ಕೊಡಲಿಕ್ಕೆ ಕಷ್ಟವಾಗುತ್ತದೆ. ನ್ಯಾಷನಲೈಸ್ ಮಾಡಿದರೆ ಇನ್ನೂ ಕಷ್ಟ ಇದೆ. ಇವೊತ್ತು ತಾವು ಖಾಸಗೀ ಶಾಲೆಗಳನ್ನು ನಿಯಂತ್ರಣ ಮಾಡಬೇಕೆಂದು ಏನು ಹೇಳುತ್ತೀರಿ ಅದನ್ನು ನಾನು ಒಪ್ಪುತ್ತೇನೆ. ಮಾನ್ಯ ಸದಸ್ಯರು ಇದರಲ್ಲಿ ಬಹಳ ಅವ್ಯವಹಾರ ನಡೆಯುತ್ತಿದೆ ಎಂದು ಹೇಳಿದರು ನಾನು ಬಹಳ ಬಿಗಿಮುಷ್ಟಿಯಿಂದ ಹಿಡಿದು ತಪ್ಪು ಮಾಡಿದವರನ್ನು ವಜಾ ಮಾಡುತ್ತಿದ್ದೇನೆ. ರೋಸ್ಟರ್ ಇಲ್ಲದೇ ಇದ್ದರೆ ಅಪ್ರೂವ್ ಮಾಡುವುದಿಲ್ಲ. ಈ ಖಾಸಗಿ ಶಾಲೆಗಳಲ್ಲಿರುವ ದುರ್ವ್ಯವಹಾರಗಳನ್ನು ತಪ್ಪಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಬಹುತೇಕವಾಗಿ ಆ ಮಸೂದೆ ಏನಾದರೂ ಒಪ್ಪಿಗೆಯಾಗಿ ಬಂದರೆ ಇನ್ನೂ ನಿಯಂತ್ರಣ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಕೇಂದ್ರಮಂತ್ರಿಗಳು ಸಹ ಇದೇ ರೀತಿ ಮಸೂದೆ ತರುವ ವಿಚಾರ ಹೇಳಿದ್ದಾರೆ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರಕ್ಕೆ ನಲವತ್ತು ಸೀಟು ಕೊಡುತ್ತೇವೆ, ಮ್ಯಾನೇಜ್‌ಮೆಂಟಿಗೆ ಅರವತ್ತು ಸೀಟು ಮಾಡಿ ಕೊಳ್ಳುತ್ತೇವೆ ಎನ್ನುವ ವಿಚಾರ ಏನಿತ್ತು ಅದು ಕೋರ್ಟಿಗೆ ಹೋಗಿ ಪೆಂಡಿಂಗ್ ಇದೆ. ಇನ್ನೂ ತೀರ್ಮಾನ ಆಗಿಲ್ಲ. ಇನ್ನು ಮೆಡಿಕಲ್ ಕಾಲೇಜಿನ ಬಗ್ಗೆ ಮಾನ್ಯ ಕೃಷ್ಣಪ್ಪನವರು ಉತ್ತರ ಕೊಡುವಾಗ ಹೇಳುತ್ತಾರೆ. ಇಂಜಿನಿಯರಿಂಗ್ ಕಾಲೇಜುಗಳ ಬಗ್ಗೆ ಹೇಳಬೇಕೆಂದರೆ, ಮಾನ್ಯ ಸದಸ್ಯರು ಕೇಳಿದವರಿಗೆಲ್ಲಾ ಇಂಜಿನಿಯರಿಂಗ್ ಕಾಲೇಜುಗಳನ್ನು ಕೊಡುತ್ತಿದ್ದೇವೆಂದು ಹೇಳಿದರು. ನಾವು ಕೊಡಬೇಕಾದರೂ ಒಂದು ನಿಯಮ ಇದೆ, ನಾವು ಬಹಳ ಕಟ್ಟುನಿಟ್ಟಾಗಿ ವಿಶ್ವವಿದ್ಯಾನಿಲಯದಿಂದ ರೆಕಮೆಂಡ್ ಆಗಿ ಬಂದವರಿಗೆ ಅವಶ್ಯಕತೆಯನ್ನನುಸರಿಸಿ ಕೊಟ್ಟಿದ್ದೇವೆ ಇನ್ನು ಮೇಲೆ ಯಾರೂ ಸಹ ಇಂಜಿನಿಯರಿಂಗ್ ಕಾಲೇಜು ಮಾಡಲಿಕ್ಕೆ ಹೋಗುವುದಿಲ್ಲ. ಇವೊತ್ತಿನದಿವಸ ಮಹಾರಾಷ್ಟ್ರದಲ್ಲಿ, ಆಂಧ್ರದಲ್ಲಿ, ತಮಿಳುನಾಡಿನಲ್ಲಿ ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆದಿದ್ದಾರೆ. ಮೊದಲು ನಮ್ಮಲ್ಲಿ ಹೊರಗಡೆಯಿಂದ ವಿದ್ಯಾರ್ಥಿಗಳು ಬರುತ್ತಿದ್ದರು ಎಂದು ಮಾತುತ್ತಿದ್ದರು. ಆದರೆ ಇವೊತ್ತಿನ ದಿವಸ ಆ ಪರಿಸ್ಥಿತಿ ಇಲ್ಲ.

ಶ್ರೀ ಪಟಪಕ್ಕಿ ರತ್ನಾಕರ್.— ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳು ನಿಮಗೆ ಗೊತ್ತಿಲ್ಲದೇ ಮಂಜೂರಾಗುತ್ತವೆ.

ಶ್ರೀ ಡಿ. ಮಂಜುನಾಥ್.—ಆ ರೀತಿ ಆಗುವುದಿಲ್ಲ. ಮೆಡಿಕಲ್ ಕಾಲೇಜಿನ ಬಗ್ಗೆ ಮಾನ್ಯ ಕೃಷ್ಣಪ್ಪನವರು ಅವರ ಡಿಮ್ಯಾಂಡ್ ಬಂದಾಗ ಉತ್ತರ ಕೊಡುತ್ತಾರೆ. ಇವೊತ್ತು ಇಂಜಿನಿಯರಿಂಗ್ ಕಾಲೇಜ್ ಬಗ್ಗೆ ಹೇಳಬೇಕೆಂದರೆ, ಈಗ ಹೊರ ರಾಜ್ಯಗಳಲ್ಲೆಲ್ಲಾ ಖಾಸಗಿ ಕಾಲೇಜು ಆಗಿರುವುದರಿಂದ ಇಲ್ಲಿ ಮೊದಲಿನ ಪರಿಸ್ಥಿತಿ ಇಲ್ಲ. ಹಿಂದೆ ಏನೋ ಒಂದು ರೀತಿಯಲ್ಲಿ ಸರಿಮಾಡಿಕೊಂಡರು.

ಶ್ರೀ ಆರ್. ಎನ್. ನಾಯಕ್.—ಇಂಜಿನಿಯರಿಂಗ್ ಕಾಲೇಜಿಗೆ ಹುಡುಗರು ಬರುವುದಿಲ್ಲವೇ ?

ಶ್ರೀ ಡಿ ಮಂಜುನಾಥ್.—ಮುಂದಿನ ಪರಿಸ್ಥಿತಿಯನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಕೆಲವು ಕಾಲೇಜುಗಳಲ್ಲಿ ಇನ್‌ಟೇಕ್ ಕೊಟ್ಟಿದ್ದೂ ತುಂಬಿಲ್ಲ. ಹೊರಗಡೆಯಿಂದ ಸ್ಟೂಡೆಂಟ್ಸ್ ಬರುವುದಿಲ್ಲ. ಇಲ್ಲಿ ಪಾಸ್ ಆದವರಿಗೆ ಇಷ್ಟು ಪರ್‌ಸೆಂಟ್ ಬರಬೇಕೆಂದು ಮಾಡಿದ್ದೇವೆ. ಈ ಕಾರಣದಿಂದ ಬಹುಶಃ ಇಂಜಿನಿಯರಿಂಗ್ ಕಾಲೇಜುಗಳಿಗೆ ಅಷ್ಟು ಒತ್ತಾಯ ಬರಲಾರದು. ಅದರ ಜೊತೆಗೆ ಕೇಂದ್ರಸರ್ಕಾರ ಸಹ ಇದರ ಬಗ್ಗೆ ಬಿಲ್ ತರುತ್ತಿದ್ದೇವೆಂದು ಮಾನ್ಯ ನರಸಿಂಹರಾವ್ ರವರು ಹೇಳಿದರು. ಕ್ಯಾಪಿಟೇಷನ್ ಫೀ ನಿಲ್ಲಿಸುವುದಕ್ಕೆ ಬಿಲ್ ತರುತ್ತಿದ್ದೇವೆಂದು ನನ್ನ ಜೊತೆಯಲ್ಲಿ ಮಾತನಾಡುವಾಗ ಹೇಳಿದರು. ಅದನ್ನು ತಂದರೆ ನಮಗೆ ತಾಪತ್ರಯವಿಲ್ಲ.

ಶ್ರೀ ಆರ್. ಎನ್. ನಾಯಕ್.—೧೯೮೦ರ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಎಸ್.ಎಸ್.ಎಲ್.ಸಿ. ಪಾಸಾದವರಿಗೆಲ್ಲ ಕೆಲಸ ಕೊಡುತ್ತೇವೆಂದು ಹೇಳಿದ್ದೀರಿ. ನೀವು ಮಾಡತಕ್ಕ ಆರ್ಡರ್‌ಗಳೆಲ್ಲ ಕೋರ್ಟಿನಲ್ಲಿ ಬಿದ್ದು ಹೋಗುತ್ತವೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ವಕೀಲರಿಗೆ ಕೆಲಸ ಬೇಕಲ್ಲ ಅದಕ್ಕೋಸ್ಕರ,

ಶ್ರೀ ಡಿ. ಮಂಜುನಾಥ್.—ಮತ್ತೊಂದು ವಿಚಾರವನ್ನು ಅನೇಕ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಕಳೆದ ವರ್ಷದಿಂದ ನಾವು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ ಬಿಗಿ ಮಾಡಿದ್ದೇವೆ. ಮಾನ್ಯ ಸದಸ್ಯರಾದ ಚಿನ್ನಪ್ಪನವರು ಪರೀಕ್ಷೆಗೆ ಕೂಡದೆ ಕೆಲವರು ಪಾಸ್ ಆಗಿದ್ದಾರೆಂದು ಹೇಳಿದರು. ನಾನು ಅದರ ಬಗ್ಗೆ ತನಿಖೆ ಮಾಡಿಸಲು ಅವರು ನಮಗೆ ವಿವರ ಒದಗಿಸಬೇಕು.

ಶ್ರೀ ಆರ್. ಎನ್. ನಾಯಕ್.— ಶಾಸಕರಾಗದೆ ಹೇಗೆ ಮಂತ್ರಿಗಳಾಗುತ್ತಾರೋ ಅದೇರೀತಿ ಪರೀಕ್ಷೆಗೆ ಕೂಡದೇ ಪಾಸ್ ಆಗಬಹುದು.

ಶ್ರೀ ಡಿ. ಮಂಜುನಾಥ್.—ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಕಳೆದ ವರ್ಷ ಬಿಗಿ ಕ್ರಮ ತೆಗೆದುಕೊಂಡಿದ್ದರಿಂದ ಲೀಕೇಜ್ ಮತ್ತು ಅವ್ಯವಹಾರ ನಡೆದಿಲ್ಲ. ಫಲಿತಾಂಶ ಸಹ ಜಾಗ್ರತೆ ಬಂತು. ವಿದ್ಯಾರ್ಥಿಗಳು ಕಡಿಮೆ ಸಂಖ್ಯೆಯಲ್ಲಿ ಪಾಸ್ ಆಗಿದ್ದಾರೆ. ನಾನು ಈಗ ಅದರ ಬಗ್ಗೆ ಏನೂ ಹೇಳುವುದಿಲ್ಲ. ಆದರೆ ಅವ್ಯವಹಾರ ಏನು ನಡೆಯುತ್ತಿದೆ, ಮಾಲ್‌ಪ್ರಾಕ್ಟೀಸ್ ಏನು ನಡೆಯುತ್ತಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದರು, ಅದನ್ನು ನಾವು ತಡೆಗಟ್ಟುತ್ತೇವೆ. ಎಸ್ಎಸ್ಎಲ್‌ಸಿ ಪರೀಕ್ಷೆಗೆ ಲಕ್ಷಾಂತರ ವಿದ್ಯಾರ್ಥಿಗಳು ಕುಳಿತಿದ್ದರೂ ನಾವು ನಿಯಂತ್ರಣ ಮಾಡಿದ್ದೇವೆ. ಮೌಲ್ಯಮಾಪನದ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ನಾನು ಅದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಪರೀಕ್ಷೆಗಳನ್ನು ನಡೆಸಬೇಕಾದರೆ ನಮ್ಮ ನಿಯಮಗಳ ಪ್ರಕಾರ ನೋ ಲಾಸ್ ನೋ ಪ್ರಾಫಿಟ್‌ನಲ್ಲಿ ನಡೆಸಬೇಕು. ಲಾಭವೂ ಇಲ್ಲ, ನಷ್ಟವೂ ಇಲ್ಲದಂತೆ ನಡೆಸಬೇಕು. ಎಲ್ಲಾ ವಿದ್ಯಾರ್ಥಿಗಳಿಂದ ಫೀ ರೂಪದಲ್ಲಿ ಸುಮಾರು ೧½ ಕೋಟಿ ರೂಪಾಯಿಗಳು ಬರುತ್ತದೆ. ನಮಗೆ ಖರ್ಚಾಗತಕ್ಕದ್ದು ೬ ಕೋಟಿ ರೂಪಾಯಿಗಳು, ಉಪಾಧ್ಯಾಯರುಗಳ ಬಗ್ಗೆ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಬೇರೆ ರಾಜ್ಯಗಳವರಿಗಿಂತ ನಾವು ಯಾವುದರಲ್ಲಿಯೂ ಕಡಿಮೆ ಕೊಡುತ್ತಿಲ್ಲ. ಪರೀಕ್ಷೆಗಳಿಗಾಗಿ ಎಷ್ಟು ಹಣ ಖರ್ಚಾಗುತ್ತಿದೆ, ಉಪಾಧ್ಯಾಯರುಗಳಿಗೆ ಎಷ್ಟು ಹಣ ಖರ್ಚಾಗುತ್ತಿದೆ ಅದರ ಬಗ್ಗೆ ಶಿಕ್ಷಕರ ಸಮ್ಮೇಳನದಲ್ಲಿ ಹೇಳಿದ್ದೇನೆ. ಹೀಗೆ ಖರ್ಚು ಮಾಡುತ್ತಾ, ಮೌಲ್ಯಮಾಪನವನ್ನು ಜಾಸ್ತಿ ಕೊಡುತ್ತಾ ಹೋದರೆ ವಿದ್ಯಾರ್ಥಿಗಳಿಗೆ ಶುಲ್ಕ ಜಾಸ್ತಿ ಹಾಕಬೇಕಾಗುತ್ತದೆ. ವಿದ್ಯಾರ್ಥಿಗಳಿಂದ ಹೆಚ್ಚು ಶುಲ್ಕವನ್ನು ವಸೂಲಿ ಮಾಡತಕ್ಕದ್ದು ಸರಿಯಲ್ಲ. ಇವತ್ತಿನ ದಿವಸ ಪರೀಕ್ಷೆಗಳನ್ನು ನಡೆಸುವುದಕ್ಕೆ ಮೌಲ್ಯಮಾಪನದ ಬಗ್ಗೆ ಒಂದು ಕಟ್ಟುನಿಟ್ಟಾದ ನಿಲುವನ್ನು ತಾಳಿದ್ದೇವೆ ಜೊತೆಗೆ ಅವ್ಯವಹಾರಗಳನ್ನು ತಡೆಗಟ್ಟುವುದಕ್ಕೆ ಕ್ರಮವನ್ನು ತೆಗೆದುಕೊಂಡಿದ್ದೇವೆ, ಅದಕ್ಕಾಗಿ ಒಂದು ಪ್ರತ್ಯೇಕ ದಳವನ್ನು ನೇಮಕ ಮಾಡಿ ಕೆಲವು ಕಡೆಗಳಲ್ಲಿ ಇನ್ಸ್‌ಪೆಕ್ಷನ್ ಮಾಡಬೇಕೆಂದು ಹೇಳಿದ್ದೇನೆ. ಪ್ರಶ್ನೆ ಪತ್ರಿಕೆಗಳನ್ನು ಪೊಲೀಸ್ ಬಂದೋಬಸ್ತಿನಲ್ಲಿ ಇಡುತ್ತಿದ್ದೇವೆ. ಪ್ರಶ್ನೆ ಪತ್ರಿಕೆಗಳನ್ನು ಹೆಡ್‌ಮಾಸ್ಟರ್ ಅಥವಾ ಜೂನಿಯರ್ ಕಾಲೇಜ್ ಪ್ರಿನ್ಸಿಪಾಲ್‌ರವರ ಕೈಗೆ ಕೊಡುವುದಿಲ್ಲ. ತಾಲ್ಲೂಕು ಖಜಾನೆಗಳಲ್ಲಿ ಪೊಲೀಸ್ ಸ್ಟೇಶನ್‌ಗಳಲ್ಲಿ ಇಟ್ಟು ಪರೀಕ್ಷೆಯ ದಿವಸ ತರಬೇಕೆಂದು ಮಾಡಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ದಯವಿಟ್ಟು ಪೊಲೀಸ್ ಸ್ಟೇಶನ್‌ಗಳಲ್ಲಿ ಮಾತ್ರ ಇಡಬೇಡಿ ಖಜಾನೆಗಳಲ್ಲಿ ಇಡಿ.

ಶ್ರೀ ಡಿ. ಮಂಜುನಾಥ್.—ಈಗ ಯಾವ ರೀತಿಯ ಅವ್ಯವಹಾರಗಳು ಆಗಿಲ್ಲ.

ಶ್ರೀ ಯು. ಭೂಪತಿ.—ಪ್ರಶ್ನೆ ಪತ್ರಿಕೆಗಳು ಪ್ರಿಂಟಿಂಗ್ ಪ್ರೆಸ್‌ನಿಂದ ಹೊರಗಡೆ ಹೋಗುತ್ತವೆ ಅದಕ್ಕೆ ಏನು ಮಾಡುತ್ತಿದ್ದೀರಿ ?

5–30 ಪಿಎಂ.

ಕಳೆದ ವರ್ಷದಿಂದ ಇಂಥ ಪ್ರಕರಣಗಳು ನಮ್ಮ ಗಮನಕ್ಕೆ ಯಾವುದೂ ಬಂದಿಲ್ಲ. ಏಕೆಂದರೆ ಇದರ ಬಗ್ಗೆ ನಾವು ಬಹಳ ಬಿಗಿಯಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇತ್ತೀಚೆಗೆ ಗ್ರಾಮ್ಯ

ಕ್ಕೊಂದು ಪಾಠಶಾಲೆ ಕೊಡಬೇಕೆಂಬ ಧ್ಯೇಯವನ್ನು ನಾವು ಇಟ್ಟುಕೊಂಡಿರುವುದರಿಂದ ಶಾಲೆಗಳ ಸಂಖ್ಯೆಯೂ ಜಾಸ್ತಿಯಾಗುತ್ತಾ ಬರುತ್ತಿವೆ. ಈ ಎಲ್ಲಾ ಶಾಲೆಗಳನ್ನೂ (ಅವರವರ ಕಕ್ಷೆಯಲ್ಲಿ ಬರತಕ್ಕ) ಅವರು ಖುದ್ದಾಗಿ ಹೋಗಿ ಬರಬೇಕಾದರೆ ಬಹಳ ಸಮಯ ಹಿಡಿಯುತ್ತದೆ. ಒಬ್ಬ ಎ.ಇ.ಒ, ಈ ಎಲ್ಲಾ ಶಾಲೆಗಳನ್ನೂ ಭೇಟಿ ನೀಡಲು ಸಾಧ್ಯವಿಲ್ಲವಾದ್ದರಿಂದ ಒಂದೊಂದು ತಾಲೂಕಿಗೆ ಇಬ್ಬರು ಎ.ಇ.ಒ.ಗಳಂತೆ ಕೊಡಬೇಕೆಂದು ಮಾನ್ಯ ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಎ.ಇ.ಒ.ಗಳ ಕಷ್ಟ ಏನೆಂಬುದು ನನಗೂ ಗೊತ್ತಿದೆ. ತಮಗೆಲ್ಲಾ ಗೊತ್ತಿರುವಂತೆ ಬೇರೆ ಬೇರೆ ಇಲಾಖೆಗಳಲ್ಲಿ ತಾಲೂಕು ಮಟ್ಟದ ಅಧಿಕಾರಿಗಳಿಗೆ ವಾಹನಗಳನ್ನು ಕೊಟ್ಟಿದ್ದಾರೆ. ಈಗ ನಮ್ಮ ಇಲಾಖೆಯಲ್ಲಿ ೧೭೦ ಜನ ಎ.ಇ.ಒ.ಗಳಿದ್ದಾರೆ. ಇವರಿಗೆ ಪ್ರವಾಸ ಭತ್ಯ ತಿಂಗಳಿಗೆ ೧೦೦ ರೂಪಾಯಿ, ಮತ್ತು ಇನ್‌ಸ್ಪೆಕ್ಟರ್‌ಗಳಿಗೆ ತಿಂಗಳಿಗೆ ೫೦ ರೂ.ನಂತೆ ಇದುವರೆಗೂ ಕೊಡಲಾಗುತ್ತಿತ್ತು. ನಾನು ಸಚಿವನಾಗಿ ಅಧಿಕಾರವನ್ನು ವಹಿಸಿಕೊಂಡಮೇಲೆ ಇದನ್ನು ಯೋಚನೆ ಮಾಡಿ ಈ ನೂರು ರೂಪಾಯಿಯಲ್ಲಿ ಅವರು ಎಷ್ಟುಕಡೆಗೆ ಇನ್‌ಸ್ಪೆಕ್ಷನ್ ಮಾಡಲು ಹೋಗುವುದಕ್ಕೆ ಸಾಧ್ಯ, ಇದು ಸಾಕಾಗುವುದಿಲ್ಲ ಎಂದು ತಿಳಿದು ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ೪–೫ ಮೈಲಿಗೆ ಒಂದೊಂದು ಶಾಲೆಗಳಿರುತ್ತವೆ. ಅವುಗಳನ್ನೂ ಕೂಡ ನಿಮ್ಮ ಎ.ಇ.ಓ.ಗಳು ಇನ್‌ಸ್ಪೆಕ್ಟ್ ಮಾಡಿಕೊಂಡು ಬರಬೇಕೆಂದು ಮಾನ್ಯ ಸದಸ್ಯರಾದ ಇದಿನಬ್ಬನವರು ಹೇಳಿದ್ದಾರೆ. ನಮ್ಮ ಅಧಿಕಾರಿಗಳು ಅವನ್ನೂ ಸಹ ಹೋಗಿ ನೋಡಿಕೊಂಡು ಬರಬೇಕು...

ಶ್ರೀ ಆರ್. ಎನ್. ನಾಯಕ್.—ಸ್ವಾಮಿ. ನಿಮ್ಮ ಎ.ಇ.ಒ.ಗಳಿಗೆ ಕೆಲವು ಸೌಲಭ್ಯಗಳನ್ನು ಒದಗಿಸಬೇಕೆಂದು ಯೋಚನೆ ಮಾಡುತ್ತಿದ್ದೇನೆಂದು ತಾವು ಹೇಳಿದಿರಿ. ಮತ್ತು ೧೦೦ ರೂಪಾಯಿಗಳನ್ನೂ ಇನ್ನು ಹೆಚ್ಚು ಮಾಡುವ ವಿಚಾರವನ್ನು ಪರಿಶೀಲಿಸುತ್ತೇನೆಂದು ಹೇಳಿದಿರಿ...

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸೊಂಟಕ್ಕೆ ಒಂದು ಬೆಲ್ಟ್ ಹಾಕಿ ಕುರ್ಚಿಗೆ ಕಟ್ಟಿದರೆ ಬಹಳ ಒಳ್ಳೆಯದು.

ಶ್ರೀ ಡಿ. ಮಂಜುನಾಥ್.—ಅವರು ತಮ್ಮ ಕೆಲಸವನ್ನು ಚೆನ್ನಾಗಿ ಮಾಡಬೇಕಾದರೆ ನಾವೂ ಕೂಡ ಅವರ ತೊಂದರೆ ಏನು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಈಗ ಅವರಿಗೆ ಇರತಕ್ಕ ಸೌಲಭ್ಯಗಳು ಏನೇನಿವೆ ಅಷ್ಟೇ ಇದ್ದರೆ ಅದರಲ್ಲೇ ಅವರು ಚೆನ್ನಾಗಿ ಕೆಲಸ ಮಾಡಲು ಕಷ್ಟವಾಗುತ್ತದೆ. ಆದ್ದರಿಂದ ಅವರ ಕಷ್ಟವನ್ನು ಪರಿಹಾರ ಮಾಡುತ್ತೇನೆಂದು ನಾನು ಹೇಳಿದೆ,

ಮಾನ್ಯ ಅಧ್ಯಕ್ಷರೆ, ಇನ್ನು ಕಡ್ಡಾಯ ಶಿಕ್ಷಣದ ಬಗ್ಗೆ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಮ್ಮ ಸಮಾಜದಲ್ಲಿ ಪ್ರತಿಯೊಬ್ಬರಲ್ಲೂ ಒಂದು ರೀತಿಯ ಪ್ರಜ್ಞೆ ಮೂಡಿದೆ. ಪ್ರತಿಯೊಬ್ಬ ಹಳ್ಳಿಗಾಡಿನ ವ್ಯಕ್ತಿಯಿಂದ ಹಿಡಿದು ಎಲ್ಲರೂ ಕೂಡ ತಮ್ಮ ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳಿಸಬೇಕು, ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು, ಅವರ ಜೀವನ ಉತ್ತಮ ಆಗಿರುವಂತೆ ವ್ಯವಸ್ಥೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದಾರೆ. ತಮಗೆಲ್ಲಾ ಗೊತ್ತಿರುವಂತೆ ಕೆಲವು ತಂದೆತಾಯಿಗಳ ಮೇಲೆ ನಾವು ಕೇಸನ್ನು ಹಾಕಿದ್ದೆವು. ಅದು ಅಷ್ಟೊಂದು ಸಫಲ ಆಗಲಿಲ್ಲ. ನಮ್ಮ ಉದ್ದೇಶ ಏನೆಂದರೆ ವಿದ್ಯಾರ್ಥಿಗಳು ಡ್ರಾಪ್ ಔಟ್ ಆಗಬಾರದು, ಕೊನೆಯವರೆಗೂ ಮಕ್ಕಳು ಶಾಲೆಗಳಲ್ಲಿ ಉಳಿದುಕೊಳ್ಳಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ೭ ಅಂಶಗಳ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇವತ್ತು ಮಕ್ಕಳನ್ನು ಶಾಲೆಗಳಿಗೆ ದಾಖಲು ಮಾಡಿಸಿದರೆ, ಅವುಗಳು ಕೊನೆಯವರೆಗೂ ಬರುವಂತೆ ಆಸಕ್ತಿ ಹುಟ್ಟಿಸುವ ಸಲುವಾಗಿ ಉಚಿತವಾಗಿ ಪುಸ್ತಕ, ಸಮವಸ್ತ್ರಗಳನ್ನು ಕೊಡುತ್ತಿದ್ದೇವೆ. ಇದನ್ನು ನಾವು ಜಾರಿಗೆ ತಂದಮೇಲೆ ಶಾಲೆಗಳಲ್ಲಿ ಹಾಜರಾತಿ ಈ ವರ್ಷ ೨.೫ ಲಕ್ಷಕ್ಕೆ ಏರಿದೆ. ಡ್ರಾಪ್ ಔಟ್ಸ್ ಕಡಿಮೆಯಾಗಿದೆ. ರೈತರ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಅಲ್ಲಲ್ಲೇ ನಾನ್ ಫಾರ್ಮಲ್ ಶಾಲೆಗಳನ್ನು ನಾವು ನಡೆಸುತ್ತಿದ್ದೇವೆ. ಕೋಲಾರ, ಚಿತ್ರದುರ್ಗ, ಮಂಡ್ಯ, ಗುಲ್ಬರ್ಗಾ ಬಿಜಾಪುರ, ರಾಯಚೂರು, ಮೈಸೂರು ಮತ್ತು ಬೆಳಗಾಂ, ಈ ೮ ಜಿಲ್ಲೆಗಳಲ್ಲಿ ಸದ್ಯಕ್ಕೆ ಶಾಲೆಗಳನ್ನು ತೆರೆದಿದ್ದೇವೆ. ಆದರೆ ಅಲ್ಲಿನ ಪರಿಸ್ಥಿತಿಯಿಂದಾಗಿ ಇವು ಅಷ್ಟೊಂದು ಸಮರ್ಪಕವಾಗಿ ನಡೆಯುತ್ತಿಲ್ಲ. ಈ ಮಕ್ಕಳ ತಂದೆತಾಯಿಗಳು ರೈತರಾದ್ದರಿಂದ ಈ ಮಕ್ಕಳು ಅವರಿಗೆ ಕೆಲಸದ ಸಮಯದಲ್ಲಿ ಸಹಾಯ ಮಾಡಲು ಹೋಗುತ್ತಾರೆ. ಅಲ್ಲಿ ಸ್ವಲ್ಪಮಟ್ಟಿಗೆ ಡ್ರಾಪ್ ಔಟ್ಸ್ ಇದೆ.

ಏತಕ್ಕೆಂದರೆ ಬೆಳಿಗ್ಗೆ ಮಕ್ಕಳು ಶಾಲೆಗೆ ಬರಬೇಕೆಂದರೆ ಬಹಳ ಕಷ್ಟವಾಗುತ್ತದೆ. ಏಳೂವರೆ ಗಂಟೆಗೆ ಬರುವುದಿಲ್ಲ. ಅದೇ ರೀತಿಯಲ್ಲಿ ಸಂಜೆಯೂ ಕೂಡ ಬರುವುದಿಲ್ಲ. ಆದ್ದರಿಂದ ಇದು ಒಂದು ಕಷ್ಟವಾದ ಸಮಸ್ಯೆಯಾಗಿದೆ. ಆದರೂ ಸಹ ಸರ್ಕಾರದಿಂದ ಪ್ರಯತ್ನ ನಡೆಯುತ್ತಲೇ ಇದೆ. ಇದರ ಬಗ್ಗೆ ಮಾನ್ಯ ಸದಸ್ಯರು ಸರಿಯಾಗಿ ನಡೆಯುತ್ತಿಲ್ಲವೆಂದು ಹೇಳಿದ್ದಾರೆ. ಇದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾಗಿ ನಡೆಸಬೇಕೆಂದರೆ ಆ ಮಕ್ಕಳ ತಂದೆತಾಯಿಗಳೂ ಕೂಡ ಸಹಾಯ ಮಾಡಬೇಕು. ಅವರು ಸಹಕಾರ ಕೊಟ್ಟಲ್ಲಿ ಮಾತ್ರ ಇದು ಸಾಧ್ಯವಾಗುತ್ತದೆ. ಏತಕ್ಕೆಂದರೆ ನಾವು ಈಗಾಗಲೇ ಅವರಿಗೆ ಬೇಕಾದ ಪಠ್ಯಪುಸ್ತಕಗಳನ್ನು ಫ್ರೀಯಾಗಿ ಕೊಡುತ್ತಿದ್ದೇವೆ. ಆದ್ದರಿಂದ ಮಕ್ಕಳ ತಂದೆತಾಯಿಂಗಳ ಸಹಾಯ ಮತ್ತು ಸಹಕಾರವನ್ನು ತೆಗೆದುಕೊಳ್ಳದೆ ಇದ್ದರೆ ಸಾಧ್ಯವಾಗುವುದಿಲ್ಲ. ಸರ್ಕಾರ ಮಕ್ಕಳನ್ನು ಕರೆದುಕೊಂಡು ಬಂದು ಕುಳ್ಳಿರಿಸಿ ವಿದ್ಯೆಯನ್ನು ಹೇಳಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಸುಮಾರು ಆರು ತಿಂಗಳಿಂದಲೂ ಕೂಡ ಇಂಥ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ನಾವು ಮಾಡುತ್ತಲೇ ಇದ್ದೇವೆ. ಪಠ್ಯಪುಸ್ತಕಗಳನ್ನು ಬದಲಾವಣೆ ಮಾಡಬೇಕೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅನೇಕ ಜನ ಮಾನ್ಯಸದಸ್ಯರು ಹೇಳಿದಹಾಗೆ ಪಠ್ಯಪುಸ್ತಕಗಳನ್ನು ನಾವು ಈಗಾಗಲೇ ಬದಲಾವಣೆಯನ್ನು ಮಾಡಿದ್ದೇವೆ. ನಾನು ಅಧಿಕಾರಿಗಳಿಗೆ ಆದೇಶವನ್ನೂ ಕೂಡ ಕೊಟ್ಟಿದ್ದೇನೆ. ಬಹಂತೇಕ ಪ್ರಾಥಮಿಕ ಶಾಲೆಯ ಲೆವಲ್‌ನಲ್ಲಿ ಈ ಒಂದು ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಈಗ ಇದರ ಜೊತೆಗೆ ಪಠ್ಯಪುಸ್ತಕಗಳನ್ನು ಬದಲಾವಣೆ ಏತಕ್ಕೆ ಆಗಬೇಕೆಂದರೆ ಇದು ೬–೭ ವರ್ಷಗಳ ಹಿಂದೆ ಇದನ್ನು ಬದಲಾವಣೆ ಮಾಡಿದ್ದುದು. ಆದ್ದರಿಂದ ಈಗ ಪರಿಸ್ಥಿತಿ ಬದಲಾವಣೆಯನ್ನು ನಂಸರಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಇದರ ಜೊತೆಗೆ ಅನೇಕ ಜನ ಮಾನ್ಯ ಸದಸ್ಯರು ಹೇಳಿದ ಹಾಗೆ ಆಗ ಸ್ವಾತಂತ್ರ್ಯಕ್ಕೋಸ್ಕರವಾಗಿ ಹೋರಾಟ ಮಾಡಿದಂಥ, ರಾಷ್ಟ್ರಕ್ಕೋಸ್ಕರವಾಗಿ ತ್ಯಾಗಮಾಡಿದಂಥವರ ವಿಷಯಗಳನ್ನು ಕೂಡ ಇದರಲ್ಲಿ ಅಳವಡಿಸಿಕೊಟ್ಟರೆ ಒಳ್ಳೆಯದೆಂದು ಹೇಳಿದ್ದಾರೆ. ಇದನ್ನು ನಾನು ಗಮನದಲ್ಲಿಟ್ಟುಕೊಂಡು ಪಠ್ಯಪುಸ್ತಕಗಳ ಬದಲಾವಣೆಯನ್ನು ಮಾಡತಕ್ಕಂಥ ಸಮಿತಿಯನ್ನು ಕರೆದು ಅವರಿಗೆ ತಿಳಿಸುತ್ತೇನೆ. ಇವೊತ್ತು ಎಲ್ಲರಿಗೂ ಸಮಸ್ಯೆಯಾಗಿರತಕ್ಕಂಥದ್ದು ಎಂದರೆ ಉಪಾಧ್ಯಾಯರ ವರ್ಗಾವಣೆ. ಈ ವರ್ಗಾವಣೆ ಒಂದು ದೊಡ್ಡ ಸಮಸ್ಯೆಯಾಗಿದೆ. ಕಳೆದ ಸಾರಿ ನಾನು ಅಧಿಕಾರವನ್ನು ವಹಿಸಿಕೊಂಡ ಮೇಲೆ ಸುಮಾರು ೧೫ ಸಾವಿರಜನ ಉಪಾಧ್ಯಾಯರು ಕಬ್ಬನ್ ಪಾರ್ಕ್‌ನಲ್ಲಿ ಬಂದು ಸೇರಿದ್ದರು. ಆಗ ನಮ್ಮನ್ನು ಬೇರೆ ಬೇರೆ ತಾಲ್ಲೂಕುಗಳಿಗೆ ವರ್ಗ ಮಾಡಿದ್ದೀರಿ ಎಂದು ಹೇಳಿದರು. ಬೇರೆ ಬೇರೆ ತಾಲ್ಲೂಕುಗಳಿಗೆ ವರ್ಗ ಮಾಡಿದರೂ ಕೂಡ ಅವರಿಗೆ ಇನ್‌ಸೆಂಟೀವ್ ಕೊಟ್ಟಿದ್ದೇವೆ. ಇಷ್ಟಾದಮೇಲೆ ಬಹಳ ದಿವಸಗಳಿಂದ ಇದ್ದ ಬೇಡಿಕೆ ಹೈದರಾಬಾದ್ ಸ್ಕೇಲ್ ಅದನ್ನೂ ಕೂಡ ಕೊಟ್ಟಿದ್ದೇವೆ. ಸ್ಟಾಗ್‌ನೇಟ್ ಆಗಿದ್ದವರಿಗೆ ಹೆಡ್‌ಮಾಸ್ಟರ್ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿ ಹನ್ನೊಂದು ಸಾವಿರ ಚಿಲ್ಲರೆ ಹೆಡ್ ಮಾಸ್ಟರ್ ಪೋಸ್ಟ್‌ಗಳನ್ನು ಕೊಟ್ಟಿದ್ದೇವೆ. ಹಿಂದಿನ ಮಾನ್ಯ ಮಂತ್ರಿಗಳಾಗಿದ್ದ ಶ್ರೀ ಗೋವಿಂದ ಗೌಡರು ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ವರ್ಗ ಮಾಡಬೇಕೆಂದು ಹೇಳಿದ್ದಾರೆ. ಆಗ ಅವರು ವರ್ಗಾವಣೆಯ ಬಗ್ಗೆ ಏನು ಆರ್ಡರ್ ಮಾಡಿರುತ್ತಾರೋ ಅದು ತಪ್ಪು ಆಜ್ಞೆ ಮಾಡಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ಏಕೆ ನಿಮಗೆ ಹೆದರಿಕೆಯೆ ?

ಶ್ರೀ ಡಿ. ಮಂಜುನಾಥ್.—ಹೆದರಿಕೆ ಏನೂ ಇಲ್ಲ. ಸೀನಿಯಾರಿಟಿ ಪಟ್ಟಿ ಆಯಾ ಜಿಲ್ಲೆಯಲ್ಲಿ ಫೈನಲೈಸ್ ಆಗಿಲ್ಲ. ಜೊತೆಗೆ ಅವರಿಗೆ ಪ್ರಮೋಷನ್, ಹೆಡ್‌ಮಾಸ್ಟರ್ ಪೋಸ್ಟ್ ಕೊಡಲಿಕ್ಕೆ ಸರ್ಕಾರಿ ಆಜ್ಞೆಯೂ ಕೂಡ ಆಗಿರಲಿಲ್ಲ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇತ್ತು. ಜೊತೆಗೆ ಅನೇಕ ಜನ ಹೆಡ್‌ಮಾಸ್ಟರಾಗಿ ಹೋಗುತ್ತೇವೆಂದು ಬಾಯಿ ಮಾತಿನಲ್ಲಿ ಹೇಳಿದ್ದರು. ಅದು ಎಷ್ಟರಮಟ್ಟಿಗೆ ಸತ್ಯವೋ ಗೊತ್ತಿಲ್ಲ. ಏನೇನು ಫಾರ್ಮಾಲಿಟೀಸ್ ಇತ್ತೋ ಅವುಗಳನ್ನು ಪೂರ್ತಿಯಾಗಿ ಮಾಡಿರಲಿಲ್ಲ. ಈ ಉದ್ದೇಶದಿಂದ ತಡೆಯಾಜ್ಞೆಯನ್ನು ಕೊಟ್ಟಿದ್ದೇವೆ. ವರ್ಗಗಳ ವಿಷಯದಲ್ಲಿ ಇವೊತ್ತಿನ ದಿವಸ ಸದನದ ಗಮನವನ್ನು ಸೆಳೆದು ಈವತ್ತು ಎಲ್ಲಾ ಸದಸ್ಯರು ಸಹಕಾರವನ್ನು ಕೊಟ್ಟರೆ ಕಟ್ಟುನಿಟ್ಟಾಗಿ ಅದನ್ನು ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ದಯವಿಟ್ಟು ನೀವು ಕಟ್ಟುನಿಟ್ಟಾಗಿ ಕಾರ್ಯಕ್ರಮ ತೆಗೆದುಕೊಳ್ಳಿ ನಾವು ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆ.

ವೈಸ್ ಛೇರ್ಮನ್.—ಮಾನ್ಯ ಸಚಿವರು ಈಗ ಉತ್ತರವನ್ನು ಕೊಡುತ್ತಿದ್ದಾರೆ. ಇದು ಮುಗಿದನಂತರ ಕ್ಲಾರಿಫಿಕೇಶನ್ ಕೇಳುವಾಗ ಮಾನ್ಯ ಸದಸ್ಯರಿಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಮಂತ್ರಿಗಳು ಈ ವರ್ಗಾವಣೆ ಬಗ್ಗೆ ಹೇಳುತ್ತಾ ಇದೊಂದು ಬೃಹದಾಕಾರದ ಸಮಸ್ಯೆ ಎಂದು ಹೇಳಿದ್ದಾರೆ. ಈಗ ಸರ್ಕಾರ ನಡೆಸುವಾಗ ಬೇರೆಯವರನ್ನು ಕೂಲಿ ಹಚ್ಚಿ ಮಾಡುವುದಕ್ಕಾಗುವುದಿ . ಸ್ವಂತವೇ ಮಾಡಬೇಕು. ಈಗ ನೀವು ಮಂತ್ರಿಯಾಗಿದ್ದೀರಿ. ಹೀಗಿರುವಾಗ ನಮ್ಮ ಸಹಕಾರ ಏಕೆ ಬೇಕು. ನಿರ್ದಿಷ್ಟವಾಗಿ ಕಟ್ಟುನಿಟ್ಟಾಗಿ ಇಂತಿಂಥವರು ತಾಲೂಕು ಮಟ್ಟದಲ್ಲಿ ವರ್ಗಾವಣೆ ಆಗಬೇಕು. ಇಂತಿಂಥವರು ತಾಲ್ಲೂಕಿನಿಂದ ತಾಲ್ಲೂಕಿಗೆ ವರ್ಗಾವಣೆ ಆಗಬೇಕು. ಇಂತಿಂಥವರನ್ನು ಜಿಲ್ಲೆಯಿಂದ ಜಿಲ್ಲೆಗೆ ವರ್ಗಾವಣೆ ಮಾಡಬೇಕೆಂದು ಎಂದು ಪರಿಪಾಲನೆ ಮಾಡಿದರೆ ನಮ್ಮನ್ನು ಸಹಕಾರ ಕೇಳುವ ಪ್ರಮೇಯವೇ ಬರುವುದಿಲ್ಲ. ಇದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುತ್ತೇವೆ ಎಂದು ಹೇಳಿ.

ಶ್ರೀ ಬಿ. ಲಕ್ಕಪ್ಪ.— ಹತ್ತು ಹದಿನೈದು ವರ್ಷಗಳಿಂದ ಇದ್ದಲ್ಲೇ ಇದ್ದಾರೆ. ಸಾಮಾನ್ಯವಾಗಿ ಈ ದೂರು ಇದೆ.

ವೈಸ್ ಛೇರ್ಮನ್.— ಕಾಲಾವಕಾಶ ಬಹಳ ಕಡಿಮೆ ಇದೆ. ಉತ್ತರ ಕೊಟ್ಟಮೇಲೆ ಸ್ಪಷ್ಟೀಕರಣ ಕೇಳಿ.

ಶ್ರೀ ಡಿ. ಮಂಜುನಾಥ್.— ಉಪಾಧ್ಯಾಯರ ವರ್ಗಗಳು ಆದಾಗ ಅನೇಕ ಸದಸ್ಯರು ಕೆಲವು ಸಾರಿ ಇಂಟರ್‌ಫಿಯರ್ ಮಾಡುತ್ತಾರೆ. ಇದು ಇವತ್ತಿನದಲ್ಲ. ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇದನ್ನು ಕಟ್ಟುನಿಟ್ಟಾಗಿ ಮಾಡಲಿಕ್ಕೆ ಕಷ್ಟ ಇದೆ. ಆದರೂ ಸಹ, ಈಗ ಶ್ರೀ ಬಸವಲಿಂಗಪ್ಪನವರು ಹೇಳಿದ ಹಾಗೆ ನಾವು ಮಾಡುತ್ತಿದ್ದೇವೆ. ಇಷ್ಟು ವರ್ಷ ಇದ್ದರೆ, ಇಂಥಾ ತಿಂಗಳಲ್ಲಿ, ಮೂರು ಸ್ಥಳಗಳನ್ನು ಕೇಳಬೇಕು, ಇದೆಲ್ಲಾ ಇದೆ. ಇದನ್ನು ಪರಿಪಾಲನೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇನ್ನು ನಾನು ಮಾನ್ಯ ಸದಸ್ಯರುಗಳು ಹೇಳಿದ ವಿಷಯಗಳಿಗೆ ಪ್ರತ್ಯೇಕವಾಗಿ ಹೇಳಬೇಕಾಗುತ್ತದೆ. ಶ್ರೀಮತಿ ಮುಕ್ತರುನ್ನೀಸ್ ಬೇಗಂರವರು ನರ್ಸರಿ ಟೀಚರ್ಸ್‌ಗೆ ಸಂಬಳ ಕೊಡುವುದಿಲ್ಲವೆಂದು ಹೇಳಿದರು. ಸಂಬಳ ಕೊಟ್ಟಿದ್ದೇವೆ. ಕೆಲವು ಕಾರಣಗಳಿಂದ ತೊಂದರೆಯಾಗಿತ್ತು. ಕೆಲವು ಕಡೆ ೫೦ ರೂಪಾಯಿ, ಕೆಲವು ಕಡೆ ೨೫ ರೂಪಾಯಿ, ಕೆಲವು ಕಡೆ ೭೫ ರೂಪಾಯಿ ಕೊಡುತ್ತಿದ್ದಾರೆ. ಎಂಬುದು ಇತ್ತು. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ ಇತ್ತೀಚೆಗೆ ನರ್ಸರಿ ಶಾಲೆಗಳಿಗೆ ನಾವು ಅನುದಾನ ಕೊಡುತ್ತಿಲ್ಲ ಮೊದಲು ಗೈಡ್‌ಲೈನ್ಸ್ ಏನಿದೆ ಅದರಂತೆ ಕೊಡುತ್ತಿದ್ದೆವು ಆಮೇಲೆ, ವಯಸ್ಕರ ಶಿಕ್ಷಣ ಶಾಲೆಯಲ್ಲಿ ಉರ್ದು ಹೇಳಿಕೊಡುತ್ತೀರಾ? ಎಂದು ಕೇಳಿದರು. ಅದಕ್ಕೆ ಪ್ರಾವಿಷನ್ ನಮಗೆ ಇಲ್ಲ. ಬಹುತೇಕವಾಗಿ ಇಲ್ಲಿ ಕನ್ನಡ ಕಲಿಯುತ್ತಿದ್ದಾರೆ ಅನಕ್ಷರಸ್ಥರು ಇವತ್ತು ನಮ್ಮ ರಾಜ್ಯದಲ್ಲಿ ಕನ್ನಡ ಕಲಿತರೆ ಸಾಕು ನಿಯಮಾವಳಿ ಪ್ರಕಾರ ಕನ್ನಡ ಕಲಿಸುತ್ತಿದ್ದೇವೆ.

ಇನ್ನೊಂದು ಅಂಶವನ್ನು ಪ್ರಸ್ತಾಪ ಮಾಡಿದರು. ಈಗ ಉಚಿತ ಪಠ್ಯ ಪುಸ್ತಕಗಳನ್ನು ಕೊಡುತ್ತಿದ್ದೀರಿ ನಾಳೆ ದಿವಸ ಅವರು ಕಳೆದುಕೊಂಡು ಬಿಡುತ್ತಾರೆ ಎಂದು. ಅದಕ್ಕೂ ಒಂದು ಏರ್ಪಾಡು ಮಾಡಿದ್ದೇವೆ.ಕೆಲವು ಪುಸ್ತಕಗಳನ್ನು ಹೆಡ್‌ಮಾಸ್ಟರ್ ವಶದಲ್ಲಿ ಇಟ್ಟಿರುತ್ತೇವೆ. ಮೊದಲನೇ ವರ್ಷಕ್ಕೆ ಎರಡನೇ ವರ್ಷಕ್ಕೆ ಒಂದೊಂದೇ ಪುಸ್ತಕ ಇರುವುದು ಇದು ಬಹಳ ಚೆನ್ನಾಗಿ ಆಗಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಇನ್‌ಟೈಂನಲ್ಲಿ ಕೊಟ್ಟಿದ್ದೇವೆ. ಶ್ರೀ ನಾರಾಯಣಸ್ವಾಮಿಯವರು ಅವರ ಕಡೆಗೆ ಪಠ್ಯಪುಸ್ತಕಗಳು ಬಂದಿಲ್ಲವೆಂದು ಹೇಳಿದಾಗ ನಾನು ರಿಪೋರ್ಟ್ ತರಿಸಿದ್ದೇನೆ ಮತ್ತು ಎಲ್ಲಾ ಕಡೆಗೆ ಹೋಗಿ ಚೆಕ್ ಮಾಡಿದ್ದೇನೆ. ಪಠ್ಯಪುಸ್ತಕಗಳ ಹಂಚಿಕೆ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದ್ದೇನೆ. ಈಗಾಗಲೇ ಮುದ್ರಣ ಇಲಾಖೆ ನಿರ್ದೇಶಕರಿಗೆ ಹೇಳಿದ್ದೇನೆ. ಸ್ಕೂಲ್ ಪ್ರಾರಂಭವಾದ ಒಂದು ವಾರದಲ್ಲಿ ಎಲ್ಲಾ ಕಡೆಗೂ ಪುಸ್ತಕ ಕೊಡಬೇಕೆಂದು ಹೇಳಿದ್ದೇನೆ. ಅದೇ ರೀತಿಯಲ್ಲಿ ಇವತ್ತು ಎಕ್ಸ್‌ಟ್ರಾ ಪುಸ್ತಕಗಳನ್ನು ಇಡುವುದಕ್ಕೆ ಈಗಾಗಲೇ ಏರ್ಪಾಡು ಮಾಡಿದ್ದೇನೆ. ಎಲ್ಲರಿಗೂಪಠ್ಯಪುಸ್ತಕಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಮಾನ್ಯ ಸದಸ್ಯರಾದ ಇದಿನಬ್ಬ ಅವರು ಒಂದು ಮಾತು ಹೇಳಿದರು. ಶಾಲೆಗಳಲ್ಲಿ ಪೀಠೋಪಕರಣಗಳಿಲ್ಲ, ಹೀಗಿರುವಾಗ ಇದಕ್ಕೆ ಇಷ್ಟೊಂದು ಹಣ ಖರ್ಚು ಮಾಡುತ್ತಿದ್ದೀರಲ್ಲ ಏತಕ್ಕೆ

ಎಂದು ಹೇಳಿದರು. ಈ ವಾದವೂ ಇದೆ. ಸಾರ್ವಜನಿಕರಿಂದ ಪ್ರತಿಕ್ರಿಯೆ ಈ ತರಹ ಬರುತ್ತಿದೆ. ಇವತ್ತು ಪುಸ್ತಕಕ್ಕೋಸ್ಕರ ಸುಮಾರು ೩೯೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ ಬಟ್ಟೆಗೋಸ್ಕರ ಸುಮಾರು ೧೨ ಕೋಟಿಗೂ ಮೇಲ್ಪಟ್ಟು ಖರ್ಚು ಮಾಡುತ್ತಿದ್ದೇವೆ. ಹೀಗಿರುವಾಗ ಎಲ್ಲರಿಗೂ ಪುಸ್ತಕಗಳನ್ನು ಕೊಡುವುದಕ್ಕೆ ಹೋದರೆ ಕಷ್ಟವಾಗುತ್ತದೆ. ಹಣದ ಇತಿಮಿತಿ ನೋಡಬೇಕಾಗುತ್ತದೆ, ಇನ್ನೊಂದು, ಫಿಸಿಕಲ್ ಎಜುಕೇಷನ್...

ಶ್ರೀಮತಿ ಮುಕ್ತರುನ್ನೀಸಾ.— ಫಸ್ಟ್ ಅಂಡ್ ಸೆಕೆಂಡ್ ಸ್ಟಾಂಡರ್ಡ್......

ಶ್ರೀ ಡಿ. ಮಂಜುನಾಥ್.— ನೋಟ್ ಮಾಡಿಕೊಂಡು ಆಮೇಲೆ ಕೇಳಿ. ಹೈಯರ್ ಪ್ರೈಮರಿ ಸ್ಕೂಲ್‌ನಲ್ಲಿ ಎಲ್ಲಾ ಕಡೆಯೂ ಕಡ್ಡಾಯವಾಗಿ ಫಿಸಿಕಲ್ ಎಜುಕೇಷನ್ ಟೀಚರ್ಸ್ ನೇಮಕ ಮಾಡಿದ್ದೇವೆ. ಮೈಸೂರಿನಲ್ಲಿ ೧ರಿಂದ ೫ನೇ ತರಗತಿಯವರೆಗೆ ಇರತಕ್ಕ ಶಾಲೆಯಲ್ಲಿ ಮಾಡಿರಲಿಕ್ಕಿಲ್ಲ. ಆದರೆ ಹೈಯರ್ ಪ್ರೈಮರಿ ಶಾಲೆಯಲ್ಲಿ ಫಿಸಿಕಲ್ ಎಜುಕೇಷನ್ ಇನ್‌ಸ್ಟ್ರಕ್ಟರ್ಸ್ ನೇಮಕ ಮಾಡಿದ್ದೇವೆ. ಅಲ್ಲಿ ಇಬ್ಬರು ಎ.ಇ.ಒ.ಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಬೆಂಗಳೂರು ಜಿಲ್ಲೆಗೆ ಇಬ್ಬರು ಇದ್ದಾರೆ. ಸಿಟಿಗೆ ಒಬ್ಬರು, ರೂರಲ್‌ಗೆ ಒಬ್ಬರು ಇದ್ದಾರೆ. ಅದೇ ರೀತಿ ಅಲ್ಲಿಗೂ ಯೋಚನೆ ಮಾಡುತ್ತೇವೆ. ಟೀಚಿಂಗ್ ಏಡ್ಸ್ ಕೊಡಬೇಕೆಂದು ಹೇಳಿದ್ದಾರೆ. ಫ್ರೀ ಮೆಡಿಕಲ್ ಫೆಸಿಲಿಟೀಸ್ ಕೊಡಬೇಕೆಂದು ಹೇಳಿದ್ದಾರೆ ನಾವು ಮಕ್ಕಳಿಂದ ಇದಕ್ಕೋಸ್ಕರ ಒಂದು ರೂಪಾಯಿ ತೆಗೆದುಕೊಳ್ಳುತ್ತಿದ್ದೇವೆ ಆದ್ದರಿಂದ ಫ್ರೀ ಮೆಡಿಕಲ್ ಫೆಸಲಿಟೀಸ್ ಕೊಡುವುದು ಕಷ್ಟವಾಗಬಹುದು ಆದರೂ ಸಹ ವಿಚಾರ ಮಾಡಬೇಕಾಗುತ್ತದೆ. ಉರ್ದು ಶಾಲೆಗಳಲ್ಲಿ ಕನ್ನಡ ಟೀಚರ್ಸ್ ಇಲ್ಲ ಎಂದು ಹೇಳಿದ್ದಾರೆ. ಎಲ್ಲಾ ಕಡೆಯೂ ಈಗ ವ್ಯವಸ್ಥೆ ಮಾಡಿದ್ದೇವೆ. ಎಲ್ಲಾ ಉರ್ದು ಶಾಲೆಗಳಲ್ಲಿ ಕನ್ನಡ ಟೀಚರ್ಸ್ ವ್ಯವಸ್ಥೆ ಮಾಡಿದ್ದೇವೆ. ಮಾಗಡಿ ಶಾಸಕರಾದ ಚನ್ನಪ್ಪನವರು ಒಂದು ವಿಷಯ ಹೇಳಿದರು. ಉಪಹಾರದ ವ್ಯವಸ್ಥೆ ಮಾಡಬೇಕೆಂದು ಹೇಳಿದರು. ಎರಡು ರೀತಿಯ ವ್ಯವಸ್ಥೆ ಈಗ ಇದೆ. ಕೇರ್ ಸಂಸ್ಥೆಯಿಂದ ಮತ್ತು ವರ್ಲ್ಡ್ ಬ್ಯಾಂಕ್‌ನಿಂದ ಇದಕ್ಕೆ ಸಹಾಯ ಬರುತ್ತಿದೆ. ಪ್ರಿಪೇರ್ಡ್ ಫುಡ್ ಕೊಡುತ್ತಿದ್ದಾರೆ. ಅದರ ಜೊತೆಗೆ ಎಣ್ಣೆ ಮತ್ತು ರವೆ ಕೊಡುತ್ತಿದ್ದಾರೆ. ಉಪಹಾರದ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ ಎಂದು ಒಪ್ಪುತ್ತೇನೆ. ಬಹಳ ಕಡೆಯಿಂದ ನನಗೆ ಕಂಪ್ಲೇಂಟ್ಸ್ ಬಂದಿದೆ. ಎಣ್ಣೆ ಮತ್ತು ರವೆ ಕೊಟ್ಟರೆ ಅದಕ್ಕೆ ಸೌದೆ, ಈರುಳ್ಳಿ, ಮೆಣಸಿನಕಾಯಿ ಬೇಕಾಗುತ್ತದೆ. ಗ್ರಾಮದಲ್ಲಿರತಕ್ಕ ಶಾಲಾಭಿವೃದ್ಧಿ ಸಮಿತಿಯವರಿಗೆ ಇದರ ಬಗ್ಗೆ ವ್ಯವಸ್ಥೆ ಮಾಡಿ ಈ ಕಾರ್ಯಕ್ರಮದ ಬಗ್ಗೆ ನೋಡಿಕೊಳ್ಳಬೇಕೆಂದು ಹೇಳಿದ್ದೇನೆ. ಎಷ್ಟೋ ಮಕ್ಕಳು ಉಪವಾಸ ಬರುವವರೂ ಇರಬಹುದು, ದಯಮಾಡಿ ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿ ಎಂದು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಿಗೆ ಪ್ರತ್ಯೇಕವಾಗಿ ಅನೇಕ ಕಡೆ ಹೇಳಿದ್ದೇನೆ ಅಧಿಕಾರಿಗಳಿಗೂ ಉಸ್ತುವಾರಿ ನೋಡಿಕೊಳ್ಳಿ ಎಂದು ಹೇಳಿದ್ದೇನೆ. ಇತ್ತೀಚೆಗೆ ಸ್ವಲ್ಪ ಮಟ್ಟಿಗೆ ದೂರುಗಳು ಕಡಿಮೆಯಾಗಿವೆ. ಹಳ್ಳಿ ಮಕ್ಕಳಿಗೆ ಇನ್‌ಸೆಂಟೀವ್ ಕೊಡಬೇಕೆಂದು ಇನ್ನೊಂದು ಮಾತನ್ನು ಚನ್ನಪ್ಪನವರು ಹೇಳಿದರು. ನಾನೂ ಒಪ್ಪುತ್ತೇನೆ ಅದನ್ನು. ಏಕೆಂದರೆ ಹಳ್ಳಿ ಹುಡುಗರು ಪಟ್ಟಣದ ಹುಡುಗರ ಜೊತೆಯಲ್ಲಿ ಕಾಂಪಿಟ್ ಮಾಡುವುದಕ್ಕೆ ಕಷ್ಟ. ಕಾನ್‌ವೆಂಟ್‌ನಲ್ಲಿ ಓದಿರುವ ಮಕ್ಕಳ ಮಟ್ಟಕ್ಕೆ ಹಳ್ಳಿ ಮಕ್ಕಳು ಬರುವುದು ಕಷ್ಟ ಇದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಈ ಸಾರಿ ಹೈಸ್ಕೂಲ್‌ನಲ್ಲಿ ಕಡಿಮೆ ಫಲಿತಾಂಶ ಬಂದಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಕೂಡ ಯೋಚನೆ ಮಾಡುತ್ತೇನೆ. ಖಾಸಗಿ ಶಾಲೆಗಳಲ್ಲಿ ಫಲಿತಾಂಶ ಕಡಿಮೆ ಬಂದಿದ್ದರೆ ಅದಕ್ಕೆ ಪೀನಲ್ ಕಟ್ ಹಾಕಿದ್ದೇವೆ. ಈ ಸಾರಿ ಆಶ್ಚರ್ಯವಾಗುತ್ತದೆ ಸ್ಟೇಟ್ ಅವರೇಜ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ೨೭ ಪರ್ಸೆಂಟ್ ಇದ್ದರೆ ಪಿ.ಯು.ಸಿ. ಯಲ್ಲಿ ೩೫ ಪರ್ಸೆಂಟ್ ಇದೆ. ಅನೇಕ ಜೂನಿಯರ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ.

ಪಾಸಾದಂತಹ ಎಲ್ಲರೂ ಜೂನಿಯರ್ ಕಾಲೇಜುಗಳಿಗೆ ಹೋಗುವುದಿಲ್ಲ. ಕೆಲವರು ಪಾಲಿಟೆಕ್ನಿಕ್‌ಗೆ ಹೋಗುತ್ತಾರೆ. ಕೆಲವರು ಐ.ಟಿ.ಐ.ಗೆ ಹೋಗುತ್ತಾರೆ. ಈ ರೀತಿ ಬೇರೆ ಬೇರೆ ಕೋರ್ಸ್‌ಗಳಿಗೆ ಹೋಗುತ್ತಾರೆ. ಇದನ್ನು ಸರಿಪಡಿಸುವುದಕ್ಕೆ ಅಲ್ಲಿಯ ಉಪಾಧ್ಯಾಯರುಗಳಿಗೆ ಸಾಕಷ್ಟು ವರ್ಕ್‌ಷಾಪುಗಳನ್ನು ಮಾಡಿದ್ದೇವೆ. ಸಮ್ಮೇಳನಗಳನ್ನು ಮಾಡಿ ಸಾಕಷ್ಟು ಅವರಿಗೆ ಹೇಳಿದ್ದೇವೆ. ನೀವು ಪ್ರಾಮಾಣಿಕವಾಗಿ ಕೆಲಸ ಮಾಡಿ ಎಂದು ಹೇಳಿದ್ದೇನೆ. ಈ ಸಾರಿ ಉತ್ತಮವಾದ ಫಲಿತಾಂಶ ಬರುತ್ತದೆಂದು ನಾನು ನಿರೀಕ್ಷಣೆ ಮಾಡಿದ್ದೇನೆ. ಇದರ ಜೊತೆಗೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸ

ಬೇಕು. ಇದು ಇಡೀ ರಾಷ್ಟ್ರಮಟ್ಟದಲ್ಲೇ ಇದೆ. ಇದನ್ನು ಎಲ್ಲರೂ ಸೇರಿ ನಿವಾರಣೆ ಮಾಡಬೇಕಾಗುತ್ತದೆ. ಇದು ಬಹಳ ಕಷ್ಟದ ಸಮಸ್ಯೆ. ಆದ್ದರಿಂದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕಾದರೆ ವೃತ್ತಿಪರ ಶಿಕ್ಷಣದ ಬಗ್ಗೆ ಯೋಚನೆ ಮಾಡಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಕೇಂದ್ರದ ಶಿಕ್ಷಣ ನೀತಿಯೂ ಕೂಡ ಆ ರೀತಿಯಲ್ಲೇ ಇದೆ. ವೊಕೇಷನಲೈಜೇಷನ್ ಮಾಡಿ ಎಂದು ಹೇಳಿದ್ದಾರೆ. ನಾವು ಅದನ್ನು ಪ್ರಾರಂಭ ಮಾಡಿದ್ದೇವೆ. ಪಿ.ಯು.ಸಿ ಮಟ್ಟದಲ್ಲಿ ಈಗಾಗಲೇ ಅದನ್ನು ಜಾರಿಗೆ ತಂದಿದ್ದೇವೆ. ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿ ಜಾರಿಗೆ ಬಂದ ಮೇಲೆ ಇದು ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನಂತರ ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟಲ್‌ಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಇದನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ನಡೆಸುತ್ತಿದ್ದಾರೆ. ಎಜುಕೇಷನ್ ಡಿಪಾರ್ಟ್‌ಮೆಂಟ್‌ನವರು ನಡೆಸತಕ್ಕಂತಹ ಹಾಸ್ಟಲ್‌ಗಳು ಬಹಳ ಕಡಿಮೆ. ಕಾಲೇಜು ಹಾಸ್ಟಲ್ ಕೆಲವನ್ನು ಮಾತ್ರ ನಾವು ನಡೆಸುತ್ತಿದ್ದೇವೆ. ಆದ್ದರಿಂದ ಹಾಸ್ಟಲ್‌ಗಳ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದೇ ವಿಚಾರವನ್ನು ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆ ಬಂದಾಗ ಹೇಳಿದರೆ, ಆಗ ಅದಕ್ಕೆ ಸರಿಯಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆ. ಶ್ರೀಮಾನ್ ಕೆ. ಬಿ. ಶ್ಯಾಣಪ್ಪನವರು ನಾನ್ ಫಾರಂಲ್ ಎಜುಕೇಷನ್ ಸಿಸ್ಟಂನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ. ಅದಕ್ಕೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ನಂತರ ಅವರು ಸಿಂಗಲ್ ಟೀಚರ್ ಶಾಲೆಯ ಬಗ್ಗೆಯೂ ಹೇಳಿದ್ದಾರೆ. ಅದಕ್ಕೂ ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಕೇಂದ್ರದ ಹೊಸ ಶಿಕ್ಷಣ ನೀತಿ ಬಂದರೆ ಬಹುತೇಕ ಈ ಸಮಸ್ಯೆಗಳೆಲ್ಲಾ ಬಗೆಹರಿಯುತ್ತವೆ. ಸಿಂಗಲ್ ಟೀಚರ್ಸ್ ಇರತಕ್ಕಂಥದ್ದು ಬಹಳ ಕಡಿಮೆಯಾಗಿದೆ. ಅದರ ಬಗ್ಗೆ ಸರ್ಕಾರ ಒಂದು ನೀತಿಯನ್ನೇ ಹಾಕಿಕೊಂಡಿದೆ ಎಲ್ಲಾ ಕಡೆ ಡಬ್ಬಲ್ ಟೀಚರ್ಸ್‌ನ ವ್ಯವಸ್ಥೆಯನ್ನು ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಶ್ರೀಮಾನ್ ವೆಂಕಟರಾಮಯ್ಯನವರು ಸಿಲೆಬಸ್ ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ. ಮತ್ತೆ ಮಕ್ಕಳು ೭೫ ಪರ್ಸೆಂಟ್ ಶಾಲೆಗೆ ಬರುತ್ತಿಲ್ಲ ಎಂದು ಹೇಳಿದ್ದಾರೆ. ಈಗ ಸ್ವಲ್ಪ ಇಂಪ್ರೂವ್ ಆಗಿದೆ ಕಳೆದ ವರ್ಷ ಈ ವರ್ಷ ಅಟೆಂಡೆನ್ಸ್ ಸ್ವಲ್ಪ ಜಾಸ್ತಿಯಾಗಿದೆ ಇದರ ಬಗ್ಗೆ ಪೋಷಕರೂ ಕೂಡ ಸ್ವಲ್ಪ ಮಟ್ಟಿಗೆ ಆಸಕ್ತಿಯನ್ನು ವಹಿಸಬೇಕಾಗುತ್ತದೆ. ಸರ್ಕಾರವೇ ಎಲ್ಲವನ್ನು ಮಾಡಬೇಕು ಎಂದು ಹೇಳಿದರೆ ಆಗುವುದಿಲ್ಲ. ಆ ಒಂದು ಮುಖ್ಯ ಉದ್ದೇಶದಿಂದಲೇ ಶಾಲಾ ಅಭಿವೃದ್ಧಿ ಸಮಿತಿಯನ್ನು ಮಾಡಿದ್ದು ಆ ಶಾಲಾ ಅಭಿವೃದ್ಧಿ ಸಮಿತಿಯವರು ಮನೆ ಮನೆಗೆ ಹೋಗಿ ಕೆಲಸ ಮಾಡುತ್ತಿದ್ದಾರೆ ಅದಕ್ಕಾಗಿಯೇ ವಿದ್ಯಾ ವಿಕಾಸ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಅದರ ಪ್ರಕಾರ ಸ್ವಲ್ಪ ಮಟ್ಟಿಗೆ ಈ ವರ್ಷದಲ್ಲಿ ೨ ಲಕ್ಷಕ್ಕೂ ಮೇಲ್ಪಟ್ಟು ಅಟೆಂಡೆನ್ಸ್ ಜಾಸ್ತಿಯಾಗಿದೆ ಟೀಚರ್ಸ್ ನೇಮಕಾತಿಯ ಬಗ್ಗೆ ಹೇಳಿದ್ದಾರೆ ಮೀಸಲಾತಿ ಪ್ರಕಾರ ರೋಸ್ಟರ್ ಪದ್ಧತಿಯನ್ನು ಅವರು ಕಡ್ಡಾಯವಾಗಿ ಅನುಸರಿಸಬೇಕಾಗಿದ್ದರೂ ನಿಲ್ ಸರ್ಟಿಫಿಕೇಟನ್ನು ತೆಗೆದುಕೊಂಡು ಮಾಡಿದ್ದಾರೆ ಎಂದು ಹೇಳಿದ್ದಾರೆ. ಆ ರೀತಿ ನಾನು ಬಂದ ಮೇಲೆ ಮಾಡಿದರೆ ನಿಮ್ಮ ಶಾಲೆಯನ್ನೇ ಅಪ್ರೂವ್ ಮಾಡುವುದಿಲ್ಲ. ಎಂಬುದಾಗಿ ಹೇಳಿದ್ದೇನೆ ಇನ್ನೊಂದು ಸಾರಿ ಆ ಬಗ್ಗೆ ಸೂಚನೆಯನ್ನು ನೀಡುತ್ತೇನೆ. ಇಂಜಿನೀಯರಿಂಗ್ ಕಾಲೇಜುಗಳ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಾನು ಈಗಾಗಲೇ ಉತ್ತರವನು ಹೇಳಿದ್ದೇನೆ. ಖಾಸಗಿ ಶಾಲೆಗಳನ್ನು ರಾಷ್ಟ್ರೀಕರಣ ಮಾಡಿ ಎಂದು ಹೇಳಿದ್ದಾರೆ. ಖಾಸಗಿ ಶಾಲೆಗಳಲ್ಲಿ ಏನು ಅವ್ಯವಹಾರ ನಡೆಯುತ್ತಿದೆ ಎಂಬುದು ನಮ್ಮ ಗಮನಕ್ಕೂ ಬಂದಿದೆ. ಆದರೆ ಅದನ್ನು ಎಷ್ಟರ ಮಟ್ಟಿಗೆ ನಿಯಂತ್ರಣವನ್ನು ಮಾಡಬೇಕೋ ಅಷ್ಟರಮಟ್ಟಿಗೆ ನಿಯಂತ್ರಣವನ್ನು ಮಾಡಿದ್ದೇವೆ. ಸರ್ಕಾರವೇ ಎಲ್ಲಾ ಶಾಲೆಗಳನ್ನು ನಡೆಸಬೇಕೆಂದರೆ ಸ್ವಲ್ಪ ಕಷ್ಟದ ಕೆಲಸ. ಇವುಗಳನ್ನು ರಾಷ್ಟ್ರೀಕರಣ ಮಾಡುವುದಕ್ಕಾಗುವುದಿಲ್ಲ ಶ್ರೀಮಾನ್ ಎಡಿಯೂರಪ್ಪನವರು ಮಾತನಾಡುತ್ತಾ ಶಾಲಾ ಕಟ್ಟಡಗಳ ಬಗ್ಗೆ ಹೆಚ್ಚು ಆಸಕ್ತಿಯನ್ನು ತೆಗೆದುಕೊಂಡಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅವರ ಕ್ಷೇತ್ರದಲ್ಲಿರುವಂತಹ ಜ್ಯೂನಿಯರ್ ಕಾಲೇಜಿನ ಕಟ್ಟಡದ ಬಗ್ಗೆ ಕಳೆದ ವರ್ಷ ಹೇಳಿದ್ದರೂ ಇದುವರೆವಿಗೂ ಸರ್ಕಾರ ಆ ಬಗ್ಗೆ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದರು. ಆ ಬಗ್ಗೆ ಫೆಬ್ರವರಿ ತಿಂಗಳಲ್ಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ. ನಂತರ ಫಸ್ಟ್ ಗ್ರೇಡ್ ಕಾಲೇಜಿನ ಕಟ್ಟಡಕ್ಕೂ ಕಳೆದ ಸಾಲಿನಲ್ಲಿ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗದಿದ್ದರೂ, ಆ ಕಟ್ಟಡಕ್ಕೂ ಹಣವನ್ನು ಒದಗಿಸಿ ಕೊಟ್ಟಿದ್ದೇವೆ. ಖಾಸಗೀ ಪಾಲಿಟೆಕ್ನಿಕ್‌ಗಳು ಸರಿಯಾಗಿ ನಡೆಯುತ್ತಿಲ್ಲ ಎಂದು ಇವತ್ತು ಕನ್ನಡ ಪ್ರಭಾದಲ್ಲೂ ಈ ಬಗ್ಗೆ ಬಂದಿದೆ. ಆದರೂ ಕೂಡಾ ಪಾಲಿಟೆಕ್ನಿಕ್‌ಗಳನ್ನು ಕೊಡಬೇಕಾದರೆ ಬಿಗಿಯಾದ ಕ್ರಮ ಕೈಗೊಂಡಿದ್ದೇವೆ. ಈ ವರ್ಷ ಯಾವುದೇ ಖಾಸಗೀ ಪಾಲಿಟೆಕ್ನಿಕ್ ಕೊಡಬೇಕಾದರೂ ಕೂಡಾ

ಎಕ್ಸ್‌ಪರ್ಟ್ ಕಮಿಟಿಯಲ್ಲಿ ಎಲ್ಲಾ ಪ್ರೊಸೆಸ್ ಆಗಬೇಕಾಗುತ್ತದೆ. ಬಿಲ್ಡಿಂಗ್ ಇರಬೇಕು, ಹಣ ಇಷ್ಟೇ ಕಟ್ಟಬೇಕೆಂದು ಹೇಳಿ ಇದೆ. ಒಂದೊಂದು ಕೋರ್ಸ್‌ಗೆ ೧ ಲಕ್ಷ ಡಿಪಾಸಿಟ್ ಮಾಡುತ್ತೇವೆಂದು ಕೂಡಾ ಹೇಳಲಾಗಿದೆ. ಈ ವರ್ಷ ೨-೩ ಕೊಟ್ಟಿರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ಇವತ್ತು ಏನಾಗಿದೆ ಎಂದರೆ.. ....

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಕೊನೆಯಲ್ಲಿ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಡಿ. ಮಂಜುನಾಥ್.—ಇವತ್ತು ಯಾವ ಯಾವ ಪಾಲಿಟೆಕ್ನಿಕ್‌ಗಳು ಬಹಳ ದುಸ್ಥಿತಿಯಲ್ಲಿವೆಯೋ, ಸರಿಯಾಗಿ ನಡೆಯುತ್ತಿಲ್ಲವೋ ಅವುಗಳ ಬಗ್ಗೆ ಇನ್ನೊಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ತನಿಖೆ ಮಾಡಿಸಿ ಅಂತಹವನ್ನು ಡೀರೆಕಗ್ನೈಸ್ ಮಾಡುವುದಕ್ಕೂ ನಾನು ಹಿಂದೆ ಮುಂದೆ ನೋಡುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ವಯಸ್ಕರ ಶಿಕ್ಷಣದ ಬಗ್ಗೆ ಮಾನ್ಯ ಸದಸ್ಯರು ಒಂದು ಐಡಿಯಾ ಕೊಟ್ಟಿದ್ದಾರೆ. ಆ ಬಗ್ಗೆ ಇನ್‌ಸೆಂಟೀವ್ ಕೊಡಿ ಎಂದು ಹೇಳಿದ್ದಾರೆ. ಐ. ಆರ್. ಡಿ. ಪಿ. ಲೋನ್ ಕೊಡಿಸಿ ಎಂದು ಹೇಳಿದ್ದಾರೆ. ಹಾಗೆ ಮಾಡುವುದಕ್ಕೆ ಬರುವುದಿಲ್ಲ ಎಂದು ನಾನು ಹೇಳಿದೆ. ಬರುವ ರೀತಿಯಲ್ಲಿ ಮಾಡುವುದಾದರೆ ಕಷ್ಟ ಆಗಬಹುದು ಆದರೂ ಪ್ರಯತ್ನ ಮಾಡುತ್ತೇನೆ. ಜಿಲ್ಲಾಧಿಕಾರಿಗಳು ಈ ಬಗ್ಗೆ ಆಸಕ್ತಿ ವಹಿಸಬೇಕಾಗುತ್ತದೆ ಈ ಬಗ್ಗೆ ಅವರಿಗೆ ಜವಾಬ್ದಾರಿ ವಹಿಸಿ ಸರಿಯಾದ ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಬೆಲ್ಲದ್ ಅವರು ಮಾತನಾಡಿ, ಧಾರವಾಡದಲ್ಲಿನ ಪುಸ್ತಕ ಬಂಡಾರಕ್ಕೆ ಸೈಟ್ ಇದ್ದು ಅಲ್ಲಿ ಕಟ್ಟಡವನ್ನು ಕಟ್ಟಿಸಿ ಎಂದು ಹೇಳಿದರು. ಸ್ವಂತ ಕಟ್ಟಡ ಇಲ್ಲದೇ ಬಹಳ ತೊಂದರೆ ಆಗಿದೆ ಎಂದು ಅವರು ಹೇಳಿದರು. ಲೈಬ್ರರಿ ಆಕ್ಟ್ ಪ್ರಕಾರ ಮುನಿಸಿಪಲ್ ಆಕ್ಟ್ರಾಯ್‌ನಲ್ಲಿ ೩ ಪರ್ಸೆಂಟ್, ಮುನಿಸಿಪಲ್ ಮೋಟರ್ ವೆಹಿಕಲ್ ಟ್ಯಾಕ್ಸ್‌ನಲ್ಲಿ ೩ ಪರ್ಸೆಂಟ್, ಪ್ರೊಫೆಷನಲ್ ಟ್ಯಾಕ್ಸ್‌ನಲ್ಲಿ ೩ ಪರ್ಸೆಂಟ್ ಇದಕ್ಕಾಗಿಯೇ ಕೊಡಬೇಕೆಂದು ಇದೆ. ಅದರಲ್ಲಿ ಇವುಗಳನ್ನು ನಡೆಸಬೇಕೆಂದು ಇದೆ ಇದರಿಂದ ಬರತಕ್ಕ ಹಣದಲ್ಲಿ ಲೈಬ್ರರಿಗಳನ್ನು ನಡೆಸಬೇಕು ಎಂದು ಇದೆ. ಪರಿಸ್ಥಿತಿ ಏನಾಗಿದೆ ಎಂದರೆ, ಆಕ್ಟ್ರಾಯ್ ಹೋದಮೇಲೆ ಯಾವ ಮುನಿಸಿಪಾಲಿಟಿಗಳಿಂದಲೂ ಈ ಹಣ ಬರುತ್ತಾ ಇಲ್ಲ. ಆದರೂ ರಾಜ್ಯ ಸರ್ಕಾರ ಸುಮಾರು ೧ ಕೋಟಿ ೮೯ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟಿದೆ. ಲೈಬ್ರರಿಗಳು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಇದ್ದು ೧೬ ಕಡೆ ಗ್ರಂಥಾಲಯಕ್ಕೆ ಕಟ್ಟಡ ಇಲ್ಲ. ಇವುಗಳಿಗೆ ಕಟ್ಟಡ ಕಟ್ಟಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ಈ ಬಗ್ಗೆ ಸಿ. ಐ. ಟಿ. ಬಿ. ಗೆ ಜಾಗ ಕೊಡಲು ಕೇಳಿದ್ದು ಆ ಜಾಗಗಳಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರಯತ್ನ ಪಡುತ್ತೇವೆ. ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಬರತಕ್ಕ ಎಲ್ಲಾ ಮಂಡಲ ಪಂಚಾಯಿತಿ ಹೆಡ್ ಕ್ವಾರ್ಟರ್ಸ್‌ನಲ್ಲಿ ಲೈಬ್ರರಿಯನ್ನು ತೆರೆಯಬೇಕು. ಮಂಡಲ ಪಂಚಾಯಿತಿಯವರೇ ಅವುಗಳ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ಲೈಬ್ರರಿಗಳನ್ನು ಹೆಚ್ಚು ತೆಗೆಯಬೇಕೆಂದು ಮಾಡಿದ್ದೇವೆ. ಇವತ್ತು ಕೇವಲ ೫೧ ರೂಪಾಯಿ ಸಂಭಾವನೆ ಕೊಡುತ್ತಿದ್ದು ಯಾರೋ ಒಬ್ಬ ಮಾಸ್ತರು ಪುಸ್ತಕಗಳನ್ನು ತೆಗೆದುಕೊಂಡು ಬಂದು ಇಟ್ಟುಕೊಳ್ಳುವ ಪರಿಸ್ಥಿತಿ ಇದೆ ಮುಂದಕ್ಕೆ ಇದನ್ನು ಬದಲಾವಣೆ ಮಾಡಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಇವನ್ನು ತೆರೆಯಬೇಕೆಂದು ಇದ್ದೇವೆ. ಧಾರವಾಡದಲ್ಲಿ ಲೈಬ್ರರಿ ಕಟ್ಟಲು ಜಾಗ ಇದೆ ಅಲ್ಲಿ ಕಟ್ಟಡ ಕಟ್ಟಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವರ್ಷದಲ್ಲಿ ಅಲ್ಲಿ ಕಟ್ಟಡ ಕಟ್ಟುವುದಕ್ಕೆ ಪ್ರಯತ್ನಪಡುತ್ತೇವೆ. ಮಾನ್ಯ ಸದಸ್ಯರುಗಳು ವೃತ್ತಿಪರ ಶಿಕ್ಷಣದ ಬಗ್ಗೆ ಹೇಳಿದ್ದಾರೆ. ಅದನ್ನು ಮಾಡಿಸೋಣ. ಮಾನ್ಯ ಸದಸ್ಯರೊಬ್ಬರು ಸರೋಜಿನಿ ಕಮಿಟಿ ವಿಷಯವಾಗಿ ಹೇಳಿದ್ದಾರೆ. ಅದರಲ್ಲಿ ಅವರು ಹೇಳಿರುವುದು ಬಹುತೇಕ ಕನ್ನಡಿಗರಿಗೆ ಕೆಲಸ ಸಿಕ್ಕಿಲ್ಲ ಎಂದು. ಹಾಗೂ ವೃತ್ತಿಪರ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಿ ಎಂದು ಅವರು ಹೇಳಿದ್ದಾರೆ. ಆದರ ಕಡೆ ನಾವು ಹೆಚ್ಚು ಗಮನ ಕೊಡುತ್ತೇವೆಂದು ಹೇಳುತ್ತೇನೆ. ಇನ್ನು ಜಾರ್ಜ್ ಅವರು ಇಂಗ್ಲೀಷ್ ಮಾಧ್ಯಮದ ಶಾಲೆಗಳು ಬೇಕೆಂದು ಹೇಳಿದ್ದಾರೆ. ಈ ಬಗ್ಗೆ ನಾವು ಕಳೆದ ವರ್ಷ ಒಂದು ನೀತಿಯನ್ನು ಅನುಸರಿಸಿದ್ದೇವೆ. ಕರ್ನಾಟಕದಲ್ಲಿ ಇಂಗ್ಲೀಷ್ ಶಾಲೆಗಳನ್ನು ಕೊಡುವುದು ಬೇಡ ಎಂದು. ಅದೇ ರೀತಿಯಲ್ಲಿ ಕಲವು ಕಡೆ ಇವತ್ತು ಅವರುಗಳು ಸೆಂಟ್ರಲ್ ಬೋರ್ಡ್‌ಗೆ ಅಫಿಲಿಯೇಷನ್ ಕೇಳುತ್ತಿದ್ದಾರೆ. ಅದನ್ನು ಕೇಳುತ್ತಿರುವುದು that is another way of asking the permission.

೬-೦೦ ಪಿ ಎಂ

ಈಗ ಅದಕ್ಕೆ ನಾವು ಏನು ಮಾಡಿದ್ದೇವೆಂದರೆ. ಇದರ ಬಗ್ಗೆ ಬಹಳ ದೊಡ್ಡ ಚರ್ಚೆಯಾಯಿತು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇಲ್ಲಿಯುವರೆಗೆ ಸರ್ಕಾರದ ಅನುಮತಿಯನ್ನು ಪಡೆದು ೧ರಿಂದ ೭ನೇ ತರಗತಿಯುವರೆಗೆ ಯಾರು ಶಾಲೆಗಳನ್ನು ನಡೆಸುತ್ತಿದ್ದಾರೆ ಅಂತಹವರಿಗೆ ಶಾಲೆಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಹೊಸದಾಗಿ ಶಾಲೆಗಳನ್ನು ಕೊಡುವುದರ ಬಗ್ಗೆ ಕ್ಯಾಬಿನೇಟ್ ಸಬ್ ಕಮಿಟಿಯಲ್ಲಿ ತೀರ್ಮಾನ ತೆಗೆದುಕೊಂಡು ಪಾಲಿಸಿ ಡಿಸಿಷನ್ ಮಾಡಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.— ಸಬ್ ಕಮಿಟಿಯಲ್ಲಿ ಯಾರು ಯಾರು ಇದ್ದಾರೆ?

ಶ್ರೀ ಡಿ ಮಂಜುನಾಥ್.— ನಾನು ಮಾನ್ಯ ರಾಚಯ್ಯನವರು, ಜೆ. ಹೆಚ್. ಪಟೇಲರು ಲಕ್ಷ್ಮೀಸಾಗರ್‌ರವರು ಇದ್ದಾರೆ. ಡಾ ಅಂಬೇಡ್ಕರ್ ಕಾಲೇಜಿನ ವಿಷಯದಲ್ಲಿ ಮಾನ್ಯ ಜಾರ್ಜ್‌ರವರು ಹೇಳಿದರು. ಯಾವ ಕಟ್ಟಡದಲ್ಲಿ ಅವರು ನಡೆಸ ತ್ತಿದ್ದಾರೆನ್ನುವುದು ಸರಿಯಾಗಿ ಗೊತ್ತಿಲ್ಲ. ಅದು ಕಾರ್ಪೊರೇಷನ್ ಕಟ್ಟಡ ಇರಬಹುದು. ಸರ್ಕಾರಿ ಶಾಲೆಗಳು ಇರುವ ಕಡೆಗಳಲ್ಲಿ ಕಟ್ಟಡಗಳು ಇಲ್ಲವೆಂದು ಹೇಳಿದರು ಅದರಬಗ್ಗೆ ವಿಚಾರ ಮಾಡುತ್ತೇನೆಂದು ಹೇಳುತ್ತೇನೆ. ಮಾನ್ಯ ಜಯಕುಮಾರ್‌ರವರು ಮಾತನಾಡುತ್ತಾ ಒಂದು ವಿಷಯವನ್ನು ಹೇಳಿದರು. ನಿರಕ್ಷತೆಯನ್ನು ಹೋಗಲಾಡಿಸುವುದಕ್ಕೆ ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದರು. ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಶಿಕ್ಷಣ ಇಲಾಖೆಯಲ್ಲಿ ಏನೇನು ಕೆಲಸ ಮಾಡುತ್ತೀರಿ ಎಂದರೆ ನಮಗೆ ಸಾಕಷ್ಟು ಕೆಲಸವಿದೆ. ಸೈನ್ಸ್ ಸಬ್ಜೆಕ್ಟ್ ಬಗ್ಗೆ ಎಕ್ವಿಪ್‌ಮೆಂಟ್ ಇಡುವುದರ ಬಗ್ಗೆ ಯೋಚನೆ ಮಾಡಿದ್ದೇವೆ. ಮೊಬೈಲ್ ಲೈಬ್ರರಿ ಅದರ ಜೊತೆಗೆ ಟೆಕ್ಸ್ಟ್ ಬುಕ್‌ಗಳನ್ನು ನಿಯಂತ್ರಣ ಮಾಡುವುದು ಇವುಗಳನ್ನೆಲ್ಲ ಮಾಡಲಿಕ್ಕೆ ಯೋಚನೆ ಮಾಡಿದ್ದೇವೆ. ತರಬೇತಿ ಕೊಡುವ ವಿಷಯದಲ್ಲಿ ಹೊಸ ಶಿಕ್ಷಣ ನೀತಿ ಬಂದ ಮೇಲೆ ಎಲ್ಲವನ್ನು ಹೊಸದಾಗಿ ಮಾಡಬೇಕೆಂದು ಮಾಡಿದ್ದೇವೆ. ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುತ್ತಾ ಎಲ್ಲಾ ಶಾಲೆಗಳಲ್ಲಿ ಮಕ್ಕಳಿಗೆ ಹಾಲನ್ನು ಕೊಡುವ ವ್ಯವಸ್ಥೆ ಮಾಡಿಯೆಂದು ಹೇಳಿದರು. ಹಾಲನ್ನು ಮಕ್ಕಳಿಗೆ ಕೊಟ್ಟರೆ ನನಗೂ ಬಹಳ ಸಂತೋಷ. ಮಿಲ್ಕ್ ಫೆಡರೇಷನ್‌ರವರನ್ನು ಕೇಳಿ ಕೊಳಚೆ ಪ್ರದೇಶಗಳಲ್ಲಿರತಕ್ಕ ಶಾಲೆಗಳ ಮಕ್ಕಳಿಗೆ ಪುಕ್ಕಟಯಾಗಿ ಹಾಲು ಕೊಡಿಸುವ ಬಗ್ಗೆ ಫೆಡರೇಷನ್‌ರವರು ಕೂಡ ಮಾತನಾಡಿ ಪರಿಶೀಲನೆ ಮಾಡುತ್ತೇವೆ. ಅನೇಕ ಶಾಲೆಗಳಲ್ಲಿ ಜವಾನರು ಇಲ್ಲವೆಂದು ಹೇಳಿದರು. ಅದು ನನಗೆ ಗೊತ್ತಿದೆ. ಹೈಯರ್ ಸೆಕೆಂಡರಿ ಶಾಲೆಗಳಿಗೆ, ಪ್ರಾಥಮಿಕ ಶಾಲೆಗಳಿಗೆ, ಹೈಸ್ಕೂಲ್‌ಗಳಿಗೆ ಜವಾನರ ಹುದ್ದೆಗಳನ್ನು ಕೊಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಮುಂದಿನ ವರ್ಷ ಇವರನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ, ಮಾನ್ಯ ಎನ್ ಎಚ್. ಗೌಡರು ಶಿಕ್ಷಣ ಎಂದರೇನು ಎನ್ನುವುದರ ಬಗ್ಗೆ ಬಹಳ ಚೆನ್ನಾಗಿ ಹೇಳಿದರು. ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿಯನ್ನು ನೋಡಬೇಕಾದರೆ ಅವರು ಹೇಳಿದ ಪ್ರಕಾರ ಶಿಕ್ಷಕ ಎನ್ನುವುದಕ್ಕೆ ಮೂರು ಅರ್ಥ ಹೇಳಿದರು. ಅದನ್ನು ತಿಳಿದುಕೊಂಡು ಎಲ್ಲರೂ ಕೆಲಸ ಮಾಡುವುದಾದರೆ ಬಹಳ ಸಂತೋಷ. ಶಿಕ್ಷಕರ ಮನಸ್ಸನ್ನು ಬದಲಾಯಿಸುವುದಕ್ಕೆ ಬಹಳಷ್ಟು ಪ್ರಯತ್ನ ಮಾಡಿದ್ದೇನೆ. ೨೦-೨೫ ಸಮ್ಮೇಳನಗಳಲ್ಲಿ ಹೇಳಿದ್ದೇನೆ. ಶಿಕ್ಷಕರಿಗೆ ಗುರುತರವಾದ ಜವಾಬ್ದಾರಿಯಿದೆ. ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಮಾಡುವ ಜವಾಬ್ದಾರಿಯನ್ನು ನಿಮಗೆ ಕೊಟ್ಟಿದ್ದೇವೆ. ಆ ಹೊಣೆಗಾರಿಕೆಯನ್ನು ಸರಿಯಾದ ರೀತಿಯಲ್ಲಿ ಬೆಳೆಸಿಕೊಂಡು ಹೋಗಬೇಕು, ಅವರು ಸರಿಯಾಗಿ ಕೆಲಸ ಮಾಡುವುದಕ್ಕೆ ನಾನು ಹೇಳಿದ್ದೇನೆ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ನಾನು ಈಗಾಗಲೇ ಹೇಳಿದ್ದೇನೆ. ಶಿಕ್ಷಕರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಎಲ್ಲಾ ಶಿಕ್ಷಕರು ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಪ್ರೈಮರಿ ಎಜುಕೇಶನ್ ಬುನಾದಿ ಸರಿಯಾಗಿ ಆಗುತ್ತದೆ.

ಶ್ರೀ ಯು. ಭೂಪತಿ.— ಶಿಕ್ಷಕರಿಗೆ ಅರ್ಥವಾಗುವ ಪುಸ್ತಕಗಳನ್ನು ಬರೆಯಿಸಿ. ೭ನೇ ತರಗತಿಯ ವಿಜ್ಞಾನ ಅವರಿಗೆ ಅರ್ಥವಾಗುವುದಿಲ್ಲ

ಶ್ರೀ ಡಿ. ಮಂಜುನಾಥ್.— ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಓರಿಯೆಂಟೇಷನ್ ಕೋರ್ಸ್ ಅವರಿಗೆ ತರಬೇತಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳಿದರು. ಟ್ರೈನಿಂಗ್ ಆದವರು ಇದ್ದಾರೆ ತರಬೇತಿಯ

ಕಾಲದಲ್ಲಿ ಅವರಿಗೆ ಸೈನ್ಸ್ ಸಬ್ಜೆಕ್ಟ್ ಇಟ್ಟಿದ್ದೇವೆ ಸೈನ್ಸ್ ಸಬ್ಜೆಕ್ಟ್‌ಗೆ ಲ್ಯಾಬರೇಟರಿ ಇರಬೇಕೆಂದೂ ಪಾಸ್ಕ್ ಅಂದರೇನು ಥರ್ಮಾಸ್ ಫ್ಲಾಸ್ಕ್ ಅಂದರೇನು ಗೊತ್ತಾಗುವುದಿಲ್ಲವೆಂದು ಹೇಳಿದರು. ಮೊಬೈಲ್ ಲೈಬ್ರರಿ ಇದೆ ಅದನ್ನು ಎಲ್ಲಾ ಕಡೆಗೂ ಕಳಿಸುತ್ತಿದ್ದೇವೆ. ಇದರ ಜೊತೆಗೆ ಒಟ್ಟಿನಲ್ಲಿ ಬೋಧನೆ ಮಾಡತಕ್ಕ ವಿಷಯಗಳನ್ನು ತಿಳಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಆಮೇಲೆ ಮಡಿಕೇರಿಯ ಶ್ರೀ ಚಿಣ್ಣಪ್ಪನವರು ಒಂದು ವಿಷಯ ಹೇಳಿದರು. ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಪರೀಕ್ಷೆಗೆ ಕೂಡದೆ ಪಾಸಾಗಿದ್ದಾರೆ ಎಂದು ಅವರು ಹೇಳಿದ್ದಾರೆ. ಇದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಆಗಿದೆ ಎಂದು ಅವರು ಏನು ಹೇಳಿದ್ದಾರೆ ಇದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಆರ್. ಎನ್. ನಾಯಕ್.— ಬಹುಶಃ ತಾವು ಬೆಂಗಳೂರಿನಲ್ಲಿ ಇರಲಿಲ್ಲವೇನೊ.

ಶ್ರೀ ಡಿ. ಮಂಜುನಾಥ್.— ಪರೀಕ್ಷೆಯಲ್ಲಿ ಕೂಡದೇ ಪಾಸಾಗಿದ್ದಾರೆ ಎಂದು ಹೇಳಿದರು. ಇದು ನನ್ನ ಗಮನಕ್ಕೆ ಬಂದಿಲ್ಲ. ಆದರೆ ಪರೀಕ್ಷೆಗಳು ಸರಿಯಾಗಿ ನಡೆಯುತ್ತಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇನೆ. ವಿಶ್ವವಿದ್ಯಾನಿಲಯದಲ್ಲಿ ಏನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ ಚಾನ್ಸಲರ್‌ಗೆ ಅಧಿಕಾರ ಇದೆ. ಸರ್ಕಾರವೇ ನೇರವಾಗಿ ಕ್ರಮ ತೆಗೆದು ಕೊಳ್ಳುವುದಿಲ್ಲ. ಆದರೆ ಇದರಲ್ಲಿ ಪ್ರಮುಖವಾದ ಲೋಪದೋಷಗಳು ಕಂಡುಬಂದಿರುವುದರಿಂದ ಇದಕ್ಕೆ ನಾವು ಸಹ ಇವತ್ತಿನ ದಿವಸ ಸಂಬಂಧಪಟ್ಟವರಿಗೆ ಹೇಳಬೇಕಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಪರೀಕ್ಷೆಯಲ್ಲಿ ಕುಳಿತುಕೊಳ್ಳದೇ ಪಾಸಾಗಿದ್ದಾರೆ ಎಂದು ಹೇಳಿದ್ದುದು, ಕೇಳಿ ನನಗಂತೂ ಆಶ್ಚರ್ಯ ಆಯಿತು.

ಶ್ರೀ ಬಿ. ಬಸವಲಿಂಗಪ್ಪ.— ಬೇರೆಯವರಿಂದ ಬರೆಯಿಸಿ ಪಾಸಾಗಿರುತ್ತಾರೆ. ಇದು ನಡೆಯುತ್ತಿದೆ.

ಶ್ರೀ ಡಿ. ಮಂಜುನಾಥ್.— ಆಮೇಲೆ ಶ್ರೀ ಮಲ್ಲಪ್ಪನವರು ಶಿಕ್ಷಕರ ಕೊರತೆ ಇದೆ ಎಂದು ಹೇಳಿದರು. ಇದನ್ನು ತುಂಬುತ್ತೇವೆ. ಹಾಗೆಯೇ ವಸತಿ ಗೃಹಗಳನ್ನು ಕಟ್ಟಿಕೊಡಬೇಕೆಂದು ಹೇಳಿದ್ದಾರೆ. ವಸತಿ ಗೃಹಗಳನ್ನು ನಿರ್ಮಾಣ ಮಾಡುವುದು ಕಷ್ಟ ಸಾಧ್ಯದ ಕೆಲಸ. ಹಿಂದೆ ಹುಡ್ಕೊ ಸ್ಕೀಮ್‌ನಲ್ಲಿ ಉಪಾಧ್ಯಾಯರಿಗೆ ಅನೇಕ ಮನೆಗಳನ್ನು ಕಟ್ಟಿಸಿಕೊಟ್ಟಿದ್ದು ಆಯಿತು. ಹಣ ಒದಗಿಸುವುದೇ ಕಷ್ಟವಾಯಿತು. ಇವತ್ತು ಯಾವ ಶಿಕ್ಷಕರೇ ಆಗಲಿ, ಹಳ್ಳಿಗಳಲ್ಲಿ ಅವರಿಗೆ ಬಹಳ ಗೌರವ ಇದೆ ಸರಿಯಾದ ರೀತಿಯಲ್ಲಿ ಮಕ್ಕಳ ಹಿತದೃಷ್ಟಿಯಿಂದ, ಶಾಲೆಯನ್ನು ಅಭಿವೃದ್ಧಿಗೆ ತರಬೇಕು ಎಂದು ಪ್ರಾಮಾಣಿಕವಾಗಿ ಶ್ರದ್ಧೆಯಿಂದ ಕೆಲಸ ಮಾಡುವ ಉಪಾಧ್ಯಾಯರಿಗೆ ಎಲ್ಲಾ ಸೌಕರ್ಯಗಳನ್ನು ಹಳ್ಳಿಯವರೇ ಮಾಡಿಕೊಡುತ್ತಾರೆ. ಹಳ್ಳಿಗಳಲ್ಲಿ ಜನ ಒಳ್ಳೆಯವರಿದ್ದಾರೆ. ಸೇವಾಮನೋಭಾವದಿಂದ ಯಾವ ಶಿಕ್ಷಕರು ಅಲ್ಲಿಗೆ ಹೋಗುತ್ತಾರೆ, ಅಲ್ಲಿ ಅವರಿಗೆ ಒಳ್ಳೆಯ ಮರ್ಯಾದೆ ಕೊಡುತ್ತಾರೆ. ಆತನಿಗೆ ಮನೆಯನ್ನೂ ಕೊಡುತ್ತಾರೆ, ಎಲ್ಲರನ್ನೂ ಇವತ್ತು ವರ್ಗ ಮಾಡುತ್ತಿದ್ದೀರಿ, ಅಲ್ಲಿ ಅವರಿಗೆ ಮನೆಗಳೇ ಇರುವುದಿಲ್ಲವೆಂದು ಹೇಳಿದರು. ಇವತ್ತು ಇದೊಂದೇ ಕಾರಣ ಅಲ್ಲ. ಮನೆಗಳು ಇಲ್ಲದ ಕಾರಣಕ್ಕೋಸ್ಕರ ಹೋಗದೆ ಇರುವ ಉಪಾಧ್ಯಾಯರು ಬಹಳ ಕಡಿಮೆ ಪ್ರಮಾಣದಲ್ಲಿ ಇದ್ದಾರೆ. ವಸತಿ ಗೃಹಗಳನ್ನು ಎಲ್ಲರಿಗೂ ನಿರ್ಮಾಣ ಮಾಡುವುದು ಕಷ್ಟ. ಏಕೆಂದರೆ ಇವರು ಲಕ್ಷಾಂತರ ಜನ ಇದ್ದಾರೆ, ಮನೆ ಕೊಡುವುದು ಕಷ್ಟ ಇದೆ. ಆಮೇಲೆ, ಗ್ರಾಮಾಂತರ ಪ್ರದೇಶಗಳಲ್ಲಿ ಜೂನಿಯರ್ ಕಾಲೇಜುಗಳಲ್ಲಿ ವಿಜ್ಞಾನ ವಿಷಯ ಇರಬೇಕೆಂದು ಹೇಳಿದ್ದಾರೆ ಕಳೆದವರ್ಷ ಇದನ್ನು ಬಹಳ ಸಾರಿ ಯೋಚನೆ ಮಾಡಿಯೇ ಮಾಡಿದ್ದುದು ಗ್ರಾಮಾಂತರ ಮಕ್ಕಳಿಗೆ ಬೇರೆ ಆರ್ಟ್ಸ್ ಸಬ್ಜೆಕ್ಟ್ ಕೊಟ್ಟು ವಿಜ್ಞಾನ ಇಲ್ಲವೆಂದರೆ ಹೇಗೆ ? ಜೂನಿಯರ್ ಕಾಲೇಜುಗಳಲ್ಲಿ ಕೆಲವು ಕಡೆ ಮಂಜೂರು ಮಾಡಿದ್ದೇವೆ. ಇನ್ನೂ ಕೆಲವು ಕಡೆ ಸರ್ಕಾರಿ ಕಾಲೇಜು ಆಗಿದ್ದು, ನಮ್ಮದೇ ಆದ ವ್ಯವಸ್ಥೆ ಇದ್ದು ಅದು ಸಂಯುಕ್ತ ಕಿರಿಯ ಕಾಲೇಜು ಆಗಿದ್ದರೆ ಅಲ್ಲಿ ವಿಜ್ಞಾನ ವಿಷಯ ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಪಾಲಿಟೆಕ್ನಿಕ್‌ಗಳಲ್ಲಿ ಕಂಪ್ಯೂಟರ್ ಸೈನ್ಸ್ ಪ್ರಾರಂಭ ಮಾಡಿ ಎಂದು ಹೇಳಿದರು. ಸ್ವಲ್ಪ ಹಣ ಖರ್ಚಾಗುತ್ತದೆ. ಹಣ ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ, ಇದನ್ನು ಮುಂದಿನ ವರ್ಷ ಯೋಚನೆ ಮಾಡುತ್ತೇನೆ. ನಂತರ ಸ್ಪೋರ್ಟ್ಸ್ ಬಗ್ಗೆ ಹೇಳಿದ್ದಾರೆ. ಶ್ರೀ ಮಲ್ಲಪ್ಪನವರು ಇದರ ಬಗ್ಗೆ ಹೆಚ್ಚಿನ ಆಸಕ್ತಿ ಇದೆ, ಏನಾಗಿದೆ ಎಂದರೆ. ಹಿಂದೆ ಸ್ಕೌಟ್ಸ್ ಅಂಡ್ ಸ್ಪೋರ್ಟ್ಸ್ ವಿದ್ಯಾ ಇಲಾಖೆಯಲ್ಲಿತ್ತು. ಈಗ ಯುವಜನ ಸೇವಾ ಇಲಾಖೆಗೆ ಇದು ಹೋದ ಮೇಲೆ ಈ ಬಗ್ಗೆ ಚಟುವಟಿಕೆಗಳು ಕಡಿಮೆಯಾಗಿದೆ, ಎಂದು ಕೇಳಿದೆ. ಇದು ಯುವಜನ ಸೇವಾ ಇಲಾಖೆಗೆ

ಹೋಗಿರುವುದರಿಂದ ಚಟುವಟಿಕೆಗಳು ಕಡಿಮೆಯಾಗಿದೆ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದೆ. ಅದಕ್ಕೆ ಅವರು ಇದರ ಬಗ್ಗೆ ಯೋಚನೆ ಮಾಡೋಣ ಎಲ್ಲಾ ಚಟುವಟಿಕೆಗಳು ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಏರ್ಪಾಡು ಮಾಡುತ್ತೇನೆ ಎಂದು ಹೇಳಿದರು. ಆಮೇಲೆ ಮಾಯಕೊಂಡದಲ್ಲಿ ಜೂನಿಯರ್ ಕಾಲೇಜು ಕೊಡಬೇಕೆಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಕ್ಕೆ ಕಾಲೇಜುಗಳನ್ನು ಕೊಡಬೇಕೆಂದು ನಾವು ಈಗಾಗಲೇ ಹೇಳಿದ್ದೇನೆ. ಫಸ್ಟ್ ಗ್ರೇಡ್ ಕಾಲೇಜ್ ಕೊಡುವ ಬಗ್ಗೆ ಹಣದ ತೊಂದರೆ ಇದೆ. ಎಷ್ಟರಮಟ್ಟಿಗೆ ಫಸ್ಟ್ ಗ್ರೇಡ್ ಕಾಲೇಜುಗಳನ್ನು ಕೊಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಯೋಚಿಸುತ್ತಿದ್ದೇವೆ. ಮುನ್ನೆಚ್ಚರಿಕೆಯಾಗಿ ಒಂದು ವಿಶ್ವವಿದ್ಯಾನಿಲಯದ ಶಿಫಾರಸ್ ಇಲ್ಲದೆ ಕೊಡಕೂಡದೆಂಬ ವಿಚಾರವೂ ಸರ್ಕಾರದ ಪರಿಶೀಲನೆಯಲ್ಲಿದೆ. ಸರ್ಕಾರಿ ಕಾಲೇಜು ಆಗಿದ್ದರೂ ಕೂಡ ವಿಶ್ವವಿದ್ಯಾನಿಲಯಕ್ಕೆ ಅಫಿಲಿಯೇಷನ್ ಆಗಬೇಕು, ಹಣ ಕಟ್ಟಬೇಕು. ಈ ರೀತಿ ಕಾಲೇಜುಗಳನ್ನು ಕೊಡುವ ಸಂದರ್ಭ ಬರಬಹುದು ಅದಕ್ಕೋಸ್ಕರ ಹಣ ಕಟ್ಟಿ ಎಂದು ಹೇಳಿ ೧೮ ಕಾಲೇಜುಗಳಿಗೆ ಹಣಕಟ್ಟಿಸಿ, ಅಫಿಲಿಯೇಷನ್‌ಗೆ ಅರ್ಜಿ ಹಾಕಿಸಿದೆ. ಅದರ ಮೇಲೆ ಸರ್ಕಾರ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಬಹುತೇಕ ಇಲ್ಲಿಯೂ ಹಣದ ತೊಂದರೆಯೂ ಇದೆ. ಕಂಪ್ಲಿಯಲ್ಲಿ ಬಾಲಕಿಯರ ಕಾಲೇಜು ಕೊಡಬೇಕೆಂದು ತೀರ್ಮಾನ ಮಾಡಿದೆ. ಕಳೆದ ವರ್ಷ ಕೊಟ್ಟಿರುವ ಕಾಲೇಜುಗಳಿಗೆ ವ್ಯವಸ್ಥಿತವಾದ ಕಟ್ಟಡ ಮತ್ತಿತರ ಎಲ್ಲಾ ಸೌಲಭ್ಯಗಳನ್ನು ಒದಗಿಸದ ಹೊರತು ಬೇರೆ ಕಡೆ ಕೊಡಬಾರದೆಂದು ತೀರ್ಮಾನ ಮಾಡಿದೆ. ಈ ವರ್ಷ ಮತ್ತೆ ಕೊಡಬೇಕೇ ಬೇಡವೇ ಎಂಬ ಬಗ್ಗೆ ಸಂಪುಟದಲ್ಲಿ ನಿರ್ಣಯ ಮಾಡಬೇಕಾಗಿದೆ. ಈ ವಿಷಯದ ಬಗ್ಗೆ ಸದ್ಯಕ್ಕೆ ಉತ್ತರ ಹೇಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಲಕ್ಕಪ್ಪನವರು ಮಾತನಾಡುತ್ತಾ ಒಂದು ವಿಷಯವನ್ನು ಹೇಳಿದರು ವರ್ಗದ ವಿಷಯದಲ್ಲಿ ಹೇಳಿದ್ದಾರೆ. ಆ ಮೇಲೆ ವಿದ್ಯಾವಂತರ ಸಂಖ್ಯೆ ಜಾಸ್ತಿಯಾಗಿದೆ, ಹಣ ವ್ಯವಸ್ಥಿತವಾಗಿ ಬಿಡುಗಡೆ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಪಟ್ಟಣದಲ್ಲಿಯೇ ಬೇರೆ ವ್ಯವಸ್ಥೆ, ಹಳ್ಳಿಗಳಲ್ಲಿಯೇ ಬೇರೆ ವ್ಯವಸ್ಥೆ ಇದೆ ಎಂದು ಹೇಳಿದ್ದಾರೆ. ಜನರಿಂದ ಟ್ಯಾಕ್ಸ್ ತೆಗೆದುಕೊಳ್ಳುತ್ತೀರಿ, ವ್ಯವಸ್ಥಿತವಾಗಿ ವಿದ್ಯಾ ಇಲಾಖೆ ನಡೆಯುತ್ತಿಲ್ಲವೆಂದು ಹೇಳಿದ್ದಾರೆ. ಹಳ್ಳಿ ಶಾಲೆಗಳ ಬಗ್ಗೆ ಹೆಚ್ಚು ಗಮನ ಕೊಡಬೇಕೆಂಬುದೇ ನನ್ನ ಇಚ್ಛೆ. ಹಳ್ಳಿಯಲ್ಲಿ ಎಲ್ಲಾ ಸೌಲಭ್ಯ ಸಿಗುವ ಸಾಧ್ಯತೆಗಳು ಇವೆ. ಅದೇ ಪಟ್ಟಣದ ಶಾಲೆಗಳು, ಅದರಲ್ಲೂ ಬೆಂಗಳೂರಿನಲ್ಲಿ ಎಲ್ಲಾ ಶಾಲೆಗಳೂ ಬಾಡಿಗೆ ಕಟ್ಟಡದಲ್ಲಿಯೇ ನಡೆಯುತ್ತಿವೆ. ಆಟದ ಮೈದಾನ ಇಲ್ಲ ; ಗ್ರಾಮಾಂತರ ಪ್ರದೇಶಗಳಲ್ಲಿ ಸ್ಕೂಲುಗಳಿಗೆ ಸರಿಯಾದ ಜಾಗ ಸಿಗುತ್ತದೆ, ಎನ್ ಆರ್. ಇ ಪಿ. ಯೋಜನೆಯಡಿಯಲ್ಲಿ ಕಟ್ಟಡ ಕಟ್ಟಿದ್ದಾರೆ. ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವೂ ಸಹ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಶಾಲೆಗಳ ಬಗ್ಗೆ ಗಮನ ಕೊಡಬೇಕು. ಜಿಲ್ಲಾ ಪರಿಷತ್ ಬಂದಮೇಲೆ ಈ ಪ್ರಾಥಮಿಕ ಶಾಲೆಗಳ ಜವಾಬ್ದಾರಿಯನ್ನು ಅವರಿಗೆ ವಹಿಸುತ್ತೇವೆ. ಆದ್ದರಿಂದ ತಾವೂ ಸಹ ಪ್ರಯತ್ನ ಮಾಡಿ, ಸ್ಕೂಲ್ ಕಟ್ಟಡಗಳನ್ನು ಕಟ್ಟುವುದಕ್ಕೆ ಎಲ್ಲಾ ರೀತಿಯ ಸಹಕಾರ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಭೂಪತಿಯವರು ಒಂದು ಮಾತು ಹೇಳಿದರು. ಈ ಬಜೆಟ್‌ನಲ್ಲಿ ಒದಗಿಸಿರುವ ಹಣ ತುಂಬಾ ಕಡಿಮೆ ಎಂದು ಹೇಳಿದರು. ಕೇಂದ್ರದ ೧.೨ ಎಂದು ಹೇಳಿದರು. ನಮ್ಮ ಪ್ರಧಾನ ಮಂತ್ರಿಯವರೂ ಸಹ ಕಳೆದ ವರ್ಷ ೩೫೨ ಕೋಟಿ ರೂಪಾಯಿಗಳ ಬಜೆಟ್ ಇದ್ದರೆ, ಈ ವರ್ಷ ೬೦೦ ಕೋಟಿ ರೂಪಾಯಿಗಳ ಬಜೆಟ್ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ, ರಾಜ್ಯದ ವೆಚ್ಚ ೩೬೮೭ ಕೋಟಿ ರೂಪಾಯಿ, ಇದರಲ್ಲಿ ೫೪೫ ಕೋಟಿ ರೂಪಾಯಿಗಳು ವಿದ್ಯಾ ಇಲಾಖೆಗೆ ಬರುತ್ತದೆ. ೧೪.೭೮ ಪರ್ಸೆಂಟ್ ಬರುತ್ತದೆ. ಕೇಂದ್ರದಲ್ಲಿ ೪.೩ ಪರ್ಸೆಂಟ್ ಖರ್ಚು ಮಾಡುತ್ತಿದ್ದಾರೆ. ಕಳೆದ ವರ್ಷ ೧೭–೧೮ ಪರ್ಸೆಂಟ್ ಇತ್ತು. ಇದಕ್ಕೆ ಹಣ ಸಾಲದು. ಇವತ್ತು ವಿದ್ಯಾ ಇಲಾಖೆಗೆ ಎಲ್ಲಾ ರೀತಿಯ ಸೌಲಭ್ಯ ಕೊಡಬೇಕು, ಪುಸ್ತಕ ಭಂಡಾರ ಕೊಡ ಬೇಕು, ಲ್ಯಾಬೊರೇಟರಿ, ಲೈಬ್ರರಿ ಕಡ್ಡಾಯವಾಗಿ ಕೊಡಬೇಕು. ಇವೆಲ್ಲದಕ್ಕೂ ಹಣ ಸಾಲುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಅರಿಕೆ ಮಾಡಿಕೊಂಡಿದ್ದೇನೆ. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಕೊಳ್ಳುವ ವಿಚಾರದಲ್ಲಿ ಪ್ರಮುಖ ಪಾತ್ರ ನಾವು ವಹಿಸಿದ್ದೇವೆ, ಇದು ರಾಷ್ಟ್ರೀಯ ಕಾರ್ಯಕ್ರಮ, ಇದರಿಂದ ರಾಜ್ಯದ ಅಭಿವೃದ್ಧಿ ಕೆಲಸಗಳಿಗೆ ಹಣ ಜಾಸ್ತಿ ಬರುತ್ತದೆ. ೧೦ ಕೋಟಿ ರೂಪಾಯಿಗಳನ್ನು ನಮಗೆ ಕಟ್ಟಡ ಕಟ್ಟುವುದಕ್ಕೆ ಕೊಡಿ ಎಂದು ಕೇಳಿದ್ದೇನೆ. ಇದರ ಬಗ್ಗೆ ಮತ್ತೆ ಮಾತನಾಡಿ, ಕಟ್ಟಡಗಳನ್ನು ಕೊಡುವ ಬಗ್ಗೆ ವ್ಯವಸ್ಥೆ ಮಾಡುತ್ತೇನೆ. ಈಗ ನಾನು ಆಗಲೇ ಹೇಳಿದಹಾಗೆ

ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಷನ್ ಜಿಲ್ಲಾ ಪರಿಷತ್ತಿಗೆ ಹೋಗುತ್ತದೆ. ಹೈಯರ್ ಎಜುಕೇಷನ್ ಮಾತ್ರ ನಮ್ಮ ಕೈಯಲ್ಲಿರುತ್ತದೆ. ಫಸ್ಟ್ ಗ್ರೇಡ್ ಕಾಲೇಜು, ಜೂನಿಯರ್ ಕಾಲೇಜು ಗಳನ್ನು ನಾವು ಮಾಡಲೇ ಬೇಕಾಗುತ್ತದೆ. ಇವುಗಳಿಗೆ ವ್ಯವಸ್ಥಿತವಾದ ಕಟ್ಟಡ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ಹಣ ಬೇಕಾಗುತ್ತದೆ. ಆದುದರಿಂದ ಇವತ್ತು ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡತಕ್ಕ ಹಣ ಏನಿದೆ ಅದು ಬಹಳ ಕಡಿಮೆ, ೧೪.೬೨ ಪರ್ಸೆಂಟ್ ಇದಕ್ಕಾಗಿ ಖರ್ಚಾಗುತ್ತದೆ. ಈ ದಿಸೆಯಲ್ಲಿ ಇವತ್ತಿನದಿವಸ ಹಣದ ಕೊರತೆಯಿಂದ ಸರಿಯಾದ ಸವಲತ್ತುಗಳನ್ನು ಕೊಡದೆ ಸಾಕಷ್ಟು ಅಭಿವೃದ್ಧಿಯಾಗುತ್ತಿಲ್ಲ. ಇವತ್ತು ಎಂಟು ಸಾವಿರ ಜನ ಉಪಾಧ್ಯಾಯರು ಬೇಕು. ಅಡಿಷನಲ್ ಹ್ಯಾಂಡ್ಸ್ ಬೇಕು, ಇದಕ್ಕೂ ಸಹ ಸರಕಾರ ದೊಡ್ಡಮನಸ್ಸು ಮಾಡಿ ಅಷ್ಟು ಜನರನ್ನು ಕೊಟ್ಟರೆ, ಸಧ್ಯಕ್ಕಿರುವ ಶಾಲೆಗಳನ್ನು ಸುಧಾರಿಸಬಹುದು. ಕೊನೆಯು ದಾಗಿ ನಮ್ಮ ಸ್ನೇಹಿತರಾದ ಶ್ರೀ ಇದಿನಬ್ಬರವರು ಒಂದು ಮಾತು ಹೇಳಿದರು. ಅವರು ಕನ್ನಡ ಪಂಡಿತರು ಇದ್ದಾರೆ. ನನಗೆ ತುಂಬಾ ಸ್ನೇಹಿತರು. ಅವರ ಕ್ಷೇತ್ರದಲ್ಲಿ ಒಂದು ಸ್ಕೂಲ್ ಇದೆ. ಆ ಸ್ಕೂಲ್‌ಗೆ ನನ್ನನ್ನೂ ಸಹ ಕರೆದುಕೊಂಡು ಹೋಗಿದ್ದರು. ಅದು ಬಹಳ ಚೆನ್ನಾಗಿದೆ. ನಾನು ಅದರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದೆ. ಖಾಸಗೀ ಸ್ಕೂಲ್ ಆದರೂ ಅದು ಬಹಳ ಚೆನ್ನಾಗಿದೆ. ಖಾಸಗಿ ಸ್ಕೂಲ್‌ಗಳಲೆಲ್ಲಾ ಅವ್ಯವಹಾರ ನಡೆಯುತ್ತಿದೆ, ಅವರು ದುಡ್ಡು ತೆಗೆದುಕೊಳ್ಳುತ್ತಾರೆ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ಕೆಲವು ಸ್ಕೂಲ್‌ಗಳು ಬಹಳ ಚೆನ್ನಾಗಿವೆ. ಅವ್ಯವಹಾರಗಳು ಇರುವುದು, ಸಿಕ್ಕಾಪಟ್ಟೆ ಹಣ ತೆಗೆದುಕೊಳ್ಳುವುದು. ಬಹುತೇಕ ಎಲ್ಲಾ ಕಡೆಗಳಲ್ಲಿ ಇಲ್ಲ. ಅನೇಕ ಕ್ರಿಶ್ಚಿಯನ್ ಇನ್‌ಸ್ಟಿಟ್ಯೂಷನ್ಸ್ ಇವೆ, ಚನ್ನಾಗಿ ಇವೆ, ಹೆಚ್ಚು ಹಣವನ್ನೂ ಕೂಡಾ ಅಲ್ಲಿ ತೆಗೆದುಕೊಳ್ಳುವುದಿಲ್ಲ. ಅವರ ಕ್ಷೇತ್ರದಲ್ಲಿರುವ ಖಾಸಗಿ ಸ್ಕೂಲ್‌ಗೆ ಒಳ್ಳೆಯ ಬಿಲ್ಡಿಂಗ್ ಕಟ್ಟಿದ್ದಾರೆ, ರಿಸಲ್ಟ್ ಸಹ ಚೆನ್ನಾಗಿ ಇದೆ. ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ನಾನು ಪರಿಶೀಲನೆ ಮಾಡುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ಅಲ್ಲ. ಶ್ರೀ ವಿನಯಕುಮಾರ್‌ರವರು ಒಂದು ಪ್ರಮುಖವಾದ ಪ್ರಶ್ನೆ ಎತ್ತಿದ್ದಾರೆ. ಡ್ರಗ್ ಅಡಿಕ್ಷನ್ ವಿಚಾರ. ಇದಕ್ಕೆ ನಿಮ್‌ಹಾನ್ಸ್‌ಗೆ ರೆಫರ್ ಮಾಡಿದ್ದೇನೆ ಯಾವ ರೀತಿ ಮಾಡಬೇಕು ಸಜೆಷನ್ಸ್ ಕೊಡಿ ಎಂದು ಹೇಳಿದ್ದೇನೆ. ಅವರು ಸಲಹೆ ಕೊಡುತ್ತಾರೆ. ಅವರು ಇದರ ಬಗ್ಗೆ ಸಲಹೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದು ಬಂದ ಮೇಲೆ ತಾವು ಹೇಳಿದ ವಿಷಯ ವನ್ನು ಪರಿಶೀಲಿಸುತ್ತೇನೆ. ಆಮೇಲೆ ಇನ್ನೊಂದು ಪ್ರಶ್ನೆ ಹೇಳಿದ್ದಾರೆ. ಸೆನೆಟ್‌ನಲ್ಲಿ ವಿದ್ಯಾರ್ಥಿಗಳ ಪ್ರಾತಿನಿಧ್ಯದ ಬಗ್ಗೆ ಹೇಳಿದ್ದಾರೆ. ಇದು ವಿಶ್ವವಿದ್ಯಾನಿಲಯದ ಕಾಯಿದೆ ಇದೆಯಲ್ಲ ಆದರಲ್ಲಿ ಇದೆ, ಐದು ಜನ ವಿದ್ಯಾರ್ಥಿಗಳಿಗೆ ಇವತ್ತಿನದಿವಸ ಪ್ರಾತಿನಿಧ್ಯ ಕೊಡಬೇಕು. ಎರಡು ಸ್ಥಾನ ಪೋಸ್ಟ್ ಗ್ರಾಜುಯೇಷನ್ ವಿಭಾಗದಿಂದ, ಮೂರು ಅಂಡರ್ ಗ್ರಾಜುಯೇಷನ್ ವಿಭಾಗದಿಂದ. ಇದಕ್ಕೆ ಎಲೆಕ್ಷನ್ ನಡೆಸುವುದು ಕಷ್ಟವಾಗಿದೆ. ಈ ಸ್ಕೂಲ್ ಯೂನಿಯನ್ಸ್‌ಗೆ ಚುನಾವಣೆಗಳು ನಡೆಯುತ್ತಿದೆ ಎಂದು ತಮಗೆ ಗೊತ್ತಿದೆ. ಅದಕ್ಕೆ ಸೆನೆಟ್‌ಗೆ ಡೈರೆಕ್ಟ್ಆಗಿ ಎಲೆಕ್ಷನ್ ಮಾಡಿದರೆ ಅದು ಎಷ್ಟರಮಟ್ಟಿಗೆ ನಡೆಯುತ್ತದೆ ಎಂದು ತಾವು ತಿಳಿದುಕೊಳ್ಳಬಹುದು. ವಿಶ್ವವಿದ್ಯಾನಿಲಯದವರು ಇದಕ್ಕೆ ಒಂದು ಸ್ಟ್ಯಾಟ್ಯೂಟ್ ಮಾಡಿ ಎಂದು ಚಾನ್ಸಲರ್‌ಗೆ ಕಳುಹಿಸಿದ್ದೇನೆ. ಬಹುತೇಕ ಇದನ್ನು ಅವರೇ ತೀರ್ಮಾನ ಮಾಡುತ್ತಾರೆ. ಅನೇಕ ಮಾನ್ಯ ಸದಸ್ಯರು ನನಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆ ಗಳನ್ನೆಲ್ಲಾ ನಾನು ಬರೆದುಕೊಂಡಿದ್ದೇನೆ. ನಾನು ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ, ಬಹಳ ಪ್ರಮುಖವಾಗಿ ಇದಕ್ಕೆ ತಮ್ಮ ಸಹಕಾರ ಬೇಕು ಒಂದು ವಿಚಾರದಲ್ಲಿ ತಮ್ಮ ಸಹಕಾರ ಅಗತ್ಯ. ಇವತ್ತಿನ ದಿವಸ ಶಾಲಾ ಅಭಿವೃದ್ಧಿ ಸಮಿತಿಗಳಲ್ಲಿ ನೀವೆಲ್ಲಾ ಸಕ್ರೀಯವಾಗಿ ಭಾಗವಹಿಸಿ ಕೆಲಸ ಮಾಡಿದ ಪಕ್ಷದಲ್ಲಿ ಅನೇಕ ಕಡೆ ಪೀಠೋಪಕರಣಗಳ ಕೊರತೆಯನ್ನು ನೀಗಬಹುದು. ಇದನ್ನು ನೀವೆಲ್ಲಾ ಮಾಡುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ಇದರ ಜೊತೆಗೆ ಹೊಸ ಶಿಕ್ಷಣ ನೀತಿ ಏನು ಬರುತ್ತಿದೆ, ಅದು ಬಂದ ಮೇಲೆ ನಮ್ಮ ಸ್ಕೂಲ್ ಎಜುಕೇಷನ್, ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಸಹಕಾರಿ ಯಾಗುತ್ತದೆ ಎಂಬ ನಂಬಿಕೆಯಿಂದ, ದಯಮಾಡಿಟ್ಟು ತಾವು ಈ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಒಂದು ಏನೆಂದರೆ ಈಗ ತಾವು ಖಾಲಿ ಇರತಕ್ಕಂಥ ಹುದ್ದೆಗಳ ಬಗ್ಗೆ ಸ್ಪಷ್ಟವಾಗಿ ಹೇಳಲಿಲ್ಲ. ತಾವು ಹೇಳಿದಹಾಗೆ ಎಂಟು ಸಾವಿರ ಹುದ್ದೆಗಳು ಖಾಲಿ ಇವೆ. ಇದನ್ನು ಯಾವಾಗ ಭರ್ತಿ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ತಾವು ಹೇಳಲಿಲ್ಲ. ಎಷ್ಟು ದಿವಸದ ಒಳಗಾಗಿ ಭರ್ತಿ ಮಾಡುತ್ತೀರಿ, ಇದು ಒಂದು. ಎರಡನೆಯದಾಗಿ, ಪ್ರೈಮರಿ,

ಹೈಸ್ಕೂಲ್ ಮತ್ತು ಪಿ.ಯು.ಸಿ.ಯಲ್ಲೂ ಕೂಡಾ ವೇಕೆನ್ಸೀಸ್ ಇವೆ. ಈ ಎಲ್ಲಾ ಕೆಟಗರಿಗಳಲ್ಲಿ ಟೀಚರ್ಸ್ ಕೊರತೆ ಇದೆ. ಇವುಗಳನ್ನು ಎಷ್ಟು ದಿವಸಗಳಲ್ಲಿ ತುಂಬತಕ್ಕಂಥ ಕೆಲಸವನ್ನು ಮಾಡುತ್ತೀರಿ. ಇನ್ನು ತಮಗೆ ಗೊತ್ತಿದ್ದ ಹಾಗೆ ಹೊಸ ಶಿಕ್ಷಣ ನೀತಿ ಪ್ರಕಾರ ಲಾ ಕಾಲೇಜುಗಳು ಏನಿವೆ ಇವುಗಳನ್ನು ೫ ವರ್ಷಗಳ ಕೋರ್ಸ್ ಮಾಡಬೇಕೆಂದು ಇದೆ. ಇದಕ್ಕೆ ಬಾರ್ ಕೌನ್ಸಿಲ್ ಆಫ್ ಇಂಡಿಯಾದವರು ಸಹ ಪತ್ರ ಬರೆದಿದ್ದಾರೆ. ಸೆಂಟ್ರಲ್ ಗೌರ್ನಮೆಂಟ್‌ನಿಂದಲೂ ಸಹ ಆದೇಶ ಬಂದಿದೆ ಎಂದು ಕೇಳಿದ್ದೇನೆ ಈ ೫ ವರ್ಷಗಳ ಕೋರ್ಸ್‌ಅನ್ನು ಗ್ರ್ಯಾಂಟ್ ಇನ್ ಏಡ್–ಕೋಡ್‌ಅನ್ನು ಹೊಸದಾಗಿ ತರುತ್ತೀರಾ ? ಅಥವಾ ಈ ಲಾ ಕಾಲೇಜುಗಳನ್ನು ಫುಲ್ ಟೈಮ್ ಆಗಿ ನಡೆಸುವುದಕ್ಕೆ ಪರವಾನಗಿ ಕೊಡುತ್ತೀರಾ ಹೇಗೆ ? ಆಮೇಲೆ ಹೈದ್ರಾಬಾದ್ ಪೇ ಸ್ಕೇಲ್ ಕೆಲವರಿಗೆ ಕೊಟ್ಟು ಇನ್ನು ಕೆಲವರಿಗೆ ವಿತ್ ಹೆಲ್ಡ್ ಮಾಡಿದ್ದೀರಿ. ಇದೊಂದು ರೀತಿ ಕಸಿವಿಸಿಯಾಗಿದೆ. ಆದ್ದರಿಂದ ಎಲ್ಲಾರಿಗೂ ಒಂದು ಯೂನಿಫಾರಮ್ ಆಗಿ ಕೊಡುವ ವ್ಯವಸ್ಥೆ ಮಾಡುತ್ತೀರಾ ? ಇನ್ನು ಎಸ್.ಸಿ. ಎಸ್.ಟಿ. ಟ್ಯಾಲೆಂಟೆಡ್ ಹೆಣ್ಣು ಮಕ್ಕಳಿಗೆ ಅನುಕೂಲವಾಗಲೆಂದು ನೀವು ನಾಲ್ಕು ರೆವಿನ್ಯೂ ಡಿವಿಜನ್‌ಗಳಲ್ಲಿ ಹೈಸ್ಕೂಲ್‌ಗಳನ್ನು ತೆರೆದಿದ್ದೀರಿ. ಆ ಹೈಸ್ಕೂಲ್‌ಗಳು ಕಿತ್ತೂರು ರಾಣಿ ಚೆನ್ನಮ್ಮ ಹೈಸ್ಕೂಲ್ ರೀತಿ ಇರಬೇಕೆಂದು ಸಹ ಹೇಳಿದಿರಿ. ಆದರೆ ಆ ಒಂದು ವಾತಾವರಣದಲ್ಲಿ ಈ ಶಾಲೆಗಳು ಇವೆಯೇ ? ಆ ಶಾಲೆಗಳು ಇವತ್ತು ಗೌರ್ನಮೆಂಟ್ ಶಾಲೆಗಳ ರೀತಿಯಲ್ಲಿವೆ. ಏನೂ ವ್ಯತ್ಯಾಸವಾಗಿಲ್ಲ. ಈ ಬಗ್ಗೆ ಯಾವ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಇನ್ನು ಸಿಲಬಸ್ ಕಮಿಟಿಯಲ್ಲಿ ಪ್ರಗತಿಪರವಾದಂಥ ಜನರನ್ನು ಹಾಕಿ ಇದನ್ನು ಯಾವಾಗ ರಚನೆ ಮಾಡುತ್ತೀರಿ ? ಆ ಸಮಿತಿಯು ಕೊಟ್ಟ ಸಿಲಬಸ್ ಅನ್ನು ಯಾವ ವರ್ಷದಿಂದ ಜಾರಿಗೆ ತರುತ್ತೀರಿ ? ತಾವು ಅನೇಕ ಜನ ಉಪಾಧ್ಯಾಯರನ್ನು ಜಿಲ್ಲಾಪರಿಷತ್ತುಗಳಿಗೆ ವರ್ಗಾವಣೆ ಮಾಡುತ್ತೀರಿ. ಆಗ ಅವರ ಸೀನಿಯಾರಿಟಿಯಲ್ಲಿ ಬದಲಾವಣೆಯಾಗುತ್ತದೆ. ಈ ಬಗ್ಗೆ ತಾವೇನು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುತ್ತೀರಿ ? ಕೊನೆಯದಾಗಿ ನರ್ಸರಿ ಶಾಲೆಗಳಿಗೆ ಅನುದಾನ ಕೊಡುವುದರಲ್ಲಿ ಹಳೇ ಮೈಸೂರು ಭಾಗದಲ್ಲಿ ಒಂದು ರೀತಿಯಾದ ವ್ಯವಸ್ಥೆ ಇದೆ. ಬಾಂಬೇ ಕರ್ನಾಟಕ ಏರಿಯಾದಲ್ಲಿ ಒಂದು ರೀತಿಯಾದಂಥ ವ್ಯವಸ್ಥೆ ಇದೆ. ಹೈದ್ರಾಬಾದ್ ಕರ್ನಾಟಕ ಏರಿಯಾದಲ್ಲಿ ಅದು ಇಲ್ಲವೇ ಇಲ್ಲ. ಆದ್ದರಿಂದ ಈ ಬಗ್ಗೆ ಒಂದು ಸಮಗ್ರವಾದ ಯೂನಿಫಾರಮ್ ಕೋಡ್ ತಂದು ಸರ್ಕಾರಿ ನರ್ಸರಿ ಶಾಲೆಗಳನ್ನು ಎಲ್ಲಾ ಕಡೆ ಪ್ರಾರಂಭ ಮಾಡುವ ವ್ಯವಸ್ಥೆ ಮಾಡುತ್ತೀರಾ ? ಆಮೇಲೆ ಸಿಂಗಲ್ ಟೀಚರ್ಸ್ ಇರುವ ಕಡೆ ಇಬ್ಬರು ಉಪಾಧ್ಯಾಯರನ್ನು ಕೊಡುತ್ತೇವೆಂದು ಹೇಳಿದಿರಿ. ನಿಮ್ಮ ಪ್ಲಾನ್ ಪ್ರಾವಿಜನ್ ಪ್ರಕಾರ ೨ ಸಾವಿರ ಜನರನ್ನು ಮಾತ್ರ ಕೊಡುವುದಕ್ಕೆ ಸಾಧ್ಯ. ಆದರೆ ಈಗ ಒಟ್ಟು ರಾಜ್ಯದಲ್ಲಿ ೨೪ ಸಾವಿರ ಸಿಂಗಲ್ ಟೀಚರ್ಸ್ ಶಾಲೆಗಳು ಇವೆ. ತಮ್ಮ ಒಂದು ಪ್ಲಾನ್ ಪ್ರಕಾರ ಮುಂದುವರಿಯುವುದಕ್ಕೆ ಇನ್ನೂ ೧೨ ವರ್ಷಗಳು ಬೇಕಾಗುತ್ತದೆ, ಈ ಬಗ್ಗೆ ಯಾವ ವ್ಯವಸ್ಥೆ ಮಾಡುತ್ತೀರೆನ್ನುವುದು ಹೇಳಬೇಕು.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ ಮೊದಲನೆಯ ಪ್ರಶ್ನೆಗೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ರೋಸ್ಟರ್ ಬದಲಾವಣೆ ಮಾಡುವುದರಲ್ಲಿ ಸ್ವಲ್ಪ ನೇಮಕಾತಿ ತಡವಾಯಿತು. ಈಗ ರೋಸ್ಟರ್ ಸಿಸ್ಟಂ ಕ್ಲಿಯರ್ ಆಗಿದೆ. ಆದಷ್ಟು ಬೇಗ ಮುಗಿಸಬೇಕೆಂದು ನಾನು ಆದೇಶ ಕೊಟ್ಟಿದ್ದೇನೆ, ಇನ್ನು ಲಾ ಕಾಲೇಜುಗಳನ್ನು ೫ ವರ್ಷದ ಕೋರ್ಸ್ ಆಗಿ ಮಾರ್ಪಾಡು ಮಾಡಬೇಕೆಂದು ಬಾರ್ ಕೌನ್ಸಿಲ್ ಆಫ್ ಇಂಡಿಯಾದವರು ಒತ್ತಾಯ ಮಾಡುತ್ತಿದ್ದಾರೆ. ಯಾರು ೫ ವರ್ಷಗಳ ಲಾ ಕಾಲೇಜುಗಳಿಗೆ ಅನುಮತಿ ಬೇಕೆಂದು ಕೇಳಿದ್ದರೋ ಅವರಿಗೆ ನಾವು ಈಗಾಗಲೇ ಅನುಮತಿಯನ್ನು ಕೊಟ್ಟಿದ್ದೇವೆ. ಬೇರೆಯವರು ಕೇಳಿದರೂ ಸಹ ಕೊಡುತ್ತೇವೆ. ಬೇರೆಯವರು ಯಾರೂ ಕೇಳಿಲ್ಲ. ಇನ್ನು ರೆಸಿಡೆನ್ಸಿಯಲ್ ಶಾಲೆಗಳ ಬಗ್ಗೆ ಮಾನ್ಯ ಸದಸ್ಯರಿಗೆ ಹೇಳುವುದಾದರೆ ಎಸ್.ಸಿ.ಎಸ್.ಟಿ ಟ್ಯಾಲೆಂಟಿಡ್ ಹೆಣ್ಣು ಮಕ್ಕಳಿಗೆ ಅನುಕೂಲ ಮಾಡಿ ಕೊಡುವ ದೃಷ್ಟಿಯಿಂದ ಕಟ್ಟಡಗಳನ್ನು ಕಟ್ಟಿಸಿ ಕೊಟ್ಟಿದ್ದೇವೆ. ಈಗ ಬಾಗಲಕೋಟೆಯಲ್ಲಿ ಈ ಶಾಲೆಗಳು ಚೆನ್ನಾಗಿ ನಡೆಯುತ್ತಿದೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಗುಲ್ಬರ್ಗದಲ್ಲೂ ಕೂಡ ಚೆನ್ನಾಗಿ ನಡೆಯುತ್ತಿದೆ. ಗುಲ್ಬರ್ಗದಲ್ಲಿ ಪ್ರೈವೇಟ್ ಮನೆಯಲ್ಲಿ ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಅದು ಯಾರ ಮನೆ ಗೊತ್ತೇ. ನಿವೃತ್ತಿ ಚೀಫ್ ಇಂಜನೀಯರ್ ಆದ ಶ್ರೀ ಬಸವಣ್ಣನವರ ಮನೆಯಲ್ಲಿ.

ಶ್ರೀ ಡಿ. ಮಂಜುನಾಥ್.—ಆ ಮೇಲೆ ಇನ್ನು ಒಂದು ಪ್ರಶ್ನೆಯನ್ನು ತಾವು ಕೇಳಿದ್ದೀರಿ. ಸಿಲಬಸ್ ಕಮಿಟಿ ಮತ್ತು ನರ್ಸರಿ ಸ್ಕೂಲುಗಳನ್ನು ಯೂನಿಫಾರ್ಮ್ ಆಗಿ ತರುವ ಬಗ್ಗೆ. ನರ್ಸರಿ ಸ್ಕೂಲು

ಗಳನ್ನು ಓಪನ್ ಮಾಡುವುದಕ್ಕೆ ನಮ್ಮ ಪರ್ಮಿಷನ್ ಬೇಕಾಗಿಲ್ಲ. ಬಾಂಬೇ ಕರ್ನಾಟಕದ ಪ್ರದೇಶ ದಲ್ಲಿರುವ ನರ್ಸರಿ ಸ್ಕೂಲುಗಳಿಗೇ ಒಂದು ತರಹದ ಅನುದಾನ ಇದೆ, ಬೆಂಗಳೂರು ಸಿಟೀಗೆ ಬೇರೆ ತರಹದ ಅನುದಾನ ಇದೆ, ಹಾಗೂ ಇತರೆ ಕಡೆ ಬೇರೆ ತರಹದ ಅನುದಾನ ಕೊಡುತ್ತಿದ್ದೇವೆ. ಇದನ್ನು ನಾವು ಮುಂದುವರಿಸಿಕೊಂಡು ಬರುತ್ತಿದ್ದೇವೆ, ಸಧ್ಯದಲ್ಲಿ ಹೊಸದಾಗಿ ಹೆಚ್ಚು ಅನುದಾನವನ್ನು ಕೊಡುವುದಕ್ಕಾಗುವುದಿಲ್ಲ. ಸಿಲಬಸ್ ಕಮಿಟಿ ಬಗ್ಗೆ ಹೇಳಿದ್ದೀರಿ. ಈಗಾಗಲೇ ಈ ಸಿಲಬಸ್ ಕಮಿಟಿ ಯನ್ನು ಮಾಡಿದ್ದೇವೆ. ಈ ಕಮಿಟಿಯು ಕೆಲವು ದಿನಗಳ ಹಿಂದೆ ಪ್ರಪ್ರಥಮವಾಗಿ ಸಭೆ ಸೇರಿದ್ದು. ನಾನು ಅವರಿಗೆ ಎಲ್ಲವನ್ನೂ ಹೇಳಿದ್ದೇನೆ. ಸಿಲಬಸ್ ಬದಲಾವಣೆ ಮಾಡುವುದಕ್ಕೆ ಅವರು ಯೋಚನೆ ಮಾಡುತ್ತಿದ್ದಾರೆ. ಆ ಮೇಲೆ, ಹೈದರಾಬಾದ್ ಸ್ಕೇಲ್ ಬಗ್ಗೆ ಹೇಳಿದ್ದೀರಿ. ಹೈದರಾಬಾದ್ ಸ್ಕೇಲ ನಮಗೇ ಸಿಗುತ್ತಿಲ್ಲವೆಂದು ಹೈದರಾಬಾದ್ ಕರ್ನಾಟಕದ ಕಡೆಯವರು ಹೇಳಿದರು. ಅವರಿಗೂ ಅದನ್ನು ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ್ಗೆ ಎರಡು ತಿಂಗಳ ಹಿಂದೆ ಹೈದರಾಬಾದ್ ಕರ್ನಾಟಕ ಜನರು ಬಂದು ನಮಗೆ ಇನ್ನೂ ಪೇ ಅಪ್ಲಿಕಬಲ್ ಮಾಡಿಲ್ಲವೆಂದು ಹೇಳಿದರು.

ಶ್ರೀ ಡಿ. ಮಂಜುನಾಥ್.—ಮೊದಲು ಹೈದರಾಬಾದ್ ಕರ್ನಾಟಕ ಪ್ರದೇಶದ ಟೀಚರ್ಸ್‌ಗೆ ಕೊಟ್ಟಿರಲಿಲ್ಲ. ಆ ಮೇಲೆ ವಿಷಯ ತಿಳಿದು, ಅವರಿಗೂ ಕೊಡಲಾಯಿತು. ಅದರ ಬಗ್ಗೆ ಒಂದು ಗೌರ್ನಮೆಂಟ್ ಆರ್ಡರ್‌ನ್ನು ಹೊರಡಿಸಿದ್ದೇವೆ. ಅದರ ಕಾಪಿ ಬೇಕಾದರೆ ತಮಗೆ ಕೊಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ೪೬ನೇ ಆರ್ಟಿಕಲ್ ಪ್ರಕಾರ

> "The State shall promote with special care the educational and economic interests of the weakers sections of the people, and in particular, of the Scheduled Castes and the Scheduled Tribes, and shall protect them from social injustice and all forms of exploitations.

ಎಂದು ಇದೆ. ಆರ್ಟಿಕಲ್ ೪೬ರ ಪ್ರಕಾರ ಏನು ಇವರು ಈ ವಿದ್ಯಾಭ್ಯಾಸದ ಇಲಾಖೆಯಲ್ಲಿ ನೀತಿ ಯನ್ನು ಇಟ್ಟುಕೊಂಡಿದ್ದಾರೆ ? ಇವರು ಭಾಷಣ ಮಾಡಿದ್ದನ್ನು ಕೇಳಿದೆ. ಅದರಲ್ಲಿ ಹೊಸದು ಏನೂ ಕಾಣಲಿಲ್ಲ. ಈಗ ಈ ೪೬ನೇ ಆರ್ಟಿಕಲ್ ಪ್ರಕಾರ the State is duty bound to promote with special care the educational interests of the Scheduled Castes and Tribes, and weaker sections ಅವರು ವೀಕರ್ ಸೆಕ್ಷನ್. ಇದಕ್ಕಾಗಿ ವಿಶೇಷವಾಗಿರ ತಕ್ಕಂಥ ಯೋಜನೆಯನ್ನು ಹಾಕಿಕೊಂಡಿದ್ದೀರಾ ? ಅದನ್ನು ತಾವು ಕ್ಲಾರಿಫೈ ಮಾಡಬೇಕು. ನವೋದಯ ಸ್ಕೂಲುಗಳೆಂದು ಹೇಳಿ ಕೇಂದ್ರ ಸರ್ಕಾರವು ರಾಷ್ಟ್ರಾದ್ಯಂತ ಜಾರಿಗೆ ತಂದಿದ್ದಾರೆ. ಅದರಲ್ಲಿ ಒಂದು ಉತ್ತಮವಾಗಿರತಕ್ಕಂಥ ಧ್ಯೇಯಧೋರಣೆಗಳನ್ನು ತಂದಿದ್ದಾರೆ. ರಾಷ್ಟ್ರಪ್ರೇಮಿ ಗಳನ್ನಾಗಿ ಮಾಡಬೇಕು ದೇಶಭಕ್ತರನ್ನಾಗಿ ಮಾಡಬೇಕು, ದೇಶದ ಒಗ್ಗಟ್ಟಿಗೆ ಅನುಕೂಲವಾಗುವಂತಾಗ ಬೇಕು. ಈ ವಿಷಯವನ್ನು ಎಲ್ಲಾ ತರಗತಿಯವರು ಕಲಿಯುವಂತಾಗಬೇಕು. ಈ ಎಲ್ಲಾ ಹಿನ್ನೆಲೆಯನ್ನು ನೋಡಿಕೊಂಡು ಹೊಸ ಶಿಕ್ಷಣ ನೀತಿಯನ್ನು ತರಲಾಗಿದೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರೂ ಹೇಳಿದ್ದಾರೆ. ಹಿಂದೆ ಇದ್ದಂಥಹ ಕರಿಕ್ಯುಲ ಬದಲಾವಣೆಯನ್ನೇ ಮಾಡಿಲ್ಲ. ಹತ್ತಾರು ವರ್ಷಗಳಿಂದ ಅದೇ ಬಂದಿದೆ. ನೀವು ಏನಾದರೂ ಆ ನೀತಿಗೆ ಅನುಗುಣವಾಗಿ ನಿಮ್ಮ ನೀತಿ ಯನ್ನು ಬದಲಾವಣೆ ಮಾಡಿಕೊಂಡು ನವೋದಯ ಸ್ಕೂಲುಗಳ ರೀತಿ ಶಾಲೆಗಳನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ಮಂಜುನಾಥ್.—ಅವರು ನಮಗೆ ಒಂದು ಮಾಡಲ್ ಸಿಲಬಸ್ ಕೊಟ್ಟಿದ್ದಾರೆ, ಇದು ಆಲ್ ಇಂಡಿಯಾ ಮಾಡಲ್ ಸಿಲಬಸ್ ಆಗಿರುತ್ತದೆ. ಇದನ್ನು ನಾವು ಬದಲಾವಣೆ ಮಾಡಬೇಕಾಗುತ್ತದೆ. ರೀಜನಲ್‌ವೈಸ್, ನಮ್ಮ ಸ್ಟೇಟ್‌ವೈಸ್‌ನಲ್ಲಿ ಕೆಲವು ಸಮಸ್ಯೆಗಳನ್ನು ಮಕ್ಕಳಿಗೆ ತಿಳಿಸಬೇಕಾಗುತ್ತದೆ. ಆ ರೀತಿಯಲ್ಲಿ ಈ ಮಾಡಲ್ ಸಿಲಬಸ್‌ನ್ನು ಸೇರಿಸಿಕೊಂಡು ಪಠ್ಯ ಪುಸ್ತಕಗಳನ್ನು ತಯಾರು ಮಾಡ ಬೇಕೆಂದು ತೀರ್ಮಾನವಾಗಿದೆ. ಹಾಗೂ ಮಾಡುತ್ತೇವೆ. ಆ ಮೇಲೆ ಆರ್ಟಿಕಲ್ ೪೬ರ ಬಗ್ಗೆ ಮಾನ್ಯ ವೆಂಕಟರಾಮಯ್ಯನವರು ತಿಳಿಸಿ ಕಡ್ಡಾಯ ಶಿಕ್ಷಣದ ವಿಷಯವನ್ನು ಹೇಳಿದ್ದಾರೆ. ನಾವು ೪೬ರ

ಆರ್ಟಿಕಲ್ ೪ಡಿಯಲ್ಲಿ ಏನು ಇದೆಯೋ ಅದನ್ನು ಪರಿಪಾಲಿಸೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೆ ಏನು ಮಾಡಿದ್ದೀರಿ ? ಸಮಿತಿಯನ್ನು ನೇಮಕ ಮಾಡಿ ಅದರ ಮುಖಾಂತರ ಸಲಹೆಗಳನ್ನು ಪಡೆದು ಶಿಕ್ಷಣ ನೀತಿಯನ್ನು ಜಾರಿಗೆ ಕೊಡಲಾಗಿದೆಯೋ ?

ಶ್ರೀ ಡಿ. ಮಂಜುನಾಥ್.—ಎಲ್ಲಾ ಮಾಡಿದ್ದೇವೆ.

೬–೩೦ ಪಿ. ಎಂ.

ಶ್ರೀ ಎಂ. ಎಸ್. ಕೃಷ್ಣನ್ —ಮಾನ್ಯ ಅಧ್ಯಕ್ಷರೇ, ನನ್ನದು ಮೂರು–ನಾಲ್ಕು ಪ್ರಶ್ನೆಗಳು ಇವೆ, ಮೊದಲನೆಯದು ಈ ವಾಚ್ ಮನ್‌ಗಳ ಬಗ್ಗೆ ತಾವುಗಳು ಹೇಳಿದ್ದೀರಿ. ಆ ಬಗ್ಗೆ ಯೋಚನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದು ಪ್ರೈಮರಿ ಸ್ಕೂಲ್‌ಗಳ ವಿಚಾರದಲ್ಲಿ ೧೦ ವರ್ಷಗಳ ಹಿಂದೆ ನಿಂತು ಹೋಯಿತು. ತಮ್ಮ ಪ್ರಕಾರ ೧೨ ಕೋಟಿ ರೂಪಾಯಿಗಳನ್ನು ಬೆಟರ್‌ಮೆಂಟ್ ಕಮಿಟಿಯವರು ಕಲೆಕ್ಟ್ ಮಾಡಿದ್ದಾರೆ. ಆದರೆ ಸಮಸ್ಯೆಯ ಪರಿಹಾರ ಮಾತ್ರ ಇನ್ನೂ ಆಗಲಿಲ್ಲ. ಆ ಬಗ್ಗೆ ಒಂದು ಖಚಿತವಾದಂತಹ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಶಾಲೆಯಲ್ಲಿರುವ ವಸ್ತುಗಳನ್ನು ಕಿತ್ತುಕೊಂಡು ಹೋಗುವ ಪರಿಸ್ಥಿತಿ ಬಂದು ಕಷ್ಟವಾಗುತ್ತದೆ. ಹಾಗೆ ಅವಕಾಶ ಕೊಡಬೇಡಿ ಎರಡನೆಯದಾಗಿ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಒಂದೆರಡು ವಿಷಯಗಳು ಇವೆ. ಈಗ ತಾಲ್ಲೂಕು ಲೆವೆಲ್‌ನಲ್ಲಿ ಎ.ಇ.ಓ. ಗಳು ಇದ್ದಾರೆ. ಆದರೆ ಅವರಿಗೆ ವೆಹಿಕಲ್ಸ್ ಇಲ್ಲ. ಅವರು ತಮ್ಮ ಕ್ಷೇತ್ರದಲ್ಲಿನ ಬಹಳಷ್ಟು ಶಾಲೆಗಳಿಗೆ ಭೇಟಿ ನೀಡ ಬೇಕಾಗುತ್ತದೆ. ವೆಹಿಕಲ್ಸ್ ಇಲ್ಲದೇ ಅವರು ಎಲ್ಲೆಲ್ಲಾ ಹೋಗಿ ನೋಡಿಕೊಳ್ಳುವುದು ಹೇಗೆ ಸಾಧ್ಯ ? ಮೂರನೇಯದು ಕ್ಲಾಸ್–ಒನ್ ಪೋಸ್ಟ್‌ಗಳ ಬಗ್ಗೆ ಈಗಾಗಲೇ ಸುಮಾರು ೬೦ ಪೋಸ್ಟ್‌ಗಳು ಖಾಲಿ ಇವೆ ಎಂದು ತಿಳಿದು ಬಂದಿದೆ, ಈ ಪೋಸ್ಟ್‌ಗಳು ಬಹಳ ವರ್ಷ ಗಳಿಂದ ಖಾಲಿ ಇವೆ, ಇವುಗಳನ್ನು ಇನ್ನೂ ಏತಕ್ಕೆ ತುಂಬಲಿಲ್ಲ ? ಯಾವಾಗ ಆ ಪೋಸ್ಟ್‌ಗಳನ್ನು ಭರ್ತಿ ಮಾಡುತ್ತೀರಿ ? ದಯವಿಟ್ಟು ತಿಳಿಸಬೇಕು.

ಇನ್ನು ನವೋದಯ ಸ್ಕೂಲ್‌ಗಳ ಬಗ್ಗೆ ಬಹಳ ಚರ್ಚೆ ರಾಜ್ಯಾದ್ಯಂತ ನಡೆಯಿತು. ತಾವುಗಳು ಕೂಡ ಹೇಳಿದ್ದೀರಿ. ಇದಕ್ಕೆ ಕೇಂದ್ರದವರು ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಾರೆ, ಒಂದೊಂದು ಜಿಲ್ಲೆಯಲ್ಲಿ ಅದನ್ನು ಪ್ರಾರಂಭಿಸಬೇಕೆಂಬ ಅಭಿಪ್ರಾಯ ಇದೆ ಎಂದು ಕಾಣುತ್ತದೆ. ಈಗ ಆ ಶಾಲೆಗಳಲ್ಲಿ ಅರಿಥ್‌ಮೆಟಿಕ್, ಹಿಂದಿ, ಮತ್ತು ಇಂಗ್ಲೀಷ್, ಹೀಗೆ ಮೂರು ವಿಷಯಗಳನ್ನು ಕಲಿಯ ಬೇಕೆಂತೆ ಹೀಗಾದಲ್ಲಿ ಯಾವ ಬಡವರ ಮಕ್ಕಳು ಅಲ್ಲಿ ಹೋಗಿ ಕಲಿಯುತ್ತಾರೆ ಸ್ವಾಮಿ ? ಹೀಗೆ ಒಂದು ನಿಯಮಗಳನ್ನು ಹಾಕಿ ಮಾಡುವುದರಿಂದ ಯಾರಿಗೆ ಅನುಕೂಲ ಸ್ವಾಮಿ ? ದೊಡ್ಡ ದೊಡ್ಡ ಅಧಿಕಾರಿ ಗಳ ಮಕ್ಕಳಿಗೆ, ಶ್ರೀಮಂತರ ಮಕ್ಕಳಿಗೆ, ಇದರಿಂದ ಅನುಕೂಲ ಆದೀತೇ ಹೊರತು ಬಡವರ ಮಕ್ಕಳಿಗೆ ಖಂಡಿತ ಇಂತಹ ಶಾಲೆಗಳಿಂದ ಅನುಕೂಲವಾಗುವುದಿಲ್ಲ ಅದರ ಬಗ್ಗೆ ತಮ್ಮ ಅಭಿಪ್ರಾಯಗಳು ಏನು ಎಂಬುದನ್ನು ತಾವುಗಳು ದಯಮಾಡಿ ಹೇಳಬೇಕು. ಈ ಕುರಿತು ರಾಜ್ಯದ ವಿವಿಧ ಕಡೆಗಳಲ್ಲಿ ಸೆಮಿನಾರ್‌ಗಳನ್ನು ಮಾಡಿ ಜನಾಭಿಪ್ರಾಯ ಸಂಗ್ರಹಣೆಯೂ ಆಯಿತು. ಆದರಲ್ಲಿ ಬಹುಮಟ್ಟಿಗೆ ಜನಭಾಗದ ಜನರು ಇದಕ್ಕೆ ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ. ಇದನ್ನು ಗಮನ ದಲ್ಲಿಟ್ಟುಕೊಂಡು ನಿಮ್ಮ ಅಭಿಪ್ರಾಯ ಈ ಶಾಲೆಗಳ ಕುರಿತು ಏನಿದೆ, ಅದನ್ನು ಹೇಳಬೇಕು.

ಇನ್ನು ಪಾಲಿಟೆಕ್ನಿಕ್‌ಗಳಲ್ಲಿನ ಒಂದು ಅವ್ಯವಸ್ಥೆಗೆ ಒಂದು ಹೊಸ ಕಮಿಟಿಯನ್ನು ಮಾಡಿ ಪರಿಶೀಲನೆ ಮಾಡುವುದಾಗಿ ಹೇಳಿದ್ದೀರಿ ಹಾಗೆಯೇ ಸರಕಾರಿ ಪಾಲಿಟೆಕ್ನಿಕ್‌ನಲ್ಲಿ ಲೆಕ್ಚರರ್ಸ್‌ಗಳಿಗೆ ಕೊಡುತ್ತಿರುವ ಎಕ್ಸಾಮಿನೇಶನ್ ರೆಮ್ಯೂನರೇಶನ್ ಬಗ್ಗೆ ಪೂರ್ಣವಾದ ಒಂದು ಪರಿಹಾರವನ್ನು ಈ ತನಕವೂ ಮಾಡಲಿಲ್ಲ. ಕೆಲವು ವಿಷಯಗಳ ಬಗ್ಗೆ ಮಾತ್ರ ಕೊಟ್ಟು ಇನ್ನೂ ಬಹಳಷ್ಟು ಸಬ್ಜೆಕ್ಟ್ಸನ್ನು ಬಿಟ್ಟಿದ್ದೀರಿ. ಎಲ್ಲರಿಗೂ ಸರಿಯಾದ ರೆಮ್ಯೂನರೇಶನ್ ದೊರಕುವ ಒಂದು ನೀತಿಯ ಬಗ್ಗೆ ಕೂಡಲೇ ಒಂದು ನಿರ್ಣಯ ಮಾಡಿ ಆ ಪರೀಕ್ಷಕರಿಗೆ ಸೂಕ್ತ ಸಹಾಯ ಒದಗಿಸಬೇಕು. ಆ ವಿಷಯದಲ್ಲಿ ನಾನು ಕೂಡ ಸದನದಲ್ಲಿ ಹಿಂದೆ ಪ್ರಸ್ತಾಪ ಮಾಡಿದ್ದೆ, ತಾವುಗಳು ಕೂಡ ಹೇಳಿದ್ದೀರಿ. ಆದರೆ ಇನ್ನೂ ಇತ್ಯರ್ಥವಾಗಿಲ್ಲ, ಅದನ್ನು ತೀರ್ಮಾನ ಮಾಡಿ ಕೊಡಿಸುವ ಜವಾಬ್ದಾರಿ ತಮ್ಮದು. ಅದನ್ನು ದಯವಿಟ್ಟು ಕೂಡಲೇ ಒಂದು ತೀರ್ಮಾನ ಮಾಡಬೇಕು.

ಇನ್ನು ಮಾನ್ಯ ಸಚಿವರು ಲೈಬ್ರರಿ ಚಳುವಳಿಯ ಬಗ್ಗೆ ಏನನ್ನೂ ಹೇಳಲಿಲ್ಲ. ಅದು ಬಹಳ ಮುಖ್ಯವಾದುದು....

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರ ಕೆಲವು ಪ್ರಶ್ನೆಗಳ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಒಂದನೇ ದರ್ಜೆಯ ಕೆಲವು ಪೋಸ್ಟ್‌ಗಳು ಖಾಲಿ ಇವೆ ಎಂದು ಹೇಳಿದರು. ಹೌದು ಒಂದು ಮತ್ತು ಎರಡನೇ ದರ್ಜೆಯ ಒಟ್ಟು ೭೪ ಪೋಸ್ಟ್ ಖಾಲಿ ಇವೆ. ಇದರಲ್ಲಿ ೧೭ ಜನರು ಇವೊತ್ತಿನ ದಿವಸ ಆರ್ಟಿಕಲ್ ೩೨ರ ಪ್ರಕಾರ ಕೆಲಸ ಮಾಡುತ್ತಿದ್ದಾರೆ. ಉಳಿದ ಪೋಸ್ಟ್‌ಗಳನ್ನು ತುಂಬುವುದಕ್ಕೆ ಪ್ರಯತ್ನವನ್ನು ಮಾಡುತ್ತಾ ಇದ್ದೇವೆ. ಒಂದು ಗ್ರೆಡೇಶನ್ ಲಿಸ್ಟನ್ನು ಮಾಡಿದ್ದೇವೆ. ಅದರ ಮೇಲೆ ಕೆಲವರು ಕೋರ್ಟಿಗೆ ಹೋದರು. ಕೋರ್ಟಿಗೆ ಹೋಗಿ, ಈಗ ಅದು ಕೋರ್ಟಿನಲ್ಲಿ ಸ್ಕ್ರ್ಯಾಪ್ ಆಯಿತು. ಈಗ ಮತ್ತೆ ಗ್ರೆಡೇಶನ್‌ಲಿಸ್ಟ್ ಮಾಡಿದ್ದೇವೆ. ಅಪ್ಲಿಕೇಶನ್ಸ್ ಕಾಲ್‌ಫಾರ್ ಮಾಡಿದ್ದೇವೆ. ಮತ್ತು ಪಿ.ಎಸ್.ಸಿ.ಯವರ ಮತಿಯಿಂದ ಕೆಲವು ಪೋಸ್ಟ್‌ಗಳನ್ನು ಭರ್ತಿ ಮಾಡಬೇಕಾಗುತ್ತದೆ. ಅದಕ್ಕಾಗಿ ಅವರಿಗೆ ಬರೆದಿದ್ದೇವೆ. ಪ್ರಮೋಶನ್ ಕೊಡುವುದಕ್ಕೆ ಈಗಾಗಲೇ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಇನ್ನು ನವೋದಯ ಶಾಲೆಗಳ ಬಗ್ಗೆ ಹೇಳಿದ್ದಾರೆ. ಫಿಫ್ತ್‌ಕ್ಲಾಸ್ ಆದನಂತರ ಇದಕ್ಕಾಗಿ ಒಂದು ಟೆಸ್ಟ್ ಕಂಡಕ್ಟ್ ಮಾಡುತ್ತಾರೆ. ಆಯ್ಕೆ ಆದವರಿಗೆ ಮುಂದೆ ೬ ಮತ್ತು ೭ನೇ ಕ್ಲಾಸ್‌ನಲ್ಲಿ ರೀಜನಲ್ ಲ್ಯಾಂಗವೇಜ್ ಇರುತ್ತದೆ, ಜೊತೆಗೆ ಇಂಗ್ಲೀಷ್ ಮತ್ತು ಹಿಂದಿ ಇರುತ್ತದೆ. ೮ನೇ ಕ್ಲಾಸಿನಿಂದ ಸೈನ್ಸನ್ನು ಇಂಗ್ಲೀಷ್‌ನಲ್ಲಿ ಹೇಳಿಕೊಡುತ್ತಾರೆ. ಆರ್ಟ್ಸನ್ನು ಹಿಂದಿಯಲ್ಲಿ ಹೇಳಿಕೊಡುತ್ತಾರೆ, ಅದು ಅವರ ಆಲ್‌ಇಂಡಿಯಾ ಪ್ಯಾಟರ್ನ್. ಇದರ ಬಗ್ಗೆ ಸಾಕಷ್ಟು ಚರ್ಚೆ ಆಯಿತು. ನಾವುಗಳು ದಕ್ಷಿಣ ರಾಜ್ಯದವರು ಈ ಬಗ್ಗೆ ಹಿಂದಿಯನ್ನು ಹೇರುತ್ತಿದ್ದೀರಿ ಎಂದು ವಿರೋಧ ಮಾಡಿದ್ದೆವು. ಆದರೆ ಅವರು ಒಪ್ಪಲಿಲ್ಲ. ಇದರಿಂದ ತೊಂದರೆ ಏನೂ ಆಗುವುದಿಲ್ಲ ಎಂದು ಹೇಳಬಯಸುತ್ತೇನೆ. ಇನ್ನೊಂದು ಏನೆಂದರೆ ಈ ಮಕ್ಕಳನ್ನು ಬೇರೆ ರಾಜ್ಯಗಳಿಗೂ ಬೇರೆ ರಾಜ್ಯಗಳ ಹುಡುಗರನ್ನು ಈ ರಾಜ್ಯಕ್ಕೂ ಕಳಿಸುತ್ತಾರೆ. ಇದನ್ನೆಲ್ಲಾ ನ್ಯಾಷನಲ್ ಇಂಟಿಗ್ರೇಷನ್‌ಗಾಗಿ ಎಂದು ಹೇಳುತ್ತಿರುವುದರಿಂದ ಮಾಡುತ್ತಿದ್ದೇವೆ. ಅದರಿಂದೇನೂ ತೊಂದರೆ ಇಲ್ಲ.

ಶ್ರೀ ಆರ್ ವೆಂಕಟರಾಮಯ್ಯ, ಮಾನ್ಯ ಖರ್ಗೆಯವರು ಹೇಳಿದ್ದ ೮,೦೦೦ ಉಪಾಧ್ಯಾಯರನ್ನು ಯಾವಾಗ ನೇಮಿಸುತ್ತೀರಿ ಎಂಬುದನ್ನು ದಯವಿಟ್ಟು ಹೇಳಬೇಕು. ಎರಡನೆಯದು ಲೋಕಲ್ ಕ್ಯಾಂಡಿಡೇಟ್ಸ್, ಕಾಂಟ್ರಾಕ್ಟ್‌ಲೆಕ್ಚರರ್ಸ್ ಸ್ಟೈಪೆಂಡರಿ ಗ್ರಾಜುಯೇಟ್ಸ್‌ಗಳೆಲ್ಲ ಕೆಲಸ ಮಾಡುತ್ತಿದ್ದಾರೆ. ಅವರ ಬಗ್ಗೆ ಏನೂ ಹೇಳಿಲ್ಲ. ಅವರನ್ನೆಲ್ಲಾ ಕನ್‌ಫರ್ಮ್ ಮಾಡಬೇಕೆಂದು ಒಂದು ರಿಕ್ವೆಸ್ಟ್ ಆಮೇಲೆ ಜಿಲ್ಲಾಪರಿಷತ್ತುಗಳಿಗೆ ಹೈಸ್ಕೂಲುಗಳನ್ನು ಹ್ಯಾಂಡೋವರ್ ಮಾಡುತ್ತೀರೆಂದು ಹೇಳಲಾಗಿದೆ. ಹಾಗಿದ್ದರೆ ಯಾವ ರೀತಿಯ ಸಂಬಂಧ ಅವುಗಳ ಮಧ್ಯೆ ಇರುತ್ತದೆ. ಕಂಟ್ರೋಲ್ ಯಾವ ಬಗೆಯದು? ಪಠ್ಯಪುಸ್ತಕಗಳನ್ನು ನಿರ್ಮಿಸುವ ಕಮಿಟಿಗೆ ಎಕ್ಸ್‌ಪರ್ಟುಗಳನ್ನು ಸೆಲೆಕ್ಟ್ ಮಾಡುವಾಗ ಸ್ವಲ್ಪ ಕನ್ಸರ್ವೇಟಿವ್ ಔಟ್‌ಲುಕ್ ಇರುವವರನ್ನು ನಿಮ್ಮ ಡಿಸ್ಕ್ರಿಷನ್ ಉಪಯೋಗಿಸಿ ಸೆಲೆಕ್ಟ್ ಮಾಡಿದರೆ ಒಳ್ಳೆಯದು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ.

ಶ್ರೀ ಡಿ, ಮಂಜುನಾಥ್.—ನಾನು ೮೦೦೦ ವೇಕೆನ್ಸಿ ಇದೆ ಎಂದು ಹೇಳಲಿಲ್ಲ. ಅವು ಅಡಿಷನಲ್ ವೇಕೆನ್ಸಿ ಎಂದು ಹೇಳಿದ್ದುದು ಅವರನ್ನು ನೇಮಿಸಿಕೊಳ್ಳುವುದಕ್ಕೆ ಇಲಾಖೆಯಿಂದ ಪ್ರಪೋಸಲ್ಲಾಗಿ ಸರ್ಕಾರಕ್ಕೆ ಬಂದಿದೆ, ಅದು ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಒಪ್ಪಿಗೆ ತೆಗೆದುಕೊಂಡು ಮಾಡಬೇಕಾಗುತ್ತದೆ ಅದರ ಜೊತೆಗೆ ಇದನ್ನು ತುಂಬುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಅದನ್ನು ಮಾಡೋಣ. ಟೆಕ್ಸ್ಟ್ ಬುಕ್‌ನಲ್ಲಿ ಕನ್‌ಸರ್ವೇಟೀವ್ಸ್ ಅನ್ನು ನೇಮಕ ಮಾಡಿ ಎಂದು ಹೇಳಿದರು. ಸರಿಯಾದವರನ್ನೇ ಮಾಡಿದ್ದೇವೆ. ಇನ್ನು ಜಿಲ್ಲಾಪರಿಷತ್ತು ಮತ್ತು ಹೈಸ್ಕೂಲುಗಳ ಸಂಬಂಧ ಪೂರ್ತಿ ನಿಗದಿಯಾಗಿಲ್ಲ. ನಿರ್ವಹಣೆಯಂತೂ ಅವರದೇ ಮೇಂಟೆನೆನ್ಸ್ ಎಸ್ಟ್ಯಾಬ್ಲಿಷ್‌ಮೆಂಟೂ ಅವರಿಗೇ ಕೊಡುತ್ತೇವೆ. ನೇಮಕಾತಿಗಳು ಇನ್ಸ್‌ಪೆಕ್ಷನ್ ಓವರ್ ಆಲ್ ಸೂಪರ್‌ವಿಷನ್ ನಮ್ಮ ಇಲಾಖೆಯಲ್ಲೇ ಇರುತ್ತದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಪ್ರತಿಯೊಂದು ರಾಜ್ಯದಲ್ಲೂ ಸೈನಿಕ ಶಾಲೆ ಇರುತ್ತವೆ. ನಮ್ಮಲ್ಲಿ ಬಿಜಾಪುರದಲ್ಲಿದೆ. ಇನ್ನೊಂದು ಶಾಲೆಗಾಗಿ ನಮ್ಮ ಸರ್ಕಾರ ಹಿಂದೆ ಕೇಂದ್ರವನ್ನು ಕೇಳಿದಾಗ

ಇನ್ನೊಂದು ಕೊಡುವುದಾಗಿ ವಾಗ್ದಾನ ಮಾಡಿತ್ತು. ಆ ಮೇರೆಗೆ ಕೊಡಗಿನಲ್ಲಿ ಮುಖ್ಯಮಂತ್ರಿಗಳು ಪ್ರವಾಸ ಹೋಗಿದ್ದಾಗ ರಿಟೈರ್ಡ್ ಜನರಲ್ ಕಾರ್ಯಪ್ಪನವರ ಹೆಸರಿನಲ್ಲಿ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಕರ್ನಾಟಕದವರು ಸೈನ್ಯದಲ್ಲಿ ಕಡಿಮೆ ಇದ್ದಾರೆ. ಹಾಗೆಯೇ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯಲ್ಲೂ ಆಫೀಸರ್ಸ್ ಕಡಿಮೆ ಇದ್ದಾರೆ. ಆದ್ದರಿಂದ ಎರಡನೇ ಸ್ಕೂಲನ್ನು ಕೊಡುವುದಕ್ಕೆ ಕೇಂದ್ರವು ಒಪ್ಪಿಕೊಂಡಿರುವುದರಿಂದ ಈ ಬಗ್ಗೆ ಮುಂದಿನ ಸೂಕ್ತ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಡಿ. ಮಂಜುನಾಥ್.—ಇದರ ಬಗ್ಗೆ ಕೇಂದ್ರಕ್ಕೆ ನಾನು ಮತ್ತೆ ಪತ್ರ ಬರೆದು ಮಂಜೂರು ಮಾಡಿ ಎಂದು ಒತ್ತಾಯ ಹಾಕುತ್ತೇನೆ.

ಶ್ರೀಮತಿ ಮುಕ್ತರುನ್ನಿಸಾ.—ಮಾನ್ಯ ಅಧ್ಯಕ್ಷರೇ, ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಮೈಸೂರು ಯೂನಿವರ್ಸಿಟಿಯಲ್ಲಿ ಲೆಕ್ಚರರ್‌ಗಳು ಕೆಲಸ ಮಾಡುತ್ತಿದ್ದು ಅವರನ್ನು ಟರ್ಮಿನೇಟ್ ಮಾಡಿದ್ದಾರೇ ಅವರನ್ನು ಮತ್ತೆ ರೀಇನ್‌ಸ್ಟೇಟ್ ಮಾಡಬೇಕೆಂದು ಕೇಳಿದ್ದೆವು ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಿಲ್ಲ. ತಮ್ಮ ವರದಿಯಲ್ಲಿ ಫಿಸಿಕಲ್ ಎಜುಕೇಷನ್, ಮ್ಯೂಸಿಕ್ ಎಜುಕೇಷನ್, ಡ್ಯಾನ್ಸ್, ಹಿಂದಿ ಎಜುಕೇಷನ್ ಹೀಗೆ ಎಲ್ಲಕ್ಕೂ ಸಂಬಂಧಪಟ್ಟ ವಿಷಯಗಳು ಇವೆ ಆದರೆ ಅದರಲ್ಲಿ ಉರ್ದು ಭಾಷೆಯ ಬಗ್ಗೆ ಒಂದು ಮಾತನ್ನು ಹೇಳಿಲ್ಲ ಇದರಿಂದಾಗಿ ನಮಗೆ ಬಹಳ ಬೇಜಾರಾಗಿದೆ. ಐದಾರು ವರ್ಷದಲ್ಲಿ ಪ್ರಾರಂಭವಾಗಿದ್ದ ಉರ್ದು ಶಾಲೆಗಳು ಆ ಶಾಲೆಗಳಿಗೆ ಇನ್ನೂ ಗ್ರ್ಯಾಂಟ್ ರಿಲೀಸ್ ಆಗಿಲ್ಲ. ಎಷ್ಟು ಶಾಲೆಗಳಿಗೆ ಗ್ರ್ಯಾಂಟ್ ರಿಲೀಸ್ ಮಾಡಿದ್ದೀರಿ ಎಂದು ಕೇಳಿದ್ದೆ ಆದರೆ ಅದರ ಬಗ್ಗೆ ಏನೂ ಹೇಳಲಿಲ್ಲ. ಸ್ವಲ್ಪ ಪುಸ್ತಕಗಳನ್ನು ಹೆಡ್ ಮಾಸ್ಟರ್‌ಗೆ ಕೊಡುತ್ತಿದ್ದೇವೆ ಇದರಿಂದಾಗಿ ಯಾರು ಪುಸ್ತಕ ವನ್ನು ಲೂಸ್ ಮಾಡುತ್ತಾರೆ ಅಂತಹವರಿಗೆ ಕೊಡಲು ಅನುಕೂಲವಾಗುತ್ತದೆ ಎಂದು ತಿಳಿಸಿದ್ದೀರಿ. ಅನ್‌ಏಡೆಡ್ ಸ್ಕೂಲುಗಳಲ್ಲಿ ಯಾವ ಸಿಲಬಸ್ ಅನ್ನು ಫಾಲೋ ಮಾಡಬೇಕು ಅವರಿಗೆ ಅಸಿಸ್ಟೆನ್ಸ್ ಕೊಡುವುದಿಲ್ಲ, ಅವರೂ ಕೂಡ ಇದೇ ಪುಸ್ತಕವನ್ನು ಪರ್ಚೇಸ್ ಮಾಡಬೇಕಾಗುತ್ತದೆ, ಲೇಖಕ್ ಪುಸ್ತಕಗಳನ್ನು ಯಾವ ರೀತಿಯಾಗಿ ಸೊಸೈಟೀಸ್ ಮುಖಾಂತರವಾಗಿ ಸೇಲ್ ಮಾಡುತ್ತೀರಿ ಅದೇ ರೀತಿ ಯಾಗಿ ಇದನ್ನು ಕೂಡ ಸೊಸೈಟಿಗಳ ಮುಖಾಂತರ ಸೇಲ್ ಮಾಡಬೇಕು ಇದರಿಂದಾಗಿ ಲೂಸ್ ಮಾಡಿ ದಂತಹವರೂ ಕೂಡ ಪರ್ಚೇಸ್ ಮಾಡಬಹುದು, ಅನ್ ಏಡೆಡ್ ಸ್ಕೂಲ್‌ಗಳು ಸಹ ಪರ್ಚೇಸ್ ಮಾಡ ಬಹುದು. ಇನ್ನು ಪ್ರೈಮರಿ ಶಿಕ್ಷಣದ ಒಂದನೇ ತರಗತಿಯಿಂದ ಹಿಡಿದು ಏಳನೇ ತರಗತಿಯವರಿಗೆ ಫಿಸಿಕಲ್ ಎಜುಕೇಷನ್ ಅನ್ನು ಕಂಪಲ್ಸರಿಯಾಗಿ ಮಾಡಲು ಅಪ್ರೂವ್ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ ಆದರೆ ಅಪ್ರೂವ್ ಮಾಡುತ್ತಿಲ್ಲ ಎಲ್ಲಾ ಶಾಲೆಗಳಲ್ಲೂ ಕೂಡ ಕ್ಲಾಸ್ ಟೀಚರ್ಸ್ ಅನ್ನೇ ಅಪ್ರೂವ್ ಮಾಡುತ್ತಾರೆ ಅವರು ಬಿ.ಎಡ್. ಓದಿರುತ್ತಾರೆ ಫಿಸಿಕಲ್ ಎಜುಕೇಷನ್ ಅನ್ನು ಅವರು ಓದಿರುವುದಿಲ್ಲ. ಇಂತಹ ಟೀಚರ್ಸ್‌ಗಳು ಫಿಸಿಕಲ್ ಎಜುಕೇಷನ್ ಅನ್ನು ಟೀಚ್ ಮಾಡುವುದಕ್ಕಾಗುವುದಿಲ್ಲ. ಒಂದರಿಂದ ಏಳನೇ ತರಗತಿಯವರೆಗೆ ಏನು ಫಿಸಿಕಲ್ ಎಜುಕೇಷನ್ ಅನ್ನು ಕಂಪಲ್ಸರಿಯಾಗಿ ಮಾಡಿದ್ದೀರಿ ಅದಕ್ಕೆ ಫಿಸಿಕಲ್ ಎಜುಕೇಷನ್ ಇನ್‌ಸ್ಟ್ರಕ್ಟರ್ ಎಂದು ಸಪರೇಟ್ ಆಗಿ ಅಪಾಯಿಂಟ್ ಮಾಡಬೇಕೆಂದು ಕೇಳಿದ್ದೆವು ಅದರ ಬಗ್ಗೆ ಕೂಡ ಏನೂ ಹೇಳಿಲ್ಲ. ಇನ್ನು ನಾಲ್ಕನೇ ದರ್ಜೆ ನೌಕರರನ್ನು ಕೆಲವು ಶಾಲೆಗಳಲ್ಲಿ ಕೊಟ್ಟಿದ್ದೇವೆಂದು ಹೇಳಿದ್ದೀರಿ, ಯಾವ ಏಡೆಡ್ ಶಾಲೆಗಳಲ್ಲೂ ಕೂಡ ನಾಲ್ಕನೇ ದರ್ಜೆ ನೌಕರರನ್ನು ಕೊಟ್ಟಿಲ್ಲ.

ಶ್ರೀ ಡಿ. ಮಂಜುನಾಥ್.—ಸರಕಾರೀ ಇಲಾಖೆಗಳಲ್ಲಿ ಕೆಲಸ ಮಾಡತಕ್ಕಂತಹ ಲೋಕಲ್ ಕ್ಯಾಂಡಿಡೇಟ್ಸ್ ಅನ್ನು ಕನ್‌ಫರ್ಮ್ ಮಾಡಬೇಕೆಂದು ಮಾಡಿದ್ದೇವೆ. ಇದರ ಬಗ್ಗೆ ಒಂದು ಆರ್ಡರ್ ಕೂಡ ಮಾಡಿದ್ದೇವೆ, ಆದರೆ ಯಾರು ಕಾಲೇಜಿನಲ್ಲಿ ಲೋಕಲ್ ಕ್ಯಾಂಡಿಡೇಟ್‌ಗಳಾಗಿ ಕೆಲಸ ಮಾಡುತ್ತಿ ದ್ದಾರೆ ಅಂತಹವರಿಗೆ ಈ ಆರ್ಡರ್ ಅನ್ವಯಿಸುವುದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಸೆಲೆಕ್ಷನ್ ಬೋರ್ಡ್ ಬೇರೆ ಇರುತ್ತದೆ ಅವರು ಅಲ್ಲಿಗೆ ಅರ್ಜಿ ಹಾಕಬೇಕು ಅಲ್ಲಿನ ಎಕ್ಸ್‌ಪರ್ಟ್‌ಗಳು ಅವರನ್ನು ಸೆಲೆಕ್ಷನ್ ಮಾಡಬೇಕಾಗುತ್ತದೆ. ಅನೇಕ ಸಾರಿ ಅವರು ಅಲ್ಲಿಗೆ ಸಂದರ್ಶನಕ್ಕೆ ಹೋಗಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಮಾಡಿದ್ದಾರೆ ನೀವೂ ಮಾಡಿ ಎಂದು ಹೇಳುತ್ತಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ತಪ್ಪು ಮಾಡಿದ್ದಾರೆ ಅವರು ಅದನ್ನು ಮಾಡಬಾರದಾಗಿತ್ತು, ಬೇರೆ ರೀತಿಯಲ್ಲಿ ಏನಾದರೂ ಮಾಡಬೇಕೆಂದಿದ್ದರೆ ಆರ್ಡಿನೆನ್ಸ್ ಮಾಡಬೇಕಾಗುತ್ತದೆ. ಈಗಿನ ನಿಯಮದ ಪ್ರಕಾರ ಮಾಡುವುದಕ್ಕೆ ಬರುವುದಿಲ್ಲ. ನಾವು ಇದರ ಬಗ್ಗೆ ಬೇರೆ ರೀತಿಯಲ್ಲಿ ಯೋಚನೆ ಮಾಡುತ್ತಿದ್ದೇವೆ.

ಮತ್ತು ಈ ಸಮಸ್ಯೆ ಈಗಾಗಲೇ ಬಂದಿದೆ. ಉರ್ದು ಶಾಲೆಗಳ ಬಗ್ಗೆ ಕೇಳಿದ್ದಾರೆ. ಅದನ್ನು ಸಪರೇಟ್ ಆಗಿ ಮೈನಾರಿಟಿ ಡೈರ್‌ಕ್ಟೊರೇಟ್ ಮಾಡಬೇಕು ಎಂದು ಮಾಡಿದ್ದೇವೆ. ಉರ್ದು ಶಾಲೆಗಳನ್ನು ಈಗ ನಡೆಸುತ್ತಿಲ್ಲ ಎಂದು ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಸದಸ್ಯರಿಗೆ ಕಳವಳ ಬೇಡ. ಆದ್ದರಿಂದ ಅದು ಈ ಹೆಡ್ಸ್‌ನಲ್ಲಿ ಬರುವುದಿಲ್ಲ, ಸಂಸ್ಕೃತ, ಹಿಂದಿ ಅಲ್ಲಿ ಉರ್ದು ಬರುವುದಿಲ್ಲ, ಇದರ ಬಗ್ಗೆ ಕ್ರಮ ತೆಗೆದು ಕೊಂಡಿದ್ದೇವೆ. ಉರ್ದು ಎಜುಕೇಷನ್ ಬಗ್ಗೆ ಸಾಕಷ್ಟು ಶಾಲೆಗಳು ಇವೆ. ಇದರ ಬಗ್ಗೆ ಎಲ್ಲಾ ರೀತಿಯ ಅನುಕೂಲವನ್ನು ಮಾಡಿದ್ದೇವೆ. ಇನ್ನು ಅನ್‌ಏಡೆಡ್ ಸ್ಕೂಲ್‌ಗಳಲ್ಲಿ ಪಠ್ಯಪುಸ್ತಕದ ವಿಷಯ ಹೇಳಿದರು. ಆ ಕೆಲಸವನ್ನು ಮಾಡಿದ್ದೇವೆ. ಪುಸ್ತಕ ಕೊಳ್ಳುವವರು ಅವರಿಗೆ ಕನ್‌ಸ್ಯೂಮರ್ ಫೆಡರೇಷನ್ ಏನು ಇದೆ, ಯಾರ್ಯಾರು ಪುಸ್ತಕವನ್ನು ತೆಗೆದುಕೊಳ್ಳುವವರು ಇದ್ದಾರೆ. ಅಂಥ ಪುಸ್ತಕ ಗಳನ್ನು ಒಂದು ಕಡೆ ಇಟ್ಟಿದೆ. ಅವರು ಟಿ.ಎ.ಪಿ.ಸಿ.ಎಂ.ಎಸ್. ನಿಂದಲೂ ಕೂಡಾ ಖರೀದಿ ಮಾಡ ಬಹುದು. ಆದ್ದರಿಂದ ನಿಮಗೆ ಏನೂ ತೊಂದರೆಯಾಗುವುದಿಲ್ಲ. ಹೈಸ್ಕೂಲ್ ಪುಸ್ತಕಗಳನ್ನು ಅಲ್ಲಿಯೇ ಇಟ್ಟಿರುತ್ತಾರೆ, ಅದನ್ನು ಕೂಡಾ ಖರೀದಿಗೆ ತೆಗೆದುಕೊಳ್ಳಬಹುದು. ಫಿಸಿಕಲ್ ಎಜುಕೇಷನ್ ಬಗ್ಗೆ ಈಗಾಗಲೇ ಉತ್ತರವನ್ನು ಕೇಳಿದ್ದೇನೆ. ಇದನ್ನು ಎಲ್ಲಾ ಕಡೆ ಒದಗಿಸಬೇಕು. ಮಕ್ಕಳಿಗೆ ದೈಹಿಕ ಶಿಕ್ಷಣ ಇಲ್ಲದೆ ಇದ್ದರೆ ಆಗುವುದಿಲ್ಲ. ಪ್ರೈಮರಿ ಸ್ಕೂಲಿನಲ್ಲಿ ಹೈಯರ್ ಪ್ರೈಮರಿ ಸ್ಕೂಲ್‌ನಲ್ಲಿ ನೇಮಕ ಮಾಡಿದ್ದೇವೆ. ಡಿ.ಎಲ್.ಆರ್.ಸಿ. ಯಿಂದಲೂ ಇದನ್ನು ಮಾಡಬೇಕಾಗುತ್ತದೆ. ಆಗ ವೇಕೆನ್ಸಿಯನ್ನು ತುಂಬುತ್ತೇವೆ. ಫ್ಯಾನ್ಸ್‌ಗಳ ಬಗ್ಗೆ ಕೇಳಿದ್ದಾರೆ. ಅವರ ಬಗ್ಗೆ ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಇಟ್ಟಿದ್ದೇವೆ, ಗಡಿಯಾರವನ್ನು ಇಟ್ಟಿದ್ದೇವೆ, ಅಲ್ಮೆರಾವನ್ನು ಇಟ್ಟಿದ್ದೇವೆ, ಕಳ್ಳತನ ಮಾಡಿಕೊಂಡು ಹೋದರೂ ಏನೂ ಗೊತ್ತಾಗುವುದಿಲ್ಲ ಎಂದು ಕೃಷ್ಣನ್‌ರವರು ಹೇಳಿದ್ದರು. ಇದರ ಬಗ್ಗೆ ವಾಚ್‌ಮೆನ್ ಬೇಕು. ಫ್ಯಾನ್ಸ್‌ಗಳ ಬಗ್ಗೆ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇವೆ. ಇದರ ಬಗ್ಗೆ ಎಷ್ಟು ಪೋಸ್ಟ್ ಬೇಕಾಗುತ್ತದೆ. ಎಲ್ಲಾ ಅಧ್ಯಯನ ಮಾಡಿ ಪ್ರೊಪೋಸಲ್ಸ್ ಕಳುಹಿಸಿ ಎಂದು ಹೇಳಿದ್ದೇನೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ನಮ್ಮ ವಿದ್ಯಾ ಮಂತ್ರಿಗಳು ದಾವಣಗೆರೆಯಲ್ಲಿ ಒಂದು ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಒಂದು ಸಲ ಹೇಳಿದ್ದರು. ಈಗ ಬೆಳಗಾಂನಲ್ಲಿ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ತಿಳಿಸಿದ್ದಾರೆ. ದಯವಿಟ್ಟು ಕರ್ನಾಟಕದಲ್ಲಿರತಕ್ಕಂಥ ತಾಂತ್ರಿಕ ಕಾಲೇಜು ದಾವಣಗೆರೆಯಲ್ಲಿ ಒಂದೇ. ಆದ್ದರಿಂದ ತಾವು ದಾವಣಗೆರೆಯಲ್ಲಿ ಎಲ್ಲಾ ಅನುಕೂಲ ಇರುವುದರಿಂದ ದಾವಣಗೆರೆಯಲ್ಲಿ ಈ ವಿಶ್ವವಿದ್ಯಾನಿಲಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಅಧ್ಯಕ್ಷರು.—ಒಂದು–ಎರಡು–ಮೂರು ಈ ರೀತಿಯಾಗಿಯೇ ಕೇಳಿಕೊಂಡು ಬಂದರೆ ಏನು ಮಾಡಬೇಕು?

ಶ್ರೀ ಪಂಪಾಪತಿ.—ದಾವಣಗೆರೆಯಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ತಾವು ನೋಡಿದ್ದೀರಿ. ಅದು ಬಹಳ ದೊಡ್ಡದು ಇದೆ. ಕಿರಿಯ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಈ ವರ್ಷ ಪ್ರಯತ್ನ ಮಾಡುತ್ತೀರಾ? ಮತ್ತು ಸರ್ಕಾರಿ ಪ್ರೌಢಶಾಲಾ ಮೈದಾನ ಬಹಳ ದೊಡ್ಡದು ಇದೆ. ಆ ಮೈದಾನದಲ್ಲಿ ಸರ್ಕಸ್, ವಸ್ತುಪ್ರದರ್ಶನ ಈ ರೀತಿಯಾಗಿ ಎಲ್ಲಾ ಮಾಡುವುದರಿಂದ ಅಲ್ಲಿ ಮಕ್ಕಳ ಆಟಕ್ಕೆ ಬಹಳ ತೊಂದರೆ ಆಗುತ್ತದೆ. ದಯವಿಟ್ಟು ಇನ್ನು ಮುಂದೆ ಯಾವುದಕ್ಕೂ ಇಂಥ ಕಾರ್ಯಕ್ರಮಗಳಿಗೆ ಅವಕಾಶ ಕೊಡದಂತೆ ಬರೀ ಮಕ್ಕಳ ಆಟದ ಮೈದಾನವಾಗಿ ಪರಿವರ್ತನೆಗೊಳಿಸುವುದಕ್ಕೆ ಒಂದು ಆಜ್ಞೆಯನ್ನು ಹೊರಡಿಸಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇವೆ. ಆಜಾದ್‌ನಗರ, ಅಹಮದ್‌ನಗರ, ಗಾಂಧಿನಗರ ಈ ಭಾಗದಲ್ಲಿ ಆರ್ಥಿಕವಾಗಿ ಹಿಂದುಳಿದಿರತಕ್ಕಂಥವರು ಮತ್ತು ಅಲ್ಪಸಂಖ್ಯಾತರು, ಹಿಂದುಳಿದ ಜನಾಂಗ ಅಲ್ಲಿರುವುದು. ಅಲ್ಲಿ ಸರ್ಕಾರಿ ಶಾಲೆಗಳೇ ಬಹಳ ಕಡಿಮೆ. ಆದ್ದರಿಂದ ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಯವರೆಗೆ ಒಂದು ಸರ್ಕಾರಿ ಶಾಲೆಯನ್ನು ಪ್ರಾರಂಭಿಸುವುದಕ್ಕೆ ಈ ವರ್ಷ ತಾವು ಪ್ರಯತ್ನ ಮಾಡಬೇಕು. ಇದರ ಬಗ್ಗೆ ಒಂದು ಆಜ್ಞೆಯನ್ನು ಹೊರಡಿಸಿ ಅನುಕೂಲ ಮಾಡಿಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಟೆಕ್ನಿಕಲ್ ಯೂನಿವರ್ಸಿಟಿ ದಾವಣಗೆರೆಯಲ್ಲಿ ಆಗಬೇಕು ಎಂದು ಹೇಳುತ್ತಿದ್ದೀರಿ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಅವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಟೆಕ್ನಿಕಲ್ ಯೂನಿವರ್ಸಿಟಿಯನ್ನು ಬೆಳಗಾಂನಲ್ಲಿ ಮಾಡುತ್ತೇವೆ ಎಂದು ಹೇಳಿದ್ದಾರೆ.

ಇದು ಬದಲಾವಣೆ ಆಗುವುದಿಲ್ಲ. ಜೂನಿಯರ್ ಕಾಲೇಜು, ಸರ್ಕಾರಿ ಪ್ರೌಢಶಾಲೆ ಅದು ದೊಡ್ಡದು ಇದೆ. ಜೂನಿಯರ್ ಕಾಲೇಜನ್ನು ಮಾಡಿ ಎಂದು ಮಾನ್ಯ ಸದಸ್ಯರಾದ ಪಂಪಾಪತಿಯವರು ಹೇಳುತ್ತಿದ್ದಾರೆ. ಅಲ್ಲಿ ಜೂನಿಯರ್ ಕಾಲೇಜ್ ನೆಸೆಸಿಟಿ ಇದೆಯೇ ಎಂಬುದರ ಬಗ್ಗೆ ಪರಿಶೀಲನೆ ಮಾಡಿ ವರದಿಯನ್ನು ತರಿಸಿಕೊಂಡು ಅವಶ್ಯಕತೆ ಇದ್ದರೆ ಅದನ್ನು ಮಾಡುತ್ತೇನೆ. ಅಲ್ಲಿರುವ ಹೈಸ್ಕೂಲು ಮೈದಾನದ ಜಾಗ ಬೇಕು. ಬೇರೆಯವರಿಗೆ ಯಾರಿಗೂ ಕೊಡಬೇಡಿ ಎಂದು ಹೇಳಿದ್ದೇನೆ. ಸರ್ಕಸ್‌ಗಂತೂ ಕೊಡುವುದಿಲ್ಲ ಏತಕ್ಕೆಂದರೆ ಆ ಮಕ್ಕಳಿಗೆ ಆಟವಾಡುವುದಕ್ಕೆ ತೊಂದರೆಯಾಗುತ್ತದೆ. ಇನ್ನು ಅಜಾದ್‌ನಗರದ ಕಡೆ ಒಂದು ಪ್ರೈಮರಿ ಶಾಲೆ ಕೊಡಿ ಎಂದು ಹೇಳಿದರು. ಈಗ ಅವೆಲ್ಲವನ್ನೂ ಕೂಡ ಆಯಾಯ ಜಿಲ್ಲಾ ಪರಿಷತ್‌ಗೆ ವಹಿಸುತ್ತೇವೆ. ಆಮೇಲೆ ನಾವು ಸಿಟಿ ಕಡೆ ಮತ್ತು ಅರ್ಬನ್ ಏರಿಯಾದ ಕಡೆ ಗಮನ ಕೊಡುತ್ತೇವೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಪ್ರೈಮರಿ ಶಾಲೆಗೆ ಕಟ್ಟಡ ಇಲ್ಲದಿದ್ದಲ್ಲಿ ಅಥವಾ ಕೆಟ್ಟ ಕಟ್ಟಡ ಇದ್ದಲ್ಲಿ ಅದನ್ನು ಕಟ್ಟಿಸುವುದಕ್ಕೆ ಮತ್ತು ಎಲ್ಲಿ ಲ್ಯಾಬರೋಟರಿ ಇಲ್ಲವೋ ಅಲ್ಲಿ ಲ್ಯಾಬರೋಟರಿಯನ್ನು ಒದಗಿಸುವುದಕ್ಕೆ ನೀವು ಎಷ್ಟು ಹಣವನ್ನು ಇಟ್ಟುಕೊಂಡಿದ್ದೀರಿ ಎನ್ನುವುದನ್ನು ತಿಳಿಸಬೇಕು.

ಎರಡನೆಯದಾಗಿ ಎನ್‌ಆರ್‌ಇಪಿ ನಲ್ಲಿ ಕಟ್ಟಡ ಕಟ್ಟಿಸಿದ್ದೇವೆಂದು ಹೇಳಿದಿರಿ. ತಾವು ಎನ್‌ಆರ್‌ಇಪಿ ಅಡಿಯಲ್ಲಿ ಈ ರಾಜ್ಯದಲ್ಲಿ ಈ ಸಾಲಿನಲ್ಲಿ ಮತ್ತು ಕಳೆದ ಸಾಲಿನಲ್ಲಿ ಎಷ್ಟು ಕಟ್ಟಡಗಳನ್ನು ಕಟ್ಟಿಸಿದ್ದೀರಿ ಎನ್ನುವುದಕ್ಕೆ ಮಾಹಿತಿಯನ್ನು ಕೊಡುತ್ತೀರಾ?

ಶ್ರೀ ಡಿ. ಮಂಜುನಾಥ್.—ಅದಕ್ಕೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಪ್ರೈಮರಿ ಶಾಲೆಗಳಿಗೆ ಕಟ್ಟಡಗಳನ್ನು ಕಟ್ಟಿಸುವುದೇ ಆಗಲಿ ಅಥವಾ ಆ ಸ್ಕೂಲುಗಳ ಕಟ್ಟಡಗಳನ್ನು ರಿಪೇರಿ ಮಾಡುವುದಕ್ಕಾಗಲಿ ಇನ್ನು ಮುಂದೆ ಜಿಲ್ಲಾ ಪರಿಷತ್‌ಗೆ ವಹಿಸುತ್ತೇವೆ. ಇನ್ನು ಎನ್‌ಆರ್‌ಇಪಿ ಯೋಜನೆಯಲ್ಲಿ ಎಷ್ಟು ಕಟ್ಟಡಗಳನ್ನು ಕಟ್ಟಿಸಿದ್ದೇವೆ ಎನ್ನುವುದಕ್ಕೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಪಿ. ಎಸ್. ರಾಣೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು, ಹೊಸದಾಗಿ ಸ್ನಾತಕೋತ್ತರ ಕೇಂದ್ರಗಳನ್ನು ಪ್ರಾರಂಭ ಮಾಡುವ ಬಗ್ಗೆ ಏನಾದರೂ ಹೇಳುತ್ತಾರೆಂದು ನಾನು ನಿರೀಕ್ಷಣೆ ಮಾಡಿಕೊಂಡಿದ್ದೆ. ಅವರು ಏನೂ ಹೇಳಲಿಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿ ಕಾರವಾರ ಮತ್ತು ಬಿಜಾಪುರ ಈ ಎರಡು ಸ್ಥಳಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೇಂದ್ರಗಳನ್ನು ಸ್ಥಾಪಿಸಬೇಕೆನ್ನುವ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಇದನ್ನು ೧೯೮೬–೮೭ ರಲ್ಲಿ ಮಾಡಬೇಕೆಂಬ ನಿರ್ಣಯವೂ ಕೂಡ ಆಗಿತ್ತು. ಆದರೆ ಸರ್ಕಾರದ ವಿಳಂಬವೋ ಅಥವಾ ನಿರ್ಣಯದ ಅಭಾವದಿಂದಲೋ ಇದು ಆಗಲಿಲ್ಲ. ಆದುದರಿಂದ ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಾ ಎನ್ನುವುದನ್ನು ತಿಳಿಸಬೇಕು.

ಇನ್ನು ಎರಡನೆಯದಾಗಿ ಮಾನ್ಯ ಶಿಕ್ಷಣ ಸಚಿವರು ತಾವು ಉತ್ತರ ಕೊಡುವಾಗ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಯಾವುದೇ ಒಂದು ಮಾತನ್ನೂ ಹೇಳಲಿಲ್ಲ. ಅದೇ ಕಾಲಕ್ಕೆ ಮಾನ್ಯ ಶಿಕ್ಷಣ ಸಚಿವರು ಸರ್ಕಾರದವರು ಹೊಸದಾಗಿ ತಂದಿರತಕ್ಕಂಥ ಹೊಸ ಶಿಕ್ಷಣದ ವಿದ್ಯಾಭ್ಯಾಸದ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದೆ ಎನ್ನುವುದನ್ನೂ ಸಹ ಪ್ರಕಟ ಮಾಡಲಿಲ್ಲ. ಕೇಂದ್ರ ಸರ್ಕಾರ ಹೊಸದಾಗಿ ಪ್ರಾರಂಭ ಮಾಡುವ ಹೆಣ್ಣು ಮಕ್ಕಳ ವಿದ್ಯಾ ಸಂಸ್ಥೆಗೆ ಅದರಲ್ಲೂ ಮುಖ್ಯವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಮಟ್ಟದಲ್ಲಿ ಅವರಿಗೆ ಅನುದಾನ ಕೊಡುವ ಯೋಜನೆ ಏನು ಇದೆ ಅಂತಹ ಅನುದಾನವನ್ನು ಅವರು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ? ನಾನು ಇದನ್ನು ಏತಕ್ಕೆ ಕೇಳುತ್ತಿದ್ದೇನೆಂದರೆ ಹಳ್ಳಿಗಾಡಿನ ಭಾಗಗಳಲ್ಲಿ ಅದರಲ್ಲೂ ಗ್ರಾಮೀಣ ಭಾಗಗಳಲ್ಲಿ ಇರತಕ್ಕಂಥ ಮಹಿಳೆಯರ ಶಿಕ್ಷಣಕ್ಕೆ, ಅವರು ಅಲ್ಲಿ ಈ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭ ಮಾಡುವುದಕ್ಕೆ ಉತ್ತೇಜನ ಕೊಡುವುದಕ್ಕಾಗಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎನ್ನುವುದನ್ನು ತಿಳಿಸುತ್ತೀರಾ?

ಇನ್ನು ಮೂರನೆಯದಾಗಿ, ಈಗ ತಾವು ಪೂರ್ವ ಪ್ರಾಥಮಿಕ ಶಾಲೆಗಳ ಬಗ್ಗೆ ತಾವು ಹೇಳಿದಿರಿ. ನನಗೆ ತಿಳಿದು ಬಂದಿರುವ ಹಾಗೆ ಈಗ ಹೊಸದಾಗಿ ಸುಮಾರು ೨೦೦ ಪೂರ್ವ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ಇದು ನನಗೆ ಅನಿಸಿದ ಹಾಗೆ ಕೇವಲ ಯಾವ ಜಿಲ್ಲೆಯಲ್ಲಿ ಅಕ್ಷರ ಸೇನೆ ಯೋಜನೆ ಇದೆಯೋ ಅಲ್ಲಿ ಮಾತ್ರ ಪ್ರಾರಂಭಿಸಬೇಕೆನ್ನುವ ಅರ್ಥ ಬರುತ್ತದೆ.

ಆ ರೀತಿ ಮಾಡಿದರೆ ಉಳಿದ ಜಿಲ್ಲೆಗಳಿಗೆ ಅನ್ಯಾಯವಾಗುತ್ತದೆ. ಅದರಲ್ಲೂ ಹಿಂದುಳಿದ ವರ್ಗದ ಜಿಲ್ಲೆಗಳಿಗೆ ಅನ್ಯಾಯವಾಗುತ್ತದೆ. ಆದುದರಿಂದ ಸರ್ಕಾರ ಪ್ರಾರಂಭಿಸುವ ಪೂರ್ವ ಪ್ರಾಥಮಿಕ ಶಾಲೆಗಳನ್ನು ಹಿಂದುಳಿದ ಜಿಲ್ಲೆಗಳಲ್ಲಿ ಪ್ರಾರಂಭಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಕೊನೆಯದಾಗಿ ೧೯೮೫-೮೬ ರಲ್ಲಿ ಹೊಸದಾಗಿ ಪ್ರಾರಂಭವಾದ ಖಾಸಗೀ ವಿದ್ಯಾ ಸಂಸ್ಥೆಗಳಿಗೆ ಅದಕ್ಕೆ ೨ ವರ್ಷಗಳಾದ ನಂತರ ಅನುದಾನ ಕೊಡುವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಈ ಬಗ್ಗೆ ಒಂದು ಸರ್ಕಾರೀ ಆಜ್ಞೆಯೂ ಇದೆ. ೧-೬-೧೯೮೬ ರ ಮೊದಲು ಪ್ರಾರಂಭಿಸಿದ ಖಾಸಗೀ ವಿದ್ಯಾ ಸಂಸ್ಥೆಗಳಿಗೆ ೫ ವರ್ಷ ಆದನಂತರ ಅನುದಾನ ಕೊಡಲಾಗುತ್ತದೆ ಎಂದು ಇದೆ. ಆದರೆ ಈ ಸರ್ಕಾರದ ಆಜ್ಞೆಯಿಂದ ಯಾವ ರೀತಿ ಅನ್ಯಾಯವಾಗಿದೆ ಎಂದರೆ, ಒಂದೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭವಾದಂಥ ಕೆಲವು ಶೈಕ್ಷಣಿಕ ಸಂಸ್ಥೆಗಳಿಗೆ ಅವು ಪ್ರಾರಂಭವಾದ ೨ ವರ್ಷಗಳ ನಂತರ ಅನುದಾನ ಸಿಕ್ಕಿದರೆ ಮತ್ತೆ ಕೆಲವಕ್ಕೆ ೫ ವರ್ಷಗಳ ನಂತರ ಅನುದಾನ ಸಿಗುತ್ತವೆ. ಈ ರೀತಿ ಕೆಲವು ಶೈಕ್ಷಣಿಕ ಸಂಸ್ಥೆಗಳಿಗೆ ಅನ್ಯಾಯ ಆಗುವುದನ್ನು ತಪ್ಪಿಸಲು ೧೯೮೫-೮೬ನೇ ಸಾಲಿನಲ್ಲಿ ಪ್ರಾರಂಭವಾದಂಥ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ೫ ವರ್ಷಗಳ ನಂತರ ಅನುದಾನವನ್ನು ಬಿಡುಗಡೆ ಮಾಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು ಕಾರವಾರ ಮತ್ತು ಬಿಜಾಪುರದಲ್ಲಿ ಪೋಸ್ಟ್ ಗ್ರಾಜುಯೇಟ್ ಸೆಂಟರ್‌ಗಳನ್ನು ತೆರೆಯಬೇಕೆಂದು ಕೇಳಿದ್ದಾರೆ, ಈ ಸೆಂಟರ್‌ಗಳನ್ನು ತೆರೆಯಲು ಸರ್ಕಾರಕ್ಕೆ ೫ ವರ್ಷಗಳವರೆಗೆ ೯ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಬಗ್ಗೆ ಎಲ್ಲವನ್ನೂ ಪರಿಶೀಲನೆ ಮಾಡಿದ ನಂತರ ಈಗ ಸಚಿವ ಸಂಪುಟದ ಮುಂದೆ ತಂದಿದ್ದೇನೆ. ಅಲ್ಲಿ ಇದನ್ನು ತೀರ್ಮಾನ ಮಾಡಬೇಕಾಗಿದೆ. ಈಗ ಪ್ರತಿ ಡಿವಿಜನ್‌ನಲ್ಲಿಯೂ ಒಂದೊಂದು ರೆಸಿಡೆನ್ಸಿಯಲ್ ಶಾಲೆಗಳನ್ನು ಹೆಣ್ಣು ಮಕ್ಕಳ ಸಲುವಾಗಿ ತೆಗೆದಿದ್ದೇವೆ. ಇದರ ಜೊತೆಗೆ ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಫಸ್ಟ್ ಗ್ರೇಡ್ ಕಾಲೇಜನ್ನು ಹೆಣ್ಣುಮಕ್ಕಳ ಸಲುವಾಗಿ ಮಂಜೂರು ಮಾಡಿದ್ದೇವೆ. ಮತ್ತೆ ಪ್ರೀ-ಪ್ರೈಮರಿ ಶಾಲೆಗಳನ್ನು ಎಲ್ಲಾ ಕಡೆ ತೆರೆಯಬೇಕೆಂದು ಹೇಳಿದ್ದಾರೆ. ಈಗ ಕೆಲವು ಜಿಲ್ಲೆಗಳಲ್ಲಿ ಏನು ಈ ಶಾಲೆಗಳನ್ನು ತೆರೆದಿದ್ದೇವೆ, ಅದನ್ನು ಬೇರೆ ಕಡೆಗಳಿಗೂ ವಿಸ್ತರಣೆ ಮಾಡುತ್ತೇವೆ. ಮತ್ತೆ ೧-೬-೧೯೮೬ರಿಂದೀಚೆಗೆ ಪ್ರಾರಂಭವಾದಂಥ ಖಾಸಗೀ ಶಿಕ್ಷಣ ಸಂಸ್ಥೆಗಳಿಗೆ ೨ ವರ್ಷಗಳ ನಂತರ ಗ್ರಾಂಟ್ ಕೊಡಲಾಗುತ್ತದೆ. ಈ ಅವಧಿಗೆ ಮೊದಲೇ ಕೊಡಬೇಕೆಂದರೆ ಆಗುವುದಿಲ್ಲ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.—ಕಳೆದ ಬಡ್ಜೆಟ್ ಅಧಿವೇಶನದ ಸಮಯದಲ್ಲಿ ಆಗಿನ ವಿದ್ಯಾ ಮಂತ್ರಿಗಳು ಮುದ್ದೇನಹಳ್ಳಿಯಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು. ಇದು ವಿಶ್ವೇಶ್ವರಯ್ಯನವರು ಹುಟ್ಟಿದ ಊರು. ಆದರೆ ಈಗ ಇಲ್ಲಿ ಇದನ್ನು ಸ್ಥಾಪನೆ ಮಾಡುವುದನ್ನು ಕೈಬಿಟ್ಟು ಬೆಳಗಾಂನಲ್ಲಿ ಸ್ಥಾಪನೆ ಮಾಡಲಾಗುವುದೆಂದು ಹೇಳುತ್ತಿದ್ದಾರೆ. ಇದಕ್ಕೆ ಕಾರಣವೇನು ? ಈ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಮುದ್ದೇನಹಳ್ಳಿಯಲ್ಲಿಯೇ ಪ್ರಾರಂಭ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಸ್.ಸಿ. ಮತ್ತು ಎಸ್.ಟಿ.ಗೆ ಸೇರಿದ ಹಣದಲ್ಲಿ ೧೦-೧೫ ಲಕ್ಷ ರೂಪಾಯಿಗಳಷ್ಟು ಹಣ ದುರುಪಯೋಗವಾದ ಬಗ್ಗೆ ವಿಜಿಲೆನ್ಸ್ ಕಮೀಷನ್ ಅವರು ತನಿಖೆ ಮಾಡಿ ಸರ್ಕಾರಕ್ಕೆ ವರದಿ ಕೊಟ್ಟಿದ್ದರೂ ಸಹ ಸರ್ಕಾರದವರು ಆ ಬಗ್ಗೆ ಇನ್ನು ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ? ನಾನು ಅಲ್ಲಿ ಸೆನೆಟ್ ಸದಸ್ಯನಾಗಿ ಈ ಒಂದು ಅನ್ಯಾಯದ ಬಗ್ಗೆ ಕಳೆದ ಸಲ ಸಹ ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆದ್ದರಿಂದ ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳುತ್ತೇನೆ ?

ಶ್ರೀ ಡಿ. ಮಂಜುನಾಥ್.—ಈ ಹಿಂದಿನ ವಿದ್ಯಾಮಂತ್ರಿಗಳು ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಮುದ್ದೇನಹಳ್ಳಿಯಲ್ಲಿ ಸ್ಥಾಪನೆ ಮಾಡುವ ಬಗ್ಗೆ ಆಶ್ವಾಸನೆ ಕೊಟ್ಟಿದ್ದು ನನಗೆ ಗೊತ್ತಿಲ್ಲ. ಈಗ ಇದನ್ನು ಬೆಳಗಾಂನಲ್ಲಿ ಸ್ಥಾಪನೆ ಮಾಡಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಆದ್ದರಿಂದ ಇದು ಬೆಳಗಾಂನಲ್ಲಿ ಆಗುತ್ತದೆ. ಮತ್ತೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಸ್.ಸಿ. ಮತ್ತು ಎಸ್.ಟಿ.ಗೆ ಸಂಬಂಧಪಟ್ಟ ಫಂಡ್ಸ್ ದುರುಪಯೋಗವಾಗಿದೆ ಎಂದು ಮಾನ್ಯ ಸದಸ್ಯರು

ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ವಿಶ್ವವಿದ್ಯಾನಿಲಯದ ಕಾಯಿದೆ ಪ್ರಕಾರ ನಾವು ಏನು ಕ್ರಮ ಕೈಕೊಳ್ಳಬಹುದೋ ಅದನ್ನು ಕೈಕೊಳ್ಳುತ್ತೇವೆ.

ಶ್ರೀ ಪಟವರ್ಧನ್ ರತ್ನಾಕರ್.—ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದರ ಬಗ್ಗೆ ತಮ್ಮ ದೀರ್ಘವಾದ ಉತ್ತರದಲ್ಲಿ ಪ್ರಸ್ತಾಪ ಮಾಡಲಿಲ್ಲ. ಎರಡನೆಯದಾಗಿ ಸಮಗ್ರ ಶಿಕ್ಷಣದ ದೃಷ್ಟಿಯಿಂದ ಶ್ರೀ ನರಸಿಂಹಯ್ಯನವರು ಸರ್ಕಾರಕ್ಕೆ ಏನು ಶಿಫಾರಸ್ಸು ಮಾಡಿದ್ದಾರೆ, ಅದರ ಪ್ರಕಾರ ಮಾನವ ಶಿಕ್ಷಣವನ್ನು ಈ ವರ್ಷದ ಶೈಕ್ಷಣಿಕ ವರ್ಷದಿಂದಲೇ ಪ್ರಾರಂಭ ಮಾಡಲು ಕ್ರಮ ಕೈಕೊಳ್ಳುತ್ತೀರಾ? ಮೂರನೆಯದಾಗಿ ಮಹಿಳೆಯರಿಗಾಗಿ ಒಂದು ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದು ಸರ್ಕಾರದ ಯೋಚನೆಯಲ್ಲಿದೆಯೇ ?

೭-೦೦ ಪಿ. ಎಂ.

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು ಸಹ್ಯಾದ್ರಿ ಯೂನಿವರ್ಸಿಟಿ ಬಗ್ಗೆ ಹೇಳಿದ್ದಾರೆ. ಅದನ್ನು ಕಂಪ್ಲೀಟ್ ಯೂನಿವರ್ಸಿಟಿಯನ್ನಾಗಿ ಮಾಡಬೇಕು ಎಂದು ಸರ್ಕಾರ ತೀರ್ಮಾನಮಾಡಿದೆ. ಆ ಬಿಲ್ ಇಂಟರ್‌ಡ್ಯೂಸ್ ಆಗಿದೆ, ಇದೇ ಸಭೆಯಲ್ಲಿ ಬರುತ್ತದೆ. ಆಮೇಲೆ ಇನ್ನೊಂದು ವಿಷಯ ಹೇಳಿದರು. ಅದರ ಬಗ್ಗೆ ಶ್ರೀ ನರಸಿಂಹಯ್ಯನವರ ರಿಪೋರ್ಟ್ ಇದೆ. ಅದರಲ್ಲಿ ಸೆವೆಂತ್ ಸ್ಟ್ಯಾಂಡರ್ಡ್ ಪರೀಕ್ಷೆ ಮಾಡಬೇಕು. ಫಸ್ಟ್ ಪಿಯುಸಿ ಎಕ್ಸಾಮಿನೇಷನ್ ಮಾಡಬೇಕು ಎಂದು ಮತ್ತು ಟೆಕ್ಸ್ಟ್ ಬುಕ್ ಬಗ್ಗೆಯೂ ಹೇಳಿದ್ದಾರೆ. ಅದರ ಬಗ್ಗೆ ಎಲ್ಲಾ ಈಗಾಗಲೇ ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದೇವೆ.

ಅಧ್ಯಕ್ಷರು.—ಈಗ ಪ್ರಸ್ತಾವವೇನೆಂದರೆ. ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷ ದಲ್ಲಿ ಬೇಡಿಕೆಯ ಸಂಖ್ಯೆ ೯,೧೦,೧೩ ಮತ್ತು ೧೪ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲ ಗನ್ನು ಮಂಜೂರು ಮಾಡಬೇಕು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

(ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಪುನರ್ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ—೯ ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧—೩—೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷ ದಲ್ಲಿ ಲೇಖನ ಸಾಮಾಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿ ಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೯೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ—೧೦ ಉಚ್ಚ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧—೩—೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೪,೧೧,೪೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆ ಯಲ್ಲಿ ೫೫,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೩—ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧—೩—೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೦೪,೩೩,೨೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು

ಮತ್ತು ಬಂಡವಾಳ ಖಾತೆಯಲ್ಲಿ ೧,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೪—ಸೆಕೆಂಡರಿ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೪೫,೮೯,೦೫,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಧ್ಯಕ್ಷರು.—ಸಭೆಯನ್ನು ನಾಳೆ ಬೆಳಿಗ್ಗೆ ೧೧–೦೦ ಗಂಟೆಯವರೆಗೆ ಮುಂದೂಡಲಾಗಿದೆ

ಸಭೆಯು ೭ ಗಂಟೆ ೨ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೧೦ನೇ ಮಾರ್ಚಿ ೧೯೮೭ರ ಮಂಗಳವಾರದಂದು ಬೆಳಿಗ್ಗೆ ೧೧–೦೦ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.

WD 5297